ಸಂವಾದ

ಆಗಸ್ಟ್ ೨೦೦೯ ರೂ. ೨೦

ಸಂಸ್ಕೃತ
ವಿ.ವಿ
ಏಕೆ ಬೇಡ?





ಮೈಕಲ್ ಜಾಕ್ಸನ್
ನಿಜ ಭ್ರಮೆಗಳ ರೂಪಕ

ಕೇಂದ್ರ ಬಜೆಟ್

ಕಿಬ್ಬದಿಯ ಕೀಲು ಜಾಗ್ರತೆ!

ಒಳಪುಟಗಳಲ್ಲಿ

ಸಂವಾದ

ಮಾಸ ಪತ್ರಿಕೆ

ಸಂಪುಟ ೭ ಸಂಚಿಕೆ ೧೦

ಆಗಸ್ಟ್ ೨೦೦೯

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 080-23480278, 9945264687
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

- ❑ ಪತ್ರಗಳು ೦೩
- ❑ ಸಂಪಾದಕರೊಂದಿಗೆ ಸಂವಾದ:
  - ○ ಡಿ. ಎಸ್. ನಾಗಭೂಷಣ ೦೪
  - ○ ಡಿ. ಶಾರದಮ್ಮ ಕಂಪಾಲಿ ೦೫
  - ○ ಸಂತೋಷ್, ಪ್ರವೀಣ್ ೦೬
- ❑ 'ಅನುಭವದ ಗ್ರಹಿಕೆ ಬದಲಾಗಬೇಕು' ೦೮
  - ○ ಗಂಗಪ್ಪ ತಳವಾರ
- ❑ ಯುನೀಕ್ ಐಡೆಂಟಿಟಿ ಕಾರ್ಡ್: ರೇಷನ್ ಕಾರ್ಡ್ ಕೊಡದ ಸರ್ಕಾರ ಐಡೆಂಟಿಟಿ ಕಾರ್ಡ್ ಕೊಡುತ್ತಿರುವುದೇಕೆ? ೧೦
  - ○ ಶಿವಸುಂದರ್

- ❑ ಸಂಸ್ಕೃತ ವಿ.ವಿ ಏಕೆ ಬೇಡ? ೧೪
  - ○ ಡಾ. ಕೆ. ಎಸ್. ಭಗವಾನ್
- ❑ ಲಾಲ್‌ಘಡ-ಪ್ರಜಾತಂತ್ರ-ಸಂಘರ್ಷ ೧೬
  - ○ ನಾ ದಿವಾಕರ
- ❑ ಭಯ, ಅಧಿಕಾರ ಮತ್ತು ವಿಧೇಯತೆ ೨೦
  - ○ ಮೂಲ: ಪ್ರವೀಣ್ ಸ್ವಾಮಿ
    ಅನು: ಡಿ. ಎಸ್. ನಾಗಭೂಷಣ್
- ❑ ಭ್ರಷ್ಟ ವ್ಯವಸ್ಥೆಯ ಸುತ್ತ ಮುತ್ತ... ೨೪
  - ○ ಪ್ರೊ. ಸಂಗನಾಳ ಮಠ ಯು.ಎನ್. ಹೊನ್ನಾಳಿ
- ❑ ಕೇಂದ್ರ ಬಜೆಟ್ ೨೦೦೯-೧೦ ಕಿಬ್ಬದಿಯ ಕೀಲುಗಳು ಜಾಗ್ರತೆ!
  - ○ ಶಿವಸುಂದರ್ ೨೬
- ❑ ಮೈಕಲ್ ಜಾಕ್ಸನ್-ನಿಜ ಭ್ರಮೆಗಳ ರೂಪಕ
  - ○ ಡಾ. ಸಿ. ಜಿ. ಲಕ್ಷ್ಮೀಪತಿ ೨೮
- ❑ ಸಂವಿಧಾನದಲ್ಲಿ ಜಾತಿ ಪದ್ಧತಿ ನಿರ್ಮೂಲನೆ
  - ○ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ೩೪
- ❑ ಕೊಂಕಣಿಗಳು ಮತ್ತು ಸಂಘನಿಷ್ಠೆ (ಭಾಗ-೨)
  - ○ ಗುರು ಬಾಳಿಗ ೩೬
- ❑ ಧರೆ ಹತ್ತಿ ಉರಿದರೆ... ೧೩ ಬಳ್ಳಾರಿ ಜಿಲ್ಲೆ: ಬರಿದಾಗುತ್ತಿರುವ ಅದಿರು ನಿಕ್ಷೇಪ; ಬಂದೆರಗಲಿರುವ ಬರದ ಸಾಪ
  - ○ ಡಾ. ಟಿ. ಆರ್ ಚಂದ್ರಶೇಖರ್ ೪೦
- ❑ ಬೌದ್ಧ ಸೌಂದರ್ಯ ಮೀಮಾಂಸೆ-೧೨ ಅರಿತು ಅನುಸರಿಸದಲ್ಲದೇ ಅನ್ಯಮಾರ್ಗವಿಲ್ಲ
  - ○ ಡಾ. ಎಸ್. ನಟರಾಜ್ ಬೂದಾಳು ೪೪
- ❑ ದಲಿತ್ ಡೈರಿ
  - ○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
- ❑ ಬುದ್ಧಾಯಣ ೫೦
  - ○ ಸಿ. ಎಚ್. ರಾಜಶೇಖರ್

ಕವನಗಳು : ❑ ಮಹಾಮನೆಯ ಬೆಳಕು ೧೩ ❑ ಪಾಸು ಮತ್ತು ಫೇಲು ೩೨



ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಉಸಿರುಗಟ್ಟಿಸುವ ವಾತಾವರಣ, ಭಯಾನಕ ಸ್ಥಿತಿ

ಪ್ರಿಯ ಇಂದೂಧರ ಅವರಿಗೆ,

ಸಮಕಾಲೀನ ಸಮಾಜದ ಆಗು ಹೋಗು, ಕಾಳಜಿ, ಹೊಸ ಚಿಂತನೆಗಳನ್ನು ಪ್ರತಿಬಿಂಬಿಸುವಂತೆ ಸಂವಾದವನ್ನು ಹೊರ ತರುತ್ತಿದ್ದೀರಿ. ಎಲ್ಲವನ್ನೂ ಅಧಿಕಾರ-ಹಣ ಪ್ರಭಾವಗಳ ಮೂಲಕ ಬಗ್ಗು ಬಡಿಯ ಬಹುದು ಮತ್ತು ಸುಳ್ಳನ್ನು ನಿಜವಾಗಿ ರೂಪಿಸಬಹುದು ಎಂಬ ಹಮ್ಮು ಈಗ ಎಲ್ಲೆಡೆ ಹೆಚ್ಚಾಗುತ್ತಿದೆ. ಎರಡು-ಮೂರು ದಶಕಗಳ ಹಿಂದೆ ಇದನ್ನು ಉಸಿರುಗಟ್ಟಿ ಸುವ ವಾತಾವರಣವೆಂದು ನಾವೆಲ್ಲ ಕರೆ ಯುತ್ತಿದ್ದೆವು. ಆದರೆ ಇಂದಿನ ಸ್ಥಿತಿ ಅದ ಕ್ಕಿಂತ ಭಯಾನಕವಾಗಿದೆ.

ಆಧುನಿಕತೆ ಮತ್ತು ಜಾಗತೀಕರಣದ ಸೌಲಭ್ಯ, ತಂತ್ರಜ್ಞಾನ ಮತ್ತು ಅದರಿಂದಲೇ ಹುಟ್ಟುತ್ತಿರುವ ಚಿಂತನೆಗಳು ಹೊಸ ವರ್ಗ ಮತ್ತು ಜಾತಿಗಳನ್ನು ಸೃಷ್ಟಿಸುತ್ತಿವೆ. ಹೀಗೆ ಸೃಷ್ಟಿಗೊಂಡ ವರ್ಗಗಳು ಸಮಾಜದ ವಿವಿಧ ರಂಗಗಳ ಮೇಲೆ ಬೀರುತ್ತಿರುವ ಪ್ರಭಾವ ರಾಕ್ಷಸಾಕಾರದ್ದಾಗಿದೆ. ಇದರಿಂದ ಅಭಿಪ್ರಾಯ ವ್ಯಕ್ತಪಡಿಸಬೇಕಾದ ಜನರಿಗೆ ನಿಜವಾದ ವೇದಿಕೆಗಳು; ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳು ಇಲ್ಲವಾಗಿ ತಥಾಕಥಿತ ಅಭಿ ಪ್ರಾಯಗಳೇ ಸತ್ಯವೆಂಬ ನಂಬುವ ಭ್ರಾಮಕ ಪರಿಸ್ಥಿತಿ ಉಂಟಾಗುತ್ತಿದೆ.

ಇಂಥದ್ದರ ಕುರಿತು ಎಚ್ಚರವಾಗಿರ ಬೇಕಾದ ಮುಖ್ಯಧರೆಯ ಮಾಧ್ಯಮಗಳು ಅತಿರಂಜನೆ, ವೃತ್ತಿಪರತೆಯ ಕುರಿತು ಇರುವ ಅಸಾಧ್ಯ ಉಡಾಫೆ ಮತ್ತು ಪಕ್ಷಪಾ ತಕ್ಕೆ ಜೋತುಬಿದ್ದು ಬೌದ್ಧಿಕವಾಗಿ ಮೇಲೇ ಳಲು ಕೂಡ ಸಾಧ್ಯವಾಗದ ದಯನೀಯ ಸ್ಥಿತಿಯಲ್ಲಿವೆ. ಮತ್ತು ಇಂಥ ಚಿಂತನೆಗಳ ದ್ರುವೀಕರಣವನ್ನೂ ಪ್ರಚೋದಿಸುತ್ತಿವೆ. ಇನ್ನು ಸಣ್ಣ ಪತ್ರಿಕೆಗಳು ಇವುಗಳಿಗಿಂತ ಅಪಾಯಕಾರಿಯಾದ ಗುಂಪುಗಾರಿಕೆ, ಸ್ವಜನ ಪಕ್ಷಪಾತಗಳನ್ನು ಬೆಳೆಸಿ, ಪೋಷಿಸು ತ್ತಿವೆ. ಇನ್ನೂ ದುರಂತದ ವಿಷಯವೆಂದರೆ ಶೂದ್ರ ಮತ್ತು ದಲಿತ ವರ್ಗದ ಬುದ್ಧಿಜೀವಿ ಗಳು ಈ ಬಗೆಯ ಹುನ್ನಾರಕ್ಕೆ (ತಿಳಿದೋ, ತಿಳಿಯದೆಯೋ) ಬಲಿಯಾ ಗುತ್ತಿರುವುದು. ಇಂತಹ ವಿಷಮ ಸ್ಥಿತಿ ಯಲ್ಲಿ ಪತ್ರಿಕೆಯಾಗಿ ಸಂವಾದ ಮಾಡುತ್ತಿ ರುವ ಪ್ರಾಮಾಣಿಕ ಪ್ರಯತ್ನ ಮೆಚ್ಚುವಂತಿದೆ. ತನ್ನ ಉದ್ದೇಶವನ್ನು ಮುಕ್ತಾಗದ ರೀತಿ ಯಲ್ಲಿ ಅದು ತನ್ನನ್ನು ಕಾಯ್ದುಕೊಂಡು ಬರುತ್ತಿರುವುದು ನಿಜಕ್ಕೂ ಆರೋಗ್ಯ ಪೂರ್ಣ. ಈ ಬಗೆಯ ಪ್ರಯತ್ನಗಳೇ ಇಂದು ತುಸುವಾದರೂ ಕ್ರಿಯಾಶೀಲತೆ

ಪತ್ರಗಳು

ಯನ್ನು ತುಂಬಿ ಜನರನ್ನು ಬದಲಾವ ಣೆಯ ದಿಕ್ಕಿನಲ್ಲಿ ನಡೆಸಬಲ್ಲವು.

ಶಿಕ್ಷಣದ ಕುರಿತು ನಿಮ್ಮ ಸಂಪಾದ ಕೀಯ ಅತ್ಯಂತ ಸಮಯೋಚಿತವಾಗಿದೆ. ಈ ನಿಟ್ಟಿನಲ್ಲಿ ಇನ್ನಷ್ಟು ಚರ್ಚೆ ನಡೆಯಬೇ ಕಿದೆ. ವಿಶಿಷ್ಟ ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ಮುಖ್ಯ ವಾಹಿನಿಯ ಶಿಕ್ಷಣದಿಂದ ದೂರವಿರುವ; ಇದೀಗ ಮೊದಲ ತಲೆಮಾರಿನ ಕಲಿಕೆದಾರ ರಾಗಿ ಶಾಲೆಗಳತ್ತ ಬಂದಿರುವ ಹಿಂದುಳಿದ ಜಾತಿ ಮತ್ತು ಪಂಗಡಗಳ ಜನಾಂಗದ ಮಕ್ಕಳಿಗೆ ನಲಿಕಲಿಯಂತಹ ಪ್ರಯತ್ನಗಳು ಸಾಕ್ರೆಟಿಸ್‌ನಿಗೆ ವಿಷ ನೀಡಲು ನಡೆಸಿದ ಸಿದ್ಧತೆಯಿಂದ ಕಾಣುತ್ತಿವೆ. ಅಧಿಕಾರಶಾಹಿ ಗಳ ಮತಿಹೀನತೆ ಮತ್ತು ರಾಜಕಾರಣಿಗಳ ದೂರಾಲೋಚನೆಯ ಕೊರತೆ ಹಾಗೂ ಸ್ವಹಿತಾಸಕ್ತಿಯ ಸ್ವಯಂಸೇವಾ ಸಂಸ್ಥೆಗಳ ಕುಟಿಲತೆ ನಮ್ಮ ರಾಜ್ಯದ ಸರ್ಕಾರಿ ಶಾಲೆ ಗಳ ಮಕ್ಕಳಿಗೆ ಬಹುದೊಡ್ಡ ಹೊಡೆತವನ್ನು ನೀಡಲಿವೆ. ಇಂತಹ ಪದ್ಧತಿ ಜಾರಿಗೆ ತರುವ ಮೊದಲು ಪ್ರಾಥಮಿಕ ಶಿಕ್ಷಣ ಕ್ಷೇತ್ರದ ತಜ್ಞರೊಂದಿಗೆ ಕೂಡ ವ್ಯಾಪಕ ವಾದ ಚರ್ಚೆಯನ್ನು ನಡೆಸಿಲ್ಲ. ಅದು ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳಲ್ಲಿ ನಂಬಿಕೆಯೇ ಇಲ್ಲದ ಇಂದಿನ ಅಗತ್ಯವಾಗಿದೆ.

ಕೇಶವ ಮಳಗಿ,
ಬೆಂಗಳೂರು

ನೊಂದ ಜೀವಿಗಳ ಪರವಾದ ದನಿ 'ಸಂವಾದ'

ಮಾನ್ಯ ಸಂಪಾದಕರಿಗೆ,

ದಲಿತರನ್ನು ಸಾಮಾಜಿಕವಾಗಿ, ಶೈಕ್ಷ ಣಿಕವಾಗಿ ಹಿಂದೆ ತಳ್ಳಲು ಹುನ್ನಾರ ನಡೆ ಸುತ್ತಿರುವ ಸಂಘ ಪರಿವಾರದ ಹಾಗೂ ಆ ಮನೋಭಾವನೆಯ ರಾಜಕೀಯ ಶಕ್ತಿಗಳು ಆ ನಿಟ್ಟಿನಲ್ಲಿ ಹೆಜ್ಜೆ ಹಾಕುತ್ತಲಿವೆ. ಈ ಹುನ್ನಾರಗಳನ್ನು ಭೇದಿಸುವಂತಹ ವಿಚಾರ ಗಳು ಪತ್ರಿಕೆಯಲ್ಲಿ ಮೂಡಿ ಬರುತ್ತಿರುವುದ ರಿಂದ ಯುವ ದಲಿತರನ್ನು ಚಿಂತನೆಗೆ ಹಚ್ಚುತ್ತಲಿವೆ. ಒಡೆದು ಹೋದ ಸಂಘಟ ನೆಯ ನಾಯಕರು ಒಂದೇ ವೇದಿಕೆಗೆ ಬರುವ ಹಾಗೆ ಬೆಸೆಯುವ ಲೇಖನಗಳು ಬರಲಿ.

ಹಾಗೂ 'ಸಂವಾದ ಮಾಸ ಪತ್ರಿಕೆ" ಏಕಮುಖ ಸಂವಾದವಾಗದೆ, ದಲಿತ-ದಲಿ ತರ, ದಲಿತ-ಹಿಂದುಳಿದ ವರ್ಗಗಳ, ದಲಿತ-ಮುಸ್ಲಿಮರ, ದಲಿತ-ಕ್ರಿಶ್ಚಿಯನ್ನರ, ದಲಿತ-ಮೇಲ್ವರ್ಗಗಳ ನಡುವಣ ಸಂವಾದ ಮತ್ತಷ್ಟು ಪಾರದರ್ಶಕವೂ ಮತ್ತು ಮುಕ್ತವೂ ಆದರೆ 'ಸಂವಾದ' ಅರ್ಥವಿತ್ತಾ ಗುತ್ತದೆ. ಹಾಗೆ ಇಂಥ ವೈಚಾರಿಕ ಪತ್ರಿಕೆ ಗಳ ಅವಶ್ಯಕತೆ ಇಂದು ಸಾಕಷ್ಟು ಇದೆ.

'ಸಂವಾದ' ದಲಿತ ಚಿಂತನೆಯ ಮೂಲಕ ಇತರೆಲ್ಲ ಮಗ್ಗುಲುಗಳನ್ನು ಒಳ ಗೊಳ್ಳುವಂತಾಗಲಿ ಎಂದು ಆಶಿಸುತ್ತೇನೆ.

ಕೃತಜ್ಞತೆಗಳು,

ಶೃತಿ,
ಬೆಂಗಳೂರು

ಓದುಗರೊಬ್ಬರ ಮನವಿ

ಮಾನ್ಯ ಸಂಪಾದಕರಿಗೆ,

"ಸಂವಾದ" ಮಾಸ ಪತ್ರಿಕೆ ನಾಡಿನ ಎಲ್ಲ ಜನ ವರ್ಗಗಳ ಪ್ರೋತ್ಸಾಹದೊಂದಿಗೆ ಬರುತ್ತಿರುವುದು ಹೆಮ್ಮೆಯ ಸಂಗತಿ. ದಲಿ ತರ ಮಧ್ಯೆ ಸುಮಾರು ಮುಡಿ ಪತ್ರಿಕೆಗ ಳಿದ್ದರೂ ದಲಿತರ ಚಿಂತನೆಗೆ ವಿಚಾರ ಎನಿ ಮಯಕ್ಕೆ "ಸಂವಾದ"ದಂತ ಪತ್ರಿಕೆ ಇರ ಲೇಬೇಕು. 'ಸಂವಾದ' ಪತ್ರಿಕೆ ಎಲ್ಲಾ ಮಜ ಲುಗಳನ್ನು ಗಮನಿಸಿ ಜನ ಸಮುದಾಯದ ವರ ಕಣ್ಣು ತೆರೆಸಿ ಪ್ರಜ್ಞಾವಂತರನ್ನಾಗಿ ತಯಾರು ಮಾಡುತ್ತಿದೆ. ಶತಶತಮಾನಗ ಳಿಂದ ಅರಿವಿಲ್ಲದವರಿಗೆ ಅರಿವು ಮೂಡಿ ಸುತ್ತಿದೆ. ದಲಿತರ ಪಾಲಿಗೆ ಸಂಜೀವಿನಿಯಾ ಗಿದೆ. ಈ ಪತ್ರಿಕೆ ಓದುವ ಓದುಗರಲ್ಲಿ ನನ್ನ ದೊಂದು ಕೋರಿಕೆ ಏನೆಂದರೆ, ನೀವು ಓದುವುದರ ಜೊತೆಗೆ ಕನಿಷ್ಠ 10 ಜನ ಜನ ರನ್ನು ಚಂದಾದಾರರನ್ನಾಗಿ ಮಾಡಿಸುವ ಮೂಲಕ ಈ 'ಸಂವಾದ' ಓದುವಂತೆ ಮಾಡಬೇಕೆಂದು ಕೋರುತ್ತೇನೆ.

ಶಿವರುದ್ರಸ್ವಾಮಿ,
ಮೇದನಿ

ಸೂಕ್ಷ್ಮತೆ ಮತ್ತು ನೈತಿಕ ನಿಲುವು

ಸಂಪಾದಕರಿಗೆ,

ನಮಸ್ಕಾರಗಳು. 'ಸಂವಾದ' ಪತ್ರಿಕೆ ಯನ್ನು ನಿರಂತರವಾಗಿ ಓದುತಿದ್ದೇನೆ. ಇಲ್ಲಿನ ಅನೇಕ ಬರಹಗಳ ಸೂಕ್ಷ್ಮತೆ ಮತ್ತು ನೈತಿಕ ನಿಲುವುಗಳಿಂದ ನಾನು ಕಲಿತಿದ್ದೇನೆ. ತಕ್ಷಣಕ್ಕೆ ನೆನಪಾಗುತ್ತಿರುವ ನಾಮದೇವ ಢಸಾಳರ ಕುರಿತು ಬಂದ ಬರಹ ವಿಶಿಷ್ಟವಾಗಿತ್ತು. 'ದಲಿತ್ ಡೈರಿ' ದಲಿತ ಚಿಂತನೆಯ ನೆಲೆಗಳನ್ನು ಬೆಳೆ ಸುತ್ತಿದೆ. ಇನ್ನು ಅನೇಕ ಉತ್ತಮ ಲೇಖನ ಗಳು ಬರಲಿ. ಸಂವಾದ ಯಶಸ್ವಿ ಯತ್ತ ಮುನ್ನುಗಲಿ ಎಂದು ಹಾರೈಸುತ್ತೇನೆ.

ವಂದನೆಗಳು,

ವಿಕ್ರಮ ವಿಸಾಜಿ
ಸೊಂಡೂರು



ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ಪಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಸಂಪಾದಕರೊಡನೆ ಸಂವಾದ

ಚುನಾವಣೆಗಳ 'ವೈಫಲ್ಯ': ತಪ್ಪು ವ್ಯಾಖ್ಯಾನ

ಮಾನ್ಯ ಸಂಪಾದಕರೇ

'ಸಂವಾದ'ದ ಕಳೆದ ಸಂಚಿಕೆ(ಜುಲೈ, 2009) ಯಲ್ಲಿ ಶಿವಸುಂದರ್ ಅವರು ಬರೆದ 'ಪ್ರಜಾತಂತ್ರವನ್ನೇ ಸೋಲಿಸುವ ಚುನಾವಣೆಗಳು' ಲೇಖನವನ್ನು ಓದಿದೆ. ಶ್ರೀಯುತರು ಇದೇ ವಿಷಯದ ಬಗ್ಗೆ ಇತ್ತೀಚೆಗೆ ಬೇರೆ ಕಡೆಗಳಲ್ಲೂ ಬರೆದಿರುವುದನ್ನು ಓದಿದ ನೆನಪು. ಅದೇನೇ ಇರಲಿ, ಶಿವಸುಂದರ್ ಹೀಗೆ ಚುನಾವಣೆಗಳ 'ವೈಫಲ್ಯ'ವನ್ನು ಎತ್ತಿ ತೋರಿಸುತ್ತಿರುವ ಕಾರಣವಾದರೂ ಏನು ಎಂಬುದು ಗೊತ್ತಾಗುತ್ತಿಲ್ಲ. ಏಕೆಂದರೆ, ಚುನಾವಣೆಗಳಿಗಿಂತ ಅಥವಾ ಈ ತರಹದ ಚುನಾವಣೆಗಳಿಗಿಂತ ಉತ್ತಮ ಚುನಾವಣಾ ಪದ್ಧತಿಯ ಮೂಲಕ ಪ್ರಜಾತಂತ್ರವನ್ನು ಬಲಪಡಿಸುವ ಅಥವಾ ಅವರು ಹೇಳುವಂತಹ 'ಸೋಲಿ'ನಿಂದ ಕಾಪಾಡುವ ವಿಧಾನಗಳ ಬಗ್ಗೆಯೇನೂ ಅವರು ಬರೆದಂತಿಲ್ಲ.

ಶಿವಸುಂದರ್ ಮುಖ್ಯವಾಗಿ ತಮ್ಮ ವಾದವನ್ನು ದಿನೇ ದಿನೇ ಕಡಿಮೆಯಾಗುತ್ತಿರುವ ಮತದಾನದ ಪ್ರಮಾಣ ಮತ್ತು ವಿಜಯೀ ಅಭ್ಯರ್ಥಿಯು ಪಡೆಯುವ ಅಲ್ಪಮತದ ಆಧಾರದ ಮೇಲೆ ಮಂಡಿಸಿದ್ದಾರೆ. ಈ ಸಂಬಂಧವಾಗಿ ಅವರು ನೀಡಿರುವ ಅಂಕಿ-ಅಂಶಗಳು ಅವರ ವಾದವನ್ನು ಮೇಲ್ನೋಟಕ್ಕೆ ರುಜುವಾತು ಪಡಿಸುವಂತೆಯೂ ಇವೆ. ಅಲ್ಲದೆ, ಈ ಅಂಕಿ-ಅಂಶಗಳು ಮೊದಲ ನೋಟಕ್ಕೇ ಅವರೇ ಲೆಕ್ಕಾಚಾರ ಮಾಡಿ ತೋರಿಸಿರುವಂತೆ, ನಮ್ಮ ಪ್ರಜಾತಂತ್ರದ ಪ್ರಾತಿನಿಧಿಕ ಗುಣವನ್ನೇ ನಗೆಪಾಟಲಿಗೀಡು ಮಾಡುವಂತಿದೆ ಎಂಬುದೂ ನಿಜ. ಆದರೆ ಜನರಲ್ಲಿ ಚುನಾವಣೆಗಳ ಬಗ್ಗೆ ಆಸಕ್ತಿಯೇ ಇಲ್ಲದಾಗಿದೆ;ಇದರಿಂದಾಗಿ ಸದ್ಯದ ಪ್ರಜಾತಂತ್ರ ಪದ್ಧತಿಯ ಬಗ್ಗೆಯೇ ಜನರ ನಂಬಿಕೆ ಹೋದಂತಿದೆ ಎಂದು ತೀರ್ಮಾನಿಸಲು ಈ ಅಂಕಿ-ಅಂಶಗಳನ್ನು ಬಳಸುತ್ತಾ ಅರ್ಥೈಸುವ ಅವರ ಪ್ರಯತ್ನವನ್ನು ಒಪ್ಪುವುದು ಕಷ್ಟ. ಏಕೆಂದರೆ, ಚುನಾವಣೆಗಳಲ್ಲಿ ಮತ ಹಾಕದಿರುವವರೆಲ್ಲ ಚುನಾವಣಾ ಪದ್ಧತಿಯ ಬಗ್ಗೆಯಾಗಲೀ, ಸದ್ಯದ ಪ್ರಜಾತಂತ್ರ ವ್ಯವಸ್ಥೆಯ ಬಗ್ಗೆಯಾಗಲೀ ಪ್ರತಿಭಟನೆ ಸೂಚಿಸುತ್ತಿದ್ದಾರೆಂದು ಸಾರಾ ಸಗಟಾಗಿ ಊಹಿಸುವುದು ತಪ್ಪಾಗುತ್ತದೆ.

ಹಾಗೆ ನೋಡಿದರೆ, ಇಂತಹ ಪ್ರತಿಭಟನೆಯ ಅವಶ್ಯಕತೆಯೇ ಇಲ್ಲದ ರೀತಿಯಲ್ಲಿ ಪ್ರಜಾತಂತ್ರದ ಲಾಭಗಳನ್ನು ಪಡೆದುಕೊಂಡ ಜನರೇ ಮತದಾನಕ್ಕೆ ಗೈರುಹಾಜರಾಗುವವರಲ್ಲಿ ದೊಡ್ಡ ಭಾಗವೆನಿಸಿಕೊಳ್ಳುತ್ತಿದ್ದಾರೆ. ಇವರೆಲ್ಲ ಮತದಾನಕ್ಕೆ ಬಂದು ಹೋಗಲಿರುವುದರಿಂದಲೇ ಆಯಾಸವಾಗುವಷ್ಟು ಸುಖದಿಂದ ಕೊಬ್ಬಿರುವವರಷ್ಟೇ. ಹಾಗೇ ಇವರಲ್ಲಿ, ನಾವು ಮತದಾನ ಮಾಡದಿದ್ದ ಮಾತ್ರದಿಂದ ಪ್ರಜಾಪ್ರಭುತ್ವಕ್ಕೇನೂ ಧಕ್ಕೆಯಾಗದೆಂದು ನಿರಾಳವಾಗಿರುವ ಅಥವಾ ಯಾವ ಸರ್ಕಾರ ಬಂದರೂ ತಮ್ಮ ದುಡಿಮೆಯ ಕೌಶಲ್ಯ ಮತ್ತು ಪ್ರತಿಫಲಗಳಿಗೇನೂ ತೊಂದರೆಯಾಗಲಾರದೆಂದು ಸರಳವಾಗಿ ನಂಬಿರುವ ಹುಂಬರೂ ಇದ್ದಾರೆ.

> ಸ್ಪರ್ಧಿಸುವವರು ಬಹು ಸಂಖ್ಯೆಯಲ್ಲಿರುವ ಪರಿಸ್ಥಿತಿ ಇರುವವರೆಗೂ ಸ್ಪರ್ಧಿಸಿದವರಲ್ಲಿ ಅತಿ ಹೆಚ್ಚು ಮತ ಪಡೆದವರೇ ಜಯಶಾಲಿ ಅಥವಾ ಜನತೆಯ ಪ್ರತಿನಿಧಿ ಎಂದು ಒಪ್ಪಿಕೊಳ್ಳಬೇಕಾದ್ದು ಸಹಜವೇ ಆಗಿದೆ. ಅದು ಪ್ರಜಾಪ್ರಭುತ್ವವಾದಿ ನಡವಳಿಕೆ ಎನ್ನಿಸಿಕೊಳ್ಳುತ್ತದೆ. ಏಕೆಂದರೆ ಇಂತಹ ಬಹುಮುಖಿ ಸ್ಪರ್ಧೆಯ ಫಲಿತಾಂಶಗಳ ಪ್ರತಿಕೂಲ ಪ್ರತಿ ಫಲನ ಆಳ್ವಿಕೆಯ ಮೇಲೆ ಆಗುತ್ತಿದ್ದಂತೆ ಕ್ರಮೇಣ ಪರಿಸ್ಥಿತಿ ಸುಧಾರಿಸುತ್ತದೆ ಎಂಬುದನ್ನೂ ನಾವು ಗಮನಿಸಿದ್ದೇವೆ. ಈ ಹಿಂದೆ ರಾಜಕೀಯ ಧೃವೀಕರಣ ನಡೆದ ಸಂದರ್ಭಗಳಲೆಲ್ಲಾ, ಬಹಳಷ್ಟು ಕ್ಷೇತ್ರಗಳಲ್ಲಿ ದ್ವಿಮುಖಿ- ತ್ರಿಮುಖಿ ಸ್ಪರ್ಧೆ ಕಂಡ ಪ್ರಸಂಗಗಳನ್ನು ನಾವು ನೋಡಿದ್ದೇವೆ. ಹಾಗೇ, ನಮ್ಮ ಕಣ್ಮುಂದೆಯೇ ಜೆಪಿ ಚಳುವಳಿಯ ಕಾಲದಲ್ಲಾದಂತೆ, ಬಹುತೇಕ ಜನಸಾಮಾನ್ಯರ ನಾಯಕರೇ ಗೆದ್ದು ಶಾಸನ ಸಭೆಗಳನ್ನು ಪ್ರವೇಶಿಸಿದ ಉದಾಹರಣೆಯೂ ಉಂಟು. ಹಾಗಾಗಿ ಪ್ರಜಾಪ್ರಭುತ್ವವನ್ನು ಈ ರೀತಿ ಸ್ವಯಂ ಚಿಕಿತ್ಸೆಗೆ ಬಿಡುವುದೇ ಸದ್ಯಕ್ಕೆ ಅದನ್ನು ಕಾಪಾಡುವ ಅತ್ಯುತ್ತಮ ಮಾರ್ಗವೆಂದು ಕಾಣುತ್ತದೆ. ಇಲ್ಲದೇ ಹೋದರೆ, ಇದಕ್ಕಿಂತ ಉತ್ತಮವಾದದ್ದಿರಲಿ, ಈಗಿರುವುದನ್ನೂ ಕಳೆದುಕೊಳ್ಳುವ ಅಪಾಯವನ್ನು ಆಹ್ವಾನಿಸುತ್ತೇವೆ.

ಇನ್ನು ಸದ್ಯದ ವ್ಯವಸ್ಥೆಯ ಬಗ್ಗೆ ಸಕಾರಣವಾಗಿಯೇ ಅಸಮಧಾನ ಅಥವಾ ಸಿಟ್ಟು ಇರುವ ಜನರಲ್ಲಿ (ಇವರು ಎಲ್ಲ ಜಾತಿ-ವರ್ಗಗಳಲ್ಲೂ ಇರುವವರು ಎಂಬುದನ್ನೂ ಗಮನಿಸಬೇಕು) ಬಹುಪಾಲು ಮತದಾನ ಮಾಡುವವರೇ ಆಗಿದ್ದಾರೆ(ಕಾಶ್ಮೀರದ ಕೆಲವು ಭಾಗಗಳು ವಿಶಿಷ್ಟ ರಾಜಕೀಯ ಕಾರಣದಿಂದಾಗಿ ಇದಕ್ಕೆ ಹೊರತಾಗಿವೆಯಷ್ಟೆ) ಎಂಬುದನ್ನೂ ನಾವು ಗಮನಿಸಬೇಕು. ಮತದಾನ ಕೇಂದ್ರಗಳ ಮುಂದಿನ ಸರತಿ ಸಾಲುಗಳಲ್ಲಿನ ಮುಖ ಚಹರೆಗಳನ್ನು ಗಮನಿಸಿದರೇ ಇದು ಗೊತ್ತಾಗುವಷ್ಟು ಸ್ಫುಟವಾಗಿದೆ. ಹಾಗೇ, ಸದ್ಯದ ವ್ಯವಸ್ಥೆ ಕುರಿತ ಪ್ರತಿಭಟನೆಯ ಪ್ರತೀಕವಾಗಿ ಚುನಾವಣೆಗಳನ್ನು ಬಹಿಷ್ಕರಿಸಲು ಕೆಲವು ಗುಂಪುಗಳು ಕರೆ ಕೊಟ್ಟ ಕಡೆ ಜನ ಈ ಕರೆಗೆ ಅಷ್ಟಾಗಿ ಮನ್ನಣೆ ನೀಡುತ್ತಿಲ್ಲ ಎಂಬುದೂ, ಹೆಚ್ಚೂ ಕಡಿಮೆ ಪ್ರತಿ ಚುನಾವಣೆಯ ಸಂದರ್ಭದಲ್ಲೂ ಪ್ರದೇಶವಾರು ಮತದಾನ ಅಂಕಿ -ಅಂಶಗಳಿಂದ ಗೊತ್ತಾಗುತ್ತಿದೆ. ಹೀಗಿರುವಾಗ ಈ ಲೇಖನ ಅಂತಿಮವಾಗಿ, 'ಮತದಾನದಲ್ಲಿ, ಓಟು ಶೇರಿನಲ್ಲಿ ಸೀಟುಗಳ ಸಂಖ್ಯೆಯಲ್ಲಿ ಎಲ್ಲದರಲ್ಲೂ ಭಾರತೀಯ ಮತದಾರ ಈ ವ್ಯವಸ್ಥೆಯ ಬಗ್ಗೆ ತನ್ನ ಸ್ಪಷ್ಟ ಅವಿಶ್ವಾಸ ಮತ್ತು ತಿರಸ್ಕಾರವನ್ನು ಸೂಚಿಸುತ್ತಿದ್ದಾನೆ/ಳೆ ಆದರೂ ನಮ್ಮ ಚುನಾವಣಾ ಪದ್ಧತಿಯ ತಂತ್ರಗಳು ಪ್ರಜಾತಂತ್ರವನ್ನೇ ಸೋಲಿಸಿ ಸೋತವರನ್ನೇ ವಿಜೇತರನ್ನಾಗಿ ಆಯ್ಕೆ ಮಾಡಿ ಅಧಿಕಾರ ಕೊಡುತ್ತದೆ' ಎಂದು ಹೇಳುವುದು ತಪ್ಪು ತೀರ್ಮಾನವೆನಿಸುತ್ತದೆ.

ನಾವು ಒಪ್ಪಿಕೊಂಡಿರುವ ಉದಾರವಾದಿ ಪ್ರಜಾಪ್ರಭುತ್ವದಲ್ಲಿ(ಈ ಲೇಖನದಲ್ಲಿ ಇಡೀ ಸಂವಿಧಾನದ ಹೊಣೆಯನ್ನು ಅಂಬೇಡ್ಕರ್ ಅವರ ಮೇಲೇ ಹೊರಿಸಿ, ತಮ್ಮ ವಾದದ ತೀವ್ರತೆಗಾಗಿ ಅವರನ್ನು ಪದೇ ಪದೇ ಭಾವನಾತ್ಮಕವಾಗಿ ಉಲ್ಲೇಖಿಸುವ ಶಿವಸುಂದರ್, ಈ ಉದಾರ ವಾದಿ ಪ್ರಜಾಪ್ರಭುತ್ವವನ್ನೂ ಅವರೇ ಪ್ರತಿಪಾದಿಸಿದ್ದು ಎಂಬುದನ್ನೂ ಒಪ್ಪಿಕೊಳ್ಳಬೇಕಾಗುತ್ತದೆ) ಬಹುಮುಖಿ ಸ್ಪರ್ಧೆಯನ್ನು ತಪ್ಪಿಸಲಾಗುವುದಿಲ್ಲ. ಹಾಗೆ ತಪ್ಪಿಸಲು ಹೋಗುವುದೂ ಪ್ರಜಾತಂತ್ರ ಭಾವನೆಗೇ ವಿರುದ್ಧವಾಗುತ್ತದೆ. ಹಾಗಾಗಿ ಈ ಬಹುಮುಖಿ ಸ್ಪರ್ಧೆಯಲ್ಲಿ ಮತ ಹಂಚಿ ಹೋಗಿ ಗೆಲ್ಲುವ ಅಭ್ಯರ್ಥಿ ಬಹುಮತ ಪಡೆಯದಂತಾಗುವುದು ಸಹಜವೇ ಆಗಿದೆ. (ಇದಕ್ಕೂ ಅಂಬೇಡ್ಕರ್ ಅವರನ್ನು ಹೊಣೆ ಮಾಡೋಣವೇ?) ಆದರೆ ಇಂತಹ ಸಂದರ್ಭಗಳಲ್ಲಿ ಬಹುಮತ ಎಂದರೆ ಅರ್ಧಕ್ಕಿಂತ ಹೆಚ್ಚು ಎಂದು ಅರ್ಥೈಸುವುದೇ ಮತ್ತು ಅದು ಮಾತ್ರ ಬಹುಮತ ಎಂದು ಸಾಧಿಸ ಹೊರಡುವುದೇ ಪ್ರಜಾಪ್ರಭುತ್ವವನ್ನು, ಆ ಕುರಿತ ನಮ್ಮ ಸೈದ್ಧಾಂತಿಕ ನಂಬಿಕೆಗನುಸಾರ ಸಂಕುಚಿತಗೊಳಿಸುವ ಪ್ರಯತ್ನವೇ ಆಗುತ್ತದೆ.

ಸ್ಪರ್ಧಿಸುವವರು ಬಹು ಸಂಖ್ಯೆಯಲ್ಲಿರುವ ಪರಿಸ್ಥಿತಿ ಇರುವವರೆಗೂ ಸ್ಪರ್ಧಿ ಸಿದವರಲ್ಲಿ ಅತಿ ಹೆಚ್ಚು ಮತ ಪಡೆ

ದವರೇ ಜಯಶಾಲಿ ಅಥವಾ ಜನತೆಯ ಪ್ರತಿನಿಧಿ ಎಂದು ಒಪ್ಪಿಕೊಳ್ಳಬೇಕಾದ್ದು ಸಹಜವೇ ಆಗಿದೆ. ಅದು ಪ್ರಜಾಪ್ರಭುತ್ವವಾದಿ ನಡವಳಿಕೆ ಎನ್ನಿಸಿಕೊಳ್ಳುತ್ತದೆ. ಏಕೆಂದರೆ ಇಂತಹ ಬಹುಮುಖ ಸ್ಪರ್ಧೆಯ ಫಲಿತಾಂಶಗಳ ಪ್ರತಿಕೂಲ ಪ್ರತಿಫಲನ ಆಳ್ವಿಕೆಯ ಮೇಲೆ ಆಗುತ್ತಿದ್ದಂತೆ ಕ್ರಮೇಣ ಪರಿಸ್ಥಿತಿ ಸುಧಾರಿಸುತ್ತದೆ ಎಂಬುದನ್ನೂ ನಾವು ಗಮನಿಸಿದ್ದೇವೆ. ಈ ಹಿಂದೆ ರಾಜಕೀಯ ಧ್ರುವೀಕರಣ ನಡೆದ ಸಂದರ್ಭಗಳಲ್ಲೆಲ್ಲಾ, ಬಹಳಷ್ಟು ಕ್ಷೇತ್ರಗಳಲ್ಲಿ ದ್ವಿಮುಖ-ತ್ರಿಮುಖ ಸ್ಪರ್ಧೆ ಕಂಡ ಪ್ರಸಂಗಳನ್ನು ನಾವು ನೋಡಿದ್ದೇವೆ. ಹಾಗೇ, ನಮ್ಮ ಕಣ್ಮುಂದೆಯೇ ಜೆಪಿ ಚಳುವಳಿಯ ಕಾಲದಲ್ಲಾದಂತೆ, ಬಹುತೇಕ ಜನ ಸಾಮಾನ್ಯರ ನಾಯಕರೇ ಗೆದ್ದು ಶಾಸನ ಸಭೆಗಳನ್ನು ಪ್ರವೇಶಿಸಿದ ಉದಾಹರಣೆಯೂ ಉಂಟು.

ಹಾಗಾಗಿ ಪ್ರಜಾಪ್ರಭುತ್ವವನ್ನು ಈ ರೀತಿ ಸ್ವಯಂಚಿಕಿತ್ಸೆಗೆ ಬಿಡುವುದೇ ಸದ್ಯಕ್ಕೆ ಅದನ್ನು ಕಾಪಾಡುವ ಅತ್ಯುತ್ತಮ ಮಾರ್ಗವೆಂದು ಕಾಣುತ್ತದೆ. ಇಲ್ಲದೇ ಹೋದರೆ, ಇದಕ್ಕಿಂತ ಉತ್ತಮವಾದದ್ದಿರಲಿ, ಈಗಿರುವುದನ್ನೂ ಕಳೆದುಕೊಳ್ಳುವ ಅಪಾಯವನ್ನು ಆಹ್ವಾನಿಸುತ್ತೇವೆ. ಶಿವಸುಂದರ್ ಇಂತಹ ಅಪಾಯಕ್ಕೆ ನಮ್ಮನ್ನು ಆಹ್ವಾನಿಸುತ್ತಿರುವಂತಿದೆ! ಏಕೆಂದರೆ, ಪ್ರಜಾತಾಂತ್ರಿಕ ರಾಜಕೀಯ ಚಕ್ರಕ್ಕೆ ಇತರ ರಾಜಕೀಯ ಚಕ್ರಗಳಂತೆ ತನ್ನದೇ ಲಯವಿದೆ. ಅದು ಒಂದು ಬಹು ಸಂಕೀರ್ಣವಾದ ರಾಜಕೀಯ ಬಲದ ಶಕ್ತಿಯಿಂದ ತಿರುಗುತ್ತಿದೆ. ಇದು ಶಿವಸುಂದರ್ ಮಾಡುವ ಮತದಾನದ ಪ್ರಮಾಣ, ಓಟು ಶೇರು, ಸೀಟುಗಳ ಸಂಖ್ಯೆ ಇತ್ಯಾದಿಗಳ ಲೆಕ್ಕಾಚಾರವನ್ನು ಮೀರಿದ್ದು. ಹೀಗಿರುವಾಗ ಅದು ನಮಗೆ ಬೇಕಾದ ಗತಿಯಲ್ಲಿ, ಬೇಕಾದ ಘಟ್ಟಕ್ಕೆ ಬಂದಿಲ್ಲ ಎಂದು ಅದನ್ನು ನಾವೇ ತಿರುಗಿಸಲು ಆಗುವುದಿಲ್ಲ. ಸದ್ಯದ ರಾಜಕೀಯ ಪರಿಸ್ಥಿತಿಯಿಂದ ಸ್ವಲ್ಪ ಹೆಚ್ಚೇ ವಿಚಲಿತರಾಗಿ, ಅದರ ಲಯಜ್ಞಾನವಿಲ್ಲದೆ ಅಕಾಲಿಕವಾಗಿ ಅವಸರ ಮತ್ತು ಅಸಹನೆಗಳಿಂದ ತಿರುಗಿಸ ಹೊರಟರೆ ಚಕ್ರವೇ ಮುರಿದು ಹೋದೀತು!

ಅಂದ ಹಾಗೆ ಶಿವಸುಂದರ್ ಅವರು ತಮ್ಮ ವಾದಕ್ಕೆ ಪೀಠಿಕೆಯಾಗಿ,'.... ಇದಕ್ಕಿಂತ ಉತ್ತಮ ಪ್ರಜಾತಂತ್ರವಾಗಲೀ, ಚುನಾವಣೆಗಿಂತ ಉತ್ತಮ ಪ್ರಜಾತಾಂತ್ರಿಕ ಪ್ರಕ್ರಿಯೆಯಾಗಲೀ ಮತ್ತೊಂದಿಲ್ಲವೆಂದು ಬಹುತೇಕ ಗಾಂಧೀವಾದಿಗಳಿಂದ ಹಿಡಿದು, ಸಮಾಜವಾದಿ, ಸ'ಮಾಜಾ'ವಾದಿಗಳ ತನಕ ಎಲ್ಲರ ಅಭಿಪ್ರಾಯ' ಎಂದಿದ್ದಾರೆ. ಇದರಲ್ಲಿ ಸಮಾಜವಾದಿಗಳು ಗೊತ್ತು. ಅವರಲ್ಲಿ ಶಿವಸುಂದರ್ ಅವರೂ ಸೇರಿರಬಹುದು. ಆದರೆ ಈ ಸ'ಮಜಾ'ವಾದಿಗಳು ಎಂದರೆ ಯಾರು? ಕ್ರಾಂತಿಯ ಆಯಾಸ ತೀರಿಸಿಕೊಳ್ಳಲು, ಎಲ್ಲ ರೀತಿಯಿಂದಲೂ ಸುಸಜ್ಜಿತವಾದ ಅರಮನೆಗಳನ್ನು ಕಟ್ಟಿಕೊಂಡು ಅವುಗಳಲ್ಲಿ ಪ್ರಿಯ ಸಂಗಾತಿಗಳೊಂದಿಗೆ ಅವೊತ್ತಿನ ಜಗತ್ತಿನ ಅತ್ಯುತ್ತಮ ರೀತಿಯ ಐಷಾರಾಮ ಜೀವನ ನಡೆಸಿದರೆಂದು ಅವರ ಉತ್ತರಾಧಿಕಾರಿಗಳಿಂದಲೇ ವರ್ಣಿಸಲ್ಪಟ್ಟ ಮಾವೋ ಅವರೇ? ಅಥವಾ ಅತ್ಯುತ್ತಮ ಆರಾಮ ಕೋಣೆ, ಅತ್ಯುತ್ತಮ ಉಡುಪು(ಸೂಟುಗಳು), ಅತ್ಯುತ್ತಮ ಊಟ, ಅತ್ಯುತ್ತಮ ಸಿಗಾರುಗಳು, ಅತ್ಯುತ್ತಮ ಮದ್ಯ ಇತ್ಯಾದಿ ಎಲ್ಲ ಅತ್ಯುತ್ತಮಗಳನ್ನೇ ಬಯಸಿದ ಮತ್ತು ಇದೆಲ್ಲ ಬಹಿರಂಗಗೊಂಡಾಗ ಇವೆಲ್ಲ ತಮ್ಮ 'ಪುನಃಶ್ಚೇತನ'ಕ್ಕಾಗಿ ಮಾತ್ರ ಎಂದು ಸಮರ್ಥಿಸಿಕೊಂಡ ಇವೊತ್ತಿನ ನೇಪಾಳದ ಕ್ರಾಂತಿಕಾರಿ ಪ್ರಚಂಡರೇ? ತಿಳಿಯದು!

○ ಡಿ.ಎಸ್.ನಾಗಭೂಷಣ
ಶಿವಮೊಗ್ಗ

ಸಂಪಾದಕರೊಡನೆ ಸಂವಾದ

ಇಂದು ಬಡ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಒದಗಲು ಸರ್ಕಾರ ವಿಫಲವಾಗಿದೆ. ಪ್ರತಿವರ್ಷವೂ ಶಿಕ್ಷಣದ ಸಲಹೆಗಳು, ನಿಯಮಗಳನ್ನು ವಿಧ ವಿಧ ರೀತಿಯಲ್ಲಿ ಜಾರಿಗೊಳಿಸಿ, ಸ್ಥಿರತೆ ಎನ್ನುವುದು ಮಾಯವಾಗಿದೆ.

ಬಡ ಮಕ್ಕಳ ಮೇಲೆ ಪ್ರಯೋಗಗಳು

ಮಾನ್ಯ ಸಂಪಾದಕರೇ

"ಗ್ರಾಮೀಣ ಮಕ್ಕಳು ಪ್ರಯೋಗ ಪಶುಗಳೇ?" ಖಂಡಿತ ಹೌದು! ಅನುಮಾನವಿಲ್ಲ. "ಕೂದಲು ಉದ್ದವಿದ್ದಳು ಹೇಗಾದರೂ ತಿರಿಗಿಸಿ ತುರುಬನ್ನು ಕಟ್ಟುತ್ತಾಳೆ, ಕೂದಲಿಲ್ಲದವಳು ತುರುಬು ಕಟ್ಟಲಾಗದು". ಇದರರ್ಥ ಇಷ್ಟೇ ಹಣವಿದ್ದವರು ತಮ್ಮ ಮಕ್ಕಳನ್ನು ಎಲ್ಲಿಗಾದರೂ ಸೇರಿಸಿ ವಿದ್ಯಾಭ್ಯಾಸ ಕೊಡಿಸಲು ಸಾಧ್ಯವಾಗುತ್ತದೆ. ಹಣವಿಲ್ಲದವರ ಗತಿ ಗೌರ್ಮೆಂಟ್ ಶಾಲೆಯೇ ಗತಿ. ಗೌರ್ಮೆಂಟ್ ಶಾಲೆ ಕೆಟ್ಟ ಶಾಲೆಗಳೆಂದು ಹೇಳುವುದಲ್ಲ. ಸರ್ಕಾರದ ಯೋಜನೆಗಳ ವ್ಯವಸ್ಥೆ ಗೌರ್ಮೆಂಟ್ ಶಾಲೆಗಳನ್ನು ಅದೋಗತಿಗೆ ತರುತ್ತಿವೆ.

ಪ್ರಥಮವಾಗಿ ಪ್ರಾಥಮಿಕ ಹಂತದಲ್ಲಿಯೇ ಇಂಗ್ಲಿಷ್ ಶಿಕ್ಷಕರನ್ನು ನೇಮಿಸಿ ಒತ್ತು ಕೊಡುವುದು. ಖಾಸಗೀ ಶಾಲೆಗಳನ್ನು ತೆರೆಯಲು ಅನುಮತಿ ಕೊಡದಿರುವುದು ಮುಖ್ಯವಾಗಿ ಸರ್ಕಾರಿ ಶಿಕ್ಷಕರು ಯಾವ ಕೆಲಸಗಳನ್ನು ಕೊಟ್ಟರೂ ಮಾಡುವ ಸಾಮರ್ಥ್ಯವನ್ನುಳ್ಳವರಾದ್ದರಿಂದ ಸಕಲ ಗಣಿತಿ ಕಾರ್ಯಗಳನ್ನು ಪ್ರಾಥಮಿಕ ಶಾಲಾ ಶಿಕ್ಷಕರ ಮೇಲೆ ಹೇರುವುದು. ಖಾಸಗೀ ಶಾಲೆಗಳಲ್ಲಿ ಶಿಕ್ಷಣ ಗುಣ ಮಟ್ಟದಲ್ಲಾಗಲು ಕಾರಣ ಬರೀ ಪಾಠವನ್ನು ಮಾಡುವುದು ಮಾತ್ರ ಶಿಕ್ಷಕರ ಕೆಲಸವಾಗಿರುತ್ತದೆ. ಇಲ್ಲಿ ಹಾಗಲ್ಲ! ಶಿಕ್ಷಕರನ್ನು ತರಗತಿಯ ಕೋಣೆಯಲ್ಲಿ ಇರಲು ಬಿಡುತ್ತಿಲ್ಲ. ಅಷ್ಟೊಂದು ವಿವಿಧ ರೀತಿಯ ಕೆಲಸಗಳಿಗೆ ತೊಡಗಿಕೊಳ್ಳುವ ಪರಿಸ್ಥಿತಿ ಮತ್ತು ಇಲಾಖೆಗೆ ಸ್ಪಂಧಿಸುವಂಥಹ ಕೆಲಸಕಾರ್ಯಗಳು ಅನೇಕವು.

ಬಹುಶಃ ತಮ್ಮ ಗಮನಕ್ಕೆ "ನಲಿ-ಕಲಿ" ಪದ್ಧತಿಯ ಕಲಿಕೆ ಅನುಷ್ಠಾನ ಗೊಳಿಸಿದ್ದುದ್ದರ ಬಗ್ಗೆ ಇಲ್ಲಿ ಒಂದೆರೆಡು ಮಾತುಗಳಲ್ಲಿ ಹೇಳಲು ಇಷ್ಟ ಪಡುವೆ. ಸರ್ಕಾರ ಕಳೆದ ಮೇ ತಿಂಗಳಲ್ಲಿ "ನಲಿ-ಕಲಿ" ಎಂಬ ತರಬೇತಿಯನ್ನು ಕೊಟ್ಟರು. ಈ ನಲಿ-ಕಲಿ ತರಬೇತಿ ತೆಗೆದುಕೊಂಡಂಥಹ ಶಿಕ್ಷಕರು ಒಂದು ಮತ್ತು 2ನೇ ತರಗತಿಯ ಮಕ್ಕಳನ್ನು ಕೂಡಿಸಿಕೊಂಡು ಎರಡೂ ತರಗತಿಯ ಮಕ್ಕಳನ್ನೂ ಒಂದೇ ತರಗತಿ ಕೋಣೆಯಲ್ಲಿ ಕೂಡಿಸಿಕೊಂಡು ಶಿಕ್ಷಣವನ್ನು ಕೂಡುವುದಾಗಿದೆ. "ನಲಿ-ಕಲಿಯ" ಶಿಕ್ಷಣ ಗುಣಮಟ್ಟದ್ದಿರಬಹುದು ಇನ್ನೂ ಪ್ರಯೋಗಿಕತೆಯ ಅನುಭವವಿರದ ಮಾತು. ಆದರೆ.. ಇಲ್ಲಿ ತರಬೇತಿ ಕೊಟ್ಟ ತಕ್ಷಣ, ಅಂದರೆ ಜೂನ್ ತಿಂಗಳಲ್ಲಿ ಮಗು ಸಂತಸದಿಂದ ಕಲಿಯಬೇಕಾಗಿರುವ ಮಗು ಜೂನ್ ತಿಂಗಳಲ್ಲಿ ಸುಮ್ಮನೆ ಕುಳಿತು, ಕುಣಿದು, ಹಾಡಿ ಪಾಡಿ ಹೋಗುವ ಪದ್ಧತಿ ಇದಾಗಿದೆ. ಪಾರಿಭಾಷಿಕ ಪದಗಳ ಬಳಕೆಯಿಂದ ಏಣಿ, ಮೆಟ್ಟಿಲು, ಮೈಲಿಗಲು, ಲೋಗೋ ಹೀಗೆ ಹೊಸ ಪದಗಳ ಬಳಕೆಯನ್ನು ಮಕ್ಕಳಿಗೆ ಪರಿಚಯಿಸಿ, ಜೂನ್ ತಿಂಗಳಿಂದಲೇ ಮಗುವಿನ ಕೈಲಿ ಮೈಲಿಗಲ್ಲಿನ ಕಾರ್ಡ್‌ಗಳು ಇರಬೇಕಾಗಿತ್ತು. ಆದರೆ ಆ ಕಾರ್ಡ್‌ಗಳು ಸೆಪ್ಟೆಂಬರ್ ಅಥವಾ ಅಕ್ಟೋಬರ್-09 ರಷ್ಟೊತ್ತಿಗೆ ಪ್ರಿಂಟಾಗಿ ಮಗುವಿನ ಕೈಗರ ಸಿಗಬಹುದೆನ್ನುತ್ತಾರೆ ತಜ್ಞರು. ಇದು ಸರ್ಕಾರದ ಯೋಜನೆ- ನಲಿ-ಕಲಿ ತರಬೇತಿಯನ್ನು ಹೊಂದಿದ ಶಿಕ್ಷಕರಿಗೆ, ಆ ಸಾಮರ್ಥ್ಯಕ್ಕನುಗುಣವಾಗಿ ಪಾಠೋಪಕರಣ ತಯಾರಿಕೆ, ಪರಿಕಲ್ಪನೆಗೆ ಬೇಕಾದ ಸಾಮಗ್ರಿಗಳನ್ನು ಜೋಡಿಸಿ ಅಂಟಿಸಿ, ಕತ್ತರಿಸುವ ಕೆಲಸವಾಗುತ್ತೆ ವಿನಃ ಕಲಿಕೆಯಲ್ಲಿ ಬಹುತೇಕ ಕುಂಡಿತತೆಯಾಗುತ್ತದೆ. ಉತ್ತಮ ಶಿಕ್ಷಕನಿಗೆ ಅಂದರೆ ಆಪ್ತಃ ಇರುವ ಶಿಕ್ಷಕನಿಗೆ; ಉತ್ತಮ ತರಗತಿ ಕೋಣೆ ಅಗಲವಾದ ಕಪ್ಪು ಹಲಗೆ ಕಲಿಸಬೇಕಾದ ಪುಸ್ತಕವಿಕವಿದ್ದರೆ ಸಾಕು. ಬೇಕಾದ ರೀತಿಯಲ್ಲಿ ಕಲಿಸಿ. ಜಾಣರನ್ನಾಗಿಸಿರಿ ಎಂದು ಹೇಳಿ ಬಿಟ್ಟರೆ ಸಾಕು. ಶಿಕ್ಷಕ ಕಲಿಸಿಯೇ ಕಲಿಸುತ್ತಾನೆ. ಬರವಣಿಗೆಯ ಹೊರೆಯನ್ನು ಕೂಡ ಶಿಕ್ಷಕರಿಗೆ ಕೊಡಬಾರದು. ಹಾಗಾದರೆ ಮಾತ್ರ ಉತ್ತಮ ಶಿಕ್ಷಣವನ್ನು ಸರ್ಕಾರಿ ಶಾಲೆಗಳು ಕೊಡಲು ಸಾಧ್ಯ. ಈಗ "ನಲಿ ಕಲಿಯ" ಸಮಯ ನಲಿ-ಕಲಿಗೆ ನಿಯೋಜನೆ ಹೊಂದಿದ ಶಿಕ್ಷಕರ ಅನುಭವಗಳನ್ನು ಆಸಕ್ತಿ ಇದ್ದರೆ ಕ್ರೂಢೀಕರಿಸಿ ತಿಳಿಯಿರಿ.

ಯೋಚಿಸಿ; ಒಂದು ಕ್ಷಣ. ಆಗಸ್ಟ್ ಮತ್ತು ಸೆಪ್ಟೆಂಬರ್ ತನಕ ಮಗು ಏನನ್ನು ಕಲಿಯಬೇಕು? ಜಾರಿ ತರುವ ಮೊದಲು ಸರ್ಕಾರದ ಚಿಂತನೆ ಬೇಡವೆ? ಈ ಪದ್ಧತಿಯನ್ನು ಮುಂದಿನ ವರ್ಷಕ್ಕೆ ವ್ಯವಸ್ಥಿತವಾಗಿ ತರಬಹುದಿತ್ತು.

ಬಡೆ ಮಕ್ಕಳ ಮೇಲೆ ಪ್ರಯೋಗಗಳು; ಮೇಲಿನ ಎಲ್ಲಾ ರೀತಿಯ ವಿಷಯಾಂಶವೂ ಅನ್ವಯ. ಅದಕ್ಕಾಗಿಯೇ ಸರ್ಕಾರಿ ಶಾಲೆಗಳು ಮುಚ್ಚುತ್ತಾ ಬರುತ್ತಿವೆ. ಯೋಜನೆಗಳು ತರಬೇತಿಗಳು, ಸೌಲಭ್ಯಗಳು ಹೆಚ್ಚಾಗಿವೆ. ಮಕ್ಕಳ ಶಿಕ್ಷಣ ಪ್ರಗತಿ ಮಾತ್ರ ತಳ ಕಣುತ್ತಿರುವುದು ಶೋಚನೀಯವಾದದ್ದು.

ಇಂದು ಬಡ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಒದಗಲು ಸರ್ಕಾರ ವಿಫಲವಾಗಿದೆ. ಪ್ರತಿವರ್ಷವೂ ಶಿಕ್ಷಣದ ಸಲಹೆಗಳು, ನಿಯಮಗಳನ್ನು ವಿಧ ವಿಧ ರೀತಿಯಲ್ಲಿ ಜಾರಿಗೊಳಿಸಿ, ಸ್ಥಿರತೆ ಎನ್ನುವುದು ಮಾಯವಾಗಿದೆ.

○ ಡಿ. ಶಾರದಮ್ಮ ಕಂಪಾಲಿ
ದಾವಣಗೆರೆ

ಸಂಪಾದಕರೊಡನೆ ಸಂವಾದ

ಜಾತಿ ಸಾಯಬೇಕು... ದಲಿತ Phobia ಬೆಳೆಯಬೇಕು?!!!

ಭಾರತೀಯ ಸಮಾಜದಲ್ಲಿ ನಡೆಯುವ ಎಲ್ಲಾ ಶೋಷಣೆ ಮತ್ತು ಅಸಮಾನತೆಗಳಿಗೂ ಜಾತಿಯೇ ಕಾರಣ, ಪ್ರಜಾಪ್ರಭುತ್ವದ ಯಶಸ್ಸು ಜಾತಿಯ ವಿನಾಶದಲ್ಲಿ ಅಡಗಿದೆ, ದಲಿತ ರಾಜಕಾರಣವು ಪ್ರಜಾಪ್ರಭುತ್ವದಲ್ಲಿನ ಸಮಸ್ಯೆಗಳಿಗೆ ಪರಿಹಾರ, ಆದ್ದರಿಂದ ದಲಿತ್ Phobia(ಭಯ) ಹುಟ್ಟುಹಾಕಬೇಕು ಎಂದು ಡಾ. ಜೆ. ಸೋಮಶೇಖರ್ ಪ್ರತಿಪಾದಿಸಿರುವುದನ್ನು 'ಸಂವಾದ'ದ ಮೇ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ಅವರ 'ಜಾತಿ ವ್ಯವಸ್ಥೆ ಮತ್ತು ರಾಜಕಾರಣ' ಎಂಬ ಲೇಖನದಲ್ಲಿ ನೋಡಬಹುದು. ಈ ಲೇಖನವು ಓದುಗರಿಗೆ ಸಾಕಷ್ಟು ಗೊಂದಲಕ್ಕೆ ಎಡೆಮಾಡಿ ಕೊಡುತ್ತದೆ, ಕಾರಣ ಒಂದು ಸುಸಂಬದ್ಧವಾದ ತಾರ್ಕಿಕ ವಾದದ ಕೊರತೆ ಹಾಗೂ ಅನೇಕ ವಾದವಿಷಯಗಳ ಸಮ್ಮಿಶ್ರಣವಾಗಿರುವಂತೆ ಲೇಖನವು ಗೋಚರಿಸುತ್ತದೆ. ಈ ಲೇಖನದಲ್ಲಿ ಮಂಡಿಸಿರುವ ವಾದದ ಕುರಿತಾಗಿ ಏಳುವ ಕೆಲವೊಂದು ಪ್ರಶ್ನೆಗಳನ್ನು, ಗೊಂದಲಗಳನ್ನು ತೋರಿಸುವ ಸಣ್ಣ ಪ್ರಯತ್ನ ಇದಾಗಿದೆ.

ಮೊದಲನೆಯದಾಗಿ, ಈ ಮೊದಲು ನಾವು ತಿಳಿಸಿದಂತೆ ಪ್ರಕಟಿತ ಲೇಖನದಲ್ಲಿ ಸುಸಂಬದ್ಧವಾದ ಹಾಗೂ ತಾರ್ಕಿಕ ವಾದಗಳಿಲ್ಲ ಎಂಬುದಕ್ಕೆ ಕೆಲವು ಉದಾಹರಣೆಗಳು...

1. ಭಾರತದಲ್ಲಿ ಸಂಘರ್ಷ, ಶೋಷಣೆ ಹಾಗೂ ಅನ್ಯಾಯಗಳಿಗೆಲ್ಲಾ ಜಾತಿಯೇ ಮೂಲಕಾರಣ.
2. ಭಾರತದಲ್ಲಿ ಜಾತಿಗಳು ದಿನೇದಿನೆ ಬಲಿಷ್ಠವಾಗುತ್ತಿವೆ.
3. ಭಾರತದಲ್ಲಿ ಹಿಂದಿಗಿಂತ ಈಗ ದಲಿತರ ಮೇಲಿನ ಶೋಷಣೆ, ದಬ್ಬಾಳಿಕೆ ಕಡಿಮೆಯಾಗುತ್ತಿದೆ.

ಪ್ರಸ್ತುತ ಲೇಖನವು ಮೂರೂ ಹೇಳಿಕೆಗಳನ್ನು ಒಟ್ಟಿಗೆ ಮಾಡುತ್ತದೆ. ಆದರೆ, ತಾರ್ಕಿಕವಾಗಿ ಈ ಮೂರೂ ಹೇಳಿಕೆಗಳು ಏಕ ಕಾಲದಲ್ಲಿ ಸತ್ಯವಾಗಲು ಸಾಧ್ಯವಿಲ್ಲ. ಕಾರಣ, ಶೋಷಣೆಗಳಿಗೆಲ್ಲಾ ಜಾತಿಯೇ ಕಾರಣೀಭೂತವಾದರೆ ಅದು ಬಲಿಷ್ಠವಾಗುತ್ತಿದ್ದಂತೆ ಶೋಷಣೆಗಳೂ ಹೆಚ್ಚಾಗಬೇಕಿತ್ತು. ಇಲ್ಲವಾದರೆ, ಶೋಷಣೆಗಳು ಇಳಿಮುಖವಾದರೆ ಜಾತಿಗಳು ದುರ್ಬಲವಾಗಬೇಕಿತ್ತು. ಇಲ್ಲಿ ಜಾತಿಯು ಪ್ರಬಲವಾಗಿ ಶೋಷಣೆಗಳು ಮಾತ್ರ ಕಡಿಮೆಯಾಗುತ್ತಿವೆ ಎಂದರೆ ಜಾತಿಗೂ ಶೋಷಣೆಗೂ ಇರುವ ಸಂಬಂದದ ಕುರಿತು ಅಸ್ಪಷ್ಟತೆ ಮೂಡುತ್ತದೆ. ಆದಕಾರಣ, ಜಾತಿಯೇ ಶೋಷಣೆಗೆ ಮೂಲಕಾರಣ ಎಂದು ವಾದಿಸಿದರೆ ಇಂದು ದಬ್ಬಾಳಿಕೆಗಳು ಕಡಿಮೆಯಾಗಿವೆ ಎಂಬ ವಾದವನ್ನು ತಿರಸ್ಕರಿಸಬೇಕಾಗುತ್ತದೆ. ಅಥವಾ ಶೋಷಣೆ, ದಬ್ಬಾಳಿಕೆ ಕಡಿಮೆಯಾಗುತ್ತಿವೆ ಎಂದು ವಾದಿಸಿದರೆ ಜಾತಿಯು (ರಾಜಕೀಯವಾಗಿ ಆಗಲಿ, ಸಾಮಾಜಿಕವಾಗಿ ಆಗಲಿ ಅಥವಾ ಆರ್ಥಿಕವಾಗಿ ಆಗಲಿ) ಬಲಿಷ್ಠವಾಗುತ್ತಿದೆ ಎಂಬ ವಾದವನ್ನು ತಿರಸ್ಕರಿಸಬೇಕಾಗುತ್ತದೆ. ನಮ್ಮ ಈ ವಾದವು ತಾರ್ಕಿಕವಾಗಿ ಸರಿಎನಿಸಿದರೆ ಭಾರತೀಯ ಸಮಾಜದಲ್ಲಿನ ಶೋಷಣೆ ಮತ್ತು ಅಸಮಾನತೆಗಳಿಗೆಲ್ಲಾ ಜಾತಿಯೇ ಕಾರಣವೆಂಬ ನಿಲುವನ್ನು ಕೈಬಿಡಬೇಕಾಗುತ್ತದೆ.

ಇಂತಹುದೆ ಅಸಂಬದ್ದ ವಾದದ ಇನ್ನೊಂದು ಉದಾಹರಣೆಯನ್ನು ನೋಡುವುದಾದರೆ. ಈ ಕೆಳಗಿನ ಇನ್ನೂ ಕೆಲವು ವಾದಗಳನ್ನು ಗಮನಿಸಿ:

1. ಜಾತಿಯ ಪ್ರಾಬಲ್ಯ ಕ್ಷೀಣಿಸಬೇಕಾದುದು ಪ್ರಜಾಪ್ರಭುತ್ವದ ಯಶಸ್ಸಿಗೆ ಅಗತ್ಯವಾಗಿದೆ.
2. ರಾಷ್ಟ್ರಕ್ಕೆ ಇದರಿಂದ(ಜಾತಿಯನ್ನು ಬಲಿಷ್ಠಗೊಳಿಸುತ್ತಿರುವ ರಾಜಕೀಯ ಪಕ್ಷಗಳಿಂದ) ಮುಕ್ತಿಸಿಗಬೇಕಾದರೆ ಜಾತಿರಹಿತ ರಾಜಕೀಯ ಸಮಾಜ ಸೃಷ್ಟಿಯಾಗಬೇಕಾಗಿದೆ.
3. ಇದರ (ಜಾತಿರಹಿತ ರಾಜಕೀಯ ಸಮಾಜ) ಸೃಷ್ಟಿಯಾಗಬೇಕೆಂದರೆ ದಲಿತರು, ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗದವರು ಅಧಿಕಾರದ ವ್ಯವಸ್ಥೆಯಲ್ಲಿ ಹೆಚ್ಚು ಪಾಲುಗಳನ್ನು ಹೊಂದಿರಬೇಕಾಗಿರುತ್ತದೆ.
4. ದಲಿತ್ Phobia (ಭಯ) ಭಾರತದ ಪ್ರಜಾಪ್ರಭುತ್ವವನ್ನು ಸರಿಪಡಿಸುವ ಅಸ್ತ್ರವಾಗುತ್ತದೆ.

ಇಲ್ಲಿ ಪ್ರಜಾಪ್ರಭುತ್ವದ ಯಶಸ್ಸಿಗೆ ಯಾವುದು ಅಗತ್ಯಾಂಶ ಎಂಬುದು ತುಂಬಾ ಗೊಂದಲದ ವಿಚಾರವಾಗಿದೆ. ಸ್ವತಂತ್ರ ಬಂದು 60 ವರ್ಷಗಳಾದರೂ ಜಾತಿಯು ವಿನಾಶವಾಗಲಿಲ್ಲ, ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಜಾತಿಯು ವಿನಾಶವಾಗಬೇಕು ಎಂದು ಹೇಳುವ ಲೇಖಕರು ಇನ್ನೊಂದೆಡೆ ದಲಿತ phobia (ಭಯ) ಹುಟ್ಟುಹಾಕಬೇಕು, ದಲಿತ ರಾಜಕಾರಣ ಬೆಳೆಯಬೇಕು ಎಂಬ ನಿಲುವನ್ನು ತಳೆಯುತ್ತಾರೆ. ಇವೆರಡೂ ಏಕ ಕಾಲದಲ್ಲಿ ಸಾಧ್ಯವೆ? ಜಾತಿಯನ್ನು ವಿನಾಶ ಮಾಡಲು ಇನ್ನೊಂದು ಜಾತಿಯಿಂದ ಸಾಧ್ಯವೆಂಬ ಅಭಿಪ್ರಾಯವನ್ನು ಲೇಖಕರು ಪರೋಕ್ಷವಾಗಿ ಹೇಳುತ್ತಿದ್ದಾರೆ. ಆದರೆ ಎಲ್ಲಾ ಜಾತಿಗಳು ನಾಶವಾಗಬೇಕೆಂದು ಹೇಳುತ್ತಿದ್ದಾರೋ ಅಥವಾ ಕೆಲವೊಂದು ನಿರ್ದಿಷ್ಟ ಜಾತಿಗಳು ಮಾತ್ರ ನಾಶವಾಗಬೇಕು ಎಂದು ಹೇಳುತ್ತಿದ್ದಾರೊ ಎಂಬುದು ಅಸ್ಪಷ್ಟ. ಅಷ್ಟೇ ಅಲ್ಲದೇ, ಮೇಲಿನ ಅತಾರ್ಕಿಕ ವಾದವನ್ನು ಮಂಡಿಸಿ, 'ಇದನ್ನೇ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಪ್ರತಿಪಾದಿಸಿದ್ದು' ಎಂದು ಹೇಳುವ ಮೂಲಕ ನಮಗೆ ಇನ್ನೊಂದು ಪ್ರಶ್ನೆಗೆ ಅಥವಾ ಗೊಂದಲಕ್ಕೆ ಅನುವು ಮಾಡಿ

> **ಜಾತಿ ವ್ಯವಸ್ಥೆ ಮತ್ತು ರಾಜಕಾರಣ ಲೇಖನವು ಓದುಗರಿಗೆ ಸಾಕಷ್ಟು ಗೊಂದಲಕ್ಕೆ ಎಡೆಮಾಡಿ ಕೊಡುತ್ತದೆ, ಕಾರಣ ಒಂದು ಸುಸಂಬದ್ಧವಾದ ತಾರ್ಕಿಕ ವಾದದ ಕೊರತೆ ಹಾಗೂ ಅನೇಕ ವಾದ ವಿಷಯಗಳ ಸಮ್ಮಿಶ್ರಣವಾಗಿರುವಂತೆ ಲೇಖನವು ಗೋಚರಿಸುತ್ತದೆ. ಈ ಲೇಖನದಲ್ಲಿ ಮಂಡಿಸಿರುವ ವಾದದ ಕುರಿತಾಗಿ ಏಳುವ ಕೆಲವೊಂದು ಪ್ರಶ್ನೆಗಳನ್ನು, ಗೊಂದಲಗಳನ್ನು ತೋರಿಸುವ ಸಣ್ಣ ಪ್ರಯತ್ನ ಇದಾಗಿದೆ.**

ಕೊಟ್ಟಿದ್ದಾರೆ. ಅದೇನೆಂದರೆ, ಅಂಬೇಡ್ಕರ್ ವಿಚಾರಗಳು ಇಷ್ಟೊಂದು ಅತಾರ್ಕಿಕವಾಗಿದೆಯೆ? ಎಂಬ ಪ್ರಶ್ನೆ ಏಳದೆ ಇರದು. ಇಲ್ಲಿ, ಒಂದೋ ಅಂಬೇಡ್ಕರ್ ನಿಲುವುಗಳು ತಾರ್ಕಿಕವಾಗಿರಬೇಕು ಹಾಗೂ ಇಂದಿನ ಬುದ್ಧಿಜೀವುಗಳು ಅದನ್ನೆ ಮುಂದುವರಿಸತ್ತಿರಬೇಕು. ಇಲ್ಲವೇ ಅಂಬೇಡ್ಕರ್‌ರವರ ವಾದವು ತಾರ್ಕಿಕವಾಗಿರಬೇಕು ಆದರೆ ಬುದ್ಧಿಜೀವಿಗಳು ತಮಗೆ ಬೇಕಾದ ರೀತಿಯಲ್ಲಿ ಅದನ್ನು ವಿವರಿಸುತ್ತಿರಬಹುದು.

ಇದು ಒಂದು ರೀತಿಯದಾದರೆ, ಇನ್ನೊಂದೆಡೆ ಇಂತಹ ಲೇಖನಗಳ ಪರಿಣಾಮಗಳನ್ನು ಪರಿಗಣಿಸಬೇಕಾಗುತ್ತದೆ. ಅದೇನೆಂದರೆ, ಜಾತಿಯು 'ಕೋಮುವಾದ'ವನ್ನು ಹುಟ್ಟುಹಾಕುತ್ತದೆಯೊ ಇಲ್ಲವೊ ಗೊತ್ತಿಲ್ಲ, ಆದರೆ ಲೇಖಕರ ಕೆಲ ಹೇಳಿಕೆಗಳು ಸಮಾಜದಲ್ಲಿರುವ ಇರುವ ಸಾಮರಸ್ಯವನ್ನು ಕಲಕುವಂತಿದೆ: ದಲಿತ್ phobiaವನ್ನು ಹುಟ್ಟುಹಾಕಬೇಕೆಂಬ ಕಲ್ಪನೆಯೇ ಅದಕ್ಕೆ ಉತ್ತಮ ನಿದರ್ಶನ. ಪ್ರಜಾಪ್ರಭುತ್ವದ ಯಶಸ್ಸಿಗೆ ದಲಿತರ ಭಾಗವಹಿಸುವಿಕೆಯ ಸೂಚನೆ ಒಳ್ಳೆಯದೆನಿಸಿದರೂ ಅದರ ಮೂಲಕ ಸೇಡಿನ ರಾಜಕಾರಣಕ್ಕೆ ಕುಮ್ಮಕ್ಕು ನೀಡುವ ಅಭಿಲಾಷೆಯಂತು ಒಳ್ಳೆಯದಲ್ಲ. ಭಯೋತ್ಪಾದಕರ ಪ್ರಮುಖ ಉದ್ದೇಶಗಳಲ್ಲಿ ಭಯವನ್ನು ಹುಟ್ಟುಹಾಕುವುದೂ ಒಂದಾಗಿರುತ್ತದೆ. ಲೇಖಕರ ಮಾತುಗಳನ್ನು ಗಮನವಿರಿಸಿ ಅವಲೋಕಿಸಿದರೆ ದಲಿತರಿಗೂ ಭಯೋತ್ಪಾದಕರಾಗುವಂತೆ ತಾಕೀತು ಮಾಡಲಾಗುತ್ತಿದೆ. ದಲಿತರು ಭಯವನ್ನು ಉತ್ಪಾದಿಸುವ ಭಯೋತ್ಪಾದಕರಾಗಬೇಕೆ? ಇಂತಹ ಅಭಿಪ್ರಾಯ ಅಥವಾ ಅಧ್ಯಯನದಿಂದ ಅಸ್ತಿತ್ವದಲ್ಲಿರುವ ಸಮಸ್ಯೆಗಳು ಹೆಚ್ಚಾಗುತ್ತವೆಯೇ ವಿನಃ ಅವುಗಳು ಕಡಿಮೆಯಾಗುವ ಯಾವ ಆಶಾವಾದವೂ ಇಲ್ಲ.

ಎರಡನೆಯದಾಗಿ, ಭಾರತೀಯ ಸಮಾಜದಲ್ಲಿನ ಎಲ್ಲಾ ಸಮಸ್ಯೆಗಳಿಗೂ ಜಾತಿಯೇ ಕಾರಣವೆನ್ನುವ ಲೇಖಕರ ಆಧಾರರಹಿತವಾದ ಪ್ರತಿಪಾದನೆಗಳನ್ನು ನೋಡುವುದಾದರೆ,

1. ಚೆನ್ನೈಯಲ್ಲಿ ಡಿ. ಎಮ್. ಕೆ ಸದಸ್ಯರು ocean university ಸ್ಥಾಪನೆಗೆ ನಿರ್ಣಯವನ್ನು ಮಂಡಿಸಿದಾಗ ವಿರೋಧ ಪಕ್ಷದವರು ತಕರಾರು ತೆಗೆದಿರುವುದಕ್ಕೂ, ಜಾತಿಗೂ ಸಂಬಂಧ ಕಲ್ಪಿಸುವ ಲೇಖಕರು ಹೇಗೆ ಎಂದು ತಿಳಿಸುವ ಪ್ರಯತ್ನ ಮಾಡುವುದಿಲ್ಲ. ಆದರೆ ತಮಿಳುನಾಡಿನ ಚರಿತ್ರೆಯುದ್ದಕ್ಕೂ ತಮಿಳರು ಸಂಸ್ಕೃತ ಹಾಗೂ ಹಿಂದಿಯೂ ಸೇರಿದಂತೆ ತಮಿಳೇತರ ಭಾಷೆಗಳನ್ನು ವಿರೋಧಿಸುತ್ತಾ ಬಂದಿರುವುದನ್ನು ಕಾಣಬಹುದು. ಹೀಗಿರುವಾಗ ಇಲ್ಲಿ ಲೇಖಕರು, ಸಂಸ್ಕೃತ ವಿಶ್ವವಿದ್ಯಾನಿಲಯಕ್ಕಾದರೆ ಸುಲಭವಾಗಿ ಒಪ್ಪಿಗೆ ಸಿಗುತ್ತಿತ್ತೇನೋ ಎಂದಿರುವುದು ಬರಿಯ ಊಹೆಯಷ್ಟೆ ಹೊರತು ಆಧಾರಸಹಿತವಾದ ಪ್ರತಿಪಾದನೆಯೇನಲ್ಲ. ಕರ್ನಾಟಕದಲ್ಲಿನ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲೀಷ್ ಕಲಿಕೆಯ ಅಳವಡಿಕೆಗೆ ಮತ್ತು ಇಂಗ್ಲೀಷ್ ಶಾಲೆಗಳಿಗೆ ಪರವಾನಗಿ ನೀಡಿರುವುದಕ್ಕೆ ತಕರಾರು ತೆಗೆದಿರುವುದನ್ನು ನೋಡಬಹುದು, ಇದಕ್ಕೆ ಯಾವ ಜಾತಿ ಕಾರಣವಾಗಿದೆಯೋ? ಇಂತಹ ಊಹೆಗಳನ್ನು ಯಾವ ವಿಷಯಗಳಿಗಾದರೂ ಕಲ್ಪಿಸಿ ಪೋಣಿಸಬಹುದು, ಆದರೆ ಅದರಿಂದಾಗುವ ಪ್ರಯೋಜನವಾದರೂ ಏನು?

2. ಸುನಾಮಿಯಿಂದಾಗಿ ಅಸುನೀಗಿದವರುಗಳಲ್ಲಿ ದಲಿತ ಶವಗಳನ್ನು ಮಾತ್ರ ಪ್ರತ್ಯೇಕಿಸಿ ಅಂತ್ಯಸಂಸ್ಕಾರವನ್ನು ಮಾಡಿದ್ದಾರೆ ಎನ್ನುವುದು ನಂಬಲರ್ಹವಾಗಿದೆಯೆ? ಸುನಾ

ಜಾತಿಯು 'ಕೋಮುವಾದ'ವನ್ನು ಹುಟ್ಟು ಹಾಕುತ್ತದೆಯೊ ಇಲ್ಲವೊ ಗೊತ್ತಿಲ್ಲ, ಆದರೆ ಲೇಖಕರ ಕೆಲ ಹೇಳಿಕೆಗಳು ಸಮಾಜದಲ್ಲಿ ಇರುವ ಸಾಮರಸ್ಯವನ್ನು ಕಲಕುವಂತಿದೆ: ದಲಿತ್ phobia ವನ್ನು ಹುಟ್ಟು ಹಾಕಬೇಕೆಂಬ ಕಲ್ಪನೆಯೇ ಅದಕ್ಕೆ ಉತ್ತಮ ನಿದರ್ಶನ. ಪ್ರಜಾಪ್ರಭುತ್ವದ ಯಶಸ್ಸಿಗೆ ದಲಿತರ ಭಾಗವಹಿಸುವಿಕೆಯ ಸೂಚನೆ ಒಳ್ಳೆಯದೆನಿಸಿದರೂ ಅದರ ಮೂಲಕ ಸೇಡಿನ ರಾಜಕಾರಣಕ್ಕೆ ಕುಮ್ಮಕ್ಕು ನೀಡುವ ಅಭಿಲಾಷೆಯಂತು ಒಳ್ಳೆಯದಲ್ಲ.

ಮಿಯ ಪ್ರವಾಹದಲ್ಲಿ ಮಡಿದವರ ರಾಶಿ ರಾಶಿ ಶವಗಳ ನಡುವೆ ಕೇವಲ ದಲಿತರ ಶವಗಳನ್ನು ಮಾತ್ರ ಹೆಕ್ಕಿತೆಗೆಯುವುದು ಅಸಾಧ್ಯವೆ ಸರಿ. ಅಲ್ಲದೆ, ಸಾವಿರಾರು ಶವಗಳಿಗೆ ಕೆಲವೆ ಗುಂಡಿಗಳನ್ನು ತೆಗೆದು, ಸಾಮೂಹಿಕ ಶವಸಂಸ್ಕಾರ ಮಾಡಿರುವುದು, ಸರ್ಕಾರಿ ಮತ್ತು ಸರ್ಕಾರೇತರ (N.G.O) ಸಂಘಸಂಸ್ಥೆಗಳ ಅಧಿಕಾರಿಗಳೇ ಹೊರತು ಯಾವುದೇ ಮೇಲ್ಜಾತಿಯ ಗುಂಪುಗಳಲ್ಲ ಎಂಬುದನ್ನು ಲೇಖಕರಿಗೆ ತಿಳಿಸಬೇಕಿಲ್ಲ.

ಇಂತಹ ಅಸಂಬದ್ಧವಾದ ಹಾಗೂ ಆಧಾರರಹಿತವಾದ ವಾದಗಳಿಂದಾಗುವ ಉಪಯೋಗಗಳಾದರೂ ಎಷ್ಟು? ನಮ್ಮ ಸಮಾಜದಲ್ಲಿ ನಡೆಯುವ ಎಲ್ಲಾ ಘಟನೆಗಳನ್ನು ಹಾಗೂ ತೆಗೆದುಕೊಳ್ಳುವ ಎಲ್ಲಾ ನಿರ್ಧಾರಗಳನ್ನು ಜಾತಿಯೊಂದಿಗೆ ತಳುಕು ಹಾಕುವ ಪ್ರಕ್ರಿಯೆ ಆರಂಭವಾದುದಾದರೂ ಎಲ್ಲಿಂದ? ನಿಜವಾಗಿಯೂ ಜಾತಿ ಈ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆಯೇ? ಎಂಬಿತ್ಯಾದಿ ಪ್ರಶ್ನೆಗಳು ಹಾಗೆಯೇ ಉಳಿಯುತ್ತವೆ. ಲೇಖಕರೂ ಸೇರಿದಂತೆ ಬಹುತೇಕ ಎಲ್ಲರಿಗೂ ಸಹ ಶೋಷಣೆ ರಹಿತ, ಸಂಘರ್ಷ ರಹಿತವಾದ ಉತ್ತಮ ಸಮಾಜ ಬೇಕೆಂಬ ಹಂಬಲ ಇರುವುದು ಸುಳ್ಳಲ್ಲ. ಅಂತಹ ಪ್ರಯತ್ನದಲ್ಲಿರುವ ಅನೇಕ 'ಸಂಸ್ಥೆಗಳು' ಮತ್ತು 'ನಾಗರೀಕರು' ಸಮಸ್ಯೆಯ ಮೂಲವನ್ನು ತಿಳಿಯಲಾಗದೇ, ಅವರ ಪ್ರಯತ್ನಗಳು ಒಂದಲ್ಲಾ ಒಂದು ರೀತಿಯಲ್ಲಿ ಮುದುಡಿಕೊಂಡಿರುವುದು ಕಾಣಿಸುತ್ತವೆ. ಆದ್ದರಿಂದ ಹಿಂದೆ ನಡೆದ ಎಲ್ಲಾ ಪ್ರಯತ್ನಗಳ ವಿಫಲತೆಯನ್ನು ಮನಗಂಡು, ಅದೇ ದಾರಿಯಲ್ಲಿ ತೆವಳುವ ಬದಲಿಗೆ ಹೊಸದಾದ ಮಾರ್ಗವನ್ನು ಹುಡುಕಲೇಬೇಕಾದ ಜರೂರು ನಮ್ಮ ಮುಂದಿದೆ. ಇಲ್ಲದಿದ್ದರೆ, 'ಎಲ್ಲಾ ಅನಿಷ್ಟಗಳಿಗೂ ಶನೇಶ್ವರನೇ ಕಾರಣ' ಎಂಬಂತೆ ನಮ್ಮ ಸಮಾಜದಲ್ಲಿನ ಸರ್ವ ಸಮಸ್ಯೆಗಳಗೂ ಜಾತಿಯೆಡೆಗೆ ಬೆರಳುಮಾಡಿ, ನಮಗೆ 'ಜಾತಿರಹಿತ ಸಮಾಜ ಬೇಕು' 'ಜಾತಿ ವಿನಾಶ ಅಗತ್ಯ' ಎಂದು ಘೋಷಣೆ ಕೂಗುವುದನ್ನು ಬಿಟ್ಟು ಇನ್ನೇನನ್ನೂ ಮಾಡಲು ಸಾಧ್ಯವಿಲ್ಲ.

○ ಸಂತೋಷ್, ಪ್ರವೀಣ್
ಶಿವಮೊಗ್ಗ



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

‘ಅನುಭಾವದ ಗ್ರಹಿಕೆ ಬದಲಾಗಬೇಕು’

ಗಂಗಪ್ಪ ತಳವಾರ

‘ಅನುಭಾವ’ ಎಂಬ ಶಬ್ದಕ್ಕೆ ನಿಘಂಟಿನಲ್ಲಿ ‘ಯಾವ ಇಂದ್ರಿಯಗಳಿಗೂ ದಕ್ಕದ, ಇಂದ್ರಿಯಾತೀತ ಅನುಭವದ ಸಾಕ್ಷಾತ್ಕಾರ ಎಂಬ ಅರ್ಥವಿದೆ. ಈ ಪದಕ್ಕೆ ಆಂಗ್ಲ ಭಾಷೆಯ ಮಿಸ್ಟಿಸಿಸಮ್ (Mysticsm) ಎಂಬುದು ಸಮಾನಾರ್ಥಕ ಪದ. ಈ ಪದಕ್ಕೆ ಅನೇಕ ಅರ್ಥಗಳಿರುವುದನ್ನು ನೋಡಬಹುದು. ನಿಗೂಢವಾದುದು, ಭಾವನಾತ್ಮಕವಾದುದು ಅತ್ಯಂತ ಪ್ರಮುಖವಾಗಿ ಪ್ರಪಂಚ ಮತ್ತು ಧೈವವನ್ನು ಕುರಿತ ತುಂಬಾ ಅಸ್ಪಷ್ಟವಾದ ಮತ್ತು ಭ್ರಾಂತಿ ಮೂಲದ ಅಭಿಪ್ರಾಯ ಎಂಬರ್ಥವೂ ಇದೆ.

ಡಾ॥ ಎಚ್. ಆರ್. ತಿಪ್ಪೇರುದ್ರಸ್ವಾಮಿ ಅನುಭಾವದ ಅರ್ಥವನ್ನು ‘ಜೀವನವನ್ನು ಸಾರ್ಥಕಗೊಳಿಸುವ ಅಂತರಂಗದ ಅನುಭವ’ ಎಂದು ವ್ಯಾಖ್ಯಾನಿಸುತ್ತಾರೆ. ಈ ಅರ್ಥಗಳ ಜಾಡು ಹಿಡಿದು ನಮ್ಮ ಭಾರತೀಯ ಅಧ್ಯಾತ್ಮಿಕ ಪರಂಪರೆಗಳನ್ನು ಕೆದುಕಿದಾಗ ಮುಖ್ಯವಾಗಿ ಸಾಂಖ್ಯ, ತಾರಕ, ಅಮನಸ್ಕ ಭಕ್ತಿಪಂಥ, ಸೂಫೀಪಂಥ, ದಾಸಪಂಥ, ದ್ವೈತ, ಅದ್ವೈತ... ಹೀಗೆ ಹಲವಾರು ಮತೀಯ ಪಂಥಗಳು ಅತ್ಯಂತ ಪ್ರಮುಖ ಅನುಭಾವದ ನೆಲೆಗಳಾಗಿ ಹೃದ್ಗೋಚರವಾಗುತ್ತದೆ.

ದಾಸಪರಂಪರೆಯಲ್ಲಿ ಕನಕ, ಪುರಂದರ, ಗೋವಿಂದದಾಸ, ಚಂಚುದಾಸ, ರೋಯಿದಾಸ, ಇವರೆಲ್ಲರೂ ಭಗವಂತನನ್ನು ಒಮ್ಮೆ ತಂದೆಯಂತೆ ಮತ್ತೊಮ್ಮೆ ಮುದ್ದುಮಗುವಿನಂತೆ ಮಗನಂತೆ, ಇನ್ನೊಮ್ಮೆ ಅಣ್ಣನಂತೆ, ಮತ್ತೊಮ್ಮೆ ಸ್ನೇಹಿತನಂತೆ ಮತ್ತೆ ಗುರುವಂತೆ ಭಾವಿಸಿಕೊಂಡು ಮೈಮರೆಯುವ ಅನುಭಾವವೊಂದಕ್ಕೆ ತಮ್ಮನ್ನು ಸಮರ್ಪಿಸಿಕೊಳ್ಳುತ್ತಾರೆ.

ಭಕ್ತಿ ಪಂಥವೂ ಸಹ ತನ್ನ ಆರಾಧ್ಯ ಧೈವವೇ ಸರ್ವಶ್ರೇಷ್ಟನೆಂಬ ಭಾವೋನ್ಮಾದದ ಪರವಶತೆಯಲ್ಲಿ ತನ್ಮತೆಯನ್ನು ಪಡೆಯುತ್ತದೆ. ಇದೇ ಗುಣವನ್ನು ಸೂಫೀಪಂಥದಲ್ಲೂ ಕಾಣಬಹುದು.

–ಸೂಪೀಪಂಥವು ಮಹಾಪ್ರೇಮದ ಅನುಸಂಧಾನ ಭಾವದಲ್ಲಿ ಉನ್ಮಾದಕ್ಕೊಳಗಾಗುತ್ತದೆ. ಮತ್ತು ಧೈವಪ್ರೇಮದ ವರ್ಣಿಸಲು ಸಾಧ್ಯವಿಲ್ಲದ ಆನಂದ ಗಮ್ಯಕ್ಕೆ ಕಾತರಿಸುತ್ತದೆ.

ಸಾಮಾನ್ಯವಾಗಿ ಬಹುಶಃ ಭಾರತದ ವೈಧಿಕ ಪಂಥಗಳು ಮತ್ತು ವೈಧಿಕೇತರ ಪಂಥಗಳು ಈ ಎರಡೂ ದಾರಿಗಳು ಬೇರೆ ಬೇರೆ ಅನಿಸಿದರೂ ಒಂದೆ ಗಮ್ಯದ ಗುರಿಯನ್ನು ಹೊಂದಿರುವುದು ಸುಸ್ಪಷ್ಟ. ಇವೆಲ್ಲವುಗಳಿಗೂ ಮೀರಿ ಅರ್ಥೈಸಿಕೊಳ್ಳಲು ಸಂಕೀರ್ಣವೆನಿಸುವ ಆತ್ಮವಾದವೂ ಸಹ ಸ್ವಲ್ಪ ಹೆಚ್ಚೂ ಕಡಿಮೆ ಮೇಲಿನ ವಾದವನ್ನೇ ಇನ್ನೊಂದು ರೀತಿಯಲ್ಲಿ ಪುಷ್ಠಿಕರಿಸುತ್ತದೆ. ಆತ್ಮವೆಂಬುದು ಈ ಸಕಲ ಚರಾಚರ ಜೀವರಾಶಿಗಳೊಳಗೆ ಹೊಕ್ಕಿಕೊಂಡಿದೆ. ಅದೇ ಪರಮಾತ್ಮ., ಅದೇ ಶಿವ; ಆ ಶಿವನೆ ಕಾಲ., ಮೌನ. ಅದು ಹುಟ್ಟಿದ್ದಲ್ಲ ಅದುವೆ ಶೂನ್ಯ ನಿಶೂನ್ಯ ಅದೇ ಬಯಲು., ಅದೇ ಪರಬ್ರಹ್ಮ., ಅದೇ ಈ ವಿಶ್ವ ಸತ್ಯ ಅದೇ ವಸ್ತುರೂಪವಾದ ಈ ಲೌಖಿಕ ಜಗತ್ತಿನ ಸಾರ, ಅದುವೆ ನಿರಾಕಾರ, ಅವ್ಯಕ್ತ, ಅಗೋಚರ ಇಂದ್ರಿಯಾತೀತ ಇತ್ಯಾದಿ.. ಇತ್ಯಾದಿ ತತ್ವಗಳಲ್ಲಿ ಅನುಭಾವದ ಅಂತಃ ಸಾಕ್ಷತ್ಕಾರಕ್ಕೆ ಒಂದಿಲ್ಲೊಂದು ರೀತಿಯಲ್ಲಿ ಮೈಯೊಡ್ಡಿಕೊಂಡಿದೆ.

“ಆದಿ ಅನಾದಿ ಇಲ್ಲದಂದು
ಹಮ್ಮು ಬಿಮ್ಮುಗಳಿಲ್ಲದ್ದಂದು
ಸುರಾಳ ನಿರಾಳವಿಲ್ಲದಂದು
ಶೂನ್ಯ ನಿಶೂನ್ಯ ಇಲ್ಲದ್ದಂದು
ಸಚಾರಚರವೆಲ್ಲ
ರಚನೆಗೆ ಬಾರದಂದು ಗುಹೇಶ್ವ
ರೊಬ್ಬನೆ ಇದ್ದೆಯಲ್ಲ ಇದ್ದೆಯಂತೆ”

ನಮ್ಮ ಭಾರತೀಯತೆ ‘ಅನುಭಾವದ’ ಉತ್ಕಟತೆ ಅತ್ಯಂತ ಶಿಖರ ಪ್ರಾಯವೆನಿಸುವ ‘ವಸ್ತುರೂಪವಾದ ಈ ಜಗತ್ತು ಅಸ್ಥಿರವೆನಿಸುವ ‘ಅನಿಮಿತ್ತ’ ಯೋಗದ ಧ್ಯಾನಸ್ಥ ಸ್ಥಿತಿಯವರಿಗೂ.. ಯಾವ ಅನುಭವವೂ ಇಲ್ಲದಾ ‘ನಿರ್ವಾಣ’ ಎಂಬರ್ಥದವರಿಗೂ ವಿಕಾಸವಾಗಿದೆ.

ಅಲ್ಲಮನ ‘ಶಬ್ದದ ಲಜ್ಜೆಯ ನೋಡಾ’ ಎಂಬುದಕ್ಕಿಂತ ಪೂರ ಭಿನ್ನವಾಗಿಯೇ ‘ಶಬ್ದದ ಹಂಗೇ’ ಇಲ್ಲದೆ ಯೋಗ ಯೋಗಗಳಿಗೂ ಭಿನ್ನರಾದ ‘ಅನುಭಾವ ಪರಂಪರೆ ಅಥವಾ ಅವಧೂತ ಪರಂಪರೆ’ ನಮ್ಮ ಸಮುದಾಯಗಳೊಳಗೆ ಹರಿದಾಡಿದೆ.

ನಮ್ಮ ಕೋಲಾರ ಜಿಲ್ಲೆಯ ‘ದೊಡ್ಡಿ ವೆಂಕಟಗಿರಿ ಯಪ್ಪ’ನವರ ಆದಿಯಾಗಿ ದಕ್ಷಿಣಮೂರ್ತಿ, ಚಾವಡಿ ವೆಂಕಟಗಿರಿಯಪ್ಪ, ಅಗಸರ ರಾಮಯ್ಯ, ಬುರುದೆ ರಾಮಚಂದ್ರಪ್ಪ, ಮಾಯಸಂದ್ರ ಪಿಳ್ಳಪ್ಪ, ಚೂಡಗೊಂಡನಹಳ್ಳಿ ರಾಮಲಿಂಗಪ್ಪ ಗಟ್ಟಳ್ಳಿ ಆಂಜೀನಪ್ಪ, ಮಾದಿಗರ ಮಾದಪ್ಪ... ಇತ್ಯಾದಿಯಾಗಿ.

ಹೆಸರಾಂತ ಕಬೀರರು ಒಂದು ಕಡೆ ಅವಧೂತರ ಕುರಿತಾಗಿ ಹೇಳುತ್ತಾರೆ. ‘ಈ ಜಗದ್ಗುರು ಅವಧೂತ; ಅವನೆ ನನ್ನೆಯ ಗುರು; ಅವನೇ ಗುರುವಿನ ಗುರು. ಈ ಜಗದ ಗುರುವಿನ ಕುರಿತಾಗಿ ನಾರೇಯಣಪ್ಪನವರು ‘ಅವಧೂತ ಅಶ್ರಮಮು ಚೇರಿನಂದಕು ಗುರುತು ಕೊಡುಕುಕ್ಕುಲ ಪೊತ್ತು ಭಕ್ಷಣಮೇ ಸಾಕ್ಷಿ॥ ಪೊಂದಿ ತನದಕ ರೋಸಿನಂದಕು ಗುರುತು ತನವು ಪೈ ಅಶ ವಿಡಚಿನದಿಯೂ ಸಾಕ್ಷಿ॥ ಎನ್ನುತ್ತಾರೆ. ಈ ಸಣ್ಣ ವಾಕ್ಯಗಳೊಂದಿಗೆ ಈ ಪರಂಪರೆಯ ಸಂತರ ನಡೆಗಳನ್ನು ನಿಷ್ಕರ್ಷಿಸಕೊಳ್ಳ ಬಹುದು.

ಎಲ್ಲಾ ಜೀವಿಗಳೂ ಸಮವೆಂಬ ಮಹಾಸತ್ಯವನ್ನು ಸಾಕ್ಷತ್ಕರಿಸಿಕೊಂಡವರಂತೆ ಜೀವಿಗಳ ಲೋಕದಲ್ಲಿ ತಾನೂ ಒಬ್ಬ ಜೀವಿ ಮಾತ್ರವಲ್ಲದೆ ಮತ್ತೇನೂ ಅಲ್ಲವೆಂದಣಿಸಿ ಮನುಷ್ಯ ಸಹಜ ಅತಿಗಳ ಪರಿಣಾಗಳೇ ಜೀವಿಗಳ ಅಸ್ತಿತ್ವಕ್ಕೆ ಮಾರಕವೆಂದಣಿಸಿ ಮೌನವೊಂದನ್ನೇ ಮಹಾ ತಪ್ಪಸ್ಸಾಗಿಸಿಕೊಂಡ ವೆಂಕಟಗಿರಿಯಪ್ಪನವರ ಬದುಕಿನ ಕೆಲವು ಆಯ್ದ ಚಿತ್ರಣಗಳನ್ನು ತೆಗೆದುಕೊಂಡು ‘ಅನುಭಾವ ಮತ್ತು ಜೀವ ಜಗತ್ತು’ ಎಂಬ ವಿಷಯಕ್ಕೆ ತಾಳೇಹಾಕಿಕೊಳ್ಳಬಹುದು.

ಯಾವಾಗಲೂ ಏಕಾಂತದಲ್ಲಿ ಮೌನವಾಗಿರುತ್ತಿದ್ದ ಇವರು ಹಸಿವಾದಾಗ ಕೈಯಲ್ಲಿ ತೆಂಗಿನ ಚಿಪ್ಪೊಂದನ್ನು ಹಿಡಿದು ಯಾವುದಾದರೂ ಮನೆಯ ಹತ್ತಿರ ಸುಮ್ಮನೆ ನಿಲ್ಲುತ್ತಿದ್ದರು. ಅವರ ಹಿಂದೆ ಯಾವಾಗಲೂ ಬೆಂಬಿಡದೆ ನಾಯಿಯೊಂದು ಇರುತ್ತಿತ್ತು. ಹೀಗೆ ಅವರು ಭಿಕ್ಷೆಗಾಗಿ ದಲಿತರ ಕೇರಿಗೆ ಹೋಗಿ ‘ಗಂಗಮ್ಮ’ ಎಂಬ ಗಡಸುಗಾತಿಯ ಮನೆ ಮುಂದೆ ನಿಂತಾಗ ವೆಂಕಟಗಿರಿಯಪ್ಪನವರನ್ನು ನೋಡಿ ಆಕೆ ತುಂಬಾ ಹೆದರಿದ್ದಳು. ಏಕೆಂದರೆ ಆ ದಿನ ಅವಳ ಮನೆಯಲ್ಲಿ ‘ಸತ್ತದನದ ಕೊರಬಾಡಿನ ಸಾರು’ ಮಾಡಿದ್ದಳು. ಇದನ್ನು ಈ ಸ್ವಾಮಿಗಳಿಗೆ ನೀತಿ ಎಂತಹ ಪಾಪಕ್ಕೆ ಗುರಿಯಾಗುವೆನೋ ಎಂದು ನೋಡಿಯೂ ನೋಡದಂತೆ ಇದ್ದು ಬಿಟ್ಟಳು. ಎಂದೂ ಮಾತನಾಡದ ವೆಂಕಟಗಿರಿಯಪ್ಪನವರು. ಅಂದು.. ಆ ಉಟ್ಟಮ್ಯಾಲೆ ಕೊರ ಬಾಡಿನ ಸಾರು ತಗೊಂಡ್ ಬಾರೇ ಗಂಗೀ!’– ಅಂದರು. ಇನ್ನಷ್ಟು ಗಬರಿಗೊಂಡ ಗಂಗಮ್ಮ ಮರು ಮಾತಿಲ್ಲದೆ ಬಡಿಸಿದಳು. ಆಗ ವೆಂಕಟಗಿರಿಯಪ್ಪ ಒಂದು ತುತ್ತು ತನ್ನ ಬಾಯಿಗೂ ಮತ್ತೊಂದು ತುತ್ತು ನಾಯಿಗೂ ಹಾಕುತ್ತಾ... ಮುಂದುವರಿಸಿದ್ದಳು. ಆಗ ಗಂಗಮ್ಮ ಸ್ವಾಮಿ ನೀವ್ ತಿನ್ನಿ ಆ ನಾಯಿಗೆ ಬೇರೆ ಹಾಕ್ತಿನಿ” ಅಂದರು. ಆಗ ವೆಂಕಟಗಿರಿಯಪ್ಪನವರು ‘ನೀನ್, ನಾನು ಎಲ್ಲಾ ಜೀವಿಗಳೂ ಒಂದೇ ಗಿಡದ ಬಳ್ಳಿಗಳು. ಅದ್ ಬೇರೆ ನೀನ್ ಬ್ಯಾರೆ ಅಂತ ಕೆಟ್ಟೇಯಾ ಜೋಕೆ

ದಾಸಪರಂಪರೆಯಲ್ಲಿ ಕನಕ, ಪುರಂದರ, ಗೋವಿಂದದಾಸ, ಚಂಚುದಾಸ, ರೋಯಿದಾಸ, ಇವರೆಲ್ಲರೂ ಭಗವಂತನನ್ನು ಒಮ್ಮೆ ತಂದೆಯಂತೆ ಮತ್ತೊಮ್ಮೆ ಮುದ್ದುಮಗುವಿನಂತೆ ಮಗನಂತೆ, ಇನ್ನೊಮ್ಮೆ ಅಣ್ಣನಂತೆ, ಮತ್ತೊಮ್ಮೆ ಸ್ನೇಹಿತನಂತೆ ಮತ್ತೆ ಗುರುವಂತೆ ಭಾವಿಸಿಕೊಂಡು ಮೈಮರೆಯುವ ಅನುಭಾವವೊಂದಕ್ಕೆ ತಮ್ಮನ್ನು ಸಮರ್ಪಿಸಿಕೊಳ್ಳುತ್ತಾರೆ. ಭಕ್ತಿ ಪಂಥವೂ ಸಹ ತನ್ನ ಆರಾಧ್ಯ ಧೈವವೇ ಸರ್ವಶ್ರೇಷ್ಟನೆಂಬ ಭಾವೋನ್ಮಾದದ ಪರವಶತೆಯಲ್ಲಿ ತನ್ಮತೆಯನ್ನು ಪಡೆಯುತ್ತದೆ. ಇದೇ ಗುಣವನ್ನು ಸೂಫೀಪಂಥದಲ್ಲೂ ಕಾಣಬಹುದು. ಸೂಪೀಪಂಥವು ಮಹಾ ಪ್ರೇಮದ ಅನುಸಂಧಾನ ಭಾವದಲ್ಲಿ ಉನ್ಮಾದಕ್ಕೊಳಗಾಗುತ್ತದೆ. ಮತ್ತು ಧೈವಪ್ರೇಮದ ವರ್ಣಿಸಲು ಸಾಧ್ಯ ವಿಲ್ಲದ ಆನಂದ ಗಮ್ಯಕ್ಕೆ ಕಾತರಿಸುತ್ತದೆ.

ಅಂತ ಹೇಳಿ ಹೊರಟು ಹೋಗಿದ್ದರು.

ಆಗಿನ ಕಾಲದಲ್ಲೇ ಶಾಲೆಗಳಲ್ಲಿ ಬದಲಾಗಿ ಅಲ್ಲೊಂದ್ ಇಲ್ಲೊಂದ್ ಕೂಲಿ ಮಠಗಳಿದ್ದವು. ಹೀಗೆ ಪ್ರತಿದಿನ ಮಾಸ್ತಿಯಿಂದ ಬೆನ್ನಘಟ್ಟ ಎಂಬೂರಿಗೆ ಕೂಲಿ ಮಠದ ಅಯ್ಯನವರು ಕಾಲುನಡಿಗೆಯಲ್ಲೇ ಬರುತ್ತಿದ್ದರು. ಹೀಗೆ ಬರುವಾಗ ಅಯ್ಯನವರು ದೊಡ್ಡವೆಂಕಟಗಿರಿಯಪ್ಪನವರ ಮಠದಲ್ಲಿಯೇ ಹಾದು ಹೋಗಬೇಕಾಗಿತ್ತು. ಹೀಗೆ ಪ್ರತಿದಿನ ವೆಂಕಟಗಿರಿಯಪ್ಪನವರನ್ನು ಅತಿ ಸಮೀಪದಿಂದ ನೋಡಿ ಬೆರಗಾಗಿದ್ದ ಅವರು ವೆಂಕಟಗಿರಿಯಪ್ಪನವರ ಕುರಿತಾಗಿ ಬರೆದಿಡುತ್ತಿದ್ದರು.

ಒಂದು ದಿನ ಬೆಳಿಗ್ಗೆ ಬೆನ್ನ ಘಟ್ಟಕ್ಕೆ ಬರುತ್ತಿದ್ದಾಗ 'ವೆಂಕಟಗಿರಿಯಪ್ಪನವರು ತಾವೇ ನೆಟ್ಟ ಕೆಲವು ಗಿಡಗಳ ಹತ್ತಿರ ಹೋಗಿ ಮುಟ್ಟಿ ಮುಟ್ಟಿ ಏನೇನೋ ಮಾತಾನಾಡಿಕೊಳ್ಳುತ್ತಿದ್ದರು.' ಅಯ್ಯನವರಿಗೆ ಕುತೂಹಲವಾಗಿ ಹತ್ತಿರ ಹೋಗಿ ನಿಂತು ಕೊಂಡರೂ ವೆಂಕಟಗಿರಿಯಪ್ಪನವರು ತಂಪಾಡಿಗೆ ತಾವೇ ಮಾತನಾಡಿಕೊಳ್ಳುತ್ತಿದ್ದರು. ತಮ್ಮ ಪಾಡಿಗೆ ತಾವು ಗಿಡದ ಚಿಗುರನ್ನು ಮುಟ್ಟಿ ನೋಡುತ್ತಾ... ಭವ ಬೆರಗಿನ ಲೋಕವೊಂದರಲ್ಲಿ... 'ನನ್ನ ನಗುವಿನ ಚಿಗುರು ಎಷ್ಟೊಂದು ಎಳಸು? ಈ ಚಿಗುರೇ ಇಷ್ಟೊಂದು ಬೆರಗಾಗಿದೆಯಲ್ಲಾ! ಈ ನಗುವಿನ ಬೆರಗು ಪೂರ್ತಿ ಬೇಳೆದರೆ ನನ್ನ ದೇಹ ಚೂರಾಗಿ ಸಿಡಿದೋಯ್ತದೆ! ಅಬ್ಬಾ!! ಈ ಬೆರಗಿನ ಕೊನೆ ಮುಟ್ಟೋದೆ ಬೇಡ! ಈ ಸಣ್ಣ ಚಿಗುರಿನ ಐಬೋವನೇ ಸಾಕು..(ಇನ್ನೊಂದು ಗಿಡಕ್ಕೆ ಮುನ್ನೆಡೆದು) ತಾಯಿ ಮಗುವಿನ ತಲೆ ನೇವರಿಸುವಂತೆ ಚಿಗುರನ್ನು ನೇವರಿಸುತ್ತಾ!? (ಮುಂದಿನ ಗಿಡಕ್ಕೆ ನಡೆದು...) ನೀನ್ ಬೆಳೆದ್ರೆ ಈ ಜಗ ಬೆಳೀತಾದೆ.. ನೀನ್ ಅಳಿದ್ರೆ ಈ ಜಗ ಅಳಿತಾದೆ! ಅದ್ಕೆ ಸುಮ್ಮನಿರಬೇಡಾ! ಹೀಗೆ ಯಾವಾಗ್ಲೂ ಚಿಗುರ್ತಾನೆ ಇರು. ಜೀವಿಗಳ ಎದೆಯಲ್ಲಿ ಬೆಳಕಾಗಿ... ಎಂಬ ಬೆಕ್ಕಸ ಬೆರಗಿನ 'ಅನುಭಾವ' ಆನಂದದಲ್ಲಿ ಕರಗಿ ನೀರಾಗಿದ್ದರು.

ಇವರ ನಂತರ ದೊಡ್ಡ ವೆಂಕಟಗಿರಿಯಪ್ಪನವರ ತೋಪಿಗೆ ಎಲ್ಲಿಂದಲೋ ಬಂದ ದಕ್ಷಿಣ ಮೂರ್ತಿ ಎಂಬ ಸಾಧುಗಳಲ್ಲಿಯೂ ಅನುಭಾವ ಮತ್ತು ಜೀವ ಜಗತ್ತಿನ ಗಮ್ಮತ್ತಿನ ಮತ್ತನ್ನು ಆ ಪ್ರಾಂತ್ಯಕ್ಕೆ ಪಸರಿಸಿದ್ದನ್ನು ನೋಡಬಹುದು. ಹಿಂಗಾಲಿನವರೆಗೂ ಜಡೆಗಟ್ಟಿ ಇಳಿಬಿಟ್ಟ ಕೂದಲುಗಳು; ಹೊಕ್ಕಳವರಿಗೂ ಜಡೆಗಟ್ಟು ನೇತಾಡುವ ಪೂರ ಬರಿಮೈ ಆದರೂ ಗುಪ್ತಾಂಗವನ್ನು ಮುಚ್ಚಿಕೊಳ್ಳುವಷ್ಟು ಮಾತ್ರ ನಡುದಾರಕ್ಕೆ ಸಿಕ್ಕಿಸಿ ಕೊಂಡ ಪುಟಗೋಸಿಯ ಹಿಂದೆ ನೇತಾಡುವ ಬಾಲದಂತಾಗಿತ್ತು.

ಕಂಕುಳಲ್ಲಿ ಅದೆಂತಹದ್ದೊ ಬೂದಿತುಂಬಿದ ಜೋಳಿಗೆ ಅವರಷ್ಟೇ ಉದ್ದದ ತ್ರಿಶೂಲ, ಮುಖದಲ್ಲಿ ಮೂವತ್ತು ವರ್ಷವನ್ನು ಪೂರೈಸದ ತುಂಬ ಹರೆಯದ ಕಾಲತಿ ಬದುಕನ್ನು ಕಳೆದುಕೊಂಡು ಸಂನ್ಯಾಸಿಯಾದ್ದರಿಂದ ಕಣ್ಣುಗಳಲ್ಲಿ ಆವರಿಸಿದ್ದ ಜಿಡ್ಡುಗಟ್ಟಿದ ಜಿಗುಪ್ಸೆ; ಇಂತಹ ಜಿಗುಪ್ಸೆಯ ಬಿಗುಮಾನದಲ್ಲಿ ವಾಸ್ತವ ಸ್ಥಿತಿಯ ದಿಗ್ಭ್ರಮೆಗಳನ್ನೇ ಆಧ್ಯಾತ್ಮದ ಸುಳಿವುಗಳನ್ನಾಗಿಸಿಕೊಂಡು ಊರೂರು ಅಲೆಯುತ್ತಿದ್ದ ಈ ಸಂನ್ಯಾಸಿನಿ ಎರಡು ದಿನಕ್ಕಿಂತಲೂ ಹೆಚ್ಚಿಗೆ ಯಾವ ಹಳ್ಳಿಯಲ್ಲೂ ತಂಗುತ್ತಿರಲಿಲ್ಲ; ಹೋದರೂ ಮತ್ತೆ ಎಂದಾದರೂ ಬರುತ್ತಿದ್ದರು. ಈ ಕಾರಣದಿಂದಾಗಿ ಪ್ರತಿ ಹಳ್ಳಿಯ ಸಾಮಾನ್ಯನಿಗೂ ಈತನನ್ನು ಮಾತನಾಡಿಸಲು ಜನ ಬಹಳ ಹಿಂಜರಿಯುತ್ತಿದ್ದರು. ಅದಾಗ್ಯೂ ಈತನ ಕುರಿತಾಗಿ.. ಸಾಕ್ಷತ್ ದೇವಮಾನವನೆಂತಲೋ.. ಮಾಟಗಾರನೆಂತಲೋ ಕೆಲವರು ಸಿದ್ಧ ಯೋಗಿ ಎಂತಲೋ... ಕೆಲವರು ತಂತ್ರಗಾರನೆಂತಲೋ.. ಭಿನ್ನಭಿನ್ನವಾಗಿ ಮಾತನಾಡಿಕೊಳ್ಳುತ್ತಿದ್ದರು. ಇವರು ಯಾವುದಾದರೂ ಒಂದು ಹಳ್ಳಿಗೆ ಬಂದರೆಂದರೆ ಆ ಹಳ್ಳಿಯ ಪ್ರಮುಖ ದೇವಸ್ಥಾನದ ಆವರಣದಲ್ಲಿಯೇ ಇದ್ದು ಬಿಡುತ್ತಿದ್ದರು. ಎಲ್ಲೂ ಭಿಕ್ಷೆ ಬೇಡುತ್ತಿರಲಿಲ್ಲ.

> **ಸಾಮಾನ್ಯವಾಗಿ ಬಹುಶಃ ಭಾರತದ ವೈದಿಕ ಪಂಥಗಳು ಮತ್ತು ವೈದಿಕೇತರ ಪಂಥಗಳು ಈ ಎರಡೂ ದಾರಿಗಳು ಬೇರೆ ಬೇರೆ ಅನಿಸಿದರೂ ಒಂದೆ ಗಮ್ಯದ ಗುರಿಯನ್ನು ಹೊಂದಿರುವುದು ಸುಸ್ಪಷ್ಟ. ಇವೆ ಲ್ಲವುಗಳಿಗೂ ಮೀರಿ ಅರ್ಥೈಸಿಕೊಳ್ಳಲು ಸಂಕೀರ್ಣವೆನಿಸುವ ಆತ್ಮವಾದವೂ ಸಹ ಸ್ವಲ್ಪ ಹೆಚ್ಚೂ ಕಡಿಮೆ ಮೇಲಿನ ವಾದವನ್ನೇ ಇನ್ನೊಂದು ರೀತಿಯಲ್ಲಿ ಪುಷ್ಟಿಕರಿಸುತ್ತದೆ. ಆತ್ಮವೆಂಬುದು ಈ ಸಕಲ ಚರಾಚರ ಜೀವರಾಶಿಗಳೊಳಗೆ ಹೊಕ್ಕಿಕೊಂಡಿದೆ. ಅದೇ ಪರಮಾತ್ಮ., ಅದೇ ಶಿವ; ಆ ಶಿವನೆ ಕಾಲ., ಮೌನ. ಅದು ಹುಟ್ಟಿದ್ದಲ್ಲ ಅದುವೆ ಶೂನ್ಯ ನಿಶೂನ್ಯ ಅದೇ ಬಯಲು., ಅದೇ ಪರಬ್ರಹ್ಮ., ಅದೇ ಈ ವಿಶ್ವ ಸತ್ಯ ಅದೇ ವಸ್ತುರೂಪವಾದ ಈ ಲೌಖಿಕ ಜಗತ್ತಿನ ಸಾರ, ಅದುವೆ ನಿರಾಕಾರ, ಅವ್ಯಕ್ತ, ಅಗೋಚರ ಇಂದ್ರಿಯಾತೀತ ಇತ್ಯಾದಿ..**

ಇವರ ಸ್ಥಿತಿಯನ್ನರಿತ ಯಾರಾದರು ಹಣ್ಣು, ಹಾಲು, ತಿಂಡಿ ಇವರು ಇರುವಲ್ಲಿಗೆ ತಂದು ಕೊಟ್ಟರೆ ಮಾತ್ರ ಸೇವಿಸುತ್ತಿದ್ದರು. ಮಿಕ್ಕೆಲ್ಲಾ ವೇಳೆಯಲ್ಲಿ ತಪಸ್ಸು, ಧ್ಯಾನ, ಮೌನ! ಹೀಗೆ ಮಾಲೂರಿಗೆ ಸಮೀಪವಿರುವ ಕುಡೇನೂರು ಎಂಬಲ್ಲಿ ಈ ಸಾಧುಗಳು ತಂಗಿದ್ದಾಗ 'ಹೇಗಾದರೂ ಮಾಡಿ ಸಾಧುಗಳನ್ನು ವಿನಯದಿಂದ ಮಾತನಾಡಿಸಿ ಪಾದಗಳಿಗೆ ನಮಸ್ಕರಿಸುವುದನ್ನು ರೂಢಿಯಾಗಿಸಿಕೊಂಡಿದ್ದ 'ಪಳ್ಳಿಗರ ಕೊಲ್ಕಾರ ಕೃಷ್ಣಪ್ಪ' ಎಂಬುವರು ಧೈರ್ಯಮಾಡಿ ಈ ಸಾಧುಗಳನ್ನು ಮಾತನಾಡಿಸಿ...

'ಹೀಗೆ ಊರೂರು ಅಲೆಯುತ್ತಾ, ಎಲ್ಲಿಯೂ ನೆಲೆ ನಿಲ್ಲದೆ ಸಮಯಕ್ಕೆ ಊಟತಿಂಡಿಗಳಿಲ್ಲದೇ, ನಿರಮ್ಮಳವಾಗಿ ನೀವು ನೀವಾಗಿರಲು ಬೇಕಾದ ಸ್ಥಳ ಇಲ್ಲದೆ ಏಕೆ ಅಲೆಯುತ್ತೀರಿ ಸ್ವಾಮಿ?" ನಿಮಗೊಂದು ಜಾಗ ತೋರಿಸುತ್ತೇನೆ ಬನ್ನಿ". ಎಂದು ಹೇಳಿ ಕೋಲ್ಕಾರ ಕೃಷ್ಣಪ್ಪನವರು ಸ್ವಾಮಿಗಳನ್ನು ಕರೆದುಕೊಂಡು ದಾದಿನಾಯಕನ ದೊಡ್ಡ ತೋಪಿಗೆ ಬಂದು ವೆಂಕಟಗಿರಿಯಪ್ಪನವರ ಸಮಾಧಿಗೆ ಎದುರಿಗಿರುವ ಅಶ್ವಥಕಟ್ಟೆಯ ಮೇಲೆ ಸ್ವಾಮಿಗಳನ್ನು ಕೂರಿಸಿ ತಾನ ಊರೊಳಗೆ ನಡೆದು ಆ ಊರಿನ ತೋಟಿ ಮುನಿಯಪ್ಪನವರನ್ನು ಕರೆತಂದು ಸ್ವಾಮಿಗಳನ್ನು ತೋರಿಸಿ 'ಪ್ರತಿಕ್ಷಣ ತಪಸ್ಸಿನಲ್ಲಿರುವ ಈಸ ಸ್ವಾಮಿಗಳಿಗೆ ನೆಲೆ ಇಲ್ಲ; ಸಮಯಕ್ಕೆ ಊಟ ತಿಂಡಿ ಎಂತಹದ್ದೂ ಇಲ್ಲ; ಯಾರನ್ನೂ ಕೇಳುವುದೂ ಇಲ್ಲ' ಇವರನ್ನು ಬೆಳಿಗ್ಗೆ ಸಂಜೆ ಮಾತನಾಡಿಸಿ ಇವರನ್ನು ಒಂಚೂರು ನೋಡಿಕೊಳ್ಳಯ್ಯ ಇದರ ಫಲ ನಿನಗೆ ಇದ್ದೇ ಇದೆ' ಎಂದು ಹೇಳಿ ಹೊರಟು ಹೋದರು.

ಆ ದಿನ ಸಂಜೆ ತೋಟಿಮುನಿಯಪ್ಪನವರು ಆ ಊರಿನ ಪ್ರಮುಖರೊಬ್ಬರ ಮನೆಯಲ್ಲಿ ಊಟಕ್ಕೆ ಹೇಳಿ ಕರೆದುಕೊಂಡು ಹೋಗಿ ಊಟಮಾಡಿಸಿಕೊಂಡು ವೆಂಕಟಗಿರಿಯಪ್ಪನವರ ಸಮಾಧಿಗೆ ಕಟ್ಟಿದ್ದ ಕಲ್ಲುಮಂಟಪದವರೆಗೂ ಬಿಟ್ಟು 'ಇಲ್ಲೆ ಮಲಗಿ' ಎಂದು ಹೇಳಿ ಮನೆಗೆ ಹೊರಟು ಬಿಟ್ಟರು. ಆ ರಾತ್ರಿಯ ಕಾರ್ಗತ್ತಲು ಕಗ್ಗಾಡಿನಲ್ಲಿ ಅವರನ್ನು ಒಬ್ಬಂಟಿತನ ಕಾಡಲಿಲ್ಲ; ಭಯವಂತೂ ಹತ್ತಿರ ಸುಳಿದಿರಲಿಲ್ಲ. ಬದಲಾಗಿ ಸ್ವಾಮಿಗಳಿಗೆ ಅದು ಕತ್ತಲ ಮರೆತ ಬೆಳಕಿನ ರಾತ್ರಿಯಾಗಿತ್ತು. 'ನಾನು ಈ ಜಾಗವನ್ನೇ ಇಷ್ಟು ದಿನ ಹುಡುಕುತ್ತಿದ್ದೇನೆ? ಎಂದು ವಿಸ್ಮಯಗೊಂಡರು. ಈ ಜಾಗದೊಂದಿಗಿನ ನನ್ನ ಸಂಬಂಧ ತಾಯಿ ಕರುಳ ಬಳ್ಳಿಯ ಸಂಬಂಧದಷ್ಟೇ ಸಹಜವಾಗಿ ಸ್ಪಂದಿಸುತ್ತದೆ ಎಂಬ ಭವಬೆಳಗಿನಲ್ಲಿ ಬೆಚ್ಚಗೆ... ನನ್ನ ತನವನ್ನೆಲ್ಲಾ ಬಾಚಿ ಅಪ್ಪಿಕೊಳ್ಳುತ್ತಿರುವ ಈ ಜಾಗ ಇಷ್ಟು ಕಾಲ ಕೈಗೆ ಸಿಗದೆ ಎಷ್ಟೊಂದು ಸತಾಯಿಸುತ್ತೆಂದು ಮರುಕಪಟ್ಟುಕೊಂಡು. ವೆಂಕಟಗಿರಿಯಪ್ಪನ ಸಮಾಧಿಗೆ ಒರಗಿ ಕೂತುಕೊಳ್ಳುತ್ತಿದ್ದಂತೇ ಇಷ್ಟು ದಿನ ಸಂನ್ಯಾಸತ್ವವೇ ಬರಿ ನಿರಾರ್ಥಕವೆನಿಸಿ ಬೆಂಬಿಡದೆ ಕಾಡುತ್ತಿದ್ದ ದಿಗ್ಭ್ರಮೆಗೊಂದು ಅರ್ಥವಂತಿಕೆಯ ದಿಕ್ಕನ್ನು ಕಟ್ಟಿಕೊಳ್ಳುವ ಭರವಸೆಯ ಆತ್ಮಸ್ಥೈರ್ಯ ಅವರ ಎದೆಯೊಳಗೆ ಸ್ವಯಂ ಸಂಚಾರವಾಗಿತ್ತು.

ಸದಾ ಗೊಡ್ಡು ಸ್ಥಿತಿಯಲ್ಲಿರುವ ಮತೀಯ ಅಧ್ಯಾತ್ಮ ತಳಕೆಳಗಾದ ಪರಿಣಾಮಗಳಿಗೆ ಮೇಲಾಗಿ ತೋಪಿನ ಮರಗಳ ನೆರಳಿನ ತಂಪಲ್ಲಿ, ಪುಷ್ಪಗಳಲ್ಲಡಗಿರುವ ಪರಿಮಳದಲ್ಲಿ, ಫಲಗಳಲ್ಲಡಗಿರುವ ಸುರಸದಲ್ಲಿ.. ಇವೆಲ್ಲವುಗಳಲ್ಲಡಗಿರುವ ಜೈವಿಕ ಸೌಜನ್ಯದ ಕಲೆಯು ಅವರಲ್ಲಿ ನಿಸರ್ಗ ಮನೋಹರ ನಿಗೂಢ ಧರ್ಮದ ಅಂತರ್ಬೋದೆಯೊಂದು ಅರುಹಿಹ ಆ ದೊಡ್ಡತೋಪಿನ ನಿಶ್ಯಬ್ದ ನಿಡುತೋಳುಗಳಲ್ಲಿ ಆ ಸಂನ್ಯಾಸಿನಿ ಗಟ್ಟಿಯಾಗಿ ಬಂದಿಯಾಗುತ್ತಿದ್ದಂತೆ.. ಯಾವುದನ್ನೂ ಯಾರನ್ನೂ ಅಷ್ಟೊಂದು ಸುಲಭವಾಗಿ ಹತ್ತಿರಬಿಟ್ಟುಕೊಳ್ಳದ ಮಾನವನ ಅಪ್ರಕೃತ ಕ್ರೌರ್ಯದ ಎದುರು ಯಾವ ಮೂದಲಿಕೆಯೂ ಇಲ್ಲದೆ ಎಲ್ಲವನ್ನು ತಂಪಾಡಿಗೆ ಬಿಟ್ಟು ಕಾಲದಂತೆ ಮೌನವಾಗಿದ್ದ ಆ ಪ್ರಕೃತಿಯ ಧರ್ಮದಲ್ಲಿ ಮನುಷ್ಯ ನಡೆಯಬಹುದಾದ ಮುಂದಡಿಯ ಮುನ್ನುಡಿ ಇತ್ತು (ಹಿಂದಣ ಹೆಜ್ಜೆಯನ್ನರಿಯದೆ ಮುಂದಣ ಹೆಜ್ಜೆಯನ್ನರಿಯಬಹುದೇ-ಅಲ್ಲಮ) ಪ್ರಮುಖವಾಗಿ ಆ ಊರಿನ ಜನಸಮುದಾಯಗಳು ಸಾಧುಗಳನ್ನು ತಮ್ಮ ಬದುಕಿನ ಭಾಗವೆಂದೇ ಪರಿಗಣಿಸಿ ಉಪಚರಿಸುತ್ತಿದ್ದ ರೀತಿಯೊಳಗೆ ಸಹಜ ಸುಂದರ ಸೃಜನಶೀಲ ಜೀವಕಾರುಣ್ಯದ ಮಾನವೀಯ ಧರ್ಮವನ್ನು ಕಟ್ಟಿಕೊಳ್ಳಬಹುದೆಂದು ರೋಮಾಂಚನಗೊಂಡರು.

ವೆಂಕಟಗಿರಿಯಪ್ಪನವರು ತಮಗೆ ಹಸಿವಾದಾಗ ಮಾತ್ರ ಭಿಕ್ಷೆ ಬೇಡುತ್ತಿದ್ದರು. 'ಹಸಿವು' ಈ ಪದದ ಅರ್ಥವನ್ನು ಜ್ಞಾನದ ಹಸಿವು, ಅಸಹಾಯಕರ, ದೀನರ ದರಿದ್ರರ ಬಾಳಿಗೆ ಕಣ್ಣಾದರು. □

ಯುನೀಕ್ ಐಡೆಂಟಿಟಿ ಕಾರ್ಡ್:
ರೇಷನ್ ಕಾರ್ಡ್ ಕೊಡದ ಸರ್ಕಾರ ಐಡೆಂಟಿಟಿ ಕಾರ್ಡ್ ಕೊಡುತ್ತಿರುವುದೇಕೆ?

ಸರ್ಕಾರ ಈ ಯುನಿಕ್ ಐಡೆಂಟಿ ಕಾರ್ಡ್‌ಗೆ ಇಷ್ಟು ಯುನೀಕ್ ಮಹತ್ವ ಕೊಡುತ್ತಿರುವುದೇಕೆ? ಇಷ್ಟೊಂದು ಪ್ರಾಧಾನ್ಯತೆ ಕೊಟ್ಟು ತರಾತುರಿಯಲ್ಲಿ ಜಾರಿಗೆ ತರುತ್ತಿರುವುದೇಕೆ? ಇದರ ಹಿಂದಿನ ಅಸಲಿ ಉದ್ದೇಶಗಳೇನು? ಇವನ್ನು ಅರ್ಥಮಾಡಿಕೊಳ್ಳುವ ಮುಂಚೆ ಇದರಿಂದ ಏನೆಲ್ಲಾ ಸಾಧಿಸುತ್ತೇವೆ ಎನ್ನುತ್ತಿರುವ ಸರ್ಕಾರದ ವಾದಗಳಲ್ಲಿ ನಿಜಕ್ಕೂ ಸತ್ಯಾಂಶಗಳಿವೆಯೇ ಎಂದು ವಿಶ್ಲೇಷಿಸುವ ಅಗತ್ಯವಿದೆ. ಹಿಂದೆಂದೂ ಇಲ್ಲದಂತೆ ಈ ದೇಶದ ಜನರ ತೆರಿಗೆ ಹಣದ ಬಹುದೊಡ್ಡ ಮೊತ್ತವನ್ನು ಸರ್ಕಾರ ಈ ಬಾಬತ್ತಿಗೆ ಖರ್ಚು ಮಾಡುತ್ತಿರುವಾಗ ಅದರಿಂದ ನಿಜಕ್ಕೂ ಈ ದೇಶದ ಕೋಟ್ಯಾಂತರ ಬಡ ತೆರಿಗೆದಾರರಿಗೆ ಏನಾದರೂ ಲಾಭವಿದೆಯೇ ಎಂದು ಪ್ರಶ್ನಿಸುವ ಹಕ್ಕು ಮತ್ತು ಅಧಿಕಾರ ನಮ್ಮೆಲ್ಲರಿಗೂ ಇದೆಯಲ್ಲವೇ?

ಶಿವಸುಂದರ್

ಯುಪಿಎ ಸರ್ಕಾರ ಕೊಟ್ಟ ನೂರಾರು ಭರವಸೆಗಳನ್ನು ನೂರೇ ದಿನಗಳಲ್ಲಿ ಈಡೇರಿಸುವ ಭ್ರಾಂತಿ ಮೂಡಿಸುವಂತೆ ಕೇಂದ್ರ ಸರ್ಕಾರದ ಪ್ರತಿಯೊಂದು ಇಲಾಖೆಗಳು ತಮ್ಮ ತಮ್ಮ ನೂರು ದಿನಗಳ ಅಜೆಂಡಾವನ್ನು ಘೋಷಿಸುತ್ತಿವೆ. ಅವೆಲ್ಲಾ ಎಷ್ಟು ಅನುಷ್ಠಾನಕ್ಕೆ ಬರುತ್ತವೆ ಎಂಬುದು ಗೊತ್ತಿರುವ ವಿಷಯವೇ ಆದರೂ ಸಕಲ ಭಾರತೀಯರಿಗೂ ಒಂದು ವಿಶಿಷ್ಟ ಐಡೆಂಟಿಟಿ ಕಾರ್ಡ್ ಕೊಡುವ ಯೋಜನೆಯಂತೂ ಹೆಚ್ಚೂಕಡಿಮೆ ಸಮರೋಪಾದಿಯಲ್ಲಿ ಜಾರಿಗೆ ಬಾರುತ್ತಿದೆ. ತಾವು ಗೆದ್ದು ಬಂದರೂ, ಬರದಿದ್ದರೂ ಜಾರಿಗೆ ಬರಲೇಬೇಕು ಎಂದು ಯುಪಿಎ ಹಠ ಹಿಡಿದಿದ್ದ ಕೆಲವೇ ಯೋಜನೆಗಳಲ್ಲಿ ಇದೂ ಒಂದು. ಅದಕ್ಕಾಗಿಯೇ ಕಳೆದ ಬಜೆಟ್ಟಿನಲ್ಲೇ ಈ ಬಾಬತ್ತಿಗೆ 100 ಕೋಟಿ ರೂ.ಗಳನ್ನು ಎತ್ತಿಡಲಾಗಿತ್ತು. ಈ ಬಗೆಯ ಒಂದು ಪ್ರಸ್ತಾಪವನ್ನು 2002ರಲ್ಲೇ ಎನ್‌ಡಿಎ ಸರ್ಕಾರವೇ ಮುಂದಿಟ್ಟಿದ್ದರಿಂದ ಸರ್ಕಾರದ ಈ ಯೋಜನೆಗೆ ಅಧಿಕೃತ ವಿರೋಧವೂ ಇಲ್ಲ!

ಸರ್ಕಾರದ ಪ್ರಕಾರ ಈ ಯೋಜನೆ ಜಾರಿಗೆ ಬಂದರೆ ಎಲ್ಲರಿಗೂ ಸುಲಭವಾಗಿ ರೇಷನ್ ಕಾರ್ಡ್ ಸಿಗುತ್ತದೆ, ಆಸ್ಪತ್ರೆ ಸೌಲಭ್ಯ ಸಿಗುತ್ತದೆ, ಸರ್ಕಾರದ ಹಲವಾರು ಜನೋಪಯೋಗಿ ಯೋಜನೆಗಳು ಜನರಿಗೆ ಸುಲಭವಾಗಿ ದಕ್ಕುತ್ತದೆ, ಸರ್ಕಾರ ಜನರಿಗೆ ಏನು ಬೇಕು ಎಂದು ಅರ್ಥಮಾಡಿಕೊಂಡು ಇನ್ನೂ ಹಲವಾರು ಯೋಜನೆಗಳನ್ನು ರೂಪಿಸಲು ಅನುಕೂಲವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಈ ಕಾರ್ಡ್ ಇದ್ದರೆ ಸಾಕು ಇನ್ನುಮುಂದೆ ಭಯೋತ್ಪಾದಕರು ಈ ದೇಶದ ಮೇಲೆ ಹಲ್ಲೆ ಮಾಡಲು ಸಾಧ್ಯವಾಗುವುದಿಲ್ಲ ಎಂದು ಸರ್ಕಾರ ಹೇಳುತ್ತಿದೆ. ಸದ್ಯಕ್ಕೆ ಈ ದೇಶಕ್ಕೆ ಬೇಕಿರುವ ಮಳೆಬೆಳೆಯನ್ನು ಹೊರತುಪಡಿಸಿ ಮಿಕ್ಕೆಲ್ಲವನ್ನೂ ಈ ಕಾರ್ಡೇ ಕೊಡುತ್ತದೆ ಎಂದು ಸರ್ಕಾರ ಮತ್ತು ಪತ್ರಿಕೆಗಳು ಪ್ರಚಾರ ಮಾಡುತ್ತಿವೆ. ಅಂದರೆ ಸಾರಾಂಶದಲ್ಲಿ ಈ ದೇಶದ ಪ್ರಗತಿಗೆ ದೊಡ್ಡ ಅಡ್ಡಿಯಾಗಿದ್ದದ್ದೇ ಈ ಯುನಿಕ್ ಐಡೆಂಟಿಟಿ ಕಾರ್ಡ್ ಇಲ್ಲದಿದ್ದುದು ಎನ್ನುತ್ತಿದೆ ಈ ಪ್ರಚಾರಗಳು.

ಅದಕ್ಕೆಂದೇ ಸರ್ಕಾರದ ಯಾವ ಒಂದು ಇಲಾಖೆಗೂ ನೀಡದಷ್ಟು ಮೊತ್ತವನ್ನು ಈ ಬಾಬತ್ತಿಗೆ ಎತ್ತಿಡಲಾಗಿದೆ. ಅದೂ ಎಷ್ಟು? ಒಂದು ಲಕ್ಷದ ಐವತ್ತು ಸಾವಿರ ಕೋಟಿ ರೂಪಾಯಿಗಳು!!! ಅಂದರೆ ಎಷ್ಟು? ಕರ್ನಾಟಕದ ವಾರ್ಷಿಕ ಬಜೆಟ್ಟು 55,000 ಕೋಟಿ! ಇದು ಅದರ ಮೂರು ಪಟ್ಟು ಜಾಸ್ತಿ. ಕೇಂದ್ರ ಸರ್ಕಾರ ಬಡವರಿಗೆ ಪಡಿತರ ನೀಡಲು ಎತ್ತಿಡುತ್ತಿದ್ದ ಮೊತ್ತ 35,000 ಕೋಟಿ ರೂ. ಸರ್ಕಾರದ ಬಳಿ ಹಣವಿಲ್ಲವೆಂಬ ಕಾರಣಕ್ಕೆ ಕ್ರಮೇಣ ಅದನ್ನು ಕಡಿಮೆ ಮಾಡಲಾಗುತ್ತಿದೆ. ಬಡವರಿಗೆ ಅನ್ನ ಕೊಡಲು ಹಣವಿಲ್ಲದ ಸರ್ಕಾರ ಅವರಿಗೆ ಐಡೆಂಟಿಟಿ ಕಾರ್ಡು ಕೊಡಲು ಐದು ಪಟ್ಟು ಹೆಚ್ಚು ಹಣ ಖರ್ಚು ಮಾಡುತ್ತಿದೆ. ಈ ದೇಶದ ರಕ್ಷಣಾ ವೆಚ್ಚ 1,30,000 ಕೋಟಿ. ಅಂದರೆ ಈ ಗುರುತು ಕಾರ್ಡ್ ಕೊಡುವ ಬಾಬತ್ತಿಗೆ ರಕ್ಷಣಾ ಇಲಾಖೆಗಿಂತಲೂ ಹೆಚ್ಚಿನ ಮಹತ್ವವನ್ನು ಸರ್ಕಾರ ಕೊಡುತ್ತಿದೆ.

ಅಷ್ಟು ಮಾತ್ರವಲ್ಲ. ಸರ್ಕಾರ ಈ ಯೋಜನೆಯ ಜಾರಿಗೆ ಎಷ್ಟು ಕಟಿಬದ್ಧವಾಗಿದೆಯೆಂದರೆ ಇದರ ಅನುಷ್ಠಾ ನದ ಜವಾಬ್ದಾರಿಯನ್ನು ಈ ದೇಶದ ಖಾಸಗೀಕರಣದ ಮತ್ತು ಜಾಗತೀಕರಣ ಯೋಜನೆಗಳ ಅತ್ಯಂತ ದೊಡ್ಡ ಫಲಾನುಭವಿಯಾಗಿರುವ ಇನ್‌ಫೋಸಿಸ್ ಸಂಸ್ಥೆಯ ಮುಖ್ಯಸ್ಥ ನಂದನ ನಿಲೇಕಣಿಗೆ ವಹಿಸಿದೆ. ಮತ್ತು ಆತನ ಹುದ್ದೆಗೆ ಕ್ಯಾಬಿನೆಟ್ ಸಚಿವನ ಸ್ಥಾನಮಾನವನ್ನು ನೀಡಿದೆ. ಅಲ್ಲದೆ ಸರ್ಕಾರದಿಂದ

ತನಗೆ ಬೇಕಾದ ಅಧಿಕಾರಿಗಳನ್ನು ಮತ್ತು ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಮುಕ್ತ ಪರವಾನಗಿ ಕೊಟ್ಟಿದೆ. 2011ರ ವೇಳೆಗೆ ಈ ಈ ದೇಶದ ಎಲ್ಲಾ ನಾಗರೀಕರಿಗೂ ಈ ಯೂನಿಕ್ ಕಾರ್ಡ್ ಒದಗಿಸಬೇಕೆಂಬುದು ಸರ್ಕಾರದ ಉದ್ದೇಶ.

ಸರ್ಕಾರ ಈ ಯುನಿಕ್ ಐಡೆಂಟಿ ಕಾರ್ಡ್‌ಗೆ ಇಷ್ಟು ಯುನೀಕ್ ಮಹತ್ವ ಕೊಡುತ್ತಿರುವುದೇಕೆ? ಇಷ್ಟೊಂದು ಪ್ರಾಧಾನ್ಯತೆ ಕೊಟ್ಟು ತರಾತುರಿಯಲ್ಲಿ ಜಾರಿಗೆ ತರುತ್ತಿರುವುದೇಕೆ? ಇದರ ಹಿಂದಿನ ಅಸಲಿ ಉದ್ದೇಶಗಳೇನು?

ಇವನ್ನು ಅರ್ಥಮಾಡಿಕೊಳ್ಳುವ ಮುಂಚೆ ಇದರಿಂದ ಏನೆಲ್ಲಾ ಸಾಧಿಸುತ್ತೇವೆ ಎನ್ನುತ್ತಿರುವ ಸರ್ಕಾರದ ವಾದಗಳಲ್ಲಿ ನಿಜಕ್ಕೂ ಸತ್ಯಾಂಶಗಳಿವೆಯೇ ಎಂದು ವಿಶ್ಲೇಷಿಸುವ ಅಗತ್ಯವಿದೆ. ಹಿಂದೆಂದೂ ಇಲ್ಲದಂತೆ ಈ ದೇಶದ ಜನರ ತೆರಿಗೆ ಹಣದ ಬಹುದೊಡ್ಡ ಮೊತ್ತವನ್ನು ಸರ್ಕಾರ ಈ ಬಾಬತ್ತಿಗೆ ಖರ್ಚು ಮಾಡುತ್ತಿರುವಾಗ ಅದರಿಂದ ನಿಜಕ್ಕೂ ಈ ದೇಶದ ಕೋಟ್ಯಾಂತರ ಬಡ ತೆರಿಗೆದಾರರಿಗೆ ಏನಾದರೂ ಲಾಭವಿದೆಯೇ ಎಂದು ಪ್ರಶ್ನಿಸುವ ಹಕ್ಕು ಮತ್ತು ಅಧಿಕಾರ ನಮ್ಮೆಲ್ಲರಿಗೂ ಇದೆಯಲ್ಲವೇ?

ಬಯೋಮೆಟ್ರಿಕ್ ಪದ್ಧತಿಯಲ್ಲಿ ಈ ದೇಶದ ಒಬ್ಬೊಬ್ಬ ನಾಗರಿಕರ ಬಗೆಗೂ ಅತ್ಯಗತ್ಯವಾದ ಎಲ್ಲಾ ಮಾಹಿತಿಗಳನ್ನು ಗಣಕ ರೂಪದಲ್ಲಿ ದಾಖಲು ಮಾಡುವುದರಿಂದ ಈ ದೇಶದ ಜನರ ಅಗತ್ಯಗಳೇನು ಎಂದು ಅರ್ಥ ಮಾಡಿಕೊಳ್ಳಲು ಮತ್ತು ಅದಕ್ಕೆ ಪೂರಕವಾದ ಯೋಜನೆ ಮಾಡಲು ಅನುಕೂಲವಾಗುತ್ತದೆ ಎಂದು ಸರ್ಕಾರ ಹೇಳುತ್ತಿದೆ. ಹಾಗಿದ್ದಲ್ಲಿ ಈವರೆಗೆ ಸರ್ಕಾರಿ ಯೋಜನೆಗಳು ಸರಿಯಾಗಿ ರೂಪುಗೊಳ್ಳದಿರಲು ಅಥವಾ ಬಡಜನರ ಪರವಾದ ಯೋಜನೆಗಳು ಜಾರಿಯಾಗದಿರಲು ಸರಿಯಾದ ಮಾಹಿತಿ ಇಲ್ಲದಿರುವುದು ಕಾರಣವೇ? ಬಡಜನರಿಗೆ ಕೊಡುತ್ತಿದ್ದ ರೇಷನ್ ಕಾರ್ಡ್‌ಗಳ ಸಂಖ್ಯೆ ಕಡಿಮೆಯಾಗುತ್ತಿರುವುದಕ್ಕೆ ಮತ್ತು ಪ್ರತಿ ರೇಷನ್ ಕಾರ್ಡಿಗೆ ನೀಡುತ್ತಿದ್ದ ಧಾನ್ಯದ ಪ್ರಮಾಣ ಕಡಿಮೆಯಾಗುತ್ತಿರುವುದಕ್ಕೆ ಕಾರಣ ಈ ದೇಶದಲ್ಲಿ ಬಡಜನತೆ ಎಷ್ಟು ಮತ್ತು ಅವರಿಗೆ ತಿನ್ನಲು ಏನು ಮತ್ತು ಎಷ್ಟು ಬೇಕು ಎಂಬುದರ ಮಾಹಿತಿ ಇಲ್ಲದಿದ್ದುದು ಕಾರಣವೇ? ಇದಕ್ಕಿಂತ ಹಾಸ್ಯಾಸ್ಪದ ವಿಷಯ ಮತ್ತೊಂದಿಲ್ಲ. ಈ ದೇಶದಲ್ಲಿ ಇರುವ ಬಡಜನರ ಸಂಖ್ಯೆ ಎಷ್ಟು ಎಂಬ ನಿಖರ ಮಾಹಿತಿ ಸರ್ಕಾರಕ್ಕೆ ಇದ್ದ ಕಾರಣದಿಂದಲೇ ಬಡವರಿಗೆಲ್ಲಾ ಕಡಿಮೆದರದಲ್ಲಿ ರೇಷನ್ ಕೊಡಲಾಗುವುದಿಲ್ಲ ಎಂಬ ತೀರ್ಮಾನಕ್ಕೆ ಬಂದು ಬಡವರಲ್ಲೇ ಕಡುಬಡವರು ಎಂಬ ಮತ್ತೊಂದು ವರ್ಗವನ್ನು ನಿರ್ಮಿಸಿದ್ದು!

ಅದೇ ರೀತಿ ಈ ಕಾರ್ಡಿನಲ್ಲಿ ಜನರ ಆರೋಗ್ಯ ಸಂಬಂಧೀ ಮಾಹಿತಿಗಳೂ ಶೇಖರ ಮಾಡುವುದರಿಂದ ಜನರ ಆರೋಗ್ಯದ ಅಗತ್ಯಗಳನ್ನು ಇನ್ನೂ ಹೆಚ್ಚು ನಿಖರವಾಗಿ ಪೂರೈಸಬಹುದೆಂಬುದು ಸರ್ಕಾರ ಮುಂದಿಡುತ್ತಿರುವ ಮತ್ತೊಂದು ಬಲವಾದ ವಾದ! ಅಂದರೆ ಬಡವರಿಗೆ ಅಪೌಷ್ಟಿಕತೆಯ ಕಾರಣದಿಂದಲೇ ಹಲವಾರು ಖಾಯಿಲೆಗಳು ಬರುತ್ತಿರುವುದೂ, ನಗರದ ಸ್ಲಂಗಳಲ್ಲಿ ನೈರ್ಮಲ್ಯದ ಕೊರತೆಯಿಂದ, ಎಲ್ಲೆಡೆ ಸರಿಯಾದ ಕುಡಿಯುವ ನೀರಿನ ಸರಬರಾಜು ಇಲ್ಲದೆ ಸಣ್ಣಪುಟ್ಟ ಜ್ವರ, ಮಲೇರಿಯಾ, ಇನ್ನಿತ್ಯಾದಿ ಕಾಯಿಲೆಗಳಿಂದಾಗಿಯೇ ಲಕ್ಷಾಂತರ ಜನರು ಸಾಯುತ್ತಿದ್ದಾರೆಂಬುದು ಸರ್ಕಾರಕ್ಕೆ ಗೊತ್ತಿಲ್ಲವೇ? ಒಂದು ವೇಳೆ ಈಗ ಈ ಕಾರ್ಡ್ ಎಂಬ ಅಂಜನದ ಮೂಲಕ

ಇನ್‌ಫೋಸಿಸ್ ಸಂಸ್ಥೆಯ ಮುಖ್ಯಸ್ಥ ನಂದನ್ ನಿಲೀಕಣಿ

ಇವೆಲ್ಲಾ ಗೊತ್ತಾಗಿಬಿಟ್ಟರೆ ಸರ್ಕಾರ ಬಡಜನರ ವೈದ್ಯಕೀಯ ಸೇವೆಗೆ ವೆಚ್ಚ ಮಾಡುತ್ತಿರುವ ಹಣವನ್ನು ಅಗತ್ಯವಿರುವಷ್ಟು ಹೆಚ್ಚಿಸುತ್ತದೆಯೇ?

ಸರ್ಕಾರಕ್ಕೆ ಜನರ ಅಗತ್ಯಗಳ ಬಗ್ಗೆ ನಿಖರ ಮಾಹಿತಿ ಗೊತ್ತಿಲ್ಲದಿರುವುದೇ ಯೋಜನೆಗಳ ವೈಫಲ್ಯಕ್ಕೆ ಕಾರಣ ಎಂದೇ ಇಟ್ಟುಕೊಳ್ಳೋಣ. ಈಗ ಈ ಕಾರ್ಡಿನಿಂದ ನಿಖರ ಮಾಹಿತಿ ದೊರತರೆ ಅಗತ್ಯವಿರುವಷ್ಟು ಆಹಾರ ಮತ್ತು ಆರೋಗ್ಯ ಸೇವೆಗಳನ್ನು ಸರ್ಕಾರ ಒದಗಿಸಬಲ್ಲದೇ? ಅಷ್ಟು ಸ್ವಾತಂತ್ರ್ಯ ಮತ್ತು ಸಾರ್ವಭೌಮತೆ ಈ ಸರ್ಕಾರಗಳಿಗಿದೆಯೇ?

ಬಯೋಮೆಟ್ರಿಕ್ ಪದ್ಧತಿಯಲ್ಲಿ ಈ ದೇಶದ ಒಬ್ಬೊಬ್ಬ ನಾಗರಿಕರ ಬಗೆಗೂ ಅತ್ಯಗತ್ಯವಾದ ಎಲ್ಲಾ ಮಾಹಿತಿಗಳನ್ನು ಗಣಕ ರೂಪದಲ್ಲಿ ದಾಖಲು ಮಾಡುವುದರಿಂದ ಈ ದೇಶದ ಜನರ ಅಗತ್ಯಗಳೇನು ಎಂದು ಅರ್ಥ ಮಾಡಿಕೊಳ್ಳಲು ಮತ್ತು ಅದಕ್ಕೆ ಪೂರಕವಾದ ಯೋಜನೆ ಮಾಡಲು ಅನುಕೂಲವಾಗುತ್ತದೆ ಎಂದು ಸರ್ಕಾರ ಹೇಳುತ್ತಿದೆ. ಹಾಗಿದ್ದಲ್ಲಿ ಈವರೆಗೆ ಸರ್ಕಾರಿ ಯೋಜನೆಗಳು ಸರಿಯಾಗಿ ರೂಪುಗೊಳ್ಳದಿರಲು ಅಥವಾ ಬಡಜನರ ಪರವಾದ ಯೋಜನೆಗಳು ಜಾರಿಯಾಗದಿರಲು ಸರಿಯಾದ ಮಾಹಿತಿ ಇಲ್ಲದಿರುವುದು ಕಾರಣವೇ? ಬಡಜನರಿಗೆ ಕೊಡುತ್ತಿದ್ದ ರೇಷನ್ ಕಾರ್ಡ್‌ಗಳ ಸಂಖ್ಯೆ ಕಡಿಮೆಯಾಗುತ್ತಿರುವುದಕ್ಕೆ ಮತ್ತು ಪ್ರತಿ ರೇಷನ್ ಕಾರ್ಡಿಗೆ ನೀಡುತ್ತಿದ್ದ ಧಾನ್ಯದ ಪ್ರಮಾಣ ಕಡಿಮೆಯಾಗುತ್ತಿರುವುದಕ್ಕೆ ಕಾರಣ ಈ ದೇಶದಲ್ಲಿ ಬಡಜನತೆ ಎಷ್ಟು ಮತ್ತು ಅವರಿಗೆ ತಿನ್ನಲು ಏನು ಮತ್ತು ಎಷ್ಟು ಬೇಕು ಎಂಬುದರ ಮಾಹಿತಿ ಇಲ್ಲದಿದ್ದುದು ಕಾರಣವೇ?

ಹಾಗಿದ್ದಲ್ಲಿ ಯಾವುದೇ ನಿಖರ ಮಾಹಿತಿ ಇಲ್ಲದೇ ಈ ದೇಶದಲ್ಲಿ 91ರ ನಂತರ ಬಡವರ ಸಂಖ್ಯೆ ಕಡಿಮೆಯಾಗುತ್ತಿದೆಯೆಂಬ ತೀರ್ಮಾನಕ್ಕೆ ಬಂದು ಬಡವರಿಗೆ ಕೊಡುತ್ತಿದ್ದ ಪಡಿತರದ ಪ್ರಮಾಣವನ್ನು ಕಡಿಮೆ ಮಾಡಿದ್ದೇಕೆ? ಯಾವ ನಿಖರ ಮಾಹಿತಿಯ ಆಧಾರದ ಮೇಲೆ ಗ್ರಾಮೀಣ ಬ್ಯಾಂಕುಗಳ ಸಂಖ್ಯೆಗಳನ್ನು ಕಡಿಮೆ ಮಾಡಲಾಯಿತು? ಯಾವ ನಿಖರ ಮಾಹಿತಿಯ ಆಧಾರದ ಮೇಲೆ ಸರ್ಕಾರಿ ಶಾಲೆ ಮತ್ತು ಆಸ್ಪತ್ರೆಗಳನ್ನು ಮುಚ್ಚಿಹಾಕಲಾಯಿತು? ಯಾವ ನಿಖರ ಮಾಹಿತಿಯ ಆಧಾರದ ಮೇಲೆ ಬಡವರ ಕೊಳ್ಳುವ ಶಕ್ತಿ ಹೆಚ್ಚಾಗಿದೆ ಎಂದು ಅಂದಾಜಿಸಿ ಔಷಧಿ ಮಾರುಕಟ್ಟೆಯ ಮೇಲಿದ್ದ ಸರ್ಕಾರಿ ನಿಯಂತ್ರಣವನ್ನು ತೆಗೆದುಹಾಕಲಾಯಿತು? ಯಾವ ನಿಖರ ಮಾಹಿತಿಯ ಮೇರೆಗೆ ಬಡರೈತರ ಕೊಳ್ಳುವ ಶಕ್ತಿ ಹೆಚ್ಚಿದೆ ಎಂದು ಅಂದಾಜಿಸಿ ಬೀಜ,ಗೊಬ್ಬರ,ವಿದ್ಯುತ್,ನೀರಿಗೆ ಕೊಡುತ್ತಿದ್ದ ಸಬ್ಸಿಡಿಯನ್ನು ಹಿಂತೆಗೆದುಕೊಳ್ಳಲಾಯಿತು?

ಸರ್ಕಾರ ಈ ಎಲ್ಲಾ ನೀತಿಗಳಿಗೆ ದೇಶದ ಜನರ ಅಗತ್ಯಗಳ ಬಗ್ಗೆ ಸರ್ಕಾರಕ್ಕೆ ಸರಿಯಾದ ಮಾಹಿತಿ ಇಲ್ಲದಿರುವುದು ಕಾರಣವಲ್ಲ. ಅಥವಾ ಅಂಥ ನಿಖರವಾದ ಮಾಹಿತಿಗಳು ಸಿಕ್ಕ ತಕ್ಷಣ ಸರ್ಕಾರದ ಈ ಜನವಿರೋಧಿ ನೀತಿಗಳೂ ಬದಲಾಗುವುದಿಲ್ಲ. ಸರ್ಕಾರದ ಬದಲಾದ ನೀತಿಗಳಿಗೆ ಕಾರಣ ಈ ಸರ್ಕಾರಗಳು. ಅದು ಎನ್‌ಡಿಎ ಇರಲಿ, ಯುಪಿಎ ಇರಲಿ ಅಥವಾ ಮೂರೂ ಮತ್ತು ನಾಲ್ಕನೇ ರಂಗಗಳ ಸರ್ಕಾರವೇ ಇರಲಿ, ಬಹುರಾಷ್ಟ್ರೀಯ ಕಂಪನಿಗಳ, ಸಾಮ್ರಾಜ್ಯಶಾಹಿಗಳ ಮತ್ತು ವಿಶ್ವಬ್ಯಾಂಕ್ ಮತ್ತು ಐಎಂಎಫ್‌ಗಳ ಏಜೆಂಟರಾಗಿ ಕೆಲಸ ಮಾಡುತ್ತಾ ಜನವಿರೋಧಿಗಳಾಗಿರುವುದು.

ಇದು ಮಾಹಿತಿ ಕೊರತೆಯಿಂದ ಆಗಿರುವುದಲ್ಲ. ಅಥವಾ ನಿಖರ ಮಾಹಿತಿ ಸಿಕ್ಕರೆ ಇವು ಬದಲಾಗುವುದೂ ಇಲ್ಲ. ಏಕೆಂದರೆ ಇವೆಲ್ಲವೂ ಪ್ರಜ್ಞಾಪೂರ್ವಕವಾಗಿ ನಮ್ಮ ಸರ್ಕಾರಗಳು ತೆಗೆದುಕೊಂಡ ಜನವಿರೋಧಿ ನಿರ್ಧಾರಗಳು. ಹೀಗಾಗಿ ಈ ಕಾರ್ಡ್ ಕೊಡುವ ನಿಖರ ಮಾಹಿತಿಗಳು ಈ ನೀತಿ ಧೋರಣೆಗಳನ್ನು ಬದಲಾಯಿಸುವುದೂ ಇಲ್ಲ. ಆದ್ದರಿಂದಲೇ 1,50,000 ಕೋಟಿಯಷ್ಟು ಬೃಹತ್ ಮೊತ್ತ ವೆಚ್ಚ ಮಾಡುತ್ತಿರುವುದು ಜನರ ಸೇವೆಯನ್ನು ಇನ್ನೂ ಪರಿಣಾಮಕಾರಿಯಾಗಿ ಮಾಡಲು ಎಂಬ ಸರ್ಕಾರದ ಘೋಷಣೆ ಜನರನ್ನು ಮೋಸಗೊಳಿಸುವ ಹುನ್ನಾರವೇ ಹೊರತು ಬೇರೇನಲ್ಲ.

ನಾಗರೀಕರಿಗೆ ಶತಾತಗತಾಯ ಕಾರ್ಡು ಕೊಡಲೇಬೇಕೆಂದು ಹಠತೊಟ್ಟಿರುವುದಕ್ಕೆ ಸರ್ಕಾರ ನೀಡುತ್ತಿರುವ ಮತ್ತೊಂದು ಕಾರಣ ಭಯೋತ್ಪಾದನೆಯ ತಡೆ. ಈ ದೇಶದ ನಾಗರೀಕರೆಲ್ಲರಿಗೂ ಕಾರ್ಡು ಕೊಟ್ಟುಬಿಟ್ಟರೆ ಹೊರದೇಶದಿಂದ ನುಸುಳಿಬರುವ ಭಯೋತ್ಪಾದಕರ ಬಳಿ ಈ ಕಾರ್ಡು ಇಲ್ಲದಿರುವುದರಿಂದ ಅವರನ್ನು ಸುಲಭವಾಗಿ ತಡೆಗಟ್ಟಬಹುದು ಎಂಬುದು ಸರ್ಕಾರದ ಎಣಿಕೆ. ಅಂದರೆ ಮುಂಬೈ ದಾಳಿಗೆ ಕಾರಣರಾದ ಭಯೋತ್ಪಾದಕರನ್ನು ಇಂಡಿಯಾಗೇಟ್ ಬಳಿಯೇ ಹಿಡಿದು ಕಾರ್ಡ್ ವಿಚಾರಿಸಿ

ದ್ದರೆ ಅವರು ಸಿಕ್ಕಿಬೀಳುತ್ತಿದ್ದರು ಅಥವಾ ಈ ಕಾರ್ಡ್ ಕಡ್ಡಾಯ ಮಾಡಿದರೆ ಪಾರ್ಲಿಮೆಂಟ್ ದಾಳಿ ಮಾಡಿದವರು ಭಾರತಕ್ಕೆ ಬರಲಾಗುತ್ತಿರಲಿಲ್ಲ ಎಂಬ ಕಾಗಕ್ಕ ಗುಬ್ಬಕ್ಕನ ಕಥೆಯನ್ನು ಸರ್ಕಾರ ಹೇಳುತ್ತಿದೆ. ವಾಸ್ತವವೇನೆಂದರೆ ಭಾರತದಲ್ಲಿ ಈವರೆಗೆ ಭಯೋತ್ಪಾದನಾ ದಾಳಿ ಮಾಡಿದವರು ಎಂದು ಬಂಧಿಸಲಾಗಿರುವ ಬಹುಪಾಲು ಜನರ ಬಳಿ ಯಾವುದೋ ಒಂದು ಬಗೆಯ ಗುರುತಿನ ಚೀಟಿ ಇದ್ದೇ ಇತ್ತು. ಮುಂಬೈ ದಾಳಿಯಲ್ಲಿ ಸಿಕ್ಕಿಬಿದ್ದಿರುವ ಕಸಬ್‌ನ ಬಳಿಯಂತೂ ಬೆಂಗಳೂರು ನಗರದ ವಾಸಿಯೆಂಬ ದಾಖಲೆ ಪತ್ರವಿತ್ತು. ಪ್ರಾಣವನ್ನೇ ಬಲಿಕೊಟ್ಟು ದಾಳಿ ಮಾಡಲು ಸಿದ್ಧವಿರುವವರು ಒಂದು ಕಾರ್ಡು ಸಂಪಾದಿಸುವುದು ಕಷ್ಟವೇ ಆಗಿರಲಿಲ್ಲ. ಈ ಬಯೋಮೆಟ್ರಿಕ್ ಪದ್ಧತಿ ಅದನ್ನು ಮೊದಲಿನಷ್ಟು ಸುಲಭವಾಗದಂತೆ ಮಾಡುತ್ತದೆಯೇ ವಿನಃ ಅಸಾಧ್ಯವಾಗಿಸುವುದಿಲ್ಲ.

ಏಕೆಂದರೆ ಈ ಬಗೆಯ ಮಯೋಮೆಟ್ರಿಕ್ ಗುರುತಿನ ಚೀಟಿ ಈಗಾಗಲೇ ಅಮೇರಿಕ ಮತ್ತು ಯುರೋಪಿನ ಹಲವು ದೇಶಗಳಲ್ಲಿ ಚಾಲ್ತಿಯಲ್ಲಿದೆ. ಇಷ್ಟಾದರೂ ಓಕ್ಲಾಹಾಮಾದಲ್ಲಿ ಭಯೋತ್ಪಾದನಾ ದಾಳಿಯನ್ನು ಅಮೆರಿಕ ದಂತ ಅಮೆರಿಕ ತಡೆಯಲಾಗಲಿಲ್ಲ. ಅದನ್ನು ಮಾಡಿದ ಭಯೋತ್ಪಾದಕ ತಿಮೋತಿಯ ಬಳಿ ಈ ಬಗೆಯ ಹಲವು ಬಯೋಮೆಟ್ರಿಕ್ ಕಾರ್ಡುಗಳು ಇದ್ದವಂತೆ. ಈಬಗೆಯ ನಕಲಿ ಬಯೋಮೆಟ್ರಿಕ್ ಕಾರ್ಡು ತಯಾರಿಸುವ ದಂಧೆಯಲ್ಲಿ ತೊಡಗಿದ್ದ ಒಂದು ದೊಡ್ಡ ರಾಕೆಟ್ಟನ್ನು ಥೈಲಾಂಡಿನಲ್ಲಿ 2006ರಲ್ಲಿ ಸರ್ಕಾರ ಬಯಲುಗೊಳಿಸಿತ್ತು. ಅಮೆರಿಕದಲ್ಲಿ 2001 ಸೆಪ್ಟೆಂಬರ್ 11 ರ ದಾಳಿ ಮಾಡಿದವರು ಎಲ್ಲಾ ಗುರುತು ಪತ್ರಗಳನ್ನು ಆರಾಮಾಗಿ ನಿಭಾಯಿಸಿ ವಿಮಾನಗಳನ್ನೇ ಅಪಹರಿಸಿ WTC ಯನ್ನು ಉರುಳಿಸಿದರು! ಹೀಗಾಗಿಯೇ ಯೂರೋಪಿನ ಹಲವು ದೇಶಗಳು ಈ ಗುರುತು ಕಾರ್ಡು ಯೋಜನೆಯನ್ನೇ ಕೈಬಿಟ್ಟಿವೆ. ಇಂಥಾ ಕಾರ್ಡ್ ಪದ್ಧತಿ ಮತ್ತು ಅದನ್ನು ಆಧರಿಸಿ ಜನರ ಖಾಸಗಿ ಬದುಕಿನ ಎಲ್ಲಾ ಮಾಹಿತಿಯನ್ನು ಒಂದು ನ್ಯಾಷನಲ್ ರಿಜಿಸ್ಟ್ರಿಯಲ್ಲಿ ದಾಖಲಿಸುವ ಇಂಗ್ಲೆಂಡ್ ಸರ್ಕಾರದ ಯೋಜನೆಯ ವಿರುದ್ಧ ಇಂಗ್ಲೆಂಡಿನ ಜನತೆ ಬೃಹತ್ ಹೋರಾಟವನ್ನು ನಡೆಸುತ್ತಿದ್ದಾರೆ. ಆದ್ದರಿಂದಲೇ ಅಲ್ಲಿ ಇನ್ನೂ ಈ ಕಾರ್ಡ್ ಯೋಜನೆ ಜಾರಿಗೆ ಬಂದಿಲ್ಲ. ಪ್ರಪಂಚದ 56 ದೇಶಗಳಲ್ಲಿ ಈ ಬಗೆಯ ಬಯೋಮೆಟ್ರಿಕ್ ಗುರುತು ಕಾರ್ಡ್ ಯೋಜನೆ ಚಾಲ್ತಿಯಲ್ಲಿದ್ದರೂ ಅದರಿಂದ ಭಯೋತ್ಪಾದನೆ ತಡೆಯಬಹುದೆಂಬ ನಿರೀಕ್ಷೆಯನ್ನು ಅವು ಕೈಬಿಟ್ಟಿವೆ.

ಇವೆಲ್ಲದರ ಸಾರಾಂಶವಿಷ್ಟೆ. ಮನುಷ್ಯ ಮಾಡಿದ್ದನ್ನು ಮನುಷ್ಯನೇ ನಕಲು ಮಾಡುವುದು ಕಷ್ಟವೇನಲ್ಲ! ಭಯೋತ್ಪಾದನೆಯನ್ನು ತಡೆಯಬೇಕೆಂದರೆ ಮನುಷ್ಯನೊಬ್ಬನನ್ನು ಭಯೋತ್ಪಾದಕನನ್ನಾಗಿ ಮಾಡುವ ಶಕ್ತಿಗಳನ್ನು ನಿಗ್ರಹಿಸಬೇಕು. ಸರ್ಕಾರದ ಪ್ರಕಾರ ಇಂದು ಭಾರತ ಎದುರಿಸುತ್ತಿರುವ ಅತಿದೊಡ್ಡ ಅಂತರಿಕ ಭದ್ರತಾ ಸವಾಲು ಈ ದೇಶದ ಬಡವರ ಮಿಲಿಟೆಂಟ್ ಚಳವಳಿಯಾದ ನಕ್ಸಲ್ ಚಳವಳಿ. ಇದಕ್ಕೆ ಕಾರಣ 60 ವರ್ಷಗಳಾದರೂ ಬದಲಾಗದ ಈ ದೇಶದ ದಲಿತರ, ಆದಿವಾಸಿಗಳ, ಕಾರ್ಮಿಕರ, ರೈತಾಪಿ ಜನರ ಪರಿಸ್ಥಿತಿ. ಬಯೋಮೆಟ್ರಿಕ್ ಕಾರ್ಡ್ ಕೊಟ್ಟ ಮಾತ್ರಕ್ಕೆ ಈ ಪರಿಸ್ಥಿತಿ ಬದಲಾಗುವುದೇ? ಬಡವರ ಹೋರಾಟ ನಿಲ್ಲುವುದೇ? ಹೆಚ್ಚೆಂದರೆ ಅವರ ಮೇಲೆ ನಡೆಯುವ ದಮನ ತೀವ್ರವಾಗಬಹುದಷ್ಟೇ!

ಭಾರತದಲ್ಲಿ ಇನ್ನೂ ಈ ಬಯೋಮೆಟ್ರಿಕ್ ಗುರುತು ಕಾರ್ಡಿನಲ್ಲಿ ಏನೇನು ವಿವರಗಳನ್ನು ಸಂಗ್ರಹಿಡಲಾಗುವುದೆಂದು ಘೋಷಿಸಿಲ್ಲವಾದರೂ ಈಗಾಗಲೇ ನಂದನ್ ನೀಲೆಕಣಿ ಕೊಟ್ಟಿರುವ ಸೂಚನೆಗಳನ್ನು ನೋಡುವುದಾದರೆ ಇಲ್ಲೂ 60ಕ್ಕೂ ಹೆಚ್ಚು ಬಗೆಯ ಮಾಹಿತಿಗಳನ್ನು ಜನರ ಖರ್ಚಿನಲ್ಲಿ ಮಾರುಕಟ್ಟೆಗೆ ಒದಗಿಸುವ ಎಲ್ಲಾ ಸಾಧ್ಯತೆಗಳು ಇವೆ. ಇದೇ ಈ 150000 ಕೋಟಿ ಯೋಜನೆಯ ಅಸಲಿ ಉದ್ದೇಶ. ಈ ಯುನಿಕ್ ಐಡೆಂಟಿಟಿಯ ಮೂಲಕ ಸರ್ಕಾರ ಇನ್ನಷ್ಟು ನಿರಂಕುಶವಾಗಿ ಜನರ ಮೇಲೆ ನಿಯಂತ್ರಣ ಸಾಧಿಸುತ್ತದೆ. ಗುರುತು ಕಾರ್ಡಿನ ಹೆಸರಲ್ಲಿ ಅಮಾಯಕರನ್ನು ಮತ್ತಷ್ಟು ಬೇಟೆಯಾಡುತ್ತದೆ. ಆದರೆ ಉದ್ಯಮಿಗಳು ಮಾತ್ರ ಜನರ ಖರ್ಚಿನಲ್ಲಿ ತಮ್ಮ ಲಾಭಕ್ಕೆ ಮತ್ತೊಂದು ರಹದಾರಿಯನ್ನು ಪಡೆದ ಖುಷಿಯಲ್ಲಿವೆ. ಇವೇ ಈ ಯೋಜನೆಯ ಪ್ರಧಾನ ಉದ್ದೇಶ ಮತ್ತು ಪರಿಣಾಮ. ಮಿಕ್ಕಂತೆ ಸಾಮಾನ್ಯರಿಗೆ ಸಿಗಬಹುದಾದ ಅಲ್ಪಸ್ವಲ್ಪ ಅನುಕೂಲತೆಗಳೇನಾದರೂ ಇದ್ದರೆ ಅವು ಈ ಉದ್ದೇಶದ ಹೊರತಾಗಿಯೂ ಸಿಗುವ ಅನುಕೂಲತೆಗಳೇ ವಿನಃ ಈ ಯೋಜನೆಯಿಂದಾಗಿ ಸಿಗುವ ಲಾಭಗಳಲ್ಲ!

ಹಾಗಿದ್ದಮೇಲೆ ಈ ಯುನೀಕ್ ಐಡೆಂಟಿಟಿ ಕಾರ್ಡಿನ ಅಗತ್ಯವೇನು? ಈ ಯೋಜನೆಗೆ 1,50.000 ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಗುತ್ತಿದೆ. ಜಗತ್ತಿನ ಎಲ್ಲೆಡೆ ಆರ್ಥಿಕ ಹಿಂಜರಿತ ಇರುವುದರಿಂದ ಈ ಪ್ರಮಾಣದ ಸರ್ಕಾರಿ ಯೋಜನೆ ಹಲವಾರು ಕೈಗಾರಿಕೋದ್ಯಮಿಗಳನ್ನು ನಷ್ಟದಿಂದ ಬಚಾವು ಮಾಡುತ್ತದೆ. ಆದರೆ ಸರ್ಕಾರ ಎಂಥ ಕುತಂತ್ರಿ ಎಂದರೆ ಇದರಿಂದ ಸಾವಿರಾರು ಉದ್ಯೋಗಗಳು ಸೃಷ್ಟಿಯಾಗುತ್ತದೆ ಎಂದು ಹೇಳುತ್ತಿದೆಯೇ ವಿನಃ ನಷ್ಟದಲ್ಲಿರುವ ಎಷ್ಟು ಕಂಪನಿಗಳಿಗೆ ಎಷ್ಟು ಸಾವಿರ ಕೋಟಿ ರೂಪಾಯಿ ಆದಾಯ ತರಲಿದೆ ಎಂದು ಹೇಳುತ್ತಿಲ್ಲ.



ಉನ್ನತ ಶಿಕ್ಷಣಕ್ಕೆ ವಿಶ್ವಬ್ಯಾಂಕ್ ಕಡಿವಾಣ ಜನರಾಗಬೇಕೆ ಕಾದುಕೋಣ!

○ ಅಲ್ಲಮಪ್ರಭು ಬೆಟ್ಟದೂರು

ಒಂದು ಅಂದಾಜಿನ ಪ್ರಕಾರ ಈ ಬಯೋಮೆಟ್ರಿಕ್ ಕಾರ್ಡ್ ತಯಾರಿಕೆಗೇ 50,000 ಕೋಟಿ ರೂಪಾಯಿ ಬೇಕಾಗುತ್ತದೆ. ಇದರ ಕಾಂಟ್ರಾಕ್ಟನ್ನು ಇನ್‌ಪೋಸಿಸ್‌ನಂಥ ಐಟಿ ಕಂಪನಿಗಳಿಗೇ ಕೊಡಲಾಗುತ್ತದೆ. ಇದಲದೆ ಇನ್ನುಳಿದ ಒಂದು ಲಕ್ಷ ಕೋಟಿ ರೂಪಾಯಿಯಷ್ಟು ಸೇವೆಯನ್ನೂ ಸಹ ವಿವಿಧಕ್ಷೇತ್ರಗಳಲ್ಲಿರುವ ಕಂಪನಿಗಳಿಂದಲೇ ಪಡೆದುಕೊಳ್ಳಲಾಗುತ್ತದೆ. ಅಂದರೆ ಬಡಪಾಯಿ ಜನರ ತೆರಿಗೆ ಹಣ ಈ ಕಂಪನಿಗಳ ತಿಜೋರಿ ಸೇರುತ್ತದೆ.

ಇದು ತತ್‌ಕ್ಷಣದ ಪ್ರಯೋಜನವಾದರೆ ದೇಶದ ಮತ್ತು ಪ್ರಪಂಚದ ಬಂಡವಾಳಶಾಹಿಗಳು ತಮ್ಮ ಇನ್ನೊಂದು ಅಗತ್ಯವನ್ನು ಸರ್ಕಾರದ ಖರ್ಚಿನಲ್ಲಿ ಈ ಕಾರ್ಡಿನ ಮೂಲಕ ತೀರಿಸಿಕೊಳ್ಳುತ್ತಿವೆ. ಅದನ್ನು ಮಾರುಕಟ್ಟೆ ಭಾಷೆಯಲ್ಲಿ "ಮಾರುಕಟ್ಟೆ ಇಂಟೆಲಿಜೆನ್ಸ್" ಎಂದು ಕರೆಯುತ್ತಾರೆ. ಪ್ರತಿಯೊಂದು ಉದ್ಯಮವೂ ತನ್ನ ಗ್ರಾಹಕರ ಅಗತ್ಯಗಳೇನು ಎಂದು ಅರಿತುಕೊಳ್ಳುವುದೇ "ಮಾರುಕಟ್ಟೆ ಇಂಟೆಲಿಜೆನ್ಸ್". ಇಂದು ಪಾಶ್ಚಾತ್ಯ ದೇಶಗಳಲ್ಲಿ ಇಂಥ ಬಯೋಮೆಟ್ರಿಕ್ ಕಾರ್ಡುಗಳಲ್ಲಿ ನಾಗರೀಕರ ರಕ್ತದ ಗುಂಪು, ಆರೋಗ್ಯ ಸಾಮರ್ಥ್ಯ, ಸರಕುಗಳ ಬಳಕೆ ರೀತಿ-ಪದ್ಧತಿ, ವಿಮೆ, ಬ್ಯಾಂಕು ಸೌಲಭ್ಯ ಇನ್ನಿತ್ಯಾದಿ 60 ವಿವರಗಳನ್ನು ದಾಖಲಿಸಲಾಗುತ್ತದೆ. ಮತ್ತು ಇದರಲ್ಲಿ ಏನು ಬದಲಾದರೂ ಆ ಬದಲಾವಣೆಯನ್ನು ನೊಂದಾಯಿಸುವುದನ್ನು ಹಲವು ಕಡೆ ಕಡ್ಡಾಯ ಮಾಡಲಾಗಿದೆ. ಇದು ವಿವಿಧ ಬಗೆಯ ಸೇವೆ ಮತ್ತು ಸರಕುಗಳನ್ನು ಪೂರೈಸುವ ಉದ್ಯಮಗಳಿಗೆ ತನ್ನ ಗ್ರಾಹಕರ ಬದಲಾಗುತ್ತಿರುವ ಅಗತ್ಯಗಳ ಬಗ್ಗೆ ಪುಕ್ಕಟೆ ಮಾಹಿತಿ ಒದಗಿಸಿ ಇದಕ್ಕಾಗಿ ಅವು ವೆಚ್ಚ ಮಾಡಬೇಕಾದ ಹಣವನ್ನು ಉಳಿತಾಯ ಮಾಡುತ್ತದೆ. ಅಂದರೆ ಅದರ ಖರ್ಚನ್ನು ಜನರ ಮೇಲೆ ವರ್ಗಾಯಿಸಿ ಉದ್ಯಮಿಗಳ ಲಾಭದ ದರವನ್ನು ಕಾಯ್ದುಕೊಳ್ಳುತ್ತದೆ.

ಭಾರತದಲ್ಲಿ ಇನ್ನೂ ಈ ಬಯೋಮೆಟ್ರಿಕ್ ಗುರುತು ಕಾರ್ಡಿನಲ್ಲಿ ಏನೇನು ವಿವರಗಳನ್ನು ಸಂಗ್ರಹಿಡಲಾಗುವುದೆಂದು ಘೋಷಿಸಿಲ್ಲವಾದರೂ ಈಗಾಗಲೇ ನಂದನ್ ನಿಲೇಕಣಿ ಕೊಟ್ಟಿರುವ ಸೂಚನೆಗಳನ್ನು ನೋಡುವುದಾದರೆ ಇಲ್ಲೂ 60ಕ್ಕೂ ಹೆಚ್ಚು ಬಗೆಯ ಮಾಹಿತಿಗಳನ್ನು ಜನರ ಖರ್ಚಿನಲ್ಲಿ ಮಾರುಕಟ್ಟೆಗೆ ಒದಗಿಸುವ ಎಲ್ಲಾ ಸಾಧ್ಯತೆಗಳು ಇವೆ. ಇದೇ ಈ 150000 ಕೋಟಿ ಯೋಜನೆಯ ಅಸಲಿ ಉದ್ದೇಶ.

ಈ ಯುನಿಕ್ ಐಡೆಂಟಿಟಿಯ ಮೂಲಕ ಸರ್ಕಾರ ಇನ್ನಷ್ಟು ನಿರಂಕುಶವಾಗಿ ಜನರ ಮೇಲೆ ನಿಯಂತ್ರಣ ಸಾಧಿಸುತ್ತದೆ. ಗುರುತು ಕಾರ್ಡಿನ ಹೆಸರಲ್ಲಿ ಅಮಾಯಕರನ್ನು ಮತ್ತಷ್ಟು ಬೇಟೆಯಾಡುತ್ತದೆ. ಆದರೆ ಉದ್ಯಮಿಗಳು ಮಾತ್ರ ಜನರ ಖರ್ಚಿನಲ್ಲಿ ತಮ್ಮ ಲಾಭಕ್ಕೆ ಮತ್ತೊಂದು ರಹದಾರಿಯನ್ನು ಪಡೆದ ಖುಷಿಯಲ್ಲಿವೆ. ಇವೇ ಈ ಯೋಜನೆಯ ಪ್ರಧಾನ ಉದ್ದೇಶ ಮತ್ತು ಪರಿಣಾಮ. ಮಿಕ್ಕಂತೆ ಸಾಮಾನ್ಯರಿಗೆ ಸಿಗಬಹುದಾದ ಅಲ್ಪಸ್ವಲ್ಪ ಅನುಕೂಲತೆಗಳೇನಾದರೂ ಇದ್ದರೆ ಅವು ಈ ಉದ್ದೇಶದ ಹೊರತಾಗಿಯೂ ಸಿಗುವ ಅನುಕೂಲತೆಗಳೇ ವಿನಃ ಈ ಯೋಜನೆಯಿಂದಾಗಿ ಸಿಗುವ ಲಾಭಗಳಲ್ಲ! □

ಮಹಾಮನೆಯ ಬಿಕ್ಕು

ಇದ್ದ ದಿನಗಳಲ್ಲಿ ಹಂಚಿ ಹರಿದ ಬದುಕು
ಸೂರು ಗಟ್ಟಿ ಮಾಡಲೆಂದು ಹೆಕ್ಕಿ ತಂದ ಗರಿಕೆ ಹುಲ್ಲು
ಇಟ್ಟ ಹೆಜ್ಜೆಗಳಲ್ಲಿ ಗಟ್ಟಿ ಮಾತುಗಳು ಹುಟ್ಟಿ
ಊರು ಕೇರಿ ಒಡಲೊಳಗೆ ಕುದ್ದುಕಾರಿ ಕೆಂಡವಾಗಿ
ಹದ್ದಿನೊಳಗೆ ಮುದ್ದುಕಾಗೆ ಪಾರಿವಾಳಗಳು ಹಾರಿ
ಹೊಸಿಲು ದಾಟುವ ಮಗುವಿನಲ್ಲಿ ಪ್ರಶ್ನೆಗಳು ಮೂಡಿ!
ಬಿದ್ದ ಮಳೆಯ ರಭಸಕೆ ಗೊದ್ದು ಒದ್ದು ಎದ್ದ ಇರಿವೆ ಸಾಲು
ಗರಿಕೆ ಹುಲ್ಲು ಹಿಡಿದು ಹೊರಳಿತು.

ಕೊರಳ ಹಾಡ ಬತ್ತದಂತೆ ಮುದ್ದುಕಂದನ ಕಂಗಳಲಿ
ಊರ ಜನರ ಒಡಲ ಉಸಿರು ಕಣ್ಣ ಪಾಸೆಯೊಳಗೂ ಚಾಚಿ
ಮಣ್ಣಿನೊಡಲು ಬಗೆದು ಬಗೆದು ಇತಿಹಾಸ ಚಾಣಿಸಿತು
ಹರಿವ ನೀರ ತೆರೆಯದಂಡೆ ಎಲೆ ಹೊತ್ತ ಹಸಿರ ಗಿಡವು
ಹಿಗ್ಗಿನಿಂದ ಮೈಯ ಚಾಚಿ ಹೂವು-ಕಾಯಿ ಹಾಡಿತು!
ನಮ್ಮ ಕೇರಿ ಕಲ್ಲ-ಮಾದ, ಭೀಮ-ಕರಿಯ ಅಗೆದು ತೆಗೆದ
ಜಲ್ಲಿಕಲ್ಲು-ಮಣ್ಣು ಹೊತ್ತು ದಣಿದ ಪಾರಿ-ಸೀತೆ-ಸಾವಂತ್ರಿ
-ಯರ ಹರಿದ ಬೆವರು ಕೆರೆ-ಬಾವಿ ತುಂಬಿ ಹರಿದಾಡಿತು.

ಊರಗುಡ್ಡದೇವರ ಉತ್ಸವಕೆ ಮೀಸಲಿಟ್ಟ
ಜನರು ಕೆಕೆ ಹಾಕಿ ನಗುವಾಗ.........
ಕೊಳ್ಳಿದೆವ್ವವಾಗಿ ಕುಣಿದ ಹಸಿವು ಮರೆತ
ಮಂದಿ ಎದ್ದು, ಪಂಜು ಹಿಡಿದು ಮೆರವಣಿಗೆ
ಸಾಲುಸಾಲು ಬರುವಾಗ; ಹಡೆದವ್ವ ಎದ್ದು
ಕಸಬರಿಗೆ ಎತ್ತಿದಾಗ; ಮುದುಪು ಇಟ್ಟ ಮುಗ್ದ ಜನರ
ಕಣ್ಣಬೊಟ್ಟುಗಳೆಲ್ಲ ಕವಡೆಕಿತ್ತು ನಕ್ಷತ್ರ ದಾರಿಗಳಾಗಿ
ತೇರ ತಡೆದು ನಿಂತವು ಊರು-ನೀರು ಪಾಲು ಕೇಳಿ.

ನೆರಳು ಕಂಡು ನಿದ್ದೆ ಓಡಿ ಬಣ್ಣಗೆಟ್ಟ ಜನರು ಬೊಚ್ಚೆ ಇಟ್ಟು
ಮಾನವಂತರ ದಣಿದ ಪಾದಗಳಿಗೆ ಮುಳ್ಳಾದವರು
ತೆರೆದ ದಾರಿ ಹುಡುಕಿ ಹೊರಟ ಹರಿವ ಇರಿವೆ ಸಾಲು ಕಂಡು
ಧ್ವನಿ ಉಡುಗಿ-ಪಸೆಯಾರಿ ನೀರು ನೆಲಕು ಮುಟ್ಟು ಭರಿಸಿ
"ಮರಳಿ ಮನೆಗೆ" ಕರೆಕೊಟ್ಟು ನೆರಳಿಲ್ಲದ ಸೂರೊಳಗೆ ಸುಟ್ಟವರೇ
ಹೇಗೆ ಬಂದೇವು ನಾವು ಮತ್ತದೇ ಹಳೆಯ ನಿಮ್ಮ "ಮರಳಿಮನೆಗೆ"
ನಿಮ್ಮನ್ನು ನೀವೇ ಮುಟ್ಟಿನೋಡಿಕೊಳ್ಳುವ ಕಾಲ ಸಂಧಿತವಾಗಿರವಾಗ
ಹೇಗೆ ಬಂದೇವು ನಾವು? ಮಹಾಮನೆಯ ಹೊಕ್ಕವರು.



○ ಅನಸೂಯ ಕಾಂಬಳೆ

ಸುಮರು ಕ್ರಿ.ಶ. ಹತ್ತನೆಯ ಶತಮಾನದ ಹೊತ್ತಿಗೆ ಸಂಸ್ಕೃತದ ಬೆಳವಣಿಗೆ ನಿಂತು ಹೋಯಿತು. ಆದಾದಮೇಲೆ ಅಲ್ಲೊಂದು ಇಲ್ಲೊಂದು ಸಂಸ್ಕೃತದ ಕೃತಿ ರಚನೆಯಾದರೂ ಅದರ ಭಷೆ ಮತ್ತು ಬರವಣಿಗೆ ಹೊಳೆಯಾಗಿ ಹರಿದಿಲ್ಲ. ಅಂಥ ಒಂದು ಸ್ಥಗಿತ ಭಾಷೆಗಾಗಿ ಒಂದು ಇಡೀ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರೆ ಏನಾಗುತ್ತದೆ? ಹಲವು ಶತಮಾನಗಳಷ್ಟು ಹಿಂದೆಯೆ ಚಲನೆ ಕಳೆದುಕೊಂಡ ಈ ಭಾಷೆಯನ್ನು ಅಧ್ಯಯನ ಮಾಡಿದರೆ ಅಲ್ಲಿ ಏನಿದೆ? ಎಂದು ಗೊತಾಗುತ್ತದೆ, ನಿಜ, ಇದನ್ನು ಈಗಾಗಲೇ ಅನೇಕ ವಿದ್ವಾಂಸರು, ಇಂಗ್ಲೀಷ್‌ನಲ್ಲಿ ಕನ್ನಡದಲ್ಲಿ ಅನುವಾದಗಳೇ ಅಲ್ಲದೆ, ನಾನಾ ಬರಹಗಳ ಮೂಲಕ ಪ್ರಚುರಪಡಿಸಿದ್ದಾರೆ. ಅದನ್ನು ಮತ್ತೆ ಪರಿಚಯ ಮಾಡಿಕೊಳ್ಳುವ ಪ್ರಮೇಯವೇ ಬರುವುದಿಲ್ಲ. ಆದರೆ ಅದು ಎಂಥ ಘೋರ ವೆಚ್ಚದಲ್ಲ ನಡೆಯಲಿದೆ? ಎಂದು ಅರಿತುಕೊಳ್ಳಬೇಕಾಗಿದೆ.

ಡಾ. ಕೆ. ಎಸ್. ಭಗವಾನ್

ಸಂಸ್ಕೃತ ವಿ.ವಿ ಏಕೆ ಬೇಡ?

ಕರ್ನಾಟಕ ಸರ್ಕಾರ ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಸಲುವಾಗಿ ಎಲ್ಲಾ ವ್ಯವಸ್ಥೆ ಮಾಡುತ್ತಿದೆ. ದೇಶ ಭಾಷೆಗಳು ಬೆಳೆಯಬೇಕಾದ ಮತ್ತು ಬೆಳೆಯುತ್ತಿರುವ ಕಾಲದಲ್ಲಿ 'ಮೃತ' ಎನ್ನಬಹುದಾದ ಸಂಸ್ಕೃತ ಭಾಷೆಗಾಗಿಯೇ ಒಂದು ಪ್ರತ್ಯೇಕ ವಿಶ್ವವಿದ್ಯಾನಿಲಯ ಅಗತ್ಯ ಇದೆಯೇ? ಎಂಬುದು ಈಗಿನ ಪ್ರಶ್ನೆ.

ಸಂಸ್ಕೃತ ಭಾಷೆ ಮತ್ತು ಸಾಹಿತ್ಯಗಳ ಸೌಂದರ್ಯ ಹಾಗೂ ಮಹತ್ವ ಸ್ವಲ್ಪಮಟ್ಟಿಗಾದರೂ ತಿಳಿದವರು ಜನದೂರವಾದ ಸಂಸ್ಕೃತದ ಪರವಾಗಿ ಆಗಲಿ ಅಥವಾ ವಿರೋದವಾಗಿ ಆಗಲಿ, ನಿಲುವು ತೆಗೆದುಕೊಳ್ಳುವ ಅವಶ್ಯಕತೆ ಕಾಣುವುದಿಲ್ಲ. ಆದರೆ ಸಂಸ್ಕೃತ ವಿಶ್ವ ವಿದ್ಯಾನಿಲಯದ ರಚನೆಯನ್ನು ಅತ್ಯಂತ ನಿರ್ವಿಕಾರವಾಗಿ ಸಮೀಕ್ಷಿಸುವ ಜರೂರು ಇದೆ.

ಸುಮರು ಕ್ರಿ.ಶ.ಹತ್ತನೆಯ ಶತಮಾನದ ಹೊತ್ತಿಗೆ ಸಂಸ್ಕೃತದ ಬೆಳವಣಿಗೆ ನಿಂತು ಹೋಯಿತು. ಆದಾದಮೇಲೆ ಅಲ್ಲೊಂದು ಇಲ್ಲೊಂದು ಸಂಸ್ಕೃತದ ಕೃತಿ ರಚನೆಯಾದರೂ ಅದರ ಭಾಷೆ ಮತ್ತು ಬರವಣಿಗೆ ಹೊಳೆಯಾಗಿ ಹರಿದಿಲ್ಲ. ಅಂಥ ಒಂದು ಸ್ಥಗಿತ ಭಾಷೆಗಾಗಿ ಒಂದು ಇಡೀ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರೆ ಏನಾಗುತ್ತದೆ? ಹಲವು ಶತಮಾನಗಳಷ್ಟು ಹಿಂದೆಯ ಚಲನೆ ಕಳೆದು ಕೊಂಡ ಈ ಭಾಷೆಯನ್ನು ಅಧ್ಯಯನ ಮಾಡಿದರೆ ಅಲ್ಲಿ ಏನಿದೆ? ಎಂದು ಗೊತ್ತಾಗುತ್ತದೆ, ನಿಜ, ಇದನ್ನು ಈಗಾಗಲೇ ಅನೇಕ ವಿದ್ವಾಂಸರು, ಇಂಗ್ಲೀಷ್‌ನಲ್ಲಿ ಕನ್ನಡದಲ್ಲಿ ಅನುವಾದಗಳೇ ಅಲ್ಲದೆ, ನಾನಾ ಬರಹಗಳ ಮೂಲಕ ಪ್ರಚುರಪಡಿಸಿದ್ದಾರೆ. ಅದನ್ನು ಮತ್ತೆ ಪರಿಚಯ ಮಾಡಿಕೊಳ್ಳುವ ಪ್ರಮೇಯವೇ ಬರುವುದಿಲ್ಲ. ಆದರೆ ಅದು ಎಂಥ ಘೋರ ವೆಚ್ಚದಲ್ಲಿ ನಡೆಯಲಿದೆ? ಎಂದು ಅರಿತುಕೊಳ್ಳಬೇಕಾಗಿದೆ.

ವಿದ್ಯಾರ್ಥಿ ಸಮೂಹದ ಅಮೂಲ್ಯ ವರ್ಷಗಳ ಅಪವ್ಯಯ್ಯ, ಸಾರ್ವಜನಿಕ ಹಣದ ದುರಂತಕಾರಿ ಪೋಲು–ಇದೆಲ್ಲ ಏತಕ್ಕೆ? ಆಧುನಿಕ ಜಗತ್ತಿನ ಸಮಸ್ಯೆಗಳನ್ನು ಎದುರಿಸಲು ಯಾವ ರೀತಿಯಲ್ಲೂ ನೆರವಾಗದ ಹಳಸಲು ತಿಳಿವನ್ನು ಪಡೆಯುವುದಕ್ಕೋಸ್ಕರ! ಈಗ ಬೇಕಾಗಿರುವುದು ಹೊಸ ಹೊಸ ವಿಜ್ಞಾನ ತಂತ್ರಜ್ಞಾನಗಳ ಅರಿವು. ಯಾವ ಆಧುನಿಕ ಜ್ಞಾನವೂ ಸಿಗದ ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸುವುದರಿಂದ ಅಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿನಿಯರು ಒಂದು ಸಾವಿರ ವರ್ಷಗಳ ಹೆಚ್ಚು ಹಿಂದಕ್ಕೆ ಹೋಗುವ ಅಪಾಯವಿದೆ. ಆಗ ಅವರು ಅಕ್ಷರಶಃ 'ಹಿಂದೂ'ಗಳಾಗಿ ಬಿಡುತ್ತಾರೆ, ಮುಂದೂಗಳಾಗುವುದಿಲ್ಲ.

ಸಂಸ್ಕೃತ ಸಹಿತ್ಯವನ್ನು ಏಳು ವಿಭಾಗ ಮಾಡಬಹುದು:

1. ವೈದಿಕ ಸಾಹಿತ್ಯ 2. ಸ್ಮೃತಿ ಸಾಹಿತ್ಯ 3. ವೈದ್ಯ ಸಾಹಿತ್ಯ 4. ಸ್ತೋತ್ರ ಸಾಹಿತ್ಯ 5. ಲೌಕಿಕ ಶಾಹಿತ್ಯ 6. ಪುರಾಣ ಸಾಹಿತ್ಯ 7. ತ್ರಿಮತಸ್ಥ ಸಾಹಿತ್ಯ

ಸಂಸ್ಕೃತದ ಬಹುಪಾಲು ವಾಙ್ಮಯ ಮೇಲು ಕೀಳುಗಳ ಜಾತಿಯ ದುರ್ಗಂಧದಿಂದ ತುಂಬಿ ಹೋಗಿದೆ. ಸಂಸ್ಕೃತದಲ್ಲಿರುವ ಸುಮಾರು 131 ಸ್ಮೃತಿಗ್ರಂಥಗಳೆಲ್ಲ ಶೂದ್ರರನ್ನು ಗುಲಾಮರನ್ನಾಗಿ ಇಡುವ, ಅವರನ್ನು ಕೊಲ್ಲುವ ತತ್ವಗಳನ್ನು ಹೊಂದಿವೆ. ವೇದಗಳಲ್ಲಿ ಅನೈತಿಕ ಸಂಬಂಧಗಳು, ಮೌಢ್ಯಗಳು, ಕಂದಾಚಾರಗಳು, ತಾಂಡವವಾಡುತ್ತಿವೆ. ಭೇದ ಬಗೆಯುವ ವೇದಗಳಲ್ಲಿ ಅಲ್ಲಿ ಇಲ್ಲಿ ಸಾರ್ವತ್ರಿಕ ತತ್ವಗಳು ಪ್ರಕಟಗೊಂಡಿವೆ, ಹೌದು. ಆದರೆ ಅವುಗಳು ಜಳ್ಳಿನ ರಾಶಿಯಲ್ಲಿ ಸೇರಿರುವ ಗಟ್ಟಿ ಕಾಳಿನಂತೆ ಕಾಣುವುವು. ಅದರ ಭೌತಿಕ ಸಾಹಿತ್ಯದಲ್ಲಿ ರಾಮಾಯಣ, ಮಹಾಭಾರತ, ಶಾಕುಂತಲ ನಾಟಕ ಬಿಟ್ಟರೆ ಜಾಗತಿಕ ಮಟ್ಟದಲ್ಲಿ ನಿಲ್ಲುವ ಕಲಾಕೃತಿಗಳು ಅಷ್ಟಾಗಿ ಇಲ್ಲ. ಮಣ್ಣಿಗೆ ಹತ್ತಿರವಾಗಿ ಇದ್ದು, ಪ್ರಜೆಗಳನ್ನು ತಮ್ಮ ಮಕ್ಕಳಂತೆ



ಪಾಲಿಸಿದ ಕ್ಷತ್ರಿಯ ರಾಜರ್ಷಿಗಳು ರಚಿಸಿದ ಉಪನಿಷತ್ತುಗಳು ಮಾತ್ರ ವಿಶ್ವಚಿಂತನೆಯ ಅಮರ ಕೃತಿಗಳಾಗಿ ಕಂಗೊಳಿಸುತ್ತಿವೆ. ಬ್ರಾಹ್ಮಣ ತತ್ವಶಾಸ್ತ್ರ ಪರಂಪರೆಯೆಲ್ಲ ಚಾತುರ್ವರ್ಣದಿಂದ ಹೊಲಸಾಗಿದೆ. ಮನುಷ್ಯರು ಸಹ ಮಾನವರೊಂದಿಗೆ ಪ್ರೀತಿ ವಿಶ್ವಾಸ ಸ್ನೇಹ ಸೌಹಾರ್ದ ಸಮಾನತೆಗಳಿಂದ ಬದುಕಬೇಕೆಂಬ ವಿಚಾರವಂತಿಕೆ ಅಲ್ಲಿ ಸಿಗುವುದಿಲ್ಲ. ಇಂಥ ಕೊಳಕು ವಿಚಾರಗಳು ಕಲಿಯಲು ಒಂದು ವಿಶ್ವಿದ್ಯಾನಿಲಯವನ್ನು ಕಟ್ಟಬೇಕೆ? ಋಗ್ವೇದದ ಮಂಡೂಕ ಸೂಕ್ತದಲ್ಲಿ ವೈದಿಕರು ವಟಗುಡುವ ಕಪ್ಪೆಗಳು ಎಂದು ಹೀಯಾಳಿಸಲಾಗಿದೆ. ವೇದಗಳು ಕೀಳು ಎಂದು ಉಪನಿಷತ್ತುಗಳು (ಮುಂಡಕೋಪನಿಷತ್ 1.2–5) ಹಳಿದಿವೆ.

ಒಂದು ಸಹಸ್ರಮಾನದಿಂದ ಈಚೆಗೆ, ಅದರಲ್ಲೂ ಯುರೋಪಿನಲ್ಲಿ ಹತ್ತೊಂಬತ್ತು ಇಪ್ಪತ್ತನೆಯ ಶತಮಾನದಲ್ಲಿ ಆದ ಭೌದ್ಧಿಕ ಜ್ಞಾನಕ್ರಾಂತಿ ಸಂಸ್ಕೃತದಲ್ಲಿ ಹುಡುಕಿದರೂ ಸಿಗುವುದಿಲ್ಲ. ಸಂಸ್ಕೃತದಲ್ಲಿ ಎಲ್ಲವೂ ಇದೆ ಎನ್ನುವುದು ದುರಭಿಮಾನದ ಮಾತಾಗುತ್ತದೆಯೇ ಹೊರತು ಸತ್ಯಸಂಧತೆಯ ಅಭಿಪ್ರಾಯವಾಗಲಾರದು. ಇಂಥದೇ ಮಾತನ್ನು ವೇದಗಳ ಬಗ್ಗೆ ಆಡುವುದು ರೂಢಿಯಾಗಿದೆ. ವೇದಗಳು ಇತಿಹಾಸದ ಒಂದು ನಿರ್ದಿಷ್ಟ ಅವಧಿಯಲ್ಲಿ ರಚಿತವಾದವುಗಳು. ಆ ಕಾಲದವರೆಗೆ ಏನು ಅನುಭವ ಮತ್ತು ಅರಿವು ಹಾಗೂ ಹಾಗೂ ಚಿಂತನೆ ಪ್ರಾಪ್ತವಾಗಿತ್ತೋ ಅಷ್ಟನ್ನು ಅಲ್ಲಿ ಕೊಡಲಾಗಿದೆ. ಅಷ್ಟೇ ಹೊರತು ಅಲ್ಲಿ ಎಲ್ಲಾ ಕಾಲಕ್ಕೂ ಎಲ್ಲ ಜನಾಂಗಗಳಿಗೂ ಎಲ್ಲಾ ಜ್ಞಾನ ಸಿಗುತ್ತದೆ ಎಂದು ಅರ್ಥವಲ್ಲ. ಇದು ಎಲ್ಲಾ ಧರ್ಮ ಗ್ರಂಥಗಳಿಗೂ ಅನ್ವಯವಾಗುವ ಮಾತು.

ಅರಿವು, ಅನುಭವ ಮತ್ತು ಆಲೋಚನೆಗಳು ಅಭಿವೃದ್ಧಿಯಾಗುವ ಜನರ ಜೀವಂತ ಚಟುವಟಿಕೆಗಳು. ಆಲೋಚನಾರಹಿತರು ಮಾತ್ರ ಸಜೀವ ಜನರನ್ನು ಬಿಟ್ಟು ನಿರ್ಜೀವ ಧರ್ಮಗ್ರಂಥಗಳಿಗೆ ಆತುಕೊಳ್ಳುತ್ತಾರೆ. ಸಹಸ್ರಾರು ವರ್ಷಗಳಷ್ಟು ಹಿಂದೆ ರಚಿತವಾದ ಧರ್ಮಗ್ರಂಥಗಳು, ಜ್ಞಾನ ವಿಜ್ಞಾನ ಪರೀಕ್ಷೆಗೆ ನಿಲ್ಲಲಾರದಂಥವು, ಇಂದೂ ಮಾನ್ಯವಾಗಬೇಕೆಂದು ಬಯಸುವವರು, ಮೃತಾವ್ಯವಸ್ಥೆಯಲ್ಲಿ ಇದ್ದಾರೆ ಎನ್ನಬೇಕು. ಕರ್ಮಠರು ತಮ್ಮ ಆಧಿಪತ್ಯ ಉಳಿಯಬೇಕೆಂದು ಆಶಿಸುವ ಜೀವ ಜ್ಞಾನಗಳು ವೈರಿಗಳು.

ಸಂಸ್ಕೃತ ವಿಶ್ವವಿದ್ಯಾನಿಲಯ ಸ್ಥಾಪನೆಯಾದರೆ ಅಲ್ಲಿ ಸಂಶೋಧನೆಗಳು ನಡೆಯುತ್ತವೆ. ಸಂಸ್ಕೃತ ಭಾಷೆಯನ್ನು ಚಾಲನೆಗೊಳಿಸುವುದಕ್ಕಾಗಿ ನವ ನವೀನ ಜ್ಞಾನ ವಿಜ್ಞಾನ ತಂತ್ರಜ್ಞಾನಗಳ ಗ್ರಂಥಗಳನ್ನು ಈ ಭಾಷೆಗೆ ಅನುವಾಧ ಮಾಡಿಸಬಹುದು, ಅಥವಾ ಸ್ವಂತ ಗ್ರಂಥಗಳನ್ನು ಬರೆಯಲಾದೀತು. ಇವುಗಳಿಗೆಲ್ಲ ಸರ್ಕಾರ ಸಾವಿರಾರು ಕೋಟಿ ರೂಪಾಯಿಗಳ ನೆರವು ನೀಡಬೇಕಾಗುತ್ತದೆ. ಪ್ರಕಟವಾದ ಸಂಸ್ಕೃತ ಗ್ರಂಥಗಳನ್ನು ಓದಲು ಜನರಿಗೆ ಈ ಭಾಷೆ ಬರುತ್ತದೆಯೇ? ಇದು ವ್ಯರ್ಥ ವೆಚ್ಚವಲ್ಲವೇ? ಅಚ್ಚಾದ ಸಂಸ್ಕೃತ ಕೃತಿಗಳನ್ನು ಉಗ್ರಾಣದಲ್ಲಿ ಗ್ರಂಥಾಲಯಗಳಲ್ಲಿ ಇಟ್ಟುಕೊಳ್ಳುವುದು ಸಾರ್ವಜನಿಕ ಸೇವೆ ಎನ್ನಬಹುದು? ಇದರಿಂದ ಏನು ಉಪಯೋಗ?

ಸಂಸ್ಕೃತ ವಿದ್ಯಾಭ್ಯಾಸವನ್ನು ಕುರಿತು ಮಾತನಾಡುವಾಗ ಎಲ್ಲಾಕ್ಕಿಂತ ಮುಖ್ಯವಾಗಿ ವಿದ್ಯಾರ್ಥಿಗಳ ಭವಿಷ್ಯ ಚಿಂತನೆ ಅಗತ್ಯ. ಅವರು ಸ್ನಾತಕೋತರ ಪದವೀಧರರಾದ ನಂತರ ಅವರಿಗೆ ಒದಗುವ ನೌಕರಿ ಅವಕಾಶಗಳು ಏನು?

ಈಗ ಕರ್ನಾಟಕದಲ್ಲಿ ಇರುವುದು ಹೆಸರಿಗೆ ಬಿಜೆಪಿ ಸರ್ಕಾರವಾದರೂ ನಿಜವಾಗಿ ಶ್ರೀ ಎಡ್ಯೂರಪ್ಪನವರೇ ಸರ್ಕಾರ. ಇದು ಏಕವ್ಯಕ್ತಿ ಸರ್ಕಾರ! ಅವರು ತಾವು ಹುಟ್ಟಿಬಂದಿರುವ ಶರಣ ಧರ್ಮಕ್ಕೆ ಹಾಗೂ ಅದರ ಉದ್ದೀಪನಕ್ಕೆ ಕಾರಂಕರ್ತರಾದ ಬಸವಣ್ಣನವರಿಗೆ ನಿಷ್ಠರೋ? ಇಲ್ಲ ಬಸವಣ್ಣ ಸುಮಾರು ಒಂಬೈನೂರು ವರ್ಷಗಳ ಹಿಂದೆ ಅರುಗು ಮಾಡಿದ ಮತದ ಚಾತುರ್ವರ್ಣಕ್ಕೆ ಬದ್ಧರೋ? ಜನ ಸಾಮಾನ್ಯರನ್ನು ಕತ್ತಲೆಯಿಂದ ಬೆಳಕಿಗೆ ತಂದು, ಮತದ ದಬ್ಬಾಳಿಕೆ ಮತ್ತು ಸುಲಿಗೆಯಿಂದ ಬಿಡಿಸಿದ, ಕನ್ನಡವನ್ನು ಧರ್ಮದ ಭಾಷೆಯನ್ನಾಗಿಯೂ ಸಂವಹನ ಮಾಧ್ಯಮವನ್ನಾಗಿಯೂ ಹೊಳಪುಗೊಳಿಸಿದ, ಶಿವಶರಣರನ್ನು ಅನುಸರಿಸುತ್ತಾರೋ? ಎಂದು ಅವರು ಘೋಷಿಸಬೇಕು. ಅವರ ಮೈಯಲ್ಲಿ ನಿಜವಾಗಿಯೂ ಇಂಥ ಉದಾತ್ತ ಶರಣರ ರಕ್ತ ಹರಿಯುತ್ತಿದ್ದರೆ ಅವರು ಕನ್ನಡದ ಏಳಿಗೆಗೆ ಎಲ್ಲಾ ಪ್ರಯತ್ನ ಮಾಡುತ್ತಾರೆಂದು ಆಶಿಸೋಣ. ಆಗ ಮಾತ್ರ ಅವರು ಜನಭಾಷಾ ಸೇವಕ ಎಂಬ ಹೆಸರಿಗೆ ಅರ್ಹರಾಗುತ್ತಾರೆ. ಇಲ್ಲದಿದ್ದರೆ ಜನತೆಯ ನುಡಿಗೆ ಅನ್ಯಾಯ ಮಾಡಿದ ಮುಖ್ಯಮಂತ್ರಿ ಎಂಬ ಬಿರುದಿಗೆ ಅವರು ತುತ್ತಾಗಬಹುದು. ಮುಖ್ಯಮಂತ್ರಿ ಅವರನ್ನು ಒಬ್ಬ ಶರಣ ಶಾಸಕ ಟೀಕಿಸಿದರೆಂಬ ಕಾರಣಕ್ಕೆ ಆ ಶಾಸಕ ಲಿಂಗಾಯತ ಮತದ ಒಬ್ಬ ಸ್ವಾಮೀಜಿ ಅವರನ್ನು ಭೇಟಿಯಾದಾಗ ಆ ಶಾಸಕ ಮಹಾಶಯನಿಗೆ ಈ ಸ್ವಾಮಿಗಳು, "ಮುಖ್ಯಂತ್ರಿಗಳನ್ನು ವಿರೋಧಿಸಬೇಡಿ, ಹುಷಾರ್" ಎಂದು ಧಮಕಿ ಹಾಕಿದ ವಿಚಾರ ಈಚೆಗೆ ಕೆಲವು ಪತ್ರಿಕೆಗಳಲ್ಲಿ ಬಾಕ್ಸ್‌ನಲ್ಲಿ ಅಚ್ಚಾಗಿತ್ತು.

ಎಷ್ಟು ಕಾಲೇಜುಗಳಲ್ಲಿ ಅಧ್ಯಾಪಕ ಹುದ್ದೆ ಸಿಗಲು ಸಾಧ್ಯ? ಬೆರಳೆಣಿಕೆ ಜನರಿಗೂ ಸಂಸ್ಕೃತ ಗೊತ್ತಿಲ್ಲದಿರುವಾಗ ಸಂಸ್ಕೃತ ವಿಶ್ವವಿದ್ಯಾನಿಲಯದ ಸ್ಥಾಪನೆ ಸಾರ್ಥಕವಾಗುತ್ತದೆಯೇ? ನಮ್ಮ ಪರಿಸ್ಥಿತಿಯಲ್ಲಿ ವಿದ್ಯಾಭ್ಯಾಸ ನಡೆಯುವುದು ಜೀವನ ನಿರ್ವಹಣೆಗಾಗಿ ಕೆಲಸ ಸಿಕ್ಕದಿದ್ದರೆ ಅಂಥ ಸ್ನಾತಕೋತ್ತರ ಪದವಿಗಳು ಬೇಕೆ? ವಿದ್ಯೆಗೆ ವಿದ್ಯೆ ಎಂಬುದು ಹೇಳಲು ಸುಂದರ ವಾಳಲು ಕಷ್ಟಕರ.

ಕರ್ನಾಟಕ ರಾಜ್ಯದಲ್ಲಿರುವ ಪ್ರತಿಯೊಂದು ವಿಶ್ವವಿದ್ಯಾನಿಲಯದಲ್ಲಿಯೂ ಸಂಸ್ಕೃತ ಅಧ್ಯಯನ ನಿರಂತರವಾಗಿ ನಡೆಯುತ್ತಿದೆ. ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಸ್ವತಂತ್ರ ಸಂಸ್ಕೃತ ವಿಭಾಗಗಳು ಇವೆ. ಅಲ್ಲಿ ಉಪನ್ಯಾಸಕರು, ರೀಡರ್‌ಗಳು, ಪ್ರಾಧ್ಯಪಕರು ಕೆಲಸ ಮಾಡುತ್ತಿದ್ದಾರೆ. ಭಾರತೀಯ ವೈದ್ಯ ಪದ್ಧತಿಯ ಅನೇಕ ಕಾಲೇಜುಗಳಲ್ಲಿ ಆಯುರ್ವೇದದ ವ್ಯಾಸಂಗಕ್ಕೆ ಅವಕಾಶ ಮಾಡಲಾಗಿದೆ. ಬೇರೆ ಬೇರೆ ಕಡೆಗಳಲ್ಲಿ ವೇದಪಾಠಗಳು, ಉನ್ನತ ಕೇಂದ್ರಗಳಲ್ಲಿ ವೇದ ವ್ಯಾಸಂಗ ಸಾಂಗವಾಗಿ ಸಾಗುತ್ತಿದೆ. ಅಂಥದರಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯ ಬೇಕೆಂದು ಯಾರಯು ಸರ್ಕಾರಕ್ಕೆ ತಗಾದೆ ಮಾಡಿದ್ದರು? ಇದು ಸರ್ಕಾರ ತನ್ನ ತಲೆಯ ಮೇಲೆ ತಾನೇ ಸುಮ್ಮನೆ ಎಳೆದುಕೊಳ್ಳುತ್ತಿರುವ ಚಪ್ಪಡಿ. ಯಾವುದೇ ದೃಷ್ಟಿಯಿಂದ ನೋಡಿದರೂ ಸಂಸ್ಕೃತ ವಿಶ್ವವಿದ್ಯಾನಿಲಯ ಅನಾವಶ್ಯಕ ಎನ್ನದೆ ಬೇರೆ ದಾರಿಯಿಲ್ಲ.

ಈಗ ಕರ್ನಾಟಕದಲ್ಲಿ ಇರುವುದು ಹೆಸರಿಗೆ ಬಿಜೆಪಿ ಸರ್ಕಾರವಾದರೂ ನಿಜವಾಗಿ ಶ್ರೀ ಎಡ್ಯೂರಪ್ಪನವರೇ ಸರ್ಕಾರ. ಇದು ಏಕವ್ಯಕ್ತಿ ಸರ್ಕಾರ! ಅವರು ತಾವು ಹುಟ್ಟಿಬಂದಿರುವ ಶರಣ ಧರ್ಮಕ್ಕೆ ಹಾಗೂ ಅದರ ಉದ್ದೀಪನಕ್ಕೆ ಕಾರಂಕರ್ತರಾದ ಬಸವಣ್ಣನವರಿಗೆ ನಿಷ್ಠರೋ? ಇಲ್ಲ ಬಸವಣ್ಣ ಸುಮಾರು ಒಂಬೈನೂರು ವರ್ಷಗಳ ಹಿಂದೆ ಅರುಗು ಮಾಡಿದ ಮತದ ಚಾತುರ್ವರ್ಣಕ್ಕೆ ಬದ್ಧರೋ? ಜನ ಸಾಮಾನ್ಯರನ್ನು ಕತ್ತಲೆಯಿಂದ ಬೆಳಕಿಗೆ ತಂದು, ಮತದ ದಬ್ಬಾಳಿಕೆ ಮತ್ತು ಸುಲಿಗೆಯಿಂದ ಬಿಡಿಸಿದ, ಕನ್ನಡವನ್ನು ಧರ್ಮದ ಭಾಷೆಯನ್ನಾಗಿಯೂ ಸಂವಹನ ಮಾಧ್ಯಮವನ್ನಾಗಿಯೂ ಹೊಳಪುಗೊಳಿಸಿದ, ಶಿವಶರಣರನ್ನು ಅನುಸರಿಸುತ್ತಾರೋ? ಎಂದು ಅವರು ಘೋಷಿಸಬೇಕು. ಅವರ ಮೈಯಲ್ಲಿ ನಿಜವಾಗಿಯೂ ಇಂಥ ಉದಾತ್ತ ಶರಣರ ರಕ್ತ ಹರಿಯುತ್ತಿದ್ದರೆ ಅವರು ಕನ್ನಡದ ಏಳಿಗೆಗೆ ಎಲ್ಲಾ ಪ್ರಯತ್ನ ಮಾಡುತ್ತಾರೆಂದು ಆಶಿಸೋಣ. ಆಗ ಮಾತ್ರ ಅವರು ಜನಭಾಷಾ ಸೇವಕ ಎಂಬ ಹೆಸರಿಗೆ ಅರ್ಹರಾಗುತ್ತಾರೆ. ಇಲ್ಲದಿದ್ದರೆ ಜನತೆಯ ನುಡಿಗೆ ಅನ್ಯಾಯ ಮಾಡಿದ ಮುಖ್ಯಮಂತ್ರಿ ಎಂಬ ಬಿರುದಿಗೆ ಅವರು ತುತ್ತಾಗಬಹುದು.

ಮುಖ್ಯಮಂತ್ರಿ ಅವರನ್ನು ಒಬ್ಬ ಶರಣ ಶಾಸಕ ಟೀಕಿಸಿದರೆಂಬ ಕಾರಣಕ್ಕೆ ಆ ಶಾಸಕ ಲಿಂಗಾಯತ ಮತದ ಒಬ್ಬ ಸ್ವಾಮೀಜಿ ಅವರನ್ನು ಭೇಟಿಯಾದಾಗ ಆ ಶಾಸಕ ಮಹಾಶಯನಿಗೆ ಈ ಸ್ವಾಮಿಗಳು, "ಮುಖ್ಯಂತ್ರಿಗಳನ್ನು ವಿರೋಧಿಸಬೇಡಿ, ಹುಷಾರ್" ಎಂದು ಧಮಕಿ ಹಾಕಿದ ವಿಚಾರ ಈಚೆಗೆ ಕೆಲವು ಪತ್ರಿಕೆಗಳಲ್ಲಿ ಬಾಕ್ಸ್‌ನಲ್ಲಿ ಅಚ್ಚಾಗಿತ್ತು. ಹನ್ನೆರಡನೆಯ ಶತಮಾನದಲ್ಲಿ ಅನುಭವ ಮಂಟಪ ಎಂಬ ಪಾರ್ಲಿಮೆಂಟ್ ಇತ್ತು; ಅಲ್ಲಿ ಪ್ರಜಾಪ್ರಭುತ್ವ ವಿಜೃಂಭಿಸಿತು ಎಂದು ವೇದಿಕೆಗಳಲ್ಲಿ ಗಂಟೆಗಟ್ಟಲೆ ಸ್ವಾಮಿಜೀಗಳು ಕಿವಿಗಡಚಿಕ್ಕುವ ಭಾಷಣ ಕೊರೆಯುತಾರೆ. ಆದರೆ ನಿಜ ಜೀವನದಲ್ಲಿ ನಡೆಯುತ್ತಿರುವುದು ಅದರ ವಿರುದ್ಧವಾಗಿ ಎಂದು ಈ ಸಂದರ್ಭದಿಂದ ಗೊತ್ತಾಗುತ್ತದೆ. ಕರ್ನಾಟಕದಲ್ಲಿರುವ ವೀರಶೈವ ಸ್ವಾಮಿಗಳೆಲ್ಲರಿಗೂ ಬಸವಣ್ಣ ಮತ್ತು ಶಿವಶರಣರಲ್ಲಿ ಅಚಲ ಗೌರವ ಅಭಿಮಾನ ಇದ್ದರೆ, ಕನ್ನಡ ಭಾಷೆಯ ಮೇಲೆ ಅವರಿಗೆ ಕಾಳಜಿ ಪ್ರೀತಿ ಇದ್ದರೆ, ಅವರು ಸಂಸ್ಕೃತ ವಿಶ್ವವಿದ್ಯಾನಿಲಯದ ಸ್ಥಾಪನೆ

(33ನೇ ಪುಟಕ್ಕೆ)

ಪಶ್ಚಿಮ ಬಂಗಾಲದ ಪಶ್ಚಿಮ ಮೇದಿನಿಪುರ ಜಿಲ್ಲೆಯ ಜರಗ್ರಾಮ್, ಬಿನ್‌ಪುರ ೧ ಮತ್ತು ಬಿನ್‌ಪುರ ಪ್ರದೇಶಗಳ ನ್ನೊಳಗೊಂಡ ಲಾಲ್ ಘಡ್ ಆದಿವಾಸಿ ಪ್ರದೇಶ ಮೇದಿನಿಪುರ ದಿಂದ ೬೦ ಕಿಲೋ ಮೀಟರ್ ದೂರದಲ್ಲಿದೆ. ಸಂತಾಲ್ ಆದಿವಾಸಿ ಜನತೆ ಬಹುಸಂಖ್ಯಾತ ರಾಗಿರುವ ಈ ಪ್ರದೇ ಶದಲ್ಲಿ ಪರಿಶಿಷ್ಟ ಜಾತಿ ಮತ್ತು ಇತರೆ ಹಿಂದು ಆದ ವರ್ಗಗಳು (ಒಬಿಸಿ) ಹೆಚ್ಚಿನ ಸಂಖ್ಯೆ ಯಲ್ಲಿದ್ದಾರೆ. ಸಣ್ಣ ಪುಟ್ಟ ತುಂಡು ಜಮೀನನ್ನು ಹೊಂದಿರುವ ಇಲ್ಲಿನ ಜನ ಬಹುತೇಕವಾಗಿ ಮಳೆಯಾಧಾರಿತ ಕೃಷಿಯನ್ನೇ ಅವ ಲಂಬಿಸಿದ್ದು, ತಟ್ಟೆಗ ಳನ್ನು ತಯಾರಿಸಲು ಉಪಯೋಗಿಸುವ ಶಾಲ್ ಮರದ ಎಲೆಗ ಳನ್ನು ಆಯ್ದು ಮಾರು ವುದೇ ಈ ಪ್ರದೇಶದ ಆರ್ಥಿಕ ಬೆನ್ನೆಲುಬು.

ನಾ ದಿವಾಕರ

ನಕ್ಸಲ್ ಬಾರಿ, ಎಡಪಂಥೀಯ ಚಳುವಳಿ, ಸ್ವಾತಂತ್ರ ಚಳುವಳಿ ಇನ್ನಿತರ ಅನೇಕ ಜನಪರ ಚಳುವಳಿಗಳ ತವರೂರಾದ ಪಶ್ಚಿಮ ಬಂಗಾಲದಲ್ಲಿ ಕಳೆದ ಹಲವು ತಿಂಗಳುಗಳಿಂದ ನಡೆಯುತ್ತಿರುವ ಘಟನೆಗಳು ಅಚ್ಚರಿ ಮೂಡಿಸುತ್ತವೆ. 1967ರ ನಕ್ಸಲ್ ಬಾರಿ ಚಳುವಳಿಯ ನಂತರದಲ್ಲಿ ತೀವ್ರಗೊಂಡ ಎಡಪಂಥೀಯ ಚಳುವಳಿಯನ್ನು ಹತ್ತಿಕ್ಕಲು ಅಂದಿನ ಕಾಂಗ್ರೆಸ್ ಸರ್ಕಾರ ಜನಪರ ಚಳುವಳಿಗಳ ಮೇಲೆ ನಡೆಸಿದ ಆಕ್ರಮಣ ಮತ್ತು ಅನುಸರಿಸಿದ ದಮನಕಾರಿ ನೀತಿ, ಅಲ್ಲಿನ ರಾಜಕೀಯ ಸ್ವರೂಪವನ್ನೇ ಬದಲಾಯಿಸಿತ್ತು. ಕಾಂಗ್ರೆಸ್ ಮುಖ್ಯಮಂತ್ರಿ ಸಿದ್ಧಾರ್ಥ ಶಂಕರ್ ರೇ ಅವರ ಆಳ್ವಿಕೆಯಲ್ಲಿ ಎಡಪಕ್ಷಗಳ ಮೇಲೆ ನಡೆದ ಮಾರಣಾಂತಿಕ ಆಕ್ರಮಣದ ಪರಿಣಾಮವಾಗಿ ಎಡಪಕ್ಷಗಳಿಗೆ ಬಂಗಾಲದಲ್ಲಿ ರಾಜಕೀಯ ನೆಲೆ ಕಂಡುಕೊಳ್ಳುವುದು ಸಾಧ್ಯವಾಗಿತ್ತು. ಸ್ವಾತಂತ್ರ್ಯಪೂರ್ವದಿಂದಲೂ ಭಾರತೀಯ ಶ್ರಮಜೀವಿಗಳ, ರೈತಾಪಿವರ್ಗಗಳ ಆಗ್ರಹವಾಗಿದ್ದ ಭೂ ಸುಧಾರಣೆ ಮುಂತಾದ ಜನಪರ ನೀತಿಗಳನ್ನು ತಮ್ಮ ಪ್ರಣಾಳಿಕೆಯನ್ನಾಗಿ ಮಾಡಿಕೊಂಡ ಎಡಪಕ್ಷಗಳು 1977ರಲ್ಲಿ ಅಧಿಕಾರದ ಗದ್ದುಗೆ ಏರಿದ್ದು, ಇಂದಿನವರೆಗೂ ಆಳ್ವಿಕೆ ನಡೆಸಿವೆ. ಭಾರತೀಯ ಪ್ರಜಾತಂತ್ರದಲ್ಲಿ ಮಾರ್ಕ್ಸ್‌ವಾದಿ ಧೋರಣೆಗಳನ್ನು ವಸ್ತುತಃ ಪಾಲಿಸುವ ಮೂಲಕ, ಒಂದು ಸಮತಾ ಸಮಾಜವನ್ನು ನಿರ್ಮಿಸುವ ಅವಕಾಶವನ್ನೂ ಪಶ್ಚಿಮ ಬಂಗಾಲದ ಜನತೆ ಎಡಪಕ್ಷಗಳಿಗೆ ನೀಡಿದ್ದು ಬೂರ್ಷ್ವಾ ಪಕ್ಷಗಳಿಗೆ ನುಂಗಲಾರದ ತುತ್ತಾಗಿತ್ತು.

ಪಕ್ಷದ ಸಿದ್ಧಾಂತ ಮತ್ತು ಮಾರ್ಕ್ಸ್‌ವಾದೀ ತತ್ವಗಳಿಗೆ ಬದ್ಧವಾಗಿ ಹಲವಾರು ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡ ಎಡರಂಗದ ಸರ್ಕಾರ ಪ್ರಾರಂಭಿಕ ಹಂತದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕೈಗೊಂಡ ಭೂಸುಧಾರಣಾ ಕ್ರಮಗಳು ಪಕ್ಷವನ್ನು ಬಲಪಡಿಸಿತ್ತು. ಆದರೆ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಮಿಶ್ರ ಆರ್ಥಿಕ ನೀತಿಯನ್ನು ಪಾಲಿಸುವ ನಿಟ್ಟನಲ್ಲಿ ಎಡರಂಗ ಸರ್ಕಾರಗಳು ಈ ನಿಟ್ಟಿನಲ್ಲಿ ದಿಟ್ಟ ನಿರ್ಧಾರಗಳನ್ನು ಕೈಗೊಳ್ಳಲಿಲ್ಲ. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಹಾಗು ರೈತ-ಕೃಷಿ ಕಾರ್ಮಿಕರ ಪರವಾದ ಹಲವು ನೀತಿಗಳು ಎಡಪಕ್ಷಗಳನ್ನು ಮೂರು ದಶಕಗಳಿಗೂ ಹೆಚ್ಚು ಕಾಲ ಅಧಿಕಾರದಲ್ಲಿರಿಸಿವೆ. ಆದರೂ ಕಳೆದ ಎರಡು ದಶಕಗಳಿಂದೀಚೆಗೆ, ಜಾಗತೀಕರಣ ಪ್ರಕ್ರಿಯೆ ಪ್ರಾರಂಭಗೊಂಡ ನಂತರದಲ್ಲಿ ಎಡರಂಗದ ಆರ್ಥಿಕ ನೀತಿಗಳು ಸೈದ್ಧಾಂತಿಕವಾಗಿ ಹಿನ್ನಡೆ ಅನುಭವಿಸಿದ್ದು, ಪಶ್ಚಿಮ ಬಂಗಾಲದ ಸಾಮಾಜಿಕ-ಆರ್ಥಿಕ ನೀತಿಗಳು ವಿಭಿನ್ನ ಹಾದಿ ಹಿಡಿದಿರುವುದು ಸ್ಪಷ್ಟವಾಗಿದೆ.

ಜಾಗತೀಕರಣ-ನವ ಉದಾರವಾದಿ ನೀತಿಗಳನ್ನು ತಾತ್ವಿಕವಾಗಿ ವಿರೋಧಿಸುತ್ತಲೇ ಈ ಪ್ರಕ್ರಿಯೆಗಳಿಗೆ ಮುಕ್ತ ಅವಕಾಶ ನೀಡುವ ದ್ವಂದ್ವವನ್ನೂ ಪಶ್ಚಿಮಬಂಗಾಲದಲ್ಲಿ ಕಾಣಬಹುದಾಗಿದೆ. ರಾಷ್ಟ್ರ ಪ್ರಭುತ್ವದ ಬಂಡವಾಳಶಾಹಿ ನೀತಿಗಳ ಚೌಕಟ್ಟಿನೊಳಗೇ ಕಾರ್ಯನಿರ್ವಹಿಸಬೇಕಾಗಿರುವ ಅನಿವಾರ್ಯತೆ ಎಡರಂಗ ಸರ್ಕಾರವನ್ನು ನಿರ್ಬಂಧಕ್ಕೊಳಪಡಿಸಿದೆ ಎಂಬ ಅಭಿಪ್ರಾಯವೂ ಕೇಳಿಬರುತ್ತದೆ. ಆದರೆ ಪ್ರಜಾತಂತ್ರ ವ್ಯವಸ್ಥೆಯಲ್ಲೇ ಒಂದು ಜನಪರವಾದ ಸಮಾಜವಾದಿ ಸಿದ್ಧಾಂತವನ್ನಾಧರಿಸಿದ ಆಳ್ವಿಕೆಯನ್ನು ನೀಡುವ ನಿಟ್ಟಿನಲ್ಲಿ ಎಡರಂಗ ಸರ್ಕಾರವು ಎಡವಿರುವುದೂ ಅಷ್ಟೇ ಸತ್ಯ. 1977-82ರ ಅವಧಿಯಲ್ಲಿ ಕೈಗೊಳ್ಳಲಾದ ಅನೇಕ ಐತಿಹಾಸಿಕ ನಿರ್ಣಯಗಳ ನಿರ್ಲಕ್ಷ್ಯ, ಕೃಷಿ ಪ್ರಧಾನ ಆರ್ಥಿಕತೆಯನ್ನು ಪೋಷಿಸುತ್ತಲೇ ಕೈಗಾರಿಕೋದ್ಯಮವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ವೈಫಲ್ಯ,



ಲಾಲ್‌ಘಡ್- ಪ್ರಜಾತಂತ್ರ-ಸಂಘರ್ಷ

ಲಾಲ್‌ಘಡ್: ನೋಟ-೧

ಬಂಡವಾಳಶಾಹಿ ಆರ್ಥಿಕತೆಯನ್ನು ಧಿಕ್ಕರಿಸಿ ಸಮಾಜ ವಾದಿ ಆರ್ಥಿಕ ನೀತಿಯನ್ನು ಅನುಷ್ಠಾನಗೊಳಿಸುವಲ್ಲಿ ನಿರುತ್ಸಾಹ ಇವೆಲ್ಲವೂ ಎಡರಂಗ ಸರ್ಕಾರದ ಪ್ರಮುಖ ವೈಫಲ್ಯಗಳು. ಈ ವೈಫಲ್ಯಗಳ ನಡುವೆಯೇ ಎದುರಾದ ನವ ಉದಾರವಾದಿ ಪ್ರಕ್ರಿಯೆ ಎಡರಂಗ ಸರ್ಕಾರವನ್ನು ವಿಭಿನ್ನ ಹಾದಿಗೆ ಕೊಂಡೊಯ್ದಿದ್ದು ನಂದಿಗ್ರಾಮ, ಸಿಂಗೂರು ಪ್ರಕರಣಗಳಲ್ಲಿ ಸ್ಪಷ್ಟವಾಗಿ ಪ್ರಕಟವಾಗಿತ್ತು.

ಹಾಗಾಗಿಯೇ ಪಶ್ಚಿಮ ಬಂಗಾಲ ಸರ್ಕಾರ ತನ್ನ ಹೋರಾಟದ, ಸಂಘರ್ಷಗಳ ಪರಂಪರೆ ಮತ್ತು ಕ್ರಾಂತಿ ಕಾರಿ ಧೋರಣೆಗಳನ್ನು ಮರೆತು ಒಂದು ಸೋಷಿಯಲ್ ಡೆಮಾಕ್ರಟಿಕ್ ಸರ್ಕಾರವಾಗಿ ಕಾರ್ಯನಿರ್ವಹಿಸಲಾರಂಭಿಸಿತು. ಜನ ಸಮುದಾಯಗಳ ಸಂಘರ್ಷಗಳ ತಳಹದಿಯ ಮೇಲೆ ನಿರ್ಮಿತವಾದ ಎಡಪಂಥೀಯ ಚಳುವಳಿಯ ಮೂಲಕ ಅಧಿಕಾರದ ಗದ್ದುಗೆ ಏರಿದ ಎಡರಂಗ ಸರ್ಕಾರ ಈಗ ಪ್ರಜಾತಂತ್ರ ವ್ಯವಸ್ಥೆಯ ಮೂಲಭೂತ ಹಕ್ಕುಗಳ ಲ್ಲೊಂದಾದ ಜನಪರ ಹೋರಾಟಗಳನ್ನು ದಮನ ಮಾಡಲು ಹೊರಟಿರುವುದು ವಿಷಾದನೀಯ. ನಂದಿ ಗ್ರಾಮ, ಸಿಂಗೂರುಗಳ ಪರಂಪರೆಯ ಪರಾಕಾಷ್ಠೆಯನ್ನು ಪ್ರಸ್ತುತ ಲಾಲ್‌ಘಡದ ಪ್ರಕರಣದಲ್ಲಿ ಕಾಣಬಹುದಾಗಿದೆ. ಲಾಲ್‌ಘಡ್ ಚಳುವಳಿ ಮೂಲಭೂತವಾಗಿ ಆದಿವಾಸಿಗಳ ಹೋರಾಟದ ಗಾಥೆ. ಈ ಹೋರಾಟದ ಹಿಂದೆ ಬೇರಾವುದೇ ಶಕ್ತಿಗಳ ಪ್ರಭಾವ, ಕೈವಾಡಗಳಿದ್ದರೂ, ಇಲ್ಲಿನ ಆದಿವಾಸಿಗಳು ತಮ್ಮ ಮೂಲಭೂತ ಹಕ್ಕುಗಳಿಗಾಗಿ ಹೋರಾಡುತ್ತಿರುವುದು ಸತ್ಯ. ಈ ಹೋರಾಟವನ್ನು ಬಂಗಾಲದ ಎಡರಂಗ ಸರ್ಕಾರವು ನಿರ್ವಹಿಸಿರುವ ರೀತಿ ಪ್ರಶ್ನಾರ್ಹವಷ್ಟೇ ಅಲ್ಲದೆ ವಿಷಾದನೀಯವೂ ಆಗಿದೆ.

ಪಶ್ಚಿಮ ಬಂಗಾಲ ಸರ್ಕಾರ ತನ್ನ ಹೋರಾಟದ, ಸಂಘರ್ಷಗಳ ಪರಂಪರೆ ಮತ್ತು ಕ್ರಾಂತಿ ಕಾರಿ ಧೋರಣೆಗಳನ್ನು ಮರೆತು ಒಂದು ಸೋಷಿಯಲ್ ಡೆಮಾಕ್ರಟಿಕ್ ಸರ್ಕಾರವಾಗಿ ಕಾರ್ಯನಿರ್ವಹಿಸಲಾರಂಭಿಸಿತು. ಜನ ಸಮುದಾಯಗಳ ಸಂಘರ್ಷಗಳ ತಳಹದಿಯ ಮೇಲೆ ನಿರ್ಮಿತವಾದ ಎಡಪಂಥೀಯ ಚಳುವಳಿಯ ಮೂಲಕ ಅಧಿಕಾರದ ಗದ್ದುಗೆ ಏರಿದ ಎಡರಂಗ ಸರ್ಕಾರ ಈಗ ಪ್ರಜಾ ತಂತ್ರ ವ್ಯವಸ್ಥೆಯ ಮೂಲಭೂತ ಹಕ್ಕುಗಳ ಲ್ಲೊಂದಾದ ಜನಪರ ಹೋರಾಟಗಳನ್ನು ದಮನ ಮಾಡಲು ಹೊರಟಿರುವುದು ವಿಷಾದನೀಯ. ನಂದಿ ಗ್ರಾಮ, ಸಿಂಗೂರುಗಳ ಪರಂಪರೆಯ ಪರಾಕಾಷ್ಠೆಯನ್ನು ಪ್ರಸ್ತುತ ಲಾಲ್‌ಘಡದ ಪ್ರಕರಣದಲ್ಲಿ ಕಾಣಬಹುದಾಗಿದೆ. ಲಾಲ್‌ಘಡ್ ಚಳುವಳಿ ಮೂಲಭೂತವಾಗಿ ಆದಿವಾಸಿಗಳ ಹೋರಾಟದ ಗಾಥೆ.

ಲಾಲ್‌ಘಡ ಚಳುವಳಿಯ ಇತಿಹಾಸ

ಪಶ್ಚಿಮ ಬಂಗಾಲದ ಪಶ್ಚಿಮ ಮೇದಿನಿಪುರ ಜಿಲ್ಲೆಯ ಜರಗ್ರಾಮ್, ಬಿನ್‌ಪುರ 1 ಮತ್ತು ಬಿನ್‌ಪುರ ಪ್ರದೇಶಗಳನ್ನೊಳಗೊಂಡ ಲಾಲ್‌ಘಡ್ ಆದಿವಾಸಿ ಪ್ರದೇಶ ಮೇದಿನಿಪುರದಿಂದ 60 ಕಿಲೋಮೀಟರ್ ದೂರದಲ್ಲಿದೆ. ಸಂತಾಲ್ ಆದಿವಾಸಿ ಜನತೆ ಬಹುಸಂಖ್ಯಾತರಾಗಿರುವ ಈ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಇತರೆ ಹಿಂದುಳಿದ ವರ್ಗಗಳು (ಒಬಿಸಿ) ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಣ್ಣ ಪುಟ್ಟ ತುಂಡು ಜಮೀನನ್ನು ಹೊಂದಿರುವ ಇಲ್ಲಿನ ಜನ ಬಹುತೇಕವಾಗಿ ಮಳೆಯಾಧಾರಿತ ಕೃಷಿಯನ್ನೇ ಅವಲಂಬಿಸಿದ್ದು, ತಟ್ಟೆಗಳನ್ನು ತಯಾರಿಸಲು ಉಪಯೋಗಿಸುವ ಶಾಲ್ ಮರದ ಎಲೆಗಳನ್ನು ಆಯ್ದು ಮಾರುವುದೇ ಈ ಪ್ರದೇಶದ ಆರ್ಥಿಕ ಬೆನ್ನೆಲುಬು. ವಿಪುಲವಾದ ನೈಸರ್ಗಿಕ ಸಂಪತ್ತನ್ನು ಹೊಂದಿದ್ದರೂ ಆಳ್ವಿಕರ ನಿರ್ಲಕ್ಷದಿಂದ ಅಭಿವೃದ್ಧಿ ಕಾಣದ ಈ ಆದಿವಾಸಿ ಪ್ರದೇಶ ಇತಿಹಾಸ ಕಾಲದಿಂದಲೂ ಹಿಂದುಳಿದ ಪ್ರದೇಶವೇ ಆಗಿದೆ. ಇಂದಿಗೂ ಸಹ ಇಲ್ಲಿನ ಜನತೆಗೆ ಮೂಲಭೂತ ಸೌಲಭ್ಯಗಳು ದೊರೆಯದಿರುವುದು ವಿಪರ್ಯಾಸಕರ. ಇಲ್ಲಿನ ಜನತೆಗೆ ಆರೋಗ್ಯ ತಪಾಸಣೆಗಾಗಿ 60 ಕಿಲೋಮೀಟರ್ ದೂರದ ಮೇದಿನಿಪುರಕ್ಕೆ ಹೋಗುವುದು ಅನಿವಾರ್ಯ. ಏಕೆಂದರೆ ಇಡೀ ಪ್ರದೇಶದಲ್ಲಿ ಏಕೈಕ ವೈದ್ಯರಿದ್ದು ಎರಡು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ನಿರ್ವಹಿಸುತ್ತಾರೆ.

ಸ್ವತಂತ್ರ ಭಾರತದ ಅಭಿವೃದ್ಧಿ ಧೋರಣೆಯಲ್ಲಿ ಆದಿವಾಸಿಗಳನ್ನು ಕಡೆಗಣಿಸುವುದು ಸಾಮಾನ್ಯ ಸಂಗತಿಯಾಗಿದ್ದು ಆದಿವಾಸಿ ಪ್ರದೇಶಗಳನ್ನು ಕೇವಲ ಗಣಿಗಾರಿಕೆ ಮತ್ತು ಅರಣ್ಯ ಸಂಪತ್ತಿನ ಆಗರಗಳೆಂದು ಮಾತ್ರ ಪರಿಗಣಿಸಲಾಗಿದೆ. ಲಾಲ್‌ಘಡವೂ ಈ ಪ್ರವೃತ್ತಿಗೆ ಹೊರತಾಗಿಲ್ಲ. ನೈಸರ್ಗಿಕ ಸಂಪತ್ತು ಇರುವುದು ಪೋಷಣೆಗಲ್ಲದೆ ಶೋಷಣೆಗೆ ಎಂಬ ಬಂಡವಾಳಶಾಹಿ ಅಭಿವೃದ್ಧಿ ಮಂತ್ರ ನಿರಂತರವಾಗಿ ಜಾರಿಯಲ್ಲಿದೆ. ಪ್ರಭುತ್ವಗಳ ನಿರ್ಲಕ್ಷ್ಯ ಮತ್ತು ಆದಿವಾಸಿ ಸಮುದಾಯಗಳ ಬಡತನ ಈ ಪ್ರದೇಶಗಳಲ್ಲಿ ಜನಾಂದೋಲನಗಳು ಮತ್ತು ಹಿಂಸಾತ್ಮಕ ಚಳುವಳಿಗಳು ಸೃಷ್ಟಿಯಾಗಲು ಪೂರಕವಾಗಿವೆ. ಕಳೆದ ಹತ್ತು ವರ್ಷಗಳಿಂದಲೂ ಝಾರ್ಖಂಡ್‌ಗೆ ಹೊಂದಿಕೊಂಡಂತಿರುವ ಮೆದಿನಿಪುರ–ಬಂಕುರ–ಪುರುಲಿಯ ಪ್ರದೇಶಗಳಲ್ಲಿ ಮಾವೋವಾದಿ ಪಕ್ಷಗಳು ಸಕ್ರಿಯವಾಗಿವೆ. ಜಂಗಲ್ ಮಹಲ್ ಎಂದು ಕರೆಯಲಾಗುವ ಈ ಪ್ರದೇಶಗಳಲ್ಲಿ ಮಾವೋವಾದಿಗಳು ಬೀಡುಬಿಟ್ಟಿರುವುದನ್ನೇ ನೆಪ ಮಾಡಿಕೊಂಡು ಪಶ್ಚಿಮಬಂಗಾಲದ ಎಡರಂಗದ ಸರ್ಕಾರ ಆದಿವಾಸಿ ಹೋರಾಟಗಳನ್ನು ದಮನ ಮಾಡುತ್ತಿದೆ.

ಲಾಲ್‌ಘಡ ಮತ್ತು ಸುತ್ತಮುತ್ತಲಿನ ಜನತೆ ಪಾರಂಪರಿಕವಾಗಿ ಝಾರ್ಖಂಡ್ ಪಕ್ಷ ಮತ್ತು ಝಾರ್ಖಂಡ್ ದಿಶಂ ಪಕ್ಷವನ್ನು ಬೆಂಬಲಿಸುತ್ತಿದ್ದಾರೆ. ಹಾಗಾಗಿ ಸಿಪಿಎಂ ಕಾರ್ಯಕರ್ತರು ಇಲ್ಲಿನ ಜನರ ಮೇಲೆ ಆಕ್ರಮಣ ನಡೆಸುವುದೂ ಸಾಮಾನ್ಯ ಸಂಗತಿಯಾಗಿದೆ. 2006ರ ಪಂಚಾಯತ್ ಚುನಾವಣೆಗಳ ಸಂದರ್ಭದಲ್ಲೂ ಝಾರ್ಖಂಡ್ ಪಕ್ಷ ಮತ್ತು ಸಿಪಿಎಂ ಕಾರ್ಯಕರ್ತರ ನಡುವೆ ನಡೆದ ಸಂಘರ್ಷದಲ್ಲಿ ಐವತ್ತಕ್ಕೂ ಹೆಚ್ಚು ಆದಿವಾಸಿಗಳನ್ನು ಬಂಧಿಸಿ, ಶಿಕ್ಷೆಗೊಳಪಡಿಸಲಾಗಿತ್ತು. ಭ್ರಷ್ಟಾಚಾರ, ಸರ್ಕಾರಿ ಯೋಜನೆಗಳ ನಿರ್ಲಕ್ಷ್ಯ, ಉದ್ಯೋಗ ಖಾತರಿ ಯೋಜನೆಯಲ್ಲಿನ ನ್ಯೂನತೆಗಳು, ಇಂದಿರಾ ಆವಾಸ್ ಯೋಜನೆಯ ಅನುಷ್ಠಾನದಲ್ಲಿನ ಕೊರತೆಗಳು ಹೀಗೆ ಅನೇಕ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಹೋರಾಟ ನಡೆಸುವ ಆದಿವಾಸಿಗಳನ್ನು ಮತ್ತಿತರ ಸಂಘಟನೆಗಳನ್ನು ಎಡರಂಗದ ಸರ್ಕಾರ ದಮನಮಾಡುತ್ತಲೇ ಇದೆ. ಈ ಹೋರಾಟಗಳಲ್ಲಿ ಭಾಗಿಯಾದವರನ್ನು ಮಾವೋವಾದಿಗಳೆಂದು ಬಂಧಿಸುವುದೂ ಇಲ್ಲಿ ಸಾಮಾನ್ಯವಾಗಿದೆ. ಮಹಿಳೆಯರನ್ನೂ ಸೇರಿದಂತೆ ನೂರಾರು ಅಮಾಯಕರನ್ನು ಬಂಧಿಸಲಾಗಿದ್ದು, ಕಾಡುಗಳಲ್ಲಿ ಶಾಲ್ ಎಲೆಗಳನ್ನು ಸಂಗ್ರಹಿಸುವ ಕೂಲಿ ಹೆಂಗಸರನ್ನೂ ಮಾರಕಾಸ್ತ್ರಗಳನ್ನು ಹೊಂದಿರುವ ಆರೋಪದ ಮೇಲೆ ಬಂಧಿಸಲಾಗಿದೆ. ಈ ದಮನಕಾರಿ ನೀತಿಗಳ ವಿರುದ್ಧವೇ ಲಾಲ್‌ಘಡದ ಆದಿವಾಸಿಗಳು ನಿರಂತರವಾಗಿ ಹೋರಾಡುತ್ತಿದ್ದಾರೆ.

ಈ ಹೋರಾಟದ ಸನ್ನಿವೇಶದಲ್ಲೇ 2008ರ ನವಂಬರ್‌ನಲ್ಲಿ ಪಶ್ಚಿಮಬಂಗಾಲದ ಮುಖ್ಯಮಂತ್ರಿ ಬುದ್ಧ ದೇವ ಭಟ್ಟಾಚಾರ್ಯ ಅವರು ಕೇಂದ್ರ ಉಕ್ಕು ಮಂತ್ರಿ ರಾಮ್ ವಿಲಾಸ್ ಪಾಸ್ವಾನ್ ಅವರೊಡನೆ ಜಿಂದಾಲ್ ಉಕ್ಕು ಕಾರ್ಖಾನೆಯನ್ನು ಉದ್ಘಾಟಿಸಿದ್ದರು. ಸಲಬೋನಿ ಬ್ಲಾಕ್‌ನಲ್ಲಿದ್ದ ಈ ವಿಶೇಷ ಆರ್ಥಿಕ ವಲಯದ ವಿರುದ್ಧ ನಡೆದಿದ್ದ ಹೋರಾಟದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳ ವಾಹನವನ್ನು ನೆಲಬಾಂಬ್ ಸ್ಫೋಟ ಮಾಡಿದ ಘಟನೆಯೂ ನಡೆದಿತ್ತು. ಈ ಘಟನೆಯ ನಂತರವೇ ಶಂಕಿತ ಮಾವೋವಾದಿಗಳನ್ನು ಬಂಧಿಸುವ ನೆಪದಲ್ಲಿ ಸರ್ಕಾರ ಅನೇಕರನ್ನು ಬಂಧಿಸಲಾರಂಭಿಸಿತು. ಸಿಪಿಎಂ ಪಕ್ಷಕ್ಕೆ ಅಷ್ಟೇನೂ ಬೆಂಬಲ ಇಲ್ಲದಿದ್ದ ಲಾಲ್‌ಘಡ್ ಪ್ರದೇಶ ಪೊಲೀಸ್ ಕಾರ್ಯಾಚರಣೆಯ ಕೇಂದ್ರವಾಗಿತ್ತು. ಅನೇಕ ಶಾಲಾ ಮಕ್ಕಳನ್ನೂ, ಶಿಕ್ಷಕರನ್ನೂ ಬಂಧಿಸಲಾಯಿತು. ನವಂಬರ್ 5 2008ರಂದು ಈ ಅನಗತ್ಯ ಬಂಧನಗಳನ್ನು ಪ್ರತಿಭಟಿಸಿದ ಮಹಿಳೆಯರ ಮೇಲೆ ಲಾಠಿ ಪ್ರಹಾರ ಮಾಡಲಾಗಿ ಹಲವಾರು ಮಹಿಳೆಯರಿಗೆ ತೀವ್ರ ಗಾಯಗಳಾಗಿತ್ತು. ಈ ಘಟನೆಯಲ್ಲಿ ಓರ್ವ ಮಹಿಳೆ ದೃಷ್ಟಿ ಕಳೆದುಕೊಂಡಿದ್ದೂ ವರದಿಯಾಗಿದೆ. ಪೊಲೀಸರ ಆಕ್ರಮಣ ತೀವ್ರವಾಗುತ್ತಿರುವಂತೆಯೇ ಜನರ ಪ್ರತಿಭಟನೆಯೂ ಗಂಭೀರ ಸ್ವರೂಪ ಪಡೆದುಕೊಂಡಿದ್ದರ ಪರಿಣಾಮವಾಗಿ ಸಾವಿರಾರು ಆದಿವಾಸಿ ಪುರುಷರು ಮತ್ತು ಮಹಿಳೆಯರು ಲಾಲ್‌ಘಡದ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿದ್ದೇ ಅಲ್ಲದೆ ಲಾಲ್‌ಘಡದೊಳಗೆ ಪೊಲೀಸರ ಪ್ರವೇಶವನ್ನೂ ನಿರ್ಬಂಧಿಸಿದರು. ಅಂದಿನಿಂದಲೂ ಲಾಲ್‌ಘಡದ ಆದಿವಾಸಿಗಳ ಸಂಘರ್ಷ ನಿರಂತರವಾಗಿ ನಡೆಯುತ್ತಿದ್ದು ಪೊಲೀಸ್ ದೌರ್ಜನ್ಯದ ವಿರುದ್ಧ ಪ್ರಜಾ ಸಮಿತಿ (ಪಿಎಸ್‌ಜೆಬಿಸಿ) ಎಂಬ ಸಂಘಟನೆಯ ನೇತೃತ್ವದಲ್ಲಿ ಹೋರಾಟ ನಡೆಯುತ್ತಲೇ ಇದೆ.

ಲಾಲ್‌ಘಡದ ಪ್ರಜಾಂದೋಲನ

ಕಳೆದ ಎಂಟು ತಿಂಗಳುಗಳಲ್ಲಿ, ಇತ್ತೀಚಿನ ಬೆಳವಣಿಗೆಗಳವರೆಗೂ, ಪೊಲೀಸರು ಲಾಲ್‌ಘಡ ಪ್ರದೇಶವನ್ನು ಪ್ರವೇಶಿಸಿರಲಿಲ್ಲ. ಪಿಎಸ್‌ಜೆಬಿಸಿ ಸಮಿತಿಯು ಪ್ರತಿ ಗ್ರಾಮಗಳಲ್ಲೂ ತನ್ನದೇ ಆದ ತಂಡಗಳನ್ನು ರಚಿಸಿಕೊಂಡಿತ್ತು. ಈ ಚಳುವಳಿಯ ಪ್ರಭಾವದಿಂದ ಭಾವಾನಂದ್ ಪಂಚಾಯತಿಯ ಶಾಲೆಯಲ್ಲಿದ್ದ ಪೊಲೀಸ್ ಪಡೆಯನ್ನೂ ಸ್ಥಳಾಂತರಿಸಲಾಗಿತ್ತು. ಈ ಹೋರಾಟದಲ್ಲಿ ಭಾಗಿಯಾಗಿದ್ದ ಆದಿವಾಸಿಗಳಲ್ಲಿ ಹೊಸ ಉತ್ಸಾಹ ತುಂಬಿತ್ತು. ಪೊಲೀಸ್ ದೌರ್ಜನ್ಯವನ್ನು ಕೊನೆಗಾಣಿಸುವುದೇ ಅಲ್ಲದೆ ಇನ್ನಿತರ ಬೇಡಿಕೆಗ

ನ್ನು ಶಾಂತಿ ಸರ್ಕಾರಕ್ಕೆ ಸಲ್ಲಿಸಿತ್ತು. ಅವುಗಳಲ್ಲಿ ಪ್ರಮುಖವಾಗಿ ಲಾಲ್‌ಘಡ್ ಪ್ರದೇಶದಿಂದ ಪೊಲೀಸ್ ಪಡೆಗಳನ್ನು ಹಿಂತೆಗೆಯುವುದು, ಆಕ್ರಮಣದಲ್ಲಿ ಗಾಯಗೊಂಡವರಿಗೆ ಪರಿಹಾರ ನೀಡುವುದು ಮತ್ತು ಆದಿವಾಸಿ ಪ್ರದೇಶಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಪ್ರಮುಖವಾಗಿದ್ದವು.

ಆದರೆ ಸಿಪಿಎಂ ಸರ್ಕಾರ ಆದಿವಾಸಿಗಳ ಈ ಪ್ರಜಾತಾಂತ್ರಿಕ ಬೇಡಿಕೆಗಳನ್ನು ಮನ್ನಿಸದೆ ದಮನಕಾರಿ ನೀತಿಯನ್ನು ಅನುಸರಿಸಿದ್ದು ಇಡೀ ಸಂಘರ್ಷಕ್ಕೆ ಕಾರಣವಾಗಿದೆ. ಮಾವೋವಾದಿಗಳಿಂದ ಹತ್ಯೆಗೊಳಗಾದ ಸಿಪಿಎಂ ಸದಸ್ಯರೊಬ್ಬರ ಶವಯಾತ್ರೆಯ ಸಂದರ್ಭದಲ್ಲಿ ಸಿಪಿಎಂ ಕಾರ್ಯಕರ್ತರು ಮತ್ತು ಸಮಿತಿಯ ಸದಸ್ಯರ ನಡುವೆ ನಡೆದ ಮಾತಿನ ಚಕಮಕಿ ಸಂಘರ್ಷಕ್ಕೆ ತಿರುಗಿತ್ತು. ಶವಯಾತ್ರೆಯಲ್ಲಿ ಪೊಲೀಸರು ಭಾಗಿಯಾಗಬಾರದು ಎಂಬ ಪಿಎಸ್‌ಜೆಬಿಸಿ ಸಮಿತಿಯ ಬೇಡಿಕೆ ಇಡೀ ಸಂಘರ್ಷಕ್ಕೆ ನಾಂದಿ ಹಾಡಿತ್ತು. ಈ ಸಂದರ್ಭದಲ್ಲಿ ನಡೆದ ಆಕ್ರಮಣದಲ್ಲಿ ಸಮಿತಿಯ ಮೂವರು ಸದಸ್ಯರು ಪೊಲೀಸ್ ಗುಂಡಿಗೆ ಬಲಿಯಾಗಿದ್ದರು. ಐವರಿಗೆ ಗಾಯಗಳಾಗಿತ್ತು. ಈ ಘಟನೆಯೇ ಪ್ರಸ್ತುತ ಸಂಘರ್ಷ ಪರಾಕಾಷ್ಠೆ ತಲುಪಲು ಮೂಲಕಾರಣವಾಗಿ ಪರಿಣಮಿಸಿತು.

ಪಿಎಸ್‌ಜೆಬಿಸಿ ಸಮಿತಿಯ ನಾಯಕರೊಡನೆ ಸಂಧಾನ ನಡೆಸುವ ಮೂಲಕ ಪರಿಸ್ಥಿತಿಯನ್ನು ಹತೋಟಿಗೆ ತರುವ ಸರ್ಕಾರದ ಯತ್ನ ಸಫಲವಾಗಲಿಲ್ಲ. ಅಭೂತಪೂರ್ವ ಐಕ್ಯತೆಯನ್ನು ಸಾಧಿಸಿದ್ದ ಸಮಿತಿಯ ಬೆಂಬಲಿಗರು ತಮ್ಮ ಬೇಡಿಕೆಗಳನ್ನು ಸಡಿಲಿಸಲು ಒಪ್ಪದಿದ್ದುದೇ ಮಾತುಕತೆಗಳ ವೈಫಲ್ಯಕ್ಕೆ ಕಾರಣವಾಗಿತ್ತು. 2009ರ ಏ. 10ರಂದು ಪೊಲೀಸರು ಸೆಕ್ಷನ್ 144ರ ಅಡಿ ನಿಷೇದಾಜ್ಞೆ ಜಾರಿಗೊಳಿಸಿದ್ದರೂ ಪಿಎಸ್‌ಜೆಬಿಸಿ ಸಮಿತಿಯ ಸಾವಿರಾರು ಸದಸ್ಯರು ಬಂಕುರ ಜಿಲ್ಲೆಯ ಮೂವರು ಸಮಿತಿ ಸದಸ್ಯರನ್ನು ಬಂಧಿಸಿರುವದರ ವಿರುದ್ಧ ಪ್ರತಿಭಟನಾ ರ್‍ಯಾಲಿ ಹಮ್ಮಿಕೊಂಡಿದ್ದರು. ಮಹಿಳೆಯರು, ವಯೋವೃದ್ಧರು, ಮಕ್ಕಳನ್ನು ಒಳಗೊಂಡಿದ್ದ ಆದಿವಾಸಿ ಸಮುದಾಯ ಬಿಲ್ಲು, ಬಾಣ, ಕುಡುಗೋಲು, ತುಕ್ಕುಹಿಡಿದ ಕತ್ತಿಗಳನ್ನು ಹಿಡಿದು ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ತಮ್ಮ ಸಾಂಪ್ರದಾಯಿಕ ಡೋಲುಗಳನ್ನು ಬಾರಿಸುವುದರ ಮೂಲಕ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ಜನಸಮುದಾಯ ಶಸ್ತ್ರಸಜ್ಜಿತ ಪೊಲೀಸ್ ತಡೆಗೋಡೆಯನ್ನ ಬೇಧಿಸಿ ಮುನ್ನಡೆಯಲು ಯತ್ನಿಸಿದ ಜನತೆಯ ಬೇಡಿಕೆ ಬಂಧಿತ ರನ್ನು ಬಿಡುಗಡೆ ಮಾಡುವುದು ಮಾತ್ರವಾಗಿತ್ತು. “ನಮಗೆ ಹಿಂಸೆ ಬೇಡ, ನ್ಯಾಯಬೇಕು” ಎಂಬ ಘೋಷಣೆಗಳು ಮುಗಿಲು ಮುಟ್ಟಿದ್ದವು. ಇದೇ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಪಿಎಸ್‌ಜೆಬಿಸಿ ಸಮಿತಿಯ ವಕ್ತಾರ ಛತ್ರಧರ್ ಮಹತೋ, ಬಂಧಿತರನ್ನು ಬಿಡುಗಡೆ ಮಾಡದಿದ್ದಲ್ಲಿ ಮರುದಿನ ಸಾರೆಂಗ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕುವ ಕಾರ್ಯಕ್ರಮವನ್ನು ಘೋಷಿಸಿದರು. ಮರುದಿನ ಮೂರು ಜನರನ್ನೂ ಬಿಡುಗಡೆ ಮಾಡಲಾಯಿತು.

ಆದರೆ ಆ ನಂತರದ ದಿನಗಳಲ್ಲೂ ಪೊಲೀಸರ ಆಕ್ರಮಣ ನಿಲ್ಲಲಿಲ್ಲ. ಏಪ್ರಿಲ್ 11ರಂದು ಮಧುಪುರ ಗ್ರಾಮದೊಳಗೆ ನುಗ್ಗಿದ ಪೊಲೀಸರನ್ನು ಗ್ರಾಮದ ಮಹಿಳೆಯರೇ ಬಿಲ್ಲು ಬಾಣಗಳನ್ನು ಹೊತ್ತು ತಡೆಗಟ್ಟಿದ್ದರು. ಗ್ರಾಮದಲ್ಲಿ ನುಗ್ಗಲು ಯತ್ನಿಸಿದ ಪೊಲೀಸರನ್ನು ಅಟ್ಟಿಸಿಕೊಂಡು ಹೋದ ಮಹಿಳೆಯರು ಕೂಡಲೇ ಪ್ರತಿಭಟನಾ ಮೆರವಣಿಗೆಯನ್ನೂ ನಡೆಸಿದ್ದರು. ಪ್ರತಿಭಟನೆಗೆ ಹೆದರಿ ಪೊಲೀಸರು ಹಿಮ್ಮೆಟ್ಟಬೇಕಾಯಿತು. ಅಕ್ಕ ಪಕ್ಕದ ಗ್ರಾಮಗಳಿಗೆ ಪೊಲೀಸರು ಬರುವ ಸೂಚನೆ ನೀಡಲು ನಗಾರಿಗಳನ್ನು ಬಳಸಿ ಪ್ರಚಾರ ಮಾಡಲಾಯಿತು. ಈ ಘಟನೆಯ ನಂತರದ ಕೆಲವೇ ಗಂಟೆಗಳೊಳಗೆ ಸಾವಿರಾರು ಆದಿವಾಸಿಗಳು ಮಧುಪುರದಲ್ಲಿ ಜಮಾಯಿಸಿದ್ದರು. ಗ್ರಾಮಗಳ ಇಡೀ ಜನತೆ ಈ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದವು. ಈ ರ್‍ಯಾಲಿಯ ಸಂದರ್ಭದಲ್ಲಿ ಪ್ರತಿಭಟನಾ ನಿರತ ಜನರ ಮೇಲೆ ಸಿಪಿಎಂ ಕಾರ್ಯಕರ್ತರು ಆಕ್ರಮಣ ಮಾಡಿದ ಪರಿಣಾಮ ಆದಿವಾಸಿಗಳು ತಮ್ಮ ಬಿಲ್ಲು ಬಾಣಗಳನ್ನು ಬಳಸಿ ಪ್ರತ್ಯಾಕ್ರಮಣ ಆರಂಭಿಸಿದ್ದರು. ಈ ಪ್ರಕರಣ ಸಂಜೆಯ ವೇಳೆಗೆ ರಾಜಧಾನಿ ಕೊಲ್ಕತ್ತಾ ತಲುಪಿತ್ತು. ಈ ಘಟನೆಗಳು ಲಾಲ್‌ಘಡದ ಆದಿವಾಸಿ ಜನಗಳ ಹೋರಾಟದ ಮನೋಭಾವ ಮತ್ತು ದೃಢ ನಿರ್ಧಾರಕ್ಕೆ ನಿದರ್ಶನವಷ್ಟೆ.

ಲಾಲ್‌ಘಡದ ಈ ಪ್ರಜಾಂದೋಲನವನ್ನು ಒಂದು ಸಮಾಜಮುಖೀ ದೃಷ್ಟಿಕೋನದಿಂದ ನೋಡದೆ ಮಾವೋವಾದಿಗಳ ಪ್ರೇರಿತ ಹೋರಾಟವೆಂದು ಬಿಂಬಿಸಲು ಹೊರಟಿರುವ ಪ.ಬಂಗಾಲದ ಸರ್ಕಾರದ ನೀತಿ ನೈಜ ಸಮಸ್ಯೆಯನ್ನು ಮರೆಮಾಚುವ ಯತ್ನದಂತಿದೆ. ಲಾಲ್‌ಘಡ ಹೋರಾಟದ ಪ್ರಕ್ರಿಯೆಯಲ್ಲಿ ಮಾವೋವಾದಿ ಪಕ್ಷ ಭಾಗಿಯಾಗಿದ್ದು ಸತ್ಯ ಸಂಗತಿಯಾದರೂ, ಆದಿವಾಸಿ ಸಮುದಾಯಗಳ ಪ್ರಜಾಸತ್ತಾತ್ಮಕ ಹೋರಾಟಗಳಿಗೂ, ಮಾವೋವಾದಿಗಳ ಸಶಸ್ತ್ರ ಹೋರಾಟದ ಧೋರಣೆಗೂ ಸಂಬಂಧ ಕಲ್ಪಿಸಲಾಗುವುದಿಲ್ಲ. ಆದರೂ ರಾಜ್ಯ-ಕೇಂದ್ರ ಸರ್ಕಾರಗಳು ಮಾವೋವಾದಿಗಳನ್ನು ಬೇಟೆಯಾಡುವ ನೆಪದಲ್ಲಿ ಆದಿವಾಸಿಗಳ ಮೇಲೆ ಆಕ್ರಮಣ ಮಾಡುತ್ತಿರುವುದು ಇಡೀ ಹೋರಾಟವನ್ನು ತೀಕ್ಷ್ಣಗೊಳಿಸಿದೆ.

ಮೇ ತಿಂಗಳಿನಲ್ಲಿ ನಡೆಸ ಸಂಸದೀಯ ಚುನಾವಣೆಗಳ ಸಂದರ್ಭದಲ್ಲಿ ಆದಿವಾಸಿಗಳು ಚುನಾವಣೆಗಳನ್ನು ಬೆಂಬಲಿಸಿದರು ಪೊಲೀಸರ ಉಪಸ್ಥಿತಿಯನ್ನು ವಿರೋಧಿಸಿದ್ದರು. ತಮ್ಮ ಬೇಡಿಕೆಗಳನ್ನು ಈಡೇರಿಸದ ಹೊರತು, ಚುನಾವಣೆಯ ಸಂದರ್ಭದಲ್ಲಿ ಪೊಲೀಸರಿಗೆ ಲಾಲ್‌ಘಡದಲ್ಲಿ ಪ್ರವೇಶ ನೀಡುವುದಿಲ್ಲ ಎಂಬ ಪಿಎಸ್‌ಜೆಬಿಸಿ ಸಮಿತಿಯ ನಿಲುವು ಸರ್ಕಾರಕ್ಕೆ ತಲೆಬೇನೆಯಾಗಿತ್ತು. ಈ ಹಿನ್ನೆಲೆಯಲ್ಲೇ ಪಿಎಸ್‌ಜೆಬಿಸಿ ಸಮಿತಿಯ ಸದಸ್ಯರೊಡನೆ ಸಂಧಾನಕ್ಕೆ ಮುಂದಾದ ಚುನಾವಣಾ ಆಯೋಗ ಕೇಂದ್ರ ಮೀಸಲು ಪಡೆಗಳನ್ನು ನೇಮಿಸಿ ಚುನಾವಣೆ ನಡೆಸುವ ಆಯೋಗದ ಸಲಹೆಯನ್ನು ಸಮಿತಿಯ ನಾಯಕರು ಒಪ್ಪದೆ ಹೋದಾಗ ಲಾಲ್‌ಘಡದ ಹೊರ ಪ್ರದೇಶದಲ್ಲಿ ಮತಗಟ್ಟೆಗಳನ್ನು ಸ್ಥಾಪಿಸಲು ನಿರ್ಣಯಿಸಲಾಯಿತು. ಭಾರತೀಯ ಪ್ರಜಾತಂತ್ರದಲ್ಲಿ ಚುನಾವಣೆಗಳನ್ನು ನಡೆಸಲಾಗಲೀ, ಯಾವ ರೀತಿ ನಡೆಸಬೇಕೆಂದಾಗಲೀ ನಿರ್ಧರಿಸಲು ಜನಾಭಿಪ್ರಾಯವನ್ನು ಸಂಗ್ರಹಿಸಿದ ಇತಿಹಾಸವೇ ಇಲ್ಲ. ಈ ನಿಟ್ಟಿನಲ್ಲಿ ಲಾಲ್‌ಘಡದ ಜನತೆ ಹೊಸ ಇತಿಹಾಸವನ್ನೇ ನಿರ್ಮಿಸಿದ್ದರು. ಆದರೆ ಚುನಾವಣೆಗಳಲ್ಲಿ ಕೇವಲ ಶೇ 13ರಷ್ಟು ಮತ ಚಲಾವಣೆಯಾಗಿತ್ತು.

ಸರ್ಕಾರದ ಆಕ್ರಮಣಕಾರಿ ನೀತಿ

ಲಾಲ್‌ಘಡದ ಈ ಪ್ರಜಾಂದೋಲನವನ್ನು ಒಂದು ಸಮಾಜಮುಖೀ ದೃಷ್ಟಿಕೋನದಿಂದ ನೋಡದೆ ಮಾವೋವಾದಿಗಳ ಪ್ರೇರಿತ ಹೋರಾಟವೆಂದು ಬಿಂಬಿಸಲು ಹೊರಟಿರುವ ಪಶ್ಚಿಮ ಬಂಗಾಲದ ಸರ್ಕಾರದ ನೀತಿ ನೈಜ ಸಮಸ್ಯೆಯನ್ನು ಮರೆಮಾಚುವ ಯತ್ನದಂತಿದೆ. ಲಾಲ್‌ಘಡ ಹೋರಾಟದ ಪ್ರಕ್ರಿಯೆಯಲ್ಲಿ ಮಾವೋವಾದಿ ಪಕ್ಷ ಭಾಗಿಯಾಗಿದ್ದು ಸತ್ಯ ಸಂಗತಿಯಾದರೂ, ಆದಿವಾಸಿ ಸಮುದಾಯಗಳ ಪ್ರಜಾಸತ್ತಾತ್ಮಕ ಹೋರಾಟಗಳಿಗೂ, ಮಾವೋವಾದಿಗಳ ಸಶಸ್ತ್ರ ಹೋರಾಟದ ಧೋರಣೆಗೂ ಸಂಬಂಧ ಕಲ್ಪಿಸಲಾಗುವುದಿಲ್ಲ. ಆದರೂ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮಾವೋವಾದಿಗಳನ್ನು ಬೇಟೆಯಾಡುವ ನೆಪದಲ್ಲಿ ಆದಿವಾಸಿಗಳ ಮೇಲೆ ಆಕ್ರಮಣ ಮಾಡುತ್ತಿರುವುದು ಇಡೀ ಹೋರಾಟವನ್ನು ತೀಕ್ಷ್ಣಗೊಳಿಸಿದೆ. ಯಾವುದೇ ಸಂಘಟನೆಗಳಾಗಲೀ, ರಾಜಕೀಯ ನಾಗರಿಕ

ನಾಯಕರಾಗಲೀ ಈ ಘರ್ಷಣೆಯ ಪ್ರದೇಶಕ್ಕೆ ಭೇಟಿ ನೀಡಬಾರದೆಂದು ಕೇಂದ್ರ ಗೃಹ ಮಂತ್ರಾಲಯ ಆದೇಶ ನೀಡಿರುವುದು, ಮಾವೋವಾದಿ ಸಂಘಟನೆಯನ್ನು ಭಯೋತ್ಪಾದಕರೆಂದು ನಿಷೇದಿಸಿರುವುದು ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇ ಹೊರತು, ಆದಿವಾಸಿಗಳ ಸಮಸ್ಯೆಗಳಿಗೆ ಪರಿಹಾರವಲ್ಲ.

ಸರ್ಕಾರದ ಆಕ್ರಮಣಕಾರಿ ನೀತಿಗೆ ತತ್ತರಿಸಿ ಹೋಗಿರುವ ಆದಿವಾಸಿಗಳು ಈಗ ತಮ್ಮ ಗ್ರಾಮಗಳನ್ನು ತೊರೆದು ವಲಸೆ ಹೋಗಲಾರಂಭಿಸಿದ್ದಾರೆ. ಪ್ರಭುತ್ವದ ದಮನಕಾರಿ ನೀತಿಗಳನ್ನು ವಿರೋಧಿಸಿ ಹೋರಾಡುತ್ತಿರುವ ಆದಿವಾಸಿಗಳಿಗೆ ನ್ಯಾಯ ಒದಗಿಸುವುದು ಎಡರಂಗ ಸರ್ಕಾರದ ನೈತಿಕ ಹೊಣೆಗಾರಿಕೆಯಾಗಿದೆ. ಆದರೂ ಸಿಪಿಎಂ ನೇತೃತ್ವದ ಸರ್ಕಾರ ಈ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಳ್ಳದಿರುವುದು ವಿಷಾದನೀಯ. ಪ್ರತಿಭಟನೆ ನಡೆಸುವವರೆಲ್ಲರನ್ನೂ ಮಾವೋವಾದಿಗಳೆಂದು ಪರಿಗಣಿಸುವುದು ಪ್ರಜಾತಂತ್ರಕ್ಕೆ ಅಪಚಾರವೆಸಗಿದಂತಾಗುತ್ತದೆ. ಲಾಲ್‌ಘಡದ ಆದಿವಾಸಿಗಳು ತಮ್ಮ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ, ಮೂಲಭೂತ ಸೌಕರ್ಯಗಳಿಗಾಗಿ ಹೋರಾಡುತ್ತಿದ್ದು, ಮಾವೋವಾದಿಗಳ ಸಶಸ್ತ್ರ ಹೋರಾಟದಲ್ಲಾಗಲೀ, ಹಿಂಸಾ ಕೃತ್ಯಗಳಲ್ಲಾಗಲೀ ಭಾಗಿಯಾಗುತ್ತಿಲ್ಲ. ಸಂಘರ್ಷದಲ್ಲಿ ತೊಡಗಿರುವ ಆದಿವಾಸಿಗಳಲ್ಲಿ ತೃಣಮೂಲ ಕಾಂಗ್ರೆಸ್ ಸೇರಿದಂತೆ ಎಲ್ಲ ಪಕ್ಷಗಳಿಗೆ ಸೇರಿದವರೂ ಇದ್ದಾರೆ. ಈ ಸತ್ಯಾಂಶವನ್ನು ಮರೆಮಾಚುವ ರಾಜ್ಯ-ಕೇಂದ್ರ ಸರ್ಕಾರಗಳು ಇಡೀ ಪ್ರದೇಶದಲ್ಲಿ ಭಯದವಾತಾವರಣ ಸೃಷ್ಟಿಸುವ ಮೂಲಕ ಜನಾಂದೋಲನವನ್ನು ಹತ್ತಿಕ್ಕಲು ಯತ್ನಿಸುತ್ತಿವೆ.

ಭಾರತೀಯ ಇತಿಹಾಸದಲ್ಲಿ ಆದಿವಾಸಿಗಳ ಮತ್ತು ಆಳ್ವಿಕರ ಸಂಘರ್ಷಗಳಿಗೆ ತನ್ನದೇ ಆದ ಪರಂಪರೆಯೇ ಇದೆ. ವಸಾಹತುಶಾಹಿಯ ಕಾಲದಿಂದಲೂ ಈ ಹೋರಾಟಗಳು ನಡೆಯುತ್ತಲೇ ಇವೆ. ಬ್ರಿಟೀಷರ ವಿರುದ್ಧ ಹೋರಾಡಿದ ಆದಿವಾಸಿ ನಾಯಕರನ್ನು ಮಹಾನ್ ಸ್ವತಂತ್ರ ಹೋರಾಟಗಾರರೆಂದು ಶ್ಲಾಘಿಸುವ ಆಳುವ ವರ್ಗಗಳು, ಪ್ರಸ್ತುತ ಪರಿಸ್ಥಿತಿಯಲ್ಲಿ ತಮ್ಮ ಹಕ್ಕುಗಳಿಗಾಗಿ, ಅರಣ್ಯದ ರಕ್ಷಣೆಗಾಗಿ, ನೈಸರ್ಗಿಕ ಸಂಪತ್ತಿನ ಸಂರಕ್ಷಣೆಗಾಗಿ, ತಮ್ಮ ಅಸ್ಮಿತೆಗಾಗಿ ಹೋರಾಡುವ ಆದಿವಾಸಿಗಳನ್ನು ಕ್ರಿಮಿನಲ್‌ಗಳಂತೆ ಪರಿಗಣಿಸುತ್ತದೆ. ಸಮಕಾಲೀನ ಸಂದರ್ಭದಲ್ಲಿ ಭಾರತದ ವ್ಯವಸ್ಥೆಯನ್ನು ಕಾಡುತ್ತಿರುವ ಅಸಮತೋಲನ ಅಭಿವೃದ್ಧಿ, ಆದಿವಾಸಿಗಳಲ್ಲಿನ ಪರಕೀಯತೆಯ ಮನೋಭಾವ, ಅಭಿವೃದ್ಧಿ-ಪ್ರಗತಿಯ ಹೆಸರಿನಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಅರಣ್ಯ ಸಂಪತ್ತಿನ ಲೂಟಿ, ಆದಿವಾಸಿಗಳ ಮೂಲೋಚ್ಚಾಟನೆ ಇತ್ಯಾದಿ ಸಮಸ್ಯೆಗಳ ವಿರುದ್ಧ ಹೋರಾಡುವ ಆದಿವಾಸಿ ಸಮುದಾಯಗಳ ವಿರುದ್ಧ ಸರ್ಕಾರಗಳು ದಮನಕಾರಿ ನೀತಿಯನ್ನು ಅನುಸರಿಸುತ್ತಿವೆ.

2009ರ ಚುನಾವಣೆಗಳಲ್ಲಿ ಅಚ್ಚರಿಯ ಯಶಸ್ಸು ಕಂಡಿರುವ ಯುಪಿಎ ಸರ್ಕಾರಕ್ಕೆ ತನ್ನ ಹೊಸ ಆರ್ಥಿಕ ನೀತಿ ಮತ್ತು ನವ ಉದಾರವಾದವನ್ನು ಅನುಷ್ಠಾನಕ್ಕೆ ತರಲು ಬಲಿಷ್ಠ ಪ್ರಭುತ್ವದ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಹೊಸ ಕರಾಳಶಾಸನಗಳನ್ನು ಜಾರಿಗೊಳಿಸುತ್ತಿರುವುದು ಒಂದು ಹೆಜ್ಜೆಯಾದರೆ ,ಮತ್ತೊಂದು ಹೆಜ್ಜೆಯನ್ನು ಲಾಲ್‌ಘಡದ ಘಟನೆಗಳಲ್ಲಿ ಕಾಣಬಹುದಾಗಿದೆ. ಈ ತಂತ್ರದಲ್ಲಿ ಪಶ್ಚಿಮಬಂಗಾಲದ ಎಡರಂಗ ಸರ್ಕಾರವನ್ನು ವಿಲನ್ ಮಾಡುವ ಯತ್ನಗಳನ್ನೂ ಮಮತಾ ಬ್ಯಾನರ್ಜಿ ಮಾಡುತ್ತಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಚುನಾವಣೆಗೆ ಮುನ್ನ ಲಾಲ್‌ಘಡದ ಹೋರಾಟಕ್ಕೆ ಬೆಂಬಲ ಸೂಚಿಸಿದ್ದೇ ಅಲ್ಲದೆ ಪಿಎಸ್‌ಜೆಬಿಸಿ ನಾಯಕ ಛತ್ರಪಾಲ್ ಮಹತೋ ಅವರನ್ನು ವೈಭವೀಕರಿಸಿದ್ದ ಮಮತಾಜಿ ಚುನಾವಣಾ ನಂತರದಲ್ಲಿ ಆತನನ್ನು ಮಾವೋವಾದಿ ಎಂದು ಬಿಂಬಿಸಲು ಯತ್ನಿಸುತ್ತಿರುವುದು ಠಕ್ಕುತನದ ಪರಮಾವಧಿಯಾಗಿದೆ. "ಲಾಲ್‌ಘಡದ ಜನತೆ ಮಾವೋವಾದಿಗಳಾದರೆ ನಾನೂ ಮಾವೋವಾದಿಯೇ" ಎಂದು ಹೇಳಿದ್ದ ಮಮತಾ ಈಗ ಮಾವೋವಾದಿ ಸಂಪರ್ಕವಿದ್ದ ಮಹತೋ ಅವರನ್ನು ತಮ್ಮ ಪಕ್ಷದಿಂದ ಮೊದಲೇ ಉಚ್ಚಾಟಿಸಿರುವುದಾಗಿ ಹೇಳುತ್ತಿದ್ದಾರೆ.

ಎಡರಂಗ ಸರ್ಕಾರವೂ ತನ್ನ ದ್ವಂದ್ವ ನೀತಿಗಳಿಂದ ಪೇಚಿಗೀಡಾಗಿದೆ. ಒಂದೆಡೆ ಪ್ರಕಾಶ್ ಕಾರಟ್ ಅವರು ಮಾವೋವಾದಿಗಳನ್ನು ರಾಜಕೀಯವಾಗಿ ಜನತೆಯಿಂದ ದೂರ ಮಾಡುವ ನಿಟ್ಟಿನಲ್ಲಿ ಸರ್ಕಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಹೇಳುತ್ತಿರುವಂತೆಯೇ, ಮತ್ತೊಂದೆಡೆ ಮುಖ್ಯಮಂತ್ರಿ ಬುದ್ಧದೇವ ಕೇಂದ್ರ ಮೀಸಲು ಪಡೆಗಳಿಗಾಗಿ ಆಗ್ರಹಿಸುತ್ತಿರುತ್ತಾರೆ. ಲಾಲ್‌ಘಡದಲ್ಲಾಗಲೀ ಇತರ ಯಾವುದೇ ಸಾಮಾಜಿಕ ಕ್ಷೋಭೆ ಇರುವ ಪ್ರದೇಶದಲ್ಲಾಗಲೀ, ಜನರ ಮೂಲಭೂತ ಸಮಸ್ಯೆಗಳಿಗೆ ಆಳ್ವಿಕರು ಸೂಕ್ತ ಸಮಯದಲ್ಲಿ ಸ್ಪಂದಿಸಿ, ಪರಿಹಾರ ಒದಗಿಸದಿದ್ದಲ್ಲಿ, ಅಂತಹ ಪ್ರದೇಶಗಳು ಹೋರಾಟಗಳ ಕೇಂದ್ರ ಬಿಂದುವಾಗುತ್ತವೆ ಎಂಬ ಸಂಗತಿ ಎಡಪಕ್ಷಗಳಿಗೇನೂ ತಿಳಿಯದಿಲ್ಲ. ಇಂತಹ ಪರಿಸ್ಥಿತಿಯಲ್ಲೇ ಮಾವೋವಾದಿಗಳು ತಮ್ಮ ಹಿಂಸಾತ್ಮಕ ಧೋರಣೆಯನ್ನು ಪ್ರತಿಪಾದಿಸುವುದೂ ಅನೇಕ ಸಂದರ್ಭಗಳಲ್ಲಿ ವ್ಯಕ್ತವಾಗಿದೆ.

ಎಡರಂಗ ಸರ್ಕಾರವೂ ತನ್ನ ದ್ವಂದ್ವ ನೀತಿಗಳಿಂದ ಪೇಚಿಗೀಡಾಗಿದೆ. ಒಂದೆಡೆ ಪ್ರಕಾಶ್ ಕಾರಟ್ ಅವರು ಮಾವೋವಾದಿಗಳನ್ನು ರಾಜಕೀಯವಾಗಿ ಜನತೆಯಿಂದ ದೂರ ಮಾಡುವ ನಿಟ್ಟಿನಲ್ಲಿ ಸರ್ಕಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಹೇಳುತ್ತಿರುವಂತೆಯೇ, ಮತ್ತೊಂದೆಡೆ ಮುಖ್ಯಮಂತ್ರಿ ಬುದ್ಧದೇವ ಕೇಂದ್ರ ಮೀಸಲು ಪಡೆಗಳಿಗಾಗಿ ಆಗ್ರಹಿಸುತ್ತಿರುತ್ತಾರೆ. ಲಾಲ್‌ಘಡದಲ್ಲಾಗಲೀ ಇತರ ಯಾವುದೇ ಸಾಮಾಜಿಕ ಕ್ಷೋಭೆ ಇರುವ ಪ್ರದೇಶದಲ್ಲಾಗಲೀ, ಜನರ ಮೂಲಭೂತ ಸಮಸ್ಯೆಗಳಿಗೆ ಆಳ್ವಿಕರು ಸೂಕ್ತ ಸಮಯದಲ್ಲಿ ಸ್ಪಂದಿಸಿ, ಪರಿಹಾರ ಒದಗಿಸದಿದ್ದಲ್ಲಿ, ಅಂತಹ ಪ್ರದೇಶಗಳು ಹೋರಾಟಗಳ ಕೇಂದ್ರ ಬಿಂದುವಾಗುತ್ತವೆ ಎಂಬ ಸಂಗತಿ ಎಡಪಕ್ಷಗಳಿಗೇನೂ ತಿಳಿಯದಿಲ್ಲ. ಇಂತಹ ಪರಿಸ್ಥಿತಿಯಲ್ಲೇ ಮಾವೋವಾದಿಗಳು ತಮ್ಮ ಹಿಂಸಾತ್ಮಕ ಧೋರಣೆಯನ್ನು ಪ್ರತಿಪಾದಿಸುವುದೂ ಅನೇಕ ಸಂದರ್ಭಗಳಲ್ಲಿ ವ್ಯಕ್ತವಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ರಾಜ್ಯ ಸರ್ಕಾರಗಳು ಆದಿವಾಸಿಗಳ ಮನಗೆಲ್ಲಲು ಯಾವ ರೀತಿಯ ಕ್ರಮ ಕೈಗೊಂಡಿದ್ದಾರೆ ಎನ್ನುವುದೇ ಇಲ್ಲಿ ಮೂರ್ತ ಪ್ರಶ್ನೆಯಾಗುತ್ತದೆ. ಮಾವೋವಾದಿ ಪಕ್ಷದ ಮೇಲೆ ನಿಷೇದ ಹೇರುವುದರಿಂದ ಆ ಪಕ್ಷ ಪುನಃ ಕಾಡು ಸೇರಬಹುದಷ್ಟೆ ಆದರೆ ಆದಿವಾಸಿಗಳ ಸಮಸ್ಯೆಗಳು ಬಗೆಹರಿಯುವುದೇ ?

ಮಾವೋವಾದಿ ರಾಜಕೀಯ

ಮತ್ತೊಂದೆಡೆ ಮಾವೋವಾದಿ ಪಕ್ಷದ ನೀತಿಗಳೂ ಪ್ರಶ್ನಾರ್ಹವಾಗಿವೆ. ಯಾವುದೇ ಜನಪರ ಪ್ರಜಾಸತ್ತಾತ್ಮಕ ಹೋರಾಟಗಳಲ್ಲಿ ಭಾಗವಹಿಸದೆ, ಗಹನವಾದ ಸಾಮಾಜಿಕ-ಸಾಮುದಾಯಿಕ ಸಮಸ್ಯೆಗಳಿರುವ ಕ್ಷೇತ್ರಗಳಲ್ಲಿ ತಮ್ಮ ನೆಲೆ ಹುಡುಕಿಕೊಳ್ಳುವ ಮಾವೋವಾದಿ ಪಕ್ಷ ಪ್ರಭುತ್ವದ ಕೈ ಮೇಲಾಳುಗಳೆಲ್ಲಾ ಕಾಡು ಸೇರಿಕೊಂಡು ಭೂಗತವಾಗುತ್ತದೆ. ಆದರೆ ಈ ಜನಪರ ಹೋರಾಟಗಳಲ್ಲಿ ಪ್ರಜಾತಾಂತ್ರಿಕ ರೀತಿಯಲ್ಲಿ ಹೋರಾಡುವ ಸಾಮಾನ್ಯ, ಅಮಾಯಕ ಜನತೆ ಪೋಲೀಸರ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ಪಕ್ಷಗಳ ತೀವ್ರವಾದಿ ಹೋರಾಟಗಳ ಧೋರಣೆ ಮತ್ತು ಕ್ರಿಯಾಶೀಲತೆಯಿಂದ ದೂರ ಸರಿದಿರುವ ಮಾವೋವಾದಿಗಳು ಪ್ರಸಕ್ತ ಸಾಮಾಜಿಕ ಸ್ಥಿತ್ಯಂತರಗಳೊಡನೆ ಹೊಂದಿಕೊಳ್ಳುವಲ್ಲಿ ವಿಫಲರಾಗಿರುವುದು ಸ್ಪಷ್ಟವಾಗಿದೆ. ಪ್ರಜಾಸಮೂಹಗಳನ್ನು ಒಳಗೊಳ್ಳುವ ಹೋರಾಟಗಳನ್ನು ರೂಪಿಸದೆ, ಪಕ್ಷಗಳ ಅಭಿಪ್ರಾಯ ಸ್ವಾತಂತ್ರ್ಯವನ್ನು ಮನ್ನಿಸದೆ, ಒಂದು ಸಂಘಟನಾತ್ಮಕ ನಿರ್ಣಯಗಳನ್ನು ಬಂದೂಕಿನ ನಳಿಗೆಯ ಮೂಲಕವೇ ಪ್ರಸ್ತುತ ಪಡಿಸಿ ಕ್ರಾಂತಿ ಸಾಧಿಸಲು ಯತ್ನಿಸುವ ಮಾವೋವಾದಿಗಳ ಧೋರಣೆ ಅತ್ತ ಮಾವೋವಾದವೂ ಅಲ್ಲದೆ ಇತ್ತ ನಕ್ಸಲ್‌ವಾದವೂ ಅಲ್ಲದ ಪ್ರಕಟಗೊಳ್ಳುತ್ತಿದೆ. ಮಿಲಿಟರಿ ಕಾರ್ಯಾಚರಣೆಯ ಮೂಲಕವೇ, ಹಿಂಸಾತ್ಮಕ ಚಳುವಳಿಯ ಮೂಲಕವೇ ಕ್ರಾಂತಿ ನಡೆಸುವ ಭ್ರಮಾಲೋಕದಲ್ಲಿರುವ ಮಾವೋವಾದಿಗಳಿಗೆ ಜನಸಮುದಾಯಗಳ ಮನದಾಳದಲ್ಲಿರುವ ಪ್ರಜಾಸತ್ತಾತ್ಮಕ ಭಾವನೆಗಳು ಅರ್ಥವೇ ಆಗದಿರುವುದು ವಿಷಾದನೀಯ.

ಲಾಲ್‌ಘಡದಲ್ಲಿ ನಡೆದಿರುವ ಹಲವಾರು ಪ್ರಕರಣಗಳು ಮಾವೋವಾದಿಗಳ ಹಿಂಸಾತ್ಮಕ,ಅಸಹನೆಯ ಧೋರಣೆಯನ್ನು ಪ್ರದರ್ಶಿಸುತ್ತದೆ. ಜೂನ್ 17ರಂದು ಮೂವರು ಸಿಪಿಎಂ ಸದಸ್ಯರನ್ನು ಹತ್ಯೆಮಾಡಿದ ಮಾವೋ ವಾದಿಗಳು ತಮ್ಮ ಹೋರಾಟವನ್ನು ವಿರೋಧಿಸುವವರೆಲ್ಲರನ್ನೂ ಮುಗಿಸುವ ನೀತಿಯನ್ನು ಅನುಸರಿಸಿರುವುದು ಲಾಲ್‌ಘಡದಲ್ಲಿ ಸ್ಪಷ್ಟವಾಗಿದೆ. 2002ರಿಂದೀಚೆಗೆ ಮೇದಿನಿ ಪುರದಲ್ಲಿ ನೂರಕ್ಕೂಹೆಚ್ಚು ಜನರನ್ನು ಮಾವೋವಾದಿಗಳು ಕೊಂದಿರುವ ವರದಿಯಾಗಿದೆ. ಈ ವರದಿಗಳಲ್ಲಿ ಉತ್ಪ್ರೇಕ್ಷೆ ಇದ್ದಿರಬಹುದಾದರೂ, ಸಂಪೂರ್ಣವಾಗಿ ಅಲ್ಲಗಳೆಯುವಂತಿಲ್ಲ. ಇಲ್ಲಿನ ಪ್ರಕ್ಷುಬ್ಧವಾತಾವರಣದಲ್ಲಿ ಜನಸಾಮಾನ್ಯರು ಒಂದೆಡೆ ಪೊಲೀಸರ ದೌರ್ಜನ್ಯ ಎದುರಿಸಿದರೆ, ಮತ್ತೊಂದೆಡೆ ಮಾವೋವಾದಿಗಳ ಆಕ್ರಮಣ ಎದುರಿಸಬೇಕಾಗುತ್ತದೆ. ಮಾವೋವಾದಿಗಳಿಂದ ಹತರಾಗುವವರಲ್ಲಿ ಶ್ರಮಜೀವಿಗಳೇ ಹೆಚ್ಚಾಗಿರುವುದು ಮಾರ್ಕ್ಸ್‌ವಾದದ ವಿಡಂಬನೆಯಲ್ಲವೇ? ಈಕಾಳಗದಲ್ಲಿ ಅವರ ಸಮಸ್ಯೆಗಳು ನಗಣ್ಯವಾಗಿ ಇಡೀ ಸನ್ನಿವೇಶ ಗೊಂದಲಮಯವಾಗುತ್ತದೆ. ಲಾಲ್‌ಘಡದಲ್ಲೂ

(22ನೇ ಪುಟಕ್ಕೆ)

'ಲಾಲ್‌ಗಢವನ್ನು ಮಾವೋವಾದಿಗಳು ವಶಪಡಿಸಿಕೊಳ್ಳಲಿಲ್ಲ. ಸರ್ಕಾರವೇ ಅಲ್ಲಿ ಜನರ ಕೈಜಾರಿ ಹೋಯಿತು' ಎನ್ನುತ್ತಾರೆ ಭಯೋತ್ಪಾದನಾ ಪ್ರತಿ ಕಾರ್ಯಾಚರಣೆಯ ವಿಶ್ಲೇಷಕ ಅಜಯ್ ಸಾಹ್ನಿ. ಇಂತಹ ಪರಿಸ್ಥಿತಿಗಾಗಿ ಮಾವೋವಾದಿಗಳು ಬಹು ಕಾಲದಿಂದಲೂ ಸಿದ್ಧತೆ ನಡೆಸಿದ್ದರು. ೨೦೦೫ರಲ್ಲೇ, ಸಿಪಿಎಂ ನಾಯಕರಾದ ರಘುನಾಥ ಮುರ್ಮು, ಹಾಗೂ ಮಹೇಂದ್ರ ಮಹತೋರ ಹತ್ಯೆಯ ನಂತರದಲ್ಲೇ, ಪ್ರತಿಷ್ಠಿತ ದಕ್ಷಿಣ ಏಷ್ಯಾ ಗುಪ್ತಚರ ಸಮೀಕ್ಷೆ 'ನಕ್ಸಲ್‌ಬಾರಿ ಪುನರುತ್ಥಾನ'ದ ೧೯೬೭ ರಲ್ಲಿ ಡಾರ್ಜಿಲಿಂಗ್ ಜಿಲ್ಲೆಯ ಕುಗ್ರಾಮದಲ್ಲಿ ಆರಂಭವಾಗಿ ನೂರಾರು ಜನರ ಭೀಕರ ಕೊಲೆಗಳಿಗೆ ಕಾರಣವಾದ ೬ ವರ್ಷಗಳ ಮಾವೋವಾದಿ ಕಾರ್ಯಾಚರಣೆಯ ಸೂಚನೆ ನೀಡಿತ್ತು.

ನಾಲ್ಕು ವರ್ಷಗಳ ಹಿಂದೆ, ಪಶ್ಚಿಮ ಬಂಗಾಲದಲ್ಲಿ ಕೂಡ ಜನ ಅಷ್ಟಾಗಿ ಗಮನಸಿದೇ ಹೋದ ಪತ್ರಿಕಾ ಸಂದರ್ಶನವೊಂದರಲ್ಲಿ 'ಕಾಮ್ರೇಡ್ ದೃಢ', ಮೇದಿನಿಪುರದಿಂದ ಮಾಲ್ಡಾದವರಗೆ ಹಬ್ಬಲಿರುವ ಗೆರಿಲ್ಲಾ ಕಾರ್ಯಾಚರಣೆಯ ಯೋಜನೆಗಳನ್ನು ವಿವರಿಸಿದ್ದರು. ಆದರೆ, ಇದರಲ್ಲಿ ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ(ಮಾವೋವಾದಿ)ದ ಈ ಸದಸ್ಯ ತನ್ನ ಇಂಗ್ಲಿಷ್ ಮಾತನಾಡುವ ಪಕ್ಕಾ ಬೂರ್ಜ್ವಾ ಓದುಗರಿಗೆ, 'ಕಲ್ಕತ್ತಾದಲ್ಲಿ ಹಿಂಸೆಗಿಳಿಯುವ ಯೋಜನೆ ನಮಗಿಲ್ಲ' ಎಂದೂ ಆಶ್ವಾಸನೆ ನೀಡಿದ್ದರು. ಅದಕ್ಕೆ ನೀಡಿದ್ದ ಕಾರಣ: 'ನಾವು ಅಲ್ಲಿ ನಮ್ಮ ನೆಲೆಗಳನ್ನು ಸ್ಥಾಪಿಸಿಕೊಂಡಾಗ, ಜನ ನಮಗೆ ವಿಧೇಯರಾಗಿರುವುದು ಅನಿವಾರ್ಯವಾಗಿರುತ್ತದೆ'.

ದುರಾಡಳಿತ, ಹಿಂದುಳಿದಿರುವಿಕೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆ ಇತ್ಯಾದಿಗಳ ವಿರುದ್ಧದ ಸಹಜ ಬಂಡಾಯವೆಂದು ಇಂದು ಮಾಧ್ಯಮ ಮಾರುಕಟ್ಟೆಯಲ್ಲಿ ಮಾರಲಾಗುತ್ತಿರುವ ಲಾಲ್‌ಗಢದ ಇನ್ನೂ ಮುಗಿಯದ ಹಿಂಸಾಚಾರ, ವಾಸ್ತವವಾಗಿ ಭಾರತದ ಮಾವೋವಾದಿಗಳು ಜನರಿಂದ ವಿಧೇಯತೆಯನ್ನು ಅಥವಾ ತಮ್ಮ ಆಡಳಿತ ಶೈಲಿಗೆ ಒಪ್ಪಿಗೆಯನ್ನು ಹೇಗೆ ಪಡೆದುಕೊಳ್ಳ ಬಯಸುತ್ತಾರೆ ಎಂಬುದರ ಒಂದು ವಿವರವಾದ ಒಳನೋಟವನ್ನು ನೀಡುತ್ತದೆ. ಲಾಲ್‌ಗಢದ ಮುಖ್ಯ ನಾಯಕರು–ಕಲ್ಯಂಕೋವ್ ಬಂದೂಕು ಹಿಡಿದ ಆಂಧ್ರದ ಓರ್ವ ಸವರ್ಣೀಯ ಹಿಂದೂ ಮತ್ತು ತೃಣಮೂಲ ಕಾಂಗ್ರೆಸ್ಸಿನ ಬೆಂಬಲ ಪಡೆದ ಒಬ್ಬ ಕಾಮಗಾರಿ ಕಂಟ್ರಾಕ್ಟರ್–ಭಯ ಮತ್ತು ಅಧಿಕಾರದ ನಡುವಣ ಸಜೀವ ಸಂಬಂಧ ಎಂತಹುದು ಎಂಬುದನ್ನು ಇಲ್ಲಿ ಸಾಕ್ಷೀಕರಿಸಿದ್ದಾರೆ.

ಬಹುಶಃ ಮುಂದಿನ ಘಟನೆಗಳ ಸಾಂಕೇತಿಕ ಸೂಚನೆಯೆಂಬಂತೆ, ಲಾಲ್‌ಘಡದ ಬಿಕ್ಕಟ್ಟು ಭೀಕರ ಕೊಲೆಯ–ಅದು ವಿಫಲವಾಯಿತು. ನರಾ-ಹಿಂಸಾಚಾರದ ಸನ್ನಾಹದೊಂದಿಗೇ ಆರಂಭವಾಯಿತು. ಕಳೆದ ವರ್ಷದ ನವೆಂಬರ್ 2ರಂದು ಸಲ್ಬೋನಿ ಬಳಿಯ ಉದ್ದೇಶಿತ ಉಕ್ಕು ಕಾರ್ಖಾನೆಯ ಸ್ಥಳದಿಂದ ಪ.ಬಂಗಾಳದ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಜಿ [illegible] ದಾಟಿ ಹೋದ ರಸ್ತೆಯ [illegible] ಪ್ರಮಾಣದ ಸುಧಾರಿತ ಸ್ಫೋಟಕವೊಂದು ಸಿಡಿಯಿತು. ಸಲ್ಬೋನಿನ ಆಸುಪಾಸಿನ ಹೊಲಗಳಲ್ಲಿನ ಇಲಿ ಹೆಗ್ಗಣಗಳು, ಸ್ಫೋಟಕಕ್ಕೆ ಸಂಪರ್ಕ ಕಲಿಸಿದ ತಂತಿಯನ್ನು ಅಲ್ಲಲ್ಲಿ ಕಡಿದು ಹಾಕಿಲ್ಲದಿದ್ದರೆ, ಭಟ್ಟಾಚಾರ್ಜಿ ಅಂದೇ ಸಾವಿನ ಮನೆ ಸೇರಿರುತ್ತಿದ್ದರು.

ಈ ಬಾಂಬ್ ಸ್ಫೋಟದ ಪ್ರಕರಣಕ್ಕಿಂತ ತಿಂಗಳುಗಳ ಮುಂಚಿನಿಂದಲೇ, 35 ಕೋಟಿ ರೂಪಾಯಿಗಳ ವೆಚ್ಚದ JSW–ಬಂಗಾಳ ಉಕ್ಕು ಕಾರ್ಖಾನೆ ಸ್ಥಾಪನೆಯ ವಿರುದ್ಧ ಸ್ಥಳೀಯ ಪ್ರತಿಭಟನೆಗಳು ನಡೆದಿದ್ದವು. ಈ ಕಾರ್ಖಾನೆಯ ಸ್ಥಾಪನೆ ಸ್ಥಳೀಯ ನಿವಾಸಿಗಳ ದೊಡ್ಡ ಪ್ರಮಾಣದ ಸ್ಥಳಾಂತರಕ್ಕೇನೂ ಕಾರಣವಾಗಿರಲಿಲ್ಲ. ಕಾರ್ಖಾನೆ ಸ್ಥಾಪಿಸಲು ಬೇಕಿದ್ದ 5000 ಎಕರೆ ಭೂಮಿಯಲ್ಲಿ 4500 ಎಕರೆಗಳು ಸರ್ಕಾರದ ಒಡೆತನಕ್ಕೆ ಸೇರಿದ್ದೇ ಆಗಿತ್ತು. ಮಿಕ್ಕ 500 ಎಕರೆಗಳನ್ನು JSW–ಬಂಗಾಳ ಉಕ್ಕು ಕಂಪನಿಯು, ತುಲನಾತ್ಮಕವಾಗಿ ಹೆಚ್ಚಿನದಂದೇ ಹೇಳಬಹುದಾದ ದರ ನೀಡಿ ಖರೀದಿಸಿತ್ತು. ಆದರೆ ಮಾವೋವಾದಿಗಳ ನೇತೃತ್ವದ ಗುಂಪುಗಳು ಕಾರ್ಖಾನೆಗೆ ಕೊಡಲಾಗುತ್ತಿರುವ ಅರಣ್ಯಭೂಮಿ ಆ ಪ್ರದೇಶದ ಆದಿವಾಸಿಗಳಿಗೆ ಸೇರಿದ್ದೇ ಹೊರತು ಸರ್ಕಾರದ ಒಡೆತನಕ್ಕೆ ಸೇರಿದ್ದಲ್ಲ ಎಂದು ಪ್ರತಿಪಾದಿಸಿದವು.

ನವೆಂಬರ್ 2ರ ಬಾಂಬ್‌ಸ್ಫೋಟದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರು–ಇಂತಹ ದೊಡ್ಡ ಪ್ರಮಾಣದ ಭಯೋತ್ಪಾದಕ ಘಟನೆಯ ನಂತರ ಸಾಮಾನ್ಯವಾಗಿ ನಡೆಸಲಾಗುವ ಕಾರ್ಯಾಚರಣೆಯ ತೀವ್ರತೆಗೆ ಏನೇನೂ ಸಾಲದು ಎನ್ನಿಸುವಂತಹ–ಲಾಲ್‌ಗಢ ಪ್ರದೇಶದ ಒಂದಷ್ಟು ಜನರನ್ನು ವಿಚಾರಣೆಗಾಗಿ ಬಂಧಿಸುವ ಕ್ರಮ ಕೈಗೊಂಡರು. ಬಂಧಿತರಲ್ಲಿ ಬಹಳಷ್ಟು ಜನ ಬಹುಶಃ, ಭಯೋತ್ಪಾದಕರೊಂದಿಗೆ ಯಾವ ಸಂಬಂಧವನ್ನೂ ಹೊಂದಿರಲಿಲ್ಲ. ಹಾಗಾಗಿಯೇ, ನವೆಂಬರ್ 3 ರಂದು ಬಂಧಿಸಲಾದ ಕ್ಷಮಾನಂದ ಮಹತೋ ಎಂಬ ಶಾಲಾ ಉಪಾಧ್ಯಾಯರನ್ನೂ ಮತ್ತು ಎಬೆನ್‌ಮರು, ಗೌತಮ್ ಪಾತ್ರ–ಬುದ್ಧದೇವ ಪಾತ್ರ ಎಂಬುವವರನ್ನು ಮಾರನೇ ದಿನವೇ ಬಿಡುಗಡೆ ಮಾಡಿದರು. ಆದರೂ, ಕೆಲವು ಸ್ಥಳೀಯ ನಿವಾಸಿಗಳು ಈ ಬಂಧನಗಳಿಂದ ಕುಪಿತಗೊಂಡರು.

ನವೆಂಬರ್ 5ರಂದು ಪರಿಸ್ಥಿತಿ ವಿಕೋಪಕ್ಕೆ ಮುಟ್ಟಿತು. ಆ ದಿನ ಬೆಳಿಗ್ಗೆ ಮುಖ್ಯಮಂತ್ರಿಯ ಹತ್ಯೆಯನ್ನು ಯೋಜಿಸಿದ್ದನೆಂದು ಹೇಳಲಾದ ಮಾವೋವಾದಿ ಸಸಿಧರ ಮಹತೋನನ್ನು ಹುಡುಕುತ್ತಾ ಪೋಲೀಸರು ಛೋಟೋ ಪೆಲಿಯಾ ಎಂಬ ಹಳ್ಳಿಯ ಮೇಲೆ ದಾಳಿ ಮಾಡಿದರು. ಅವರು ಮತ್ತು ಸ್ಥಳೀಯ ನಿವಾಸಿಗಳ ನಡುವೆ ಘರ್ಷಣೆ ಆರಂಭವಾಯಿತು. ಪೋಲೀಸರ ಪ್ರಕಾರ, ಈ ಹಳ್ಳಿಯಲ್ಲಿ ನೆಲೆಗೊಂಡಿದ್ದ ಮಾವೋವಾದಿಗಳು ಸ್ಥಳೀಯ ನಿವಾಸಿಗಳನ್ನು ಬಲಾತ್ಕಾರದಿಂದ ತಮ್ಮ ರಕ್ಷಣಾ ಗೋಡೆಯಾಗಿ ಬಳಸಲೆತ್ನಿಸಿದ್ದರು. ಇದರಿಂದಾಗಿ 14 ಜನ ಮಹಿಳೆಯರು ಗಾಯಗೊಂಡರು. ಅವರ ಪೈಕಿ ಚಿತ್ತಮಣಿ ಮುರ್ಮು ಎಂಬ ಮಹಿಳೆಗೆ ಕಣ್ಣು ಹೋಯಿತು.

ನವೆಂಬರ್ 7ರಂದಾಚೆಗೆ ಪೋಲೀಸರ ಮೇಲಿನ ಸಿಟ್ಟು ಬೀದಿಯಲ್ಲಿ ಪ್ರದರ್ಶಿತವಾಗತೊಡಗಿತು. ಆದಿವಾಸಿಗಳ ಸಾಂಪ್ರದಾಯಿಕ ಮುಖಂಡರನ್ನೊಳಗೊಂಡ ಭಾರತ್ ಜಕಾತ್ ಮಾಝಿ ಮಾರ್ವಾ (BJMM) ಎಂಬ ಸಂಘಟನೆಯ ನೇತೃತ್ವದಲ್ಲಿ ಸಲ್ಬೋನಿಯಾದ ನಿವಾಸಿಗಳು ರಸ್ತೆಗಳನ್ನು ತಡೆದು, ಲಾಲ್‌ಗಢದ ಪೋಲೀಸ್ ಠಾಣೆಯನ್ನು 'ಬಂದ್' ಮಾಡಿದರು. ಆದರೆ ನವೆಂಬರ್ 14ರ ಹೊತ್ತಿಗ



ಮೂಲ:ಪ್ರವೀಣ್ ಸ್ವಾಮಿ
ಅನು: ಡಿ.ಎಸ್. ನಾಗಭೂಷಣ್

ಭಯ, ಅಧಿಕಾರ ಮತ್ತು ವಿಧೇಯತೆ

ಲಾಲ್‌ಘಡ್: ನೋಟ-೨

BJMMನಾಯಕತ್ವ ಸ್ಥಳೀಯ ಅಧಿಕಾರ ವರ್ಗದೊಂದಿಗೆ ಒಂದು ಒಪ್ಪಂದಕ್ಕೆ ಬಂದಿದ್ದರ ಫಲವಾಗಿ, ಪರಿಸ್ಥಿತಿ ಸಾಮಾನ್ಯವಾಗತೊಡಗಿತು. ಆದರೆ ಈ ಆದಿವಾಸಿ ನಾಯಕರು ತಮ್ಮ ಜನರ ಸ್ವಾಭಿಮಾನವನ್ನು ಪೋಲೀಸರಿಗೆ ಮಾರಿಕೊಂಡಿದ್ದಾರೆ ಎಂದು ಆಪಾದಿಸುತ್ತಾ ಪೋಲೀಶ್ ಸಂತ್ರೋಷ್ ಬಿರೋಧಿ ಜನಸಾಧರಾನೇರ್ (ಪೋಲೀಸ ಅತ್ಯಾಚಾರ ವಿರೋಧಿ ಜನತಾ ಸಮಿತಿ: PSJBC) ಎಂಬ ಹೊಸದಾಗಿ ರಚನೆಯಾದಸಂಘಟನೆಯೊಂದರ ಸದಸ್ಯರು, BJMMಸದಸ್ಯರ ಮೇಲೆ ದಾಳಿ ಮಾಡತೊಡಗಿದರು.

ಈ PSJBCಯನ್ನು ರಚಿಸಿದವರು ಯಾರು? ಅದರ ಮುಖ್ಯ ನಾಯಕ ಕಾಮಗಾರಿ ಕಂಟ್ರ್ಯಾಕ್ಟುಗಳ ಮೂಲಕ ಸಾಕಷ್ಟು ಹಣ ಸಂಪಾದಿಸಿದ್ದ ಮತ್ತು ತೃಣಮೂಲ ಕಾಂಗ್ರೆಸ್ಸಿನ ದೀರ್ಘಕಾಲೀನ ಮುಖಂಡನಾದ ಛತ್ರಧರ ಮಹತೋ– ಭೂಗತ ಮಾವೋವಾದಿ ನಾಯಕ ಸಸಿಧರ ಮಹತೋನ ಸೋದರ. ತೃಣಮೂಲ ನಾಯಕರು ಈತನನ್ನು ಎರಡು ವರ್ಷಗಳ ಹಿಂದೆಯೇ ತಮ್ಮ ಪಕ್ಷದಿಂದ ಹೊರ ಹಾಕಿರುವುದಾಗಿ ಹೇಳಿಕೊಳ್ಳುತ್ತಿರುವರಾದರೂ, ಅದಕ್ಕೆ ಅಗತ್ಯವಾದ ಪುರಾವೆಗಳನ್ನೇನೂ ಇನ್ನೂ ಒದಗಿಸಲಾಗಿಲ್ಲ. ಆದರೆ ಗಮನಿಸಬೇಕಾದ ಸಂಗತಿಯೆಂದರೆ, PSJBCಯ ಕಾರ್ಯಕರ್ತರು ತಮ್ಮ ಸಭೆಗಳಲ್ಲೆಲ್ಲಾ ತೃಣಮೂಲ ಕಾಂಗ್ರೆಸ್ಸಿನ ಧ್ವಜಗಳನ್ನು ಹಾರಿಸುತ್ತಿದ್ದರು ಎಂಬುದು; ಲಾಲ್‌ಗಢದ ಬಹಳ ಕಡೆ ಈಗಲೂ ಕೂಡ ಈ ಪಕ್ಷದ ಪತಾಕೆಗಳು ಮಾವೋವಾದಿ ಪತಾಕೆಗಳ ನಡುವೆ ರಾರಾಜಿಸುತ್ತಲೇ ಇವೆ.

ಆರಂಭದಿಂದಲೂ ಸ್ಪಷ್ಟವಾಗಿದ್ದ ಒಂದು ಸಂಗತಿಯೆಂದರೆ, PSJBCಗೆ ಶಾಂತಿ ಸ್ಥಾಪನೆಯ ಉದ್ದೇಶವೇ ಇರಲಿಲ್ಲವೆಂಬುದು. ಹಾಗಾಗಿಯೇ ಅದು ತನ್ನ ಬೇಡಿಕೆಗಳನ್ನು ಅವು ತಿರಸ್ಕಾರಾರ್ಹವಾಗುವಂತೆಯೇ ರೂಪಿಸಿತ್ತು: ಪ.ಮಿದ್ನಾಪುರದ ಪೋಲೀಸ್ ವರಿಷ್ಠಾಧಿಕಾರಿ ಕಿವಿ ಹಿಡಿದುಕೊಂಡು ಬಸ್ಕಿ ಹೊಡೆಯುತ್ತಾ ತನ್ನ ತಪ್ಪನ್ನು ಒಪ್ಪಿಕೊಳ್ಳಬೇಕು; ಎಲ್ಲ ಪೋಲೀಸರೂ ದಲಿಪುರದಿಂದ ಛೋಟೋ ಪೆಲಿಯಾವರೆಗೆ ರಸ್ತೆಯ ಮಣ್ಣಿನಲ್ಲಿ ಮೂಗು ಉಜ್ಜುತ್ತಾ ತೆವಳಿಕೊಂಡು ಬರಬೇಕು;1998ರಿಂದ ಭಯೋತ್ಪಾದಕ ಚಟುವಟಿಕೆಗಳ ಆಪಾದನೆ ಮೇಲೆ ಬಂಧಿತರಾದವರನ್ನೆಲ್ಲಾ ಬಿಡುಗಡೆ ಮಾಡಬೇಕು ಇತ್ಯಾದಿ.

ಆದರೂ ಕೂಡಾ ರಾಜ್ಯ ಸರ್ಕಾರ ಹಿಂಸಾತ್ಮಕ ಘರ್ಷಣೆಯನ್ನು ತಪ್ಪಿಸಲು ತನ್ನ ಪ್ರಯತ್ನಗಳನ್ನು ಮುಂದುವರೆಸಿತು. PSJBC ನೀಡಿದ್ದ ಗಡುವಾದ ನವೆಂಬರ್ 27ರಂದು ಪ.ಬಂಗಾಳದ ಪೋಲೀಸರು ಲಾಲ್‌ಗಢ ಪ್ರದೇಶದ ತನ್ನ 13 ಠಾಣೆಗಳನ್ನೂ, ಶಿಬಿರಗಳನ್ನೂ ಮುಚ್ಚಿತು. ನಂತರ ಡಿಸೆಂಬರ್ 1ರಂದು ಇನ್ನೆರಡು ಠಾಣೆಗಳನ್ನು ಖಾಲಿ ಮಾಡಿಹೋಯಿತು. ಆದರೆ ಹೀಗೆ ಒಂದು ಶಾಂತಿ ಒಪ್ಪಂದಕ್ಕೆ ಬರಲೇಬೇಕೆಂಬ ದಿನೇ ದಿನೇ ಹೆಚ್ಚುತ್ತಿದ್ದ ಪ.ಬಂಗಾಳ ಸರ್ಕಾರದ ಹತಾಶ ಪ್ರಯತ್ನಗಳು ಅದಕ್ಕೇ ಮುಳುವಾದವು–ಆ ಕಡೆ ಕೊಲೆಪಾತಕಗಳ ಯೋಜನೆ ಹೆಪ್ಪುಗಟ್ಟತೊಡಗಿತ್ತು.

PSJBC ತನ್ನ ಹೋರಾಟವನ್ನು ಸ್ಥಗಿತಗೊಳಿಸಿರುವುದಾಗಿ ಪ್ರಕಟಿಸಿತು– ಆದರೆ ಅದೇ ಸಮಯದಲ್ಲಿ ಅದು ಹಳ್ಳಿ ಹಳ್ಳಿಗಳಲ್ಲಿ ಸಮನಾಂತರ ಆಡಳಿತವನ್ನು ಸ್ಥಾಪಿಸತೊಡಗಿತ್ತು. ಅದರ ಮಾವೋವಾದಿ ಮಿತ್ರರು ಬೆಲ್ಪಾಹರಿ, ಬೀಣ್‌ಪುರ್, ಲಾಲ್‌ಗಢ್, ಜಂಬೋನಿ, ಸಲ್ಬೋನಿ ಹಾಗೂ ಗೊಲ್ತಾರೋ ಹಳ್ಳಿಗಳಿಗೆ ಪೋಲೀಸ್ ಮತ್ತು ಆಡಳಿತ ಸಿಬ್ಬಂದಿ ಪ್ರವೇಶಿಸದಂತೆ ತಡೆಯತೊಡಗಿದ್ದರು. ಇಲ್ಲಿಂದ ಮಾವೋವಾದಿ ಹಂತಕ ದಳಗಳು ದಿನೇ ದಿನೇ ಹಿಂಸಾತ್ಮಕತೆ ಹೆಚ್ಚುತ್ತಾ ಹೋದ ಭೀಕರ ದಾಳಿಗಳ ಸರಮಾಲೆಯೊಂದನ್ನು ಆರಂಭಿಸಿದವು: ಡಿಸೆಂಬರ್‌ನಲ್ಲಿ ಮಾವೋವಾದಿ ವಿರೋಧಿ ಪ್ರದರ್ಶನವೊಂದನ್ನು ಸಂಘಟಿಸಿದ್ದ ಸಿಪಿಎಂನ ಸುಧೀರ್ ಮಂಡಲ್‌ನನ್ನು ಗುಂಡಿಟ್ಟು ಕೊಲ್ಲಲಾಯಿತು.

ನವೆಂಬರ್ 5ರಂದು ಪರಿಸ್ಥಿತಿ ವಿಕೋಪಕ್ಕೆ ಮುಟ್ಟಿತು. ಆ ದಿನ ಬೆಳಿಗ್ಗೆ ಮುಖ್ಯ ಮಂತ್ರಿಯ ಹತ್ಯೆಯನ್ನು ಯೋಜಿಸಿದ್ದನೆಂದು ಹೇಳಲಾದ ಮಾವೋವಾದಿ ಸಸಿಧರ ಮಹತೋನನ್ನು ಹುಡುಕುತ್ತಾ ಪೋಲೀಸರು ಛೋಟೋ ಪೆಲಿಯಾ ಎಂಬ ಹಳ್ಳಿಯ ಮೇಲೆ ದಾಳಿ ಮಾಡಿದರು. ಅವರು ಮತ್ತು ಸ್ಥಳೀಯ ನಿವಾಸಿಗಳ ನಡುವೆ ಘರ್ಷಣೆ ಆರಂಭವಾಯಿತು. ಪೋಲೀಸರ ಪ್ರಕಾರ, ಈ ಹಳ್ಳಿಯಲ್ಲಿ ನೆಲೆಗೊಂಡಿದ್ದ ಮಾವೋವಾದಿಗಳು ಸ್ಥಳೀಯ ನಿವಾಸಿಗಳನ್ನು ಬಲಾತ್ಕಾರದಿಂದ ತಮ್ಮ ರಕ್ಷಣಾ ಗೋಡೆಯಾಗಿ ಬಳಸಲೆತ್ನಿಸಿದ್ದರು. ಇದರಿಂದಾಗಿ 14 ಜನ ಮಹಿಳೆಯರು ಗಾಯಗೊಂಡರು. ಅವರ ಪೈಕಿ ಚಿತ್ತಮಣಿ ಮುರ್ಮು ಎಂಬ ಮಹಿಳೆಗೆ ಕಣ್ಣು ಹೋಯಿತು. ನವೆಂಬರ್ 7ರಿಂದಾಚೆಗೆ ಪೋಲೀಸರ ಮೇಲಿನ ಸಿಟ್ಟು ಬೀದಿಯಲ್ಲಿ ಪ್ರದರ್ಶಿತವಾಗತೊಡಗಿತು.

2009ರ ಫೆಬ್ರುವರಿಯಲ್ಲಿ, ಹತ್ಯೆಯಾದ ಸಿಪಿಎಂ ನಾಯಕ ನಂದಲಾಲ್ ಪಾಲ್‌ರ ಶವಯಾತ್ರೆಗೆ ಸೇರಿದ್ದ ಜನಸ್ತೋಮದ ಮೇಲೆ ಮಾವೋವಾದಿಗಳು ಗುಂಡಿನ ದಾಳಿ ನಡೆಸಿ ಮೂವರ ಸಾವಿಗೆ ಕಾರಣರಾದರು. ಏಪ್ರಿಲ್‌ನಲ್ಲಿ ಇನ್ನೂ ಐದುಜನ ಸಿಪಿಎಂಬೆಂಬಲಿಗರನ್ನೂ, ನಾಲ್ವರು ಚುನಾವಣಾ ಹಾಗೂ ಪೋಲೀಸ್ ಸಿಬ್ಬಂದಿಯನ್ನೂ ಕೊಲ್ಲಲಾಯಿತು. ಜೂನ್ ಹೊತ್ತಿಗೆ ಹಿಂಸಾತ್ಮಕ ಹೆಬ್ಬಲೆಯೊಂದರಂತೆ, ಒಂದಾದರ ಮೇಲೊಂದು ದಾಳಿಗಳು ಆರಂಭವಾದವು.

'ಲಾಲ್‌ಗಢವನ್ನು ಮಾವೋವಾದಿಗಳು ವಶಪಡಿಸಿಕೊಳ್ಳಲಿಲ್ಲ. ಸರ್ಕಾರವೇ ಅಲ್ಲಿ ಜನರ ಕೈಬಿಟ್ಟು ಹೋಯಿತು' ಎನ್ನುತ್ತಾರೆ ಭಯೋತ್ಪಾದನಾ ಪ್ರತಿ–ಕಾರ್ಯಾಚರಣೆಯ ವಿಶ್ಲೇಷಕ ಅಜಯ್ ಸಾಹ್ನಿ. ಇಂತಹ ಪರಿಸ್ಥಿತಿಗಾಗಿ ಮಾವೋವಾದಿಗಳು ಬಹು ಕಾಲದಿಂದಲೂ ಸಿದ್ಧತೆ ನಡೆಸಿದ್ದರು. 2005ರಲ್ಲೇ, ಸಿಪಿಎಂ ನಾಯಕರಾದ ರಘುನಾಥ ಮುರ್ಮು, ಬಬ್ಲು ಮುಡಿ ಹಾಗೂ ಮಹೇಂದ್ರ ಮಹತೋರ ಹತ್ಯೆಯ ನಂತರದಲ್ಲೇ, ಪ್ರತಿಷ್ಠಿತ ದಕ್ಷಿಣ ಏಷ್ಯಾ ಗುಪ್ತಚರ ಸಮೀಕ್ಷೆ('South Asia Intelligence Review') 'ನಕ್ಸಲ್‌ಬಾರಿ ಮನರುತ್ಥಾನ'ದ–1967ರಲ್ಲಿ ಡಾರ್ಜಲಿಂಗ್ ಜಿಲ್ಲೆಯ ಕುಗ್ರಾಮದಲ್ಲಿ ಆರಂಭವಾಗಿ ನೂರಾರು ಜನರ ಭೀಕರ ಕೊಲೆಗಳಿಗೆ ಕಾರಣವಾದ ಆರು ವರ್ಷಗಳ ಮಾವೋವಾದಿ ಕಾರ್ಯಚರಣೆಯ ನೆನಪು ಮಾಡಿ–ಸೂಚನೆ ನೀಡಿತ್ತು. ಸಂಶೋಧಕ ಸಾಜಿ ಚೆರಿಯನ್ ತನ್ನ ಲೇಖನ ವೊಂದರಲ್ಲಿ ಹೇಳಿರುವ ಹಾಗೆ, ಆಗ ಮೂವರು ಮಾವೋವಾದಿ ನಾಯಕರಿಂದ ವಶಪಡಿಸಿಕೊಂಡ ಕಾಗದ ಪತ್ರಗಳಲ್ಲಿ ಪೋಲೀಸ್ ಠಾಣೆಗಳನ್ನು ವಶ ಪಡಿಸಿಕೊಳ್ಳುವ ಅಥವಾ ಸ್ಫೋಟಿಸುವ ಯೋಜನೆಗಳ ವಿವರಗಳಿದ್ದವು. ಜೊತೆಗಿದ್ದ ಟಿಪ್ಪಣಿ ಪುಸ್ತಕಗಳಲ್ಲಿ ಬಂಕೂರ, ಪುರಲಿಯಾ ಹಾಗೂ ಪ. ಮೇದಿನಿಪುರದ

(23ನೇ ಪುಟಕ್ಕೆ)

ಲಾಲ್‌ಘಡ್- ಪ್ರಜಾತಂತ್ರ-ಸಂಘರ್ಷ

(19ನೇ ಪಟದಿಂದ)

ಇದೇ ಪ್ರಕ್ರಿಯೆಯನ್ನು ಕಾಣಬಹುದಾಗಿದೆ.

ಆದಿವಾಸಿ ಜನಸಮುದಾಯಗಳು ತಮ್ಮ ಮೂಲಭೂತ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿರುವ ಸಂದರ್ಭದಲ್ಲಿ ರೈಲ್ವೆ ನಿಲ್ದಾಣ ಸ್ಫೋಟಿಸುವುದು, ರೈಲುಗಳನ್ನು ನೆಲಬಾಂಬ್‌ಗಳಿಂದ ಸ್ಫೋಟಿಸುವುದು, ಶಾಲಾ ಕಟ್ಟಡಗಳನ್ನು ಧ್ವಂಸ ಮಾಡುವುದು, ಸಾಮಾನ್ಯ ಜನತೆಯ ಪ್ರಾಣ ಹಾನಿ ಮಾಡುವುದು ಇವೇ ಮುಂತಾದ ಜನವಿರೋಧಿ ಕೃತ್ಯಗಳಲ್ಲಿ ತೊಡಗುವ ಮಾವೋವಾದಿಗಳ ಪಕ್ಷ ಪ್ರಜಾಕ್ರಾಂತಿ ಸಾಧಿಸುವುದು ಹೇಗೆ ಸಾಧ್ಯ ? ಪ್ರಭು ತ್ವದ ವಿರುದ್ಧ ಹೋರಾಟದಲ್ಲಿ ಹಿಂಸೆ ಅನಿವಾರ್ಯ ಎಂದಾದರೆ ಜಿಹಾದಿಗಳ ಹೋರಾಟವೂ ಸಮರ್ಥನೀಯ ಆಗುವುದಲ್ಲವೇ? ಭಾರತೀಯ ಮುಸ್ಲಿಮರಿಗೆ ಅನ್ಯಾಯವಾಗಿದೆ ಅದನ್ನು ಸರಿಪಡಿಸಲು ಮುಂಬೈ ಮೇಲೆ ದಾಳಿ ಮಾಡಲಾಗಿದೆ ಎಂದು ಘೋಷಿಸುವ ಭಯೋತ್ಪಾದಕರಿಗೂ, ಆದಿವಾಸಿಗಳಿಗೆ ಅನ್ಯಾಯವಾಗಿರುವುದರಿಂದ ನಾವು ಬಂದೂಕುಗಳನ್ನು ಹಿಡಿದು ಕೊಲೆ, ಸುಲಿಗೆಯಲ್ಲಿ ತೊಡಗುವ ಮೂಲಕ ಪ್ರಭುತ್ವವನ್ನು ಎದುರಿಸುತ್ತೇವೆ ಎಂದು ಹೇಳುವ ಮಾವೋವಾದಿಗಳಿಗೂ ಅತ್ಯಂತ ಸೂಕ್ಷ್ಮ ವ್ಯತ್ಯಾಸ ಮಾತ್ರ ಕಂಡುಬರುತ್ತದೆ. ಹಾಗೆಂದ ಮಾತ್ರಕ್ಕೆ ಕೇಂದ್ರ ಸರ್ಕಾರ ಹೇಳಿರುವಂತೆ ಮಾವೋವಾದಿಗಳನ್ನು ಭಯೋತ್ಪಾದಕರೆಂದು ಪರಿಗಣಿಸಲಾಗುವುದಿಲ್ಲ. ಆದಗ್ಯೂ ಜನಸಮುದಾಯಗಳ ಪ್ರಜಾಸತ್ತಾತ್ಮಕ ಭಾವನೆಗಳಿಗೆ ಸ್ಪಂದಿಸದೆ ತಮ್ಮ ಧೋರಣೆಯನ್ನು ಹೇರಲೆತ್ನಿಸುವ, ಸಿದ್ಧಾಂತದ ಹೆಸರಿನಲ್ಲಿ ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗುವ ಮಾವೊವಾದಿಗಳ ರಾಜಕೀಯ ನಿಲುವುಗಳೇ ಪ್ರಶ್ನಾರ್ಹವಾಗಿದೆ.

ಭವಿಷ್ಯದ ಹಾದಿ

ಲಾಲ್‌ಘಡದ ಚಳುವಳಿ ಸ್ವಯಂಪ್ರೇರಣೆಯಿಂದ, ಆದಿವಾಸಿಗಳ ಆಕ್ರೋಶದ ಪರಿಣಾಮವಾಗಿ ಭುಗಿಲೆದ್ದ ಆಂದೋಲನ. ಪಿಎಸ್‌ಜೆಬಿಸಿ ನೇತೃತ್ವದಲ್ಲಿ ಶೀಘ್ರದಲ್ಲೇ ಸಂಘಟನಾತ್ಮಕ ಸ್ವರೂಪ ಪಡೆದುಕೊಂಡಿತ್ತು. ಲಾಲ್‌ಘಡದ 91 ಗ್ರಾಮಗಳಿಂದ ತಲಾ ಹತ್ತು ಪ್ರತಿನಿಧಿಗಲ ತಂಡಗಳು ಗ್ರಾಮಸಮಿತಿಗಳಾಗಿ ರೂಪುಗೊಂಡವು. ಈ ಸಮಿತಿಗಳಲ್ಲಿ ಐವರು ಮಹಿಳೆಯರನ್ನು ಒಳಗೊಳ್ಳಲಾಗಿದೆ. ಪ್ರತಿ ಗ್ರಾಮ ಸಮಿತಿಯಿಂದ ಇಬ್ಬರು ಸದಸ್ಯರನ್ನು ಆಯ್ಕೆ ಮಾಡಿ ರಾಜ್ಯ ಸಮಿತಿಯನ್ನು ಸ್ಥಾಪಿಸಲಾಗಿದೆ. ಈ ರಾಜ್ಯ ಸಮಿತಿಯಿಂದ ನಾಲ್ಕು ಸದಸ್ಯರ ಕೇಂದ್ರ ಸಮಿತಿಯನ್ನು ಚುನಾಯಿಸಲಾಗಿದೆ. ಈ ರೀತಿಯ ಪ್ರಜಾಸತ್ತಾತ್ಮಕ ಸಂರಚನೆಯಿಂದ ಕೂಡಿದ ಚಳುವಳಿ ಸಿಪಿಎಂ ಸರ್ಕಾರದ ದೌರ್ಜನ್ಯದ ವಿರುದ್ಧ ತನ್ನ ಹೋರಾಟವನ್ನು ನಡೆಸುತ್ತಿದೆ. ಈ ಚಳುವಳಿಯ ನಾಯಕತ್ವವನ್ನು ಯಾವುದೇ ರಾಜಕೀಯ ಪಕ್ಷ ಅಥವಾ ಸಂಘಟನೆಗಳು ವಹಿಸಿಕೊಳ್ಳದಿರುವಂತೆ ಸಮಿತಿ ಎಚ್ಚರ ವಹಿಸಿದೆ. ಹಾಗಾಗಿಯೇ ಇಡೀ ಚಳುವಳಿಯಲ್ಲಿ ಯಾವುದೇ ಪಕ್ಷಗಳ ಬ್ಯಾನರ್ ಕಂಡುಬರುವುದಿಲ್ಲ. ಎಲ್ಲ ಪ್ರತಿಭಟನಾ ರ‍್ಯಾಲಿಗಳಲ್ಲೂ ಈ ಸಮಿತಿಯ ಸದಸ್ಯರೇ ಮುಂಚೂಣಿಯಲ್ಲಿರುವುದನ್ನೂ ಗಮನಿಸಬಹುದು. ಈ ಚಳುವಳಿಗೆ ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿರುವ ಮಾವೋವಾದಿ ಪಕ್ಷ ಕ್ರಮೇಣ ತನ್ನದೇ ಆದ ಹೋರಾಟ ಮಾರ್ಗವನ್ನು ಅನುಸರಿಸಿದ್ದು, ಇಡೀ ಚಳುವಳಿಗೆ ಮಾವೋವಾದಿ ಸ್ಪರ್ಶ ನೀಡುವ ಸರ್ಕಾರದ ತಂತ್ರಕ್ಕೆ ಬುನಾದಿಯಾಗಿ ಪರಿಣಮಿಸಿತು.

ಲಾಲ್‌ಘಡದ ಆದಿವಾಸಿಗಳು ತೀವ್ರ ಬಡತನ, ದಾರಿದ್ರ್ಯತೆ ಎದುರಿಸುತ್ತಿದ್ದು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದರೂ, ಪ್ರಸ್ತುತ ಸಂದರ್ಭದಲ್ಲಿ ಅವರ ಬೇಡಿಕೆಗಳು ಈ ಅಂಶಗಳನ್ನು ಒಳಗೊಂಡಿರದೆ, ಸಾಮುದಾಯಿಕ ನ್ಯಾಯ ಮತ್ತು ಮೂಲಭೂತಹಕ್ಕುಗಳನ್ನು ಕುರಿತದ್ದಾಗಿತ್ತು. ಪೊಲೀಸ್ ದೌರ್ಜನ್ಯ, ಅಮಾಯಕರ ಬಂಧನ, ಪ್ರಭುತ್ವದ ದಮನಕಾರಿ ನೀತಿ ಇವುಗಳ ವಿರುದ್ಧ ಆದಿವಾಸಿಗಳ ಹೋರಾಟ ರೂಪುಗೊಂಡಿತ್ತು. ಏತನ್ಮಧ್ಯೆ ಪಿಎಸ್‌ಜೆಬಿಸಿ ಸಮಿತಿ ತನ್ನ ಸದಸ್ಯರನ್ನೇ ಒಳಗೊಂಡು ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನೂ ಹಮ್ಮಿಕೊಂಡಿತ್ತು. ಅನೇಕ ಗ್ರಾಮಗಳಲ್ಲಿ ರಸ್ತೆ ನಿರ್ಮಾಣ, ಕೆರೆಗಳ ನಿರ್ಮಾಣ, ಬೋರ್‌ವೆಲ್‌ಗಳು, ಕೆರೆಕಟ್ಟೆಗಳ ನಿರ್ಮಾಣ ಮುಂತಾದ ಕ್ರಿಯಾಶೀಲ ಚಟುವಟಿಕೆಗಳಲ್ಲಿ ಸಮಿತಿ ತೊಡಗಿಸಿಕೊಂಡಿದ್ದಾರೆ. ತಮ್ಮ ಪರಿಶ್ರಮದ ಮೂಲಕ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದೇ ಅಲ್ಲದೆ ಸ್ಥಳೀಯ ಸಂಪನ್ಮೂಲಗಳನ್ನೇ ಉಪಯೋಗಿಸಿಕೊಂಡು ನೀರಾವರಿ ಆಧಾರಿತ ಕೃಷಿಯನ್ನೂ ಆದಿವಾಸಿಗಳು ಪಾಲಿಸುತ್ತಿದ್ದಾರೆ. ಎರಡು ಗ್ರಾಮಗಳಲ್ಲಿ ಸಮಿತಿಯ ವತಿಯಿಂದ ಆರೋಗ್ಯ ಕೇಂದ್ರಗಳನ್ನೂ ಸ್ಥಾಪಿಸಲಾಗಿದೆ. ರಾಜ್ಯ ಸರ್ಕಾರದ ಆದೇಶಗಳನ್ನು ಲೆಕ್ಕಿಸದೆ ಸಂತಾಲ್ ಆದಿವಾಸಿಗಳಿಗೆ ಅವರ ಮಾತೃಭಾಷೆಯಲ್ಲೇ ಶಿಕ್ಷಣ ಒದಗಿಸಲಾಗುತ್ತಿದೆ.

ಈ ದೃಷ್ಟಿಯಿಂದ ನೋಡಿದಾಗ ಲಾಲ್‌ಘಡದ ಆದಿವಾಸಿಗಳ ಚಳುವಳಿ ಜನಸಮುದಾಯಗಳ ಬದುಕುವ ಹಕ್ಕಿಗಾಗಿ, ಅಸ್ಮಿತೆಗಾಗಿ, ಸಾಮಾಜಿಕ ಘನತೆಗಾಗಿ, ಆರ್ಥಿಕ ಪ್ರಗತಿಗಾಗಿ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ನಡೆಯುತ್ತಿರುವ ಪ್ರಜಾಂದೋಲನ ಎಂದೇ ಹೇಳಬಹುದು. ಇಲ್ಲಿನ ಜನತೆಯ ಮನದಾಳದಲ್ಲಿ ಮೂಡಿರುವ ಪರಿತ್ಯಕ್ತ ಭಾವನೆಗಳೇ ಚಳುವಳಿಗೆ ಹೆಚ್ಚಿನ ಕಾವು ನೀಡುತ್ತಿರುವುದೂ ಸ್ಪಷ್ಟವಾಗಿದೆ. ಆಳುವ ವರ್ಗಗಳ ನಿರ್ಲಕ್ಷ್ಯ ಮತ್ತು ದಮನಕಾರಿ ಧೋರಣೆಗಳು ಈ ಭಾವನೆಗಳನ್ನು ಕೆರಳಿಸಿರುವುದೂ ಸಹಜವೇ ಆಗಿದೆ. ಆದರೆ ಸಿಪಿಎಂ–ಮಾವೋವಾದಿಗಳು ಮತ್ತು ಪ್ರಭುತ್ವಗಳ ನಡುವಿನ ಆಕ್ರಮಣಕಾರಿ ಕಲಹದಲ್ಲಿ ಬಂಧಿಗಳಾಗಿರುವ ಲಾಲ್‌ಘಡದ ಆದಿವಾಸಿಗಳು ತಮ್ಮ ಆಶಯಗಳಿಗೆ ವಿರುದ್ಧವಾಗಿ ಇನ್ನೂ ಹೆಚ್ಚು ದಮನಕ್ಕೊಳಗಾಗುತ್ತಿರುವುದು ವಿಪರ್ಯಾಸ.

ಜನಾಂದೋಲನಗಳ ಪರಂಪರೆಯಲ್ಲೇ ಅನೇಕ ಹೋರಾಟಗಳಲ್ಲಿ ತೊಡಗಿ ಮೂರು ದಶಕಗಳಿಗೂ ಹೆಚ್ಚು ಕಾಲ ಆಡಳಿತ ನಡೆಸಿರುವ ಸಿಪಿಎಂ ನೇತೃತ್ವದ ಸರ್ಕಾರ ಲಾಲ್‌ಘಡದ ಆದಿವಾಸಿಗಳಿಗೆ ನ್ಯಾಯ ಒದಗಿಸುವ ದಿಕ್ಕಿ ನಲ್ಲಿ ಇಡುವ ಪ್ರತಿಯೊಂದು ಹೆಜ್ಜೆಯೂ ಮಹತ್ವ ಪಡೆಯುತ್ತದೆ. ಇದರಿಂದ ಸಿಪಿಎಂ ಪಕ್ಷದ ಆಶಯವಾದ ಮಾವೋವಾದಿಗಳನ್ನು ಜನರಿಂದ ರಾಜಕೀಯವಾಗಿ ದೂರ ಮಾಡುವ ಇಚ್ಚೆಯೂ ಪೂರೈಸಿದಂತಾಗುತ್ತದೆ. ಲಾಲ್‌ಘಡದ ಆದಿವಾಸಿಗಳ ಹೋರಾಟ ಸ್ವತಂತ್ರ ಭಾರತದ ಇತಿಹಾಸದಲ್ಲಿ ಅಚ್ಚಳಿಯದೆ ಉಳಿಯುವಂತಹುದು. ಅನೇಕ ಜನಪರ ಹೋರಾಟಗಳಿಗೆ ಆದರ್ಶಪ್ರಾಯವಾಗುವಂತಹುದು.

ಈ ಸಂದರ್ಭದಲ್ಲಿ ಮಾವೋವಾದಿ ಪಕ್ಷದ ನಿಷೇದ, ಮಾವೋವಾದಿ ವಕ್ತಾರರ ಬಂಧನ, ಪಿಎಸ್ ಜೆಬಿಸಿ ಸಮಿತಿಯ ನಾಯಕರ ಬಂಧನ ಮತ್ತು ಮಿಲಿಟರಿ ಕಾರ್ಯಾಚರಣೆಗಳು ಇಡೀ ಆಂದೋಲನವನ್ನು ಹಿಮ್ಮೆಟ್ಟಿಸಿದೆ. ತತ್ಪರಿಣಾಮವಾಗಿ ಆದಿವಾಸಿಗಳ ಪರಿತ್ಯಕ್ತ ಭಾವನೆ ಇನ್ನೂ ಹೆಚ್ಚಾಗುತ್ತಿದೆ. ಈ ಸನ್ನಿವೇಶಕ್ಕೆ ಪ್ರತ್ಯಕ್ಷವಾಗಿ ಹಾಗು ಪರೋಕ್ಷವಾಗಿ ಮಾವೋವಾದಿಗಳು ಕಾರಣರಾಗಿದ್ದಾರೆ. ಕೊಲೆ, ಸುಲಿಗೆ, ಬಾಂಬ್ ಸ್ಫೋಟ ಮುಂತಾದ ಹಿಂಸಾತ್ಮಕ ಧೋರಣೆಯನ್ನು ಅನುಸರಿಸುವುದರ ಮೂಲಕ ಒಂದು ಪ್ರಜಾಂದೋಲನದ ಮೂಲ ಆಶಯವನ್ನೇ ಬುಡಮೇಲು ಮಾಡಿರುವ ಮಾವೋವಾದಿಗಳ ರಾಜಕೀಯ ಧೋರಣೆ ಮತ್ತು ಆದರ್ಶವೂ ಇಲ್ಲಿ ಪ್ರಶ್ನಾರ್ಹವಾಗುತ್ತದೆ. ಪ್ರಭುತ್ವದ ದಮನಕಾರಿ ನೀತಿಗೆ ಪುಷ್ಟಿ ನೀಡುವ ಮೂಲಕ ಮಾವೋವಾದಿಗಳು ಆದಿವಾಸಿಗಳ ವಿಶ್ವಾಸ ದ್ರೋಹ ಎಸಗಿರುವುದೂ ಸ್ಪಷ್ಟವಾಗಿದೆ. ಲಾಲ್‌ಘಡದ ಆದಿವಾಸಿ ಸಮುದಾಯಗಳು ಎದುರಿಸುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು ಭೂಮಿ, ನೀರಾವರಿ ಮತ್ತು ಜೀವನೋಪಾಯದ ಸಮಸ್ಯೆಗಳನ್ನು ಪ್ರತಿಬಿಂಬಿಸುತ್ತವೆ. ಈ ಸಮಸ್ಯೆಗಳನ್ನು ನಿವಾರಿಸುವಲ್ಲಿ ಒಂದು ಪ್ರಜಾತಾಂತ್ರಿಕ ವೇದಿಕೆ ಸಿದ್ಧಪಡಿಸುವುದು ಯಾವುದೇ ಆಳುವ ಪಕ್ಷಗಳ ಕರ್ತವ್ಯವೂ ಆಗಿದೆ.

ಜನಾಂದೋಲನಗಳ ಪರಂಪರೆಯಲ್ಲೇ ಅನೇಕ ಹೋರಾಟಗಳಲ್ಲಿ ತೊಡಗಿ ಮೂರು ದಶಕಗಳಿಗೂ ಹೆಚ್ಚು ಕಾಲ ಆಡಳಿತ ನಡೆಸಿರುವ ಸಿಪಿಎಂ ನೇತೃತ್ವದ ಸರ್ಕಾರ ಲಾಲ್‌ಘಡದ ಆದಿವಾಸಿಗಳಿಗೆ ನ್ಯಾಯ ಒದಗಿಸುವ ದಿಕ್ಕಿನಲ್ಲಿ ಇಡುವ ಪ್ರತಿಯೊಂದು ಹೆಜ್ಜೆಯೂ ಮಹತ್ವ ಪಡೆಯುತ್ತದೆ. ಇದರಿಂದ ಸಿಪಿಎಂ ಪಕ್ಷದ ಆಶಯವಾದ ಮಾವೋವಾದಿಗಳನ್ನು ಜನರಿಂದ ರಾಜಕೀಯವಾಗಿ ದೂರ ಮಾಡುವ ಇಚ್ಚೆಯೂ ಪೂರೈಸಿದಂತಾಗುತ್ತದೆ. ಲಾಲ್‌ಘಡದ ಆದಿವಾಸಿಗಳ ಹೋರಾಟ ಸ್ವತಂತ್ರ ಭಾರತದ ಇತಿಹಾಸದಲ್ಲಿ ಅಚ್ಚಳಿಯದೆ ಉಳಿಯುವಂತಹುದು. ಅನೇಕ ಜನಪರ ಹೋರಾಟಗಳಿಗೆ ಆದರ್ಶಪ್ರಾಯವಾಗುವಂತಹುದು. ಆಳುವ ಪಕ್ಷಗಳು ಮತ್ತು ಪ್ರಭುತ್ವ ಈ ಸತ್ಯಾಂಶವನ್ನು ಗ್ರಹಿಸಿ, ಜನಸಮುದಾಯಗಳ ಮೂಲಭೂತ ಆಶಯಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾದಲ್ಲಿ ಲಾಲ್‌ಘಡದ ಮತ್ತೊಂದು ಸ್ವರೂಪ ವ್ಯಕ್ತವಾಗುವುದಿಲ್ಲ.

ಘಟನೆಗಳಿಗೆ ಆಧಾರ EPW ಪತ್ರಿಕೆ □

ಭಯ, ಅಧಿಕಾರ ಮತ್ತು ವಿಧೇಯತೆ

(21ನೇ ಪುಟದಿಂದ)

ಆದಿವಾಸಿಗಳಿಗೆ ಅವರ ಶೋಷಣೆಯ ಬಗ್ಗೆ ಹೇಗೆ 'ಶಿಕ್ಷಣ' ಕೊಡಬೇಕು ಮತ್ತು ಹೇಗೆ ಅವರನ್ನು 'ಬಿಡುಗಡೆ' ಗೊಳಿಸಬೇಕು ಎಂಬ ವಿವರ ಗಳೂ ಇದ್ದವು. 2004ರ ಅಕ್ಟೋಬರ್ 14ರಂದು ಪ.ಮಿಡ್ನಾಪುರ ಜಿಲ್ಲೆಯಲ್ಲಿ ಪೂರ್ವಾಂಚಲ ರೈಫಲ್ಸ್‌ನ ಆರು ಜನ ಯೋಧರನ್ನು ಕೊಂದ ಕಾರ್ಯಚರಣೆ ಯೊಂದಿಗೆ ಮಾವೋವಾದಿ ಕಮ್ಯುನಿಸ್ಟ್ ಪಕ್ಷ ಹೆಚ್ಚೆಚ್ಚು ಉಗ್ರವಾದ ದಾಳಿಗಳನ್ನು ಆಯೋಜಿಸಲಾರಂಭಿಸಿತ್ತು.

ಅದು ಕ್ರಮೇಣ ಕೆಲವು ರಾಜಕೀಯ ಮಿತ್ರರನ್ನೂ ಸಂಪಾದಿಸತೊಡಗಿತ್ತು. ಕಳೆದ ಫೆಬ್ರುವರಿಯಲ್ಲಿ ರಾಜ್ಯ ಪೋಲೀಸು, ಮಾವೋವಾದಿ ಪಕ್ಷದ ರಾಜ್ಯ ಕಾರ್ಯದರ್ಶಿ ಹಿಮಾದ್ರಿ ಸೇನ್-ರಾಯ್‌ನನ್ನು ಬಂಧಿಸಿತು. ಆತನ ವಿಚಾರಣೆಯಿಂದ, ಮಾವೋವಾದಿಗಳು ತೃಣಮೂಲ ಕಾಂಗ್ರಸ್ಸಿನೊಂದಿಗೆ-ಪ.ಬಂಗಾಳದ ಕೈಗಾರಿಕೀಕರಣ ಕಾರ್ಯಕ್ರಮವನ್ನು ವಿರೋಧಿಸಲು ಹುಟ್ಟಿಕೊಂಡ ತಥಾಕಥಿತ 'ನಾಗರಿಕ ಸಮಾಜ'(Civil Soceity)ದ ಆಂದೋಲನಗಳ ವಕ್ತಾರರೊಂದಿಗೆ ಹೇಗೆ ಸೋದರ ಸಂಬಂಧವನ್ನು ಬೆಳೆಸಿಕೊಳ್ಳತೊಡಗಿದ್ದರು ಎಂಬುದುರ ಸಾಕಷ್ಟು ವಿವರಗಳನ್ನು ಪೋಲೀಸರು ಪಡೆದರೆಂದು ಹೇಳಲಾಗುತ್ತದೆ.

ಅಷ್ಟೇ ಅಲ್ಲ, ಸೇನ್-ರಾಯ್‌ನಿಂದ ಪೋಲೀಸರು ಪಡೆದ ಮಾಹಿತಿ ಪ್ರಕಾರ, ನಂದಿಗ್ರಾಮದಲ್ಲಿ ತೃಣಮೂಲ ಕಾಂಗ್ರೆಸ್ ಹಾಗೂ ಕೆಲವು ಇಸ್ಲಾಮೀ ಗುಂಪುಗಳು ಮುಂದೆ ರಕ್ತಸಿಕ್ತ ಘರ್ಷಣೆಗಳಿಗೆ ದಾರಿ ಮಾಡಿಕೊಟ್ಟ ರೈತ ಆಂದೋಲನವನ್ನು ಆರಂಭಿಸಿದ ತದ ನಂತರದಲ್ಲೇ, 2006ರಲ್ಲಿ ಹಿರಿಯ ಮಾವೋವಾದಿ ನಾಯಕರು ಅಲ್ಲಿಗೆ ಭೇಟಿ ನೀಡಿದ್ದರೆಂದು ಹೇಳಲಾಗುತ್ತಿದೆ.

ಬಹುಶಃ ಆಗಲೇ ಅವರಿಗೆ ತಮಗೆ ಇಲ್ಲೊಂದು ಸದವಕಾಶ ತೆರೆದಿದೆ ಎಂಬುದು ಗೊತ್ತಾಗಿದೆ. ಇದೇ ಸೇನ್-ರಾಯ್, ಹಲವಾರು ರಾಜಕೀಯ ವ್ಯಕ್ತಿಗಳಿಗೆ ಅವರ ಮತ್ತು ಮಾವೋ ವಾದಿಗಳ ಹಿತಾಸಕ್ತಿಗಳು ಒಂದೇ ತೆರನವು ಎಂದು ತಾನು ಮನವರಿಕೆ ಮಾಡಿಕೊಟ್ಟಿದ್ದಾಗಿ ಹೇಳಿಕೊಂಡಿದ್ದಾನೆ. ಇಂತಹ ರಾಜಕೀಯ ವ್ಯಕ್ತಿಗಳ ಪೈಕಿ ತೃಣಮೂಲ ನಾಯಕ ಸುಬೇಂಧು ಅಧಿಕಾರಿ ಹಾಗೂ ಖ್ಯಾತ ಲೇಖಕಿ ಹಾಗೂ ನಾಗರಿಕ ಹಕ್ಕುಗಳ ಕಾರ್ಯಕರ್ತೆ ಮಹಾಶ್ವೇತಾ ದೇವಿ ಸೇರಿದ್ದರು.

ಸೇನ್-ರಾಯ್ ಪ್ರಕಾರ, 2007ರ ಆರಂಭದಲ್ಲೇ ಮಾವೋವಾದಿ ಮಿಲಿಟರಿ ಕಮಾಂಡರುಗಳು 8 ಲಕ್ಷ ರೂಪಾಯಿಗಳ ಬೆಲೆಯ ಶಸ್ತ್ರಾಸ್ತ್ರಗಳನ್ನು-ಆರು .315 ಬೋರ್ ರೈಫಲ್‌ಗಳು ಹಾಗೂ ಅವಕ್ಕೆ ಅಗತ್ಯವಾದ ಗುಂಡು ಮದ್ದುಗಳನ್ನು-ನಂದಿಗ್ರಾಮದಲ್ಲಿ ಸಶಸ್ತ್ರ ದಳವೊಂದನ್ನು ನೆಲೆಗೊಳಿಸಲು ಖರೀದಿಸಿದ್ದರು. ಹಾಗೇ, ಹೊಸದಾಗಿ ಸೇರಿದ ಕಾರ್ಯಕರ್ತರಿಗೆ ಒದಗಿಸಲು ಸ್ಥಳೀಯವಾಗಿ ತಯಾರಾದ ಶಸ್ತ್ರಾಸ್ತ್ರಗಳನ್ನು ಕೊಳ್ಳಲಾಯಿತು. ಈ ಎಲ್ಲ ಶಸ್ತ್ರಾಸ್ತ್ರಗಳನ್ನು ನಂದಿಗ್ರಾಮ ಆಂದೋಲನದಲ್ಲಿ ಅತಿ ಹೆಚ್ಚು ಹಿಂಸಾಚಾರ ಕಂಡ ಪ್ರದೇಶವಾದ ಪೂ. ಮೇದಿನಿಪುರದ ಸೋನಾಚುರಾದಲ್ಲಿ ಸಂಗ್ರಹಿಸಡಲಾಗಿತ್ತು.

ಈ ಮಧ್ಯೆ ಮಾವೋವಾದಿ ಕಮ್ಯುನಿಸ್ಟ್ ಪಕ್ಷದ ಅತ್ಯುನ್ನತ ನಾಯಕರೆನಿಸಿದ ಮೊಲಜೆಲ್ಲ ಕೋಟೇಶ್ವರ ರಾವ್ ಲಾಲ್‌ಗಢ ಪ್ರದೇಶದಲ್ಲಿ ಸಶಸ್ತ್ರ ಕಾರ್ಯಾಚರಣೆಗೆ ಬೇಕಾದ ಮೂಲಸೌಲಭ್ಯ ವ್ಯವಸ್ಥೆಯೊಂದನ್ನು ಸ್ಥಾಪಿತೊಡಗಿದ್ದರು. ಸೇನ್-ರಾಯ್ ಪೋಲೀಸರ ಮುಂದೆ ನೀಡಿರುವ ಹೇಳಿಕೆ ಪ್ರಕಾರ-ಇದು ಕಾನೂನು ಪ್ರಕಾರ ನ್ಯಾಯಾಲಯದಲ್ಲಿ ಅಂಗೀಕಾರ್ಹವಲ್ಲವಾದರೂ-ಕೋಟೇಶ್ವರ ರಾವ್, ಪ.ಮೇದಿನಿಪುರ, ಬಂಕೂರ ಮತ್ತು ಪುರುಲಿಯಾ ಜಿಲ್ಲೆಗಳಲ್ಲಿನ ರಸ್ತೆ ನಿರ್ಮಾಣ ಹಾಗೂ ಅರಣ್ಯೋತ್ಪನ್ನ ಸಂಗ್ರಹಣೆಗಳ ಕಂಟ್ರಾಕ್ಟರುಗಳಿಂದ ಪ್ರತಿ ತಿಂಗಳು ಸು. 8 ಲಕ್ಷ ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದರು. ಇದರ ಜೊತೆಗೆ ಪ.ಬಂಗಾಳದ ಹೊರಗಿನ ಮಾವೋವಾದಿ ಘಟಕಗಳು, ಜಾರ್ಖಂಡ್ ಮತ್ತು ಒರಿಸ್ಸಾದ ಮಯೂರ್ ಭಂಜ್ ಕಾಡುಗಳಿಂದ ಕರೆತಂದ ಹೊಸ ಕಾರ್ಯಕರ್ತರನ್ನು ತರಬೇತುಗೊಳಿಸುವ ಸಲುವಾಗಿ, ಪ್ರತಿ ತಿಂಗಳು ಒಂದೂವರೆ ಲಕ್ಷ ರೂಪಾಯಿಗಳನ್ನು ಒದಗಿಸುತ್ತಿದ್ದವು.

2008ರ ಹೊತ್ತಿಗೆ ಗುಪ್ತಚರ ದಳ, ಪ.ಬಂಗಾಳದ 18 ಜಿಲ್ಲೆಗಳ ಪೈಕಿ ಒಂದರ ಹೊರತಾಗಿ ಇನ್ನೆಲ್ಲ ಕಡೆ ಮಾವೋವಾದಿ ಚಟುವಟಿಕೆಗಳ ಬಗ್ಗೆ ವರದಿ ಮಾಡತೊಡಗಿತ್ತು. ಇವುಗಳಲ್ಲಿ ಮೂರು ಜಿಲ್ಲೆಗಳು-ಬಂಕೂರ, ಪ.ಮೇದಿನಿಪುರ ಹಾಗೂ ಪುರುಲಿಯಾ-ದೇಶದಲ್ಲೇ ಅತ್ಯಂತ ಹೆಚ್ಚು ಈ ಚಟುವಟಿಕೆಗಳಿಂದ ಬಾಧಿತವಾದುವು ವೆಂದು ಗುರುತಿಸಲಾಗಿತ್ತು. 2008ರ ಜನವರಿ ಮತ್ತು ಅಕ್ಟೋಬರ್ ನಡುವೆ ಮಾವೋವಾದಿಗಳ 34 ದಾಳಿಗಳಿಂದ ಈ ಜಿಲ್ಲೆಗಳ 21 ಜನ ಸತ್ತಿದ್ದಾರೆ. ಆದರೆ ಇಂದಿನ ಲಾಲ್‌ಗಢದ ಹಿಂಸಾಚಾರದಂತೆಯೇ, ಈ ಎಲ್ಲ ಕೊಲೆಗಳು ಯಾರ ಹಿತಕ್ಕಾಗಿ ನಡೆದುವೆಂದು ಹೇಳಲಾಗುತ್ತಿದೆಯೋ ಆ ಆದಿವಾಸಿಗಳಿಗೆ ಇವುಗಳಿಂದ ಕಿಂಚಿತ್ತೂ ಒಳಿತಾಗಿಲ್ಲ. ಆದರೆ ಮಾವೋವಾದಿ ಪಕ್ಷ ಇದಾವುದರ ಬಗೆಗೂ ತಲೆ ಕೆಡಿಸಿಕೊಂಡಂತಿಲ್ಲ.

ಇತ್ತೀಚಿನ ಸಂದರ್ಶನವೊಂದರಲ್ಲಿ ಕೋಟೇಶ್ವರ ರಾವ್, ತಮ್ಮ ಪಕ್ಷ ಸರಿ ಸುಮಾರು ಎಲ್ಲ ರೀತಿಯ ಹಿಂಸಾಚಾರವನ್ನು ಅನುಮೋದಿಸ ಬಯಸುತ್ತದೆ ಎಂದು ದಿಟ್ಟವಾಗಿಯೇ ಹೇಳಿದ್ದಾರೆ: ಮುಂಬೈನಲ್ಲಿ ಕಳೆದ ನವೆಂಬರ್‌ನಲ್ಲಿ ಲಷ್ಕರ್ ತೊಯ್ಬಾದ ಜೆಹಾದಿಗಳು ನಡೆಸಿದ ನರಹತ್ಯೆಯ ಬಗ್ಗೆ ಅವರು ಹೇಳುವುದು ಹೀಗೆ: "ಅವರು ವಿಕ್ಟೋರಿಯಾ ಸ್ಟೇಷನ್‌ನಲ್ಲಿ ಮಾಡಿದ ರೀತಿಯ ದಾಳಿಯ ರೀತಿಯನ್ನು ನಾವು ಬೆಂಬಲಿಸುವುದಿಲ್ಲ. ಏಕೆಂದರೆ, ಅಲ್ಲಿ ಬಲಿಯಾದವರಲ್ಲಿ ಹೆಚ್ಚಿನವರು ಮುಸ್ಲಿಮರು. ಆದರೆ ಆ ಕಾರಣಕ್ಕಾಗಿ, ಆ ಇಸ್ಲಾಂವಾದಿ ಬಂಡಾಯವನ್ನು ವಿರೋಧಿಸಬಾರದೆಂದು ನಮ್ಮ ಭಾವನೆ. ಏಕೆಂದರೆ, ಅದು ಮೂಲತಃ ಅಮೆರಿಕಾ ಮತ್ತು ಸಾಮ್ರಾಜ್ಯಶಾಹಿ ವಿರೋಧಿಯಾದದ್ದು. ಹಾಗಾಗಿ ಅದು ಬೆಳೆಯಬೇಕೆಂದು ನಾವು ಬಯಸುತ್ತೇವೆ."

ಈಗ ಪಶ್ಚಿಮ ಬಂಗಾಳದಲ್ಲಿ ನಡೆದಿರುವುದು, ಸಾವಿನ ಸಂಸ್ಕೃತಿಯನ್ನು ಪ್ರತಿರೋಧಿಸುವಲ್ಲಿ ನಮ್ಮ ಪ್ರಜಾಸತ್ತಾತ್ಮಕ ಸಂಸ್ಥೆಗಳು ಸಫಲವಾದಾವೇ ಎಂಬುದರ ಪರೀಕ್ಷೆಯೇ ಆಗಿದೆ.

(ಕೃಪೆ: ದ ಹಿಂದೂ, ಜುಲೈ 3, 2009) □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಭ್ರಷ್ಟ ವ್ಯವಸ್ಥೆಯ ಸುತ್ತ ಮುತ್ತ...

ಪ್ರೊ. ಸಂಗನಾಳ ಮಠ
ಯು.ಎನ್. ಹೊನ್ನಾಳಿ

ಎರಡೂವರೆ ಶತಮಾನದ ಹಿಂದೆ ನಾವು ಬ್ರಿಟಿಷರ ಅಧೀನದಲ್ಲಿದ್ದಾಗ ನಮ್ಮ ಸಮಾಜವನ್ನು ಕಾನೂನು ಆಳದೇ ಪರಂಪರೆ ಸಂಪ್ರದಾಯಗಳು ಆಳುತ್ತಿದ್ದವು. ಬ್ರಿಟಿಷರ ಆಳ್ವಿಕೆಯಿಂದ ಕಾನೂನುಗಳು ಪ್ರಾರಂಭವಾದವು. ಆಗ ಕಾನೂನುಗಳನ್ನು ಮುರಿಯಲು ಹೋರಾಟ ಆರಂಭಿಸಿದ್ದು ಐತಿಹಾಸಿಕ ಸತ್ಯ. ಕಾನೂನುಗಳನ್ನು ಭಂಗ ಮಾಡುವುದು ಸ್ವಾತಂತ್ರ್ಯಾ ನಂತರವೂ ಸಾಗಿದೆ. ಒಂದು ದುರಭ್ಯಾಸವಾಗಿದೆ ಹಾಗೆ ಭ್ರಷ್ಟಚಾರವು ಸಹ. ಪ್ರತಿ ಒಬ್ಬರು ತಮ್ಮ ತಮ್ಮ ಸ್ಥಾನಮಾನಕ್ಕೆ ತಕ್ಕಂತೆ ತಮ್ಮ ಕೆಲಸ ಸಾಧಿಸಿಕೊಳ್ಳಲು ಭ್ರಷ್ಟಚಾರದ ಹೊಸ ಹೊಸ ನಮೂನೆಗಳನ್ನು ಅನುಸರಿ ಸುತ್ತಿದ್ದಾರೆ. ಭ್ರಷ್ಟಚಾರ ಸಹಿಷ್ಣುಗಳಾಗಿದ್ದೇವೆ. ಭ್ರಷ್ಟಚಾರ ಅನಿವಾರ್ಯ ಒಪ್ಪಿಕೊಂಡಿದ್ದೇವೆ. ಸಮಾಜ ಅಧಿಕಾರಶಾಹಿ ವರ್ಗ, ರಾಜಕಾರಣಿಗಳು ಭ್ರಷ್ಟಾಚಾರಕ್ಕೆ ಹೆಚ್ಚು ಹತ್ತಿರದಲ್ಲಿವೆ.

ಡಾ|| ಅಂಬೇಡ್ಕರ್ ಅವರು ಸಂವಿಧಾನ ಸಭೆಯಲ್ಲಿ ಮಾತನಾಡುತ್ತ "ಪ್ರತಿಯೊಬ್ಬರೂ ಸಂವಿಧಾನಾತ್ಮಕ ನೀತಿ ಮೌಲ್ಯದ ಪ್ರಸರಣ ಮಾಡುವ ಅಗತ್ಯವನ್ನು ಮಾನ್ಯ ಮಾಡಬೇಕು" ಎರಡು ಹೇಳಿದ್ದರು. ಅವರ ಪ್ರಕಾರ ಸಂವಿಧಾನಾತ್ಮಕ ನೀತಿ ಸಹಜವಾಗಿ ಬರುವಂಥದ್ದಲ್ಲ ಅದನ್ನು ಬೆಳೆಸಿಕೊಂಡು ಬರಬೇಕು. ಇದನ್ನು ನಮ್ಮ ಜನತೆ ಮತ್ತು ನಮ್ಮ ಪ್ರತಿನಿಧಿಗಳು ಕಲಿಯಬೇಕಾಗಿದೆ. ಭಾರತದಲ್ಲಿ ಪ್ರಜಾಪ್ರಭುತ್ವ ಪರಿಯಾಗಿ ಕಾರ್ಯರೂಪಕ್ಕೆ ಬಂದಿರುವುದಿಲ್ಲ. ಸಂವಿಧಾನಾತ್ಮಕ ನೀತಿಯನ್ನು ಸಹ ಇನ್ನೂ ಅಳವಡಿಸಿಕೊಂಡಿಲ್ಲ. ಆರು ದಶಕಗಳ ಆಡಳಿತ ಪದ್ಧತಿಯಲ್ಲಿ ಮೂರು ದಶಕಗಳ ಆಡಳಿತ ಪದ್ಧತಿಯಲ್ಲಿ ಸಂವಿಧಾನಾತ್ಮಕ ನೀತಿಯನ್ನು ದೂರ ಇಟ್ಟಿರುವದಾಗಿ ಕಂಡುಬರುತ್ತದೆ. ರಾಜಕೀಯ ಅಪರಾಧಗಳು, ಭ್ರಷ್ಟಚಾರದ ಪ್ರಕರಣಗಳು ಮುಂದುವರಿಯುತ್ತ ಹೋಗಿ ಅಂಬೇಡ್ಕರ್, ಗಾಂಧಿ ತತ್ವಗಳು ಮೂಲೆಗುಂಪಾಗಿ, ಅಪರಾಧಗಳನ್ನು ಬಯಲಿಗೆಳೆದಾಗ ಅವರ ಪರವಾದಿಸಿದ ವಕೀಲರು ಸಂಸತ್‌ನಲ್ಲಿ ಲಂಚ ಸ್ವೀಕರಿಸುವದು ಸಂವಿಧಾನಾತ್ಮಕವಾಗಿ ಸಂರಕ್ಷಣೆ ಹಕ್ಕು ಎಂದು ವಾದಿಸಿದರು! ಇದರಿಂದ ಸಂಸತ್‌ನಲ್ಲಿ ಲಂಚ ಸ್ವೀಕರಿಸುವದು ಅಪ ರಾಧವಲ್ಲವೆಂಬುದು ಸಾಬೀತು ಆಯಿತು. ಇದು ನಮ್ಮ ರಾಜ ನೀತಿ!

ಭ್ರಷ್ಟ ವ್ಯವಸ್ಥೆಯನ್ನು ಮನುಷ್ಯ ಸೃಷ್ಟಿ ಮಾಡಿದ್ದೋ ಅಥವಾ ಮನುಷ್ಯ ವ್ಯವಸ್ಥೆಯ ಸೃಷ್ಟಿ ಅನ್ನುವುದು ಬೀಜ-ವೃಕ್ಷ ನ್ಯಾಯ, ಅದವ್ಯೂ ಧನದಾಹ ಅಧಿಕಾರದ ಆಸೆ, ಇತರರ ಪ್ರತಿಷ್ಠೆಯ ಅನುಕರಣೆ ಮೂಲಕಾರಣ ಎನ್ನಬಹುದು. ಎರಡೂವರೆ ಶತಮಾನದ ಹಿಂದೆ ನಾವು ಬ್ರಿಟಿಷರ ಅಧೀನದಲ್ಲಿದ್ದಾಗ ನಮ್ಮ ಸಮಾಜವನ್ನು ಕಾನೂನು ಆಳದೇ ಪರಂಪರೆ ಸಂಪ್ರದಾಯಗಳು ಆಳುತ್ತಿದ್ದವು. ಬ್ರಿಟಿಷರ ಆಳ್ವಿಕೆಯಿಂದ ಕಾನೂನುಗಳು ಪ್ರಾರಂಭವಾದವು. ಆಗ ಕಾನೂನುಗಳನ್ನು ಮುರಿಯಲು ಹೋರಾಟ ಆರಂಭಿಸಿದ್ದು ಐತಿಹಾಸಿಕ ಸತ್ಯ. ಕಾನೂನುಗಳನ್ನು ಭಂಗ ಮಾಡುವದು ಸ್ವಾತಂತ್ರ್ಯಾ ನಂತರವೂ ಸಾಗಿದೆ. ಒಂದು ದುರಭ್ಯಾಸವಾಗಿದೆ ಹಾಗೆ ಭ್ರಷ್ಟಚಾರವು ಸಹ.

ಪ್ರತಿ ಒಬ್ಬರು ತಮ್ಮ ತಮ್ಮ ಸ್ಥಾನಮಾನಕ್ಕೆ ತಕ್ಕಂತೆ ತಮ್ಮ ಕೆಲಸ ಸಾಧಿಸಿಕೊಳ್ಳಲು ಭ್ರಷ್ಟಚಾರದ ಹೊಸ ಹೊಸ ನಮೂನೆಗಳನ್ನು ಅನುಸರಿಸುತ್ತಿದ್ದಾರೆ. ಭ್ರಷ್ಟಚಾರ ಸಹಿಷ್ಣುಗಳಾಗಿದ್ದೇವೆ ಭ್ರಷ್ಟಚಾರ ಅನಿವಾರ್ಯ ಒಪ್ಪಿಕೊಂಡಿದ್ದೇವೆ. ಸಮಾಜ ಅಧಿಕಾರಶಾಹಿ ವರ್ಗ, ರಾಜಕಾರಣಿಗಳು ಭ್ರಷ್ಟಾಚಾರಕ್ಕೆ ಹೆಚ್ಚು ಹತ್ತಿರದಲ್ಲಿವೆ. ಇಡೀ ವ್ಯವಸ್ಥೆ ಭ್ರಷ್ಟವಾಗಿದೆ ಜತೆಗೆ ನಮ್ಮಲ್ಲಿ ಪಶ್ಚತ್ತಾಪವೇ ದೊಡ್ಡ ಶಿಕ್ಷೆ ಎಂಬ ಧಾರ್ಮಿಕ ನಂಬಿಕೆಯಿಂದ, ತಮ್ಮ ತಮ್ಮ ದೇವರುಗಳಿಗೆ ಹೋಗಿ ಪಾಪ ವಿಮುಕ್ತರಾಗಲು ಪೂಜೆ ಸಲ್ಲಿಸುವುದು, ಹುಂಡಿಗೆ ಹಣ ಹಾಕುವುದು, ದೇವಸ್ಥಾನ ಕಟ್ಟಿಸುವುದು, ಮೂರ್ತಿಗೆ ಅಲಂಕಾರ, ಅಭಿಷೇಕ ಮಾಡಿಸುವುದು, ಇತ್ಯಾದಿಗಳಿಂದ ಆ ದೇವರನ್ನು ಸಹ ಭ್ರಷ್ಟತೆಗೆ ಒಳಗಾಗಿಸುತ್ತಾರೆ.

ಸಾಮಾಜಿಕವಾಗಿ ಹೆಣ್ಣು ಭ್ರೂಣ ಹತ್ಯೆ, ಸಂಚಾರಿ ನಿಯಮಗಳ ಉಲ್ಲಂಘನೆ, ಸರ್ಕಾರಿ ಕೆಲಸಗಳಲ್ಲಿ ನೌಕರರ ಅರೆಬರೆ ಕಾರ್ಯ, ಅಲ್ಲದೆ ನಾಗರಿಕರ ಮೂಲಭೂತ ಸೌಕರ್ಯಗಳಾದ ಪಡಿತರ ವ್ಯವಸ್ಥೆ, ಆಸ್ಪತ್ರೆ, ಶಿಕ್ಷಣ, ವಿದ್ಯುತ್, ನೀರು, ಅರಣ್ಯ, ಭೂದಾಖಲೆ, ಪೊಲೀಸ್, ಕಂದಾಯ ಇವುಗಳಿಗೆಲ್ಲ ಸೇರಿದಂತೆ ಜನರು ತಮ್ಮ ಅಗತ್ಯ ಕಾರ್ಯಕ್ಕಾಗಿ ಕಂತೆಕಂತೆ ಹಣ ಕೊಟ್ಟಾಗ ಎಲ್ಲವೂ ಸಲೀಸು, ಒಂದು ಸಮೀಕ್ಷೆ ಪ್ರಕಾರ ದೇಶದಾದ್ಯಂತ 22728 ಜನರನ್ನು ಸಮೀಕ್ಷೆಗೆ ಒಳಪಡಿಸಿದಾಗ ಅಂದರೆ ಬಡತನ ರೇಟಿಗಿಂತ ಕಡಿಮೆ ಇರುವವರು ಒಟ್ಟು 883ಕೋಟಿರೂ. ವಿವಿಧ ಖಾತೆಗಳ ನೌಕರರಿಗೆ ಲಂಚ ನೀಡಿದ್ದರು. ಇನ್ನು ಚುನಾವಣೆ ಕೊಟ್ಟುಕೊಳ್ಳುವ ವ್ಯವಹಾರವಾಗಿದೆ ಜಾತಿ ಸಾಲದು ಜಾತಿ ಜೊತೆಗೆ ಧನಬಲ, ಧನದಗಣಿ ಇದ್ದರೆ ಗೆದ್ದಾಗ ಅಧಿಕಾರ.

ಈ ಅಧಿಕಾರದ ಗಣಿ ದೊರೆತರೆ ಸಾಕು ಮುಂದಿನ ತಲೆಮಾರು ತಿಂದುಂಡು ತೇಗುವಷ್ಟು ಗಣಿ! ಆಯೋಗದ ಬಿಗಿ ಇದ್ದರೂ ಇತ್ತೀಚಿನ ಚುನಾವಣೆಯಲ್ಲಿ ಅಭ್ಯರ್ಥಿಗಳು ತಲಾ 1 ರಿಂದ 10 ಕೋಟಿವರೆಗೆ ಖರ್ಚು ಮಾಡಿದ್ದಾರೆ "ಜನ ಸೇವೆಯ ಅವಕಾಶ

ಕೊಡಿ" ಎಂದು ಮಧ್ಯದ ಹೊಳೆ, ಕೊಡುಗೆಗಳ ಮಳೆ ಹರಿದಿದೆ. ಸದ್ದು ಗದ್ದಲ ಆರ್ಭಟ ಮಾತ್ರ ಕಡಿಮೆ. ಎಲ್ಲವೂ ಒಳಗಿಂದ ಒಳಗೆ ಕ್ರಯ-ವಿಕ್ರಯ! ಮೊದಲು ಸಾಮಾನ್ಯರಂತೆ ಇದ್ದವರು ಶಾಸಕರಾದರೆ, ಸಚಿವರಾದರೆ ಆಗರ್ಭ ಶ್ರೀಮಂತರಾ ಗುವರು, ತಮ್ಮ ಮಕ್ಕಳ ಮದುವೆ ಇತರ ಸಮಾರಂಭಗಳಿಗೆ ಖರ್ಚು ಮಾಡುವದು 15 ರಿಂದ 20 ಕೋಟಿ ರೂ.! ಇನ್ನೂ ಉಳಿದದ್ದನ್ನು ನೀವೇ ಊಹಿಸಿರಿ. ಒಬ್ಬ ಭ್ರಷ್ಟ ರಾಜಕಾರಣಿ ಅಥವಾ ನೌಕರನು ಸಂಪಾದಿಸಿದ ಅಕ್ರಮ ಸಂಪತ್ತನ್ನು ಹತ್ತಿರ ದವರು ಅನುಭವಿಸುತ್ತಾರೆ. ಆದರೆ ಯಾವುದೇ ವ್ಯಕ್ತಿ ಆ ಸಂಬಂಧವನ್ನು ಕಡಿದುಕೊಳ್ಳಲು ಇಚ್ಛಿಸುವುದಿಲ್ಲ.

ಇತ್ತೀಚಿನ ದಶಕಗಳಲ್ಲಿ ದೇಶವು ಸಾಕಷ್ಟು ಪ್ರಗತಿ ಅಭಿ ವೃದ್ಧಿ ಹೊಂದಿದೆ. ರೈಲು, ಬಸ್ ವಿಮಾನ ಸೌಕರ್ಯ, ಆಧು ನಿಕ ಸಂಪರ್ಕ ತಂತ್ರಜ್ಞಾನ ಡಿಟಿ-ಬಿಟಿ, ಟ್ವೆಂಟಿ ಟ್ವೆಂಟಿ ಕ್ರಿಕೆಟ್, ಐಷಾರಾಮಿ ಸುಖೋಪಯೋಗಿ ವಸ್ತುಗಳು, ವಾಹನಗಳು ಎಲ್ಲ ಜೊತೆಗೆ ಭ್ರಷ್ಟಚಾರವೂ ಸಹ. ಪ್ರಾಮಾಣಿಕತೆಯಿಂದ ಎಲ್ಲ 'ಐಶಾರಾಮಿ ವಸ್ತುಗಳನ್ನು ಹೊಂದಲು ಸಾಧ್ಯವೇ. ಅದಕ್ಕೆ ಉತ್ತರ ಭ್ರಷ್ಟಚಾರ: ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಜಿಸಿದ ಹಣದಲ್ಲಿ ಶೇ. 70 ಮಾತ್ರ ನಿಜವಾದ ಮೌಲ್ಯ. ಅಲ್ಲಿಯೂ ಕತ್ತರಿ. ಹೀಗಾಗಿ ಕಳಪೆ ಕಾರ್ಯ.

ಭ್ರಷ್ಟಚಾರ ಒಂದು ರೋಗವಾಗಿ ಸರ್ವಾಂಗವನ್ನು ವ್ಯಾಪಿಸಿದೆ. ಯಾವ ಅಂಗಕ್ಕೆ ಔಷಧಿ ಕೊಡಲು ಸಾಧ್ಯ? ಎಲ್ಲಿ ಕೈ ಇಟ್ಟರೂ ಕೊಳೆತು ನಾರುತ್ತದೆ. ಇತ್ತೀಚೆಗೆ ಬಿಡುಗಡೆ ಆದ ದಸ್ತಾವೇಜಿನ ಪ್ರಕಾರ ಭಾರತದಲ್ಲಿ ಪೊಲೀಸ್, ಆರೋಗ್ಯ, ವಿದ್ಯುತ್ ಇಲಾಖೆಗಳು ಅತ್ಯಂತ ಭ್ರಷ್ಟ ಇಲಾಖೆಗಳಾಗಿವೆ. ಈ ಕಾರಣಕ್ಕಾಗಿ ಭಾರತ ವಿಶ್ವದಲ್ಲಿ ನಂಬರ್ 1 ಆಗಿದ್ದಾರೆ, 180 ರಾಷ್ಟ್ರಗಳಲ್ಲಿ 74ನೇ ಸ್ಥಾನದಲ್ಲಿದೆ. ಇನ್ನು ನಮ್ಮಗಿಂತ ಭ್ರಷ್ಟ ದೇಶಗಳು ಇವೆ ಎಂಬ ಸಮಾದಾನ ಹೊಂದುವುದಾದರೆ,-ರಷ್ಯಾ 145ನೇ ಸ್ಥಾನ, ಪಾಕ್ 140 ನೇ ಸ್ಥಾನ ಶ್ರೀಲಂಕಾ 96ನೇ ಸ್ಥಾನದಲ್ಲಿದೆ. ಹಾಗೆ ಶೂನ್ಯ ಭ್ರಷ್ಟಚಾರ ರಾಷ್ಟ್ರಗಳ ಅಗ್ರ ಪಂಕ್ತಿಯಲ್ಲಿ ಡೆನ್ಮಾರ್ಕ, ಫಿನ್‌ಲ್ಯಾಂಡ್, ನ್ಯೂಝಿಲ್ಯಾಂಡ್, ಸಿಂಗಪುರ, ಸ್ವೀಡನ್, ಈ 5 ರಾಷ್ಟ್ರಗಳು, ಅಮೇರಿಕ, ಬ್ರಿಟನ್ ಕ್ರಮವಾಗಿ 20 ಮತು 13ನೇ ಸ್ಥಾನ. ಇನ್ನು ರಾಜ್ಯಗಳ ಕಡೆಗೆ ಗಮನ ಹರಿಸಿದಾಗ ಬಿಹಾರ, ಉತ್ತರ ಪ್ರದೇಶ ಶೇ 50ರಷ್ಟು, ಆಂಧ್ರ, ಮಧ್ಯ ಪ್ರದೇಶ, ರಾಜಸ್ತಾನ ಶೇ.35 ರಷ್ಟು ಕರ್ನಾಟಕ, ತಮಿಳು ನಾಡು, ಮಹಾರಾಷ್ಟ್ರ, ಗುಜರಾತ ಶೇ.25ರಷ್ಟು, ಪ. ಬಂಗಾಳ ಶೇ. 15ರಷ್ಟು ಅತಿ ಕಡಿಮೆ ಕೇರಳದಲ್ಲಿ ಶೇ 10 ರಷ್ಟು ಪ್ರಮಾಣದಲ್ಲಿದೆ.

ರಾಜಕಾರಣಿಗಳು ಭ್ರಷ್ಟಚಾರವನ್ನು ನಿರ್ಮೂಲನೆ ಮಾಡುವೆವು ಎಂದವರೇ ತಮ್ಮ ಕಪ್ಪು ಹಣವನ್ನು ಸ್ವಿಸ್ ಬ್ಯಾಂಕಿನಲ್ಲಿ ಇಟ್ಟಿದ್ದಾರೆ. ಈ ರಾಜಕಾರಣಿಗಳು, ಉದ್ದಿಮೆದಾರರು, ಸು 1.95.000 ಕೋಟಿಗಳಷ್ಟು ಕಪ್ಪು ಹಣವನ್ನು ಇಟ್ಟಿದ್ದಾರೆ ಎಂದು ಅಂದಾಜಿಸಲಾಗಿದೆ. ಹವಾಲಾ, ಯೂರಿಯಾ, ತೆಹಲ್ಕಾ ಹಗರಣಗಳ ಸರಮಾಲೆ ಭ್ರಷ್ಟಚಾರದ ಇನ್ನೊಂದು ಮುಖ. ಭ್ರಷ್ಟಚಾರದ ಆಪಾದನೆ ರಾಜಕಾರಣಿಗಳ ಮೇಲೆ ಬಂದರೆ ವಿಚಾರಣೆ ಎಂಬ ನಾಟಕ ಆಡಿ ಸರಿಯಾದ ಸಾಕ್ಷಿ ಇಲ್ಲದ ಮೂಲಕ ವಿಮುಕ್ತಿಗೊಳಿಸುತ್ತಾರೆ. ಈ ರೀತಿ ಮಾಡುವದರಿಂದ ಭ್ರಷ್ಟಚಾರದ, ಕಪ್ಪು ಹಣ ಬೆಳೆಯುತ್ತಲಿದೆ ಇತ್ತಿತ್ತಲಾಗಿ, ನ್ಯಾಯಾಂಗವೂ ಕಲುಷಿತವಾಗುತ್ತಲಿದೆ. ಇಂಥ ರಾಜಕಾರಣಿಗಳನ್ನು ಆಯ್ಕೆ ಮಾಡದ ಜನತಾ ನ್ಯಾಯಾಲಯದ ತೀರ್ಪು ಪರಿಹಾರವಾಗಬಹುದು.

ಭಾರತ ಸ್ವಾತಂತ್ರ್ಯದ ಮುನ್ನಾ ದಿನದಂದು ವಿನ್‌ಸ್ಟನ್ ಚರ್ಚಿಲ್ ಅವರು ಪ್ರವಾಸಿಯಂತೆ ಈ ಮಾತುಗಳನ್ನು ಹೇಳಿದ್ದರು "ಭಾರತದಲ್ಲಿ ಇನ್ನು ಮುಂದೆ ಅಧಿಕಾರ ದುಷ್ಟರು ದಕ್ಕರು ದರೋಡೆಕಾರರ ಪಾಲಾಗುತ್ತದೆ. ಸೇವಿಸುವ ಗಾಳಿಯ ಹೊರತು ಎಲ್ಲ ವಸ್ತುಗಳ ಮೇಲೆ ತೆರಿಗೆ. ನಾಯಕತ್ವ ತೂಕಲವಿಲ್ಲದ ವ್ಯಕ್ತಿತ್ವಗಳ ಪಾಲಾಗುತ್ತದೆ. ಸವಿ ಮಾತು ಆಡಿದರೂ ಕಲುಷಿತ ಹೃದಯದವರಾಗಿರುತ್ತಾರೆ. ಇಂಥ ನಾಯಕರುಗಳು ಅಧಿಕಾರಕ್ಕಾಗಿ ತಮ್ಮ ತಮ್ಮಲ್ಲಿ ಕಚ್ಚಾಡುವುದರಿಂದ ಇಡೀ ದೇಶದ ರಾಜಕೀಯ ವ್ಯವಸ್ಥೆಕೆಟ್ಟು ಹಾಳಾಗುತ್ತದೆ" ಈ ಮಾತಿನಲ್ಲಿ ಸತ್ಯಾಂಶವೂ ಇದೆ. ನಾವು ಎಲ್ಲಿಯವರೆಗೆ ಪ್ರಮಾಣಿಕತೆ ಮತ್ತು ಘನತೆಯನ್ನು ಆಧ್ಯತೆಯಾಗಿ ಪರಿಗಣಿಸುವದಿಲ್ಲವೋ ಅಲ್ಲಿಯವರೆಗೆ ಭ್ರಷ್ಟಚಾರ ನಿರ್ನಾಮವಾಗುವುದಿಲ್ಲ.

ಐಷಾರಾಮಿ ವಸ್ತುಗಳ ಉಪಯೋಗದ ಬಗ್ಗೆ ಆಸಕ್ತಿ ಹೊಂದಿದಾಗ; ಆಧುನಿಕತೆಯ ಕಡೆಗೆ ಮನ ಸೋತಾಗ; ಸಮಾಜದಲ್ಲಿ 'ಕೈಲಾಗದವನು' ಎಂಬ ನಿಂದನೆ ಹೊಂದಿದಾಗ; ಮನೆಯಲ್ಲಿಯ ಹೆಣ್ಣು ಮಕ್ಕಳ ಪ್ರಚೋದನೆಯಿಂದ; ಅಂತಸ್ತಿಗೆ ಮಾರು ಹೋದಾಗ; ಅವಶ್ಯಕತೆಗಳಿಗಿಂತ ಹೆಚ್ಚು ಸಾಮಾನು ಹೊಂದಬೇಕೆಂಬ ಹುಚ್ಚು, ಬಲವತ್ತರವಾದಾಗ ಲಂಚಕ್ಕೆ ಕೈಹಾಕುವ ಪ್ರಸಂಗ ಉಂಟಾಗುವುದು, ಚುನಾವಣೆ ವ್ಯವಸ್ಥೆ ಬಂದಾಗ ಪಾರ್ಟಿ ಫಂಡ್‌ಗೆ ಹಣ ಸಂಗ್ರಹಿಸುವದಾದರೆ, ಪುನಃ ಲಂಚಕ್ಕೆ ಕೈಹಾಕುವದು. ಸರಕಾರದ ಆಯವ್ಯಯ ನಿಯಂತ್ರಣ ಭ್ರಷ್ಟ ರಾಜಕಾರಣಿಗಳಲ್ಲಿ ಕೈಯಲ್ಲಿರುವದು ಮತ್ತು ಅವರ ಹಿಡಿತದಲ್ಲಿರುವ ಅಧಿಕರಶಾಹಿಗಳು ಲಂಚಕ್ಕೆ ಪ್ರೇರೇಪಿಸುವರು.

1947ರಲ್ಲಿ ಕೇಂದ್ರ ಸರಕಾರವು ಭ್ರಷ್ಟಚಾರ ಪ್ರತಿಬಂಧಕ ಕಾಯ್ದೆ (Prevention of Corruption Act) ಹೊರಡಿಸಿತು. ಕೆಲವು ಮಾರ್ಪಾಡು ಮಾಡಿ ಪುನರ್ ಜಾರಿಗೊಳಿಸಲಾಯಿತು. ಇದು ಜಮ್ಮು-ಕಾಶ್ಮೀರ ಹೊರತು ಪಡಿಸಿ ದೇಶವ್ಯಾಪಿ ಅನ್ವಯವಾಗುತ್ತದೆ.

9-9-88 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಅನ್ವಯ ಆಡಳಿತ ಯಂತ್ರದಲ್ಲಿ ಸರಕಾರಿ ಅಧಿಕಾರಿಗಳು ನಡೆಸುವ ಭ್ರಷ್ಟಚಾರ, ಸ್ವಜನ ಪಕ್ಷಪಾತ ಅಶಿಸ್ತುಗಳನ್ನು ನಿಗ್ರಹಿಸುವದು ಆಗಿದೆ. 1988ರ ಭ್ರಷ್ಟಚಾರ ನಿಗ್ರಹಕಾಯ್ದೆ ಬೆಂಬಲವಾಗಿದೆ. 1988ರಲ್ಲಿ ಲೋಕಾಯುಕ್ತ ಸಂಸ್ಥೆ ವಿಸ್ತರಣೆ ಆದರೂ ಆಗಿನ ಅಧಿಕಾರಿ, ಸಿಬ್ಬಂದಿಸಂಖ್ಯೆಯಲ್ಲಿ ಬದಲಾವಣೆ ಆಗಿರುವದಿಲ್ಲ. ದೂರುಗಳ ವಿಚಾರಣೆಗೆ ಆಡಳಿತ ನಿರ್ವಹಣೆಗೆ ಈ ಸಿಬ್ಬಂದಿ ಸಾಕಾಗುವದಿಲ್ಲ. ನವೆಂಬರ್ 2008ರ ವೇಳೆಗೆ 23,000 ಕೇಸುಗಳು ಇತ್ಯರ್ಥಕ್ಕೆ ಬಾಕಿ ಇರುತ್ತವೆ. 2008 ರಲ್ಲಿ 230 ಜನರು ಲೋಕಯುಕ್ತರ ಬಲೆಗೆ ಬಿದ್ದವರಾಗಿದ್ದರು. ಮತ್ತು 95 ಬಾರೀ ಕುಳಗಳ ಮೇಲೆ ದಾಳಿ ಸಂಘಟಿಸಿದ್ದರು. ಲೋಕಾಯುಕ್ತ ದಾಳಿಗೆ ಒಳಗಾದ ಸರಕಾರಿ ಅಧಿಕಾರಿಯನ್ನು ತಕ್ಷಣ ಅಮಾನತುಗೊಳಿಸಲು ಅನುವಾಗುವಂತೆ ಕರ್ನಾಟಕ ನಾಗರಿಕ ಸೇವಾನಿಯ ಮೇ 10ಕ್ಕೆ ತಿದ್ದುಪಡಿಯನ್ನು ಸರಕಾರ ಆಗಸ್ಟ08ರಲ್ಲಿ ಜಾರಿಯಾಯಿತು. ಇದು ನ್ಯಾಮೂ. ಸಂತೋಷ ಹೆಗ್ಡೆಯವರ ಪ್ರಯತ್ನದ ಫಲ.

ಶ್ರೀ MP. ಕೃಷ್ಣಪ್ಪನವರ (Eradicate corruption and save the nation) ಪುಸ್ತಕದಲ್ಲಿ ಭ್ರಷ್ಟಾಚಾರ ನಿರ್ಮೂಲನೆಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ.

1.ಸ್ವಿಸ್ ಸರಕಾರದೊಂದಿಗೆ ಸಂಪರ್ಕಿಸಿ ಕಪ್ಪು ಹಣ ಇಟ್ಟಿರುವವರ ಹೆಸರನ್ನು ಬಹಿರಂಗಪಡಿಸಿ ಆ ಹಣವನ್ನು ಭಾರತ ಸರಕಾರಕ್ಕೆ ಹಿಂದಿರುಗಿಸಲು ಒತ್ತಾಯಿಸುವದು.

2. ಕಪ್ಪು ಹಣ ಇಟ್ಟಿರುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಹಾಕುವುದು.

3. ಒಂದು ದಶಕದಷ್ಟು ಹಿಂದೆ ಬೇನಾಮಿ ಹೆಸರಿನಲ್ಲಿ ಆಸ್ತಿ ಗಳಿಸಿದವರ ವಿಷಯಕ್ಕೆ ಸಂಬಂಧಿಸಿದಂತೆ ಶಾಸನವಾಗಿದೆ. ಆದರೆ ಇನ್ನೂ ಜಾರಿ ಆಗಿರುವದಿಲ್ಲ ಜಾರಿಗೊಳಿಸಬೇಕು.

4. ತೆರಿಗೆಗಳ್ಳರನ್ನು ಬಂಧಿಸಿ ಜೈಲಿಗೆ ಕಳಿಸಬೇಕು.

ಮಾವೋತ್ಸೆತುಂಗ ಅಧಿಕಾರಕ್ಕೆ ಬಂದಾಗ ಭ್ರಷ್ಟರನು ಕಂಡು ಹಿಡಿದು ಪಟ್ಟಿಮಾಡಲು ಎರಡು ವರ್ಷ ತೆಗೆದುಕೊಂಡ ನಂತರ ಅವರನ್ನು ಸಾರ್ವಜನಿಕರ ಎದುರು ನೇಣು ಹಾಕಿಸಿದ. ಹಾಗೆ ರಷ್ಯಾದಲ್ಲಿಯೂ ನಿಕಿಡಾ ಕ್ರುಶ್ಚೇವ್ ಆಳ್ವಿಕೆಯಲ್ಲಿ ಮಾಸ್ಕೋದ ಒಂದು ಆಸ್ಪತ್ರೆಯಲ್ಲಿ ಇಬ್ಬರು ವೈದ್ಯರು ರೋಗಿಗೆ ಚಿಕಿತ್ಸೆ ಮಾಡಲು ಲಂಚ ಕೇಳಿದ್ದರಿಂದ ವಿಚಾರಣೆ ನಡೆಸಿ, ಪ್ರಧಾನಿಯ ಆದೇಶದ ಮೇರೆಗೆ ರೋಗಿಗಳ ಎದುರಿನಲ್ಲಿ ಆಸ್ಪತ್ರೆಯ ಕಾಪೌಂಡಿನಲ್ಲಿ ಗುಂಡು ಹೊಡೆಯಲಾಯಿತು. ಇವೆಲ್ಲ ಕಮ್ಯುನಿಸ್ಟ ದೇಶದಲ್ಲಿ ಮಾತ್ರ ಸಾಧ್ಯ. ಆದರೆ ನಮ್ಮ ದೇಶದಲ್ಲಿ ಪ್ರತ್ಯೇಕವಾದ ಉಗ್ರ ತೀವ್ರತರವಾದ ಶಾಸನ ಆಗಬೇಕಾದ್ದು ಅವಶ್ಯಕವಾಗಿದೆ. ಸ್ವಿಸ್ ಬ್ಯಾಂಕಿನಲ್ಲಿ ರಾಜಕಾರಣಿಗಳ ಹಣ ಹೆಚ್ಚಾಗಿ ಇರುವದರಿಂದ ಪ್ರತಿನಿಧಿ ಸಭೆಯಲ್ಲಿ ತೀವ್ರತರವಾದ ಶಾಸನ ಜಾರಿಯಾಗುವದು ಕಠಿಣ.

ಭಾರತ ಸ್ವಾತಂತ್ರ್ಯದ ಮುನ್ನಾ ದಿನದಂದು ವಿನ್‌ಸ್ಟನ್ ಚರ್ಚಿಲ್ ಅವರು ಪ್ರವಾಸಿಯಂತೆ ಈ ಮಾತುಗಳನ್ನು ಹೇಳಿದ್ದರು"ಭಾರತದಲ್ಲಿ ಇನ್ನು ಮುಂದೆ ಅಧಿಕಾರ ದುಷ್ಟರು ದಕ್ಕರು ದರೋಡೆಕಾರರ ಪಾಲಾಗುತ್ತದೆ. ಸೇವಿಸುವ ಗಾಳಿಯ ಹೊರತು ಎಲ್ಲ ವಸ್ತುಗಳ ಮೇಲೆ ತೆರಿಗೆ. ನಾಯಕತ್ವ ತೂಕಲವಿಲ್ಲದ ವ್ಯಕ್ತಿತ್ವಗಳ ಪಾಲಾಗುತ್ತದೆ. ಸವಿ ಮಾತು ಆಡಿದರೂ ಕಲುಷಿತ ಹೃದಯದವರಾಗಿರುತ್ತಾರೆ. ಇಂಥ ನಾಯಕರುಗಳು ಅಧಿಕಾರಕ್ಕಾಗಿ ತಮ್ಮ ತಮ್ಮಲ್ಲಿ ಕಚ್ಚಾಡುವುದರಿಂದ ಇಡೀ ದೇಶದ ರಾಜಕೀಯ ವ್ಯವಸ್ಥೆ ಕೆಟ್ಟು ಹಾಳಾಗುತ್ತದೆ" ಈ ಮಾತಿನಲ್ಲಿ ಸತ್ಯಾಂಶವೂ ಇದೆ.

ನಾವು ಎಲ್ಲಿಯವರೆಗೆ ಪ್ರಮಾಣಿಕತೆ ಮತ್ತು ಘನತೆಯನ್ನು ಆಧ್ಯತೆಯಾಗಿ ಪರಿಗಣಿಸುವದಿಲ್ಲವೋ ಅಲ್ಲಿಯವರೆಗೆ ಭ್ರಷ್ಟಚಾರ ನಿರ್ನಾಮವಾಗುವುದಿಲ್ಲ. ಪ್ರಜೆಗಳಲ್ಲಿ ಪ್ರಜಾಪ್ರಜ್ಞೆ, ರಾಜಕೀಯ ಪ್ರಜ್ಞೆ ಸಾಮಾಜಿಕ ಪ್ರಜ್ಞೆಯೊಂದಿಗೆ, ರಾಜಕಾರಣಿಗಳಲ್ಲಿ ನೈತಿಕ ಪ್ರಜ್ಞೆ ಉಂಟಾದಾಗ ಮಾತ್ರ ಭ್ರಷ್ಟತೆಯ ನಿವಾರಣೆ ಸಾಧ್ಯ. □

ಕೇಂದ್ರ ಬಜೆಟ್-೨೦೦೯-೧೦

ಕಿಬ್ಬದಿಯ ಕೀಲುಗಳು ಜಾಗ್ರತೆ!

ಈ ಬಾರಿ ಸರ್ಕಾರ ಮಾಡುತ್ತಿರುವ ವಾರ್ಷಿಕ ವೆಚ್ಚ ಭಾರತದ ಇತಿಹಾಸದಲ್ಲೇ ಅತಿ ಹೆಚ್ಚು. ೧೦.೨೧ಲಕ್ಷ ಕೋಟಿ ರೂ! ಇದರಲ್ಲಿ ಗ್ರಾಮೀಣ ಸೇವೆಗಳಿಗೆ ಅಂದರೆ ಗ್ರಾಮೀಣ ಉದ್ಯೋಗ ಖಾತರಿ, ಗ್ರಾಮೀಣ ಆರೋಗ್ಯ, ಆಹಾರ ಖಾತರಿ ಇನ್ನಿತರ ಬಾಬತ್ತುಗಳಿಗೆ ಹೋದ ವರ್ಷಕ್ಕಿಂತ ಹೆಚ್ಚಿನ ಅನುದಾನವನ್ನು ನೀಡಲಾಗಿದೆ. ಉದಾಹರಣೆಗೆ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಫಲಾನುಭವಿ ಕುಟುಂಬಗಳ ಸಂಖ್ಯೆಯನ್ನು ೩.೨ ಕೋಟಿಯಿಂದ ೪.೪ ಕೋಟಿಗೇರಿಸಲಾಗಿದೆ. ಅಲ್ಲದೆ ಈವರೆಗೆ ಅವರಿಗೆ ಕೊಡುತ್ತಿದ್ದ ದಿನಕ್ಕೆ ೭೫ ರೂ.ಗಳ ಕೂಲಿಯನ್ನು ೧೦೦ರೂ. ಗೇರಿಸಲಾಗಿದೆ. ಈ ಬಾಬತ್ತಿಗೆ ಹೋದವರ್ಷಕ್ಕಿಂತ ಶೇ.೧೪೪ ರಷ್ಟು ಅನುದಾನವನ್ನು ಏರಿಸಿ ೩೯,೦೦೦ ಕೋಟಿ ರೂ. ನೀಡಲಾಗಿದೆ.

ಶಿವಸುಂದರ್

ಪ್ರಣಬ್ ದಾದಾ 24 ವರ್ಷಗಳ ನಂತರ ಬಜೆಟ್ ಮಂಡಿಸಿದ್ದಾರೆ. ಗ್ರಾಮೀಣ ಉದ್ಯೋಗ, ಆರೋಗ್ಯ, ಭದ್ರತೆ ಇನ್ನಿತ್ಯಾದಿ ಕ್ಷೇತ್ರಗಳಿಗೆ ಅನುದಾನ ಹೆಚ್ಚಿರುವುದನ್ನು ನೋಡಿ ಇದೊಂದು 'ಆಮ್ ಆದ್ಮಿ' ಬಜೆಟ್ ಎಂದು ಎಲ್ಲರೂ ಹೊಗಳುತ್ತಿದ್ದಾರೆ. ಬಜೆಟ್ ದಿನ ಸ್ಟಾಕ್ ಮಾರ್ಕೆಟ್ ಸೂಚ್ಯಂಕ 800ಕ್ಕೂ ಹೆಚ್ಚು ಅಂಕಗಳಷ್ಟು ಕುಸಿದಿದ್ದನ್ನು ಕಂಡು ಇದು ನಿಜಕ್ಕೂ ಕಾರ್ಪೊರೇಟ್ ವಲಯ ವಿರೋಧಿ ಬಜೆಟ್ ಇರಬಹುದೇ ಎಂದು ಎಲ್ಲರ ಹುಬ್ಬು ಮೇಲೇರಿದೆ! ಮಾಧ್ಯಮಗಳು ಕೂಡಾ ಇದನ್ನೊಂದು ಆರ್ಥಿಕ ಸುಧಾರಣೆ ವಿರೋಧಿ ಅರ್ಥಾತ್ ಕಾರ್ಪೊರೇಟ್ ವಿರೋಧಿ ಬಜೆಟ್ ಎನ್ನುವ ಅರ್ಥಬರುವಂತೆ ವರದಿ ಮಾಡಿವೆ.

ಆದರೆ ಮರು ದಿನ ಪ್ರಣಬ್ ದಾದಾ ಈ ದೇಶದ ಪ್ರಮುಖ ಕಾರ್ಪೊರೇಟ್ ಉದ್ಯಮಪತಿಗಳ ಸಂಘಟನೆಯಾದ ಸಿಐಸಿ-ಫಿಕ್ಕಿ ಜಂಟಿ ವೇದಿಕೆಯಲ್ಲಿ ಬಜೆಟ್ ಭಾಷಣದಲ್ಲಿ ಹೇಳದ ಹಲವು ಸಂಗತಿಗಳನ್ನು ಪ್ರಕಟಿಸಿದ ಕೂಡಲೇ ಸೆನ್ಸೆಕ್ಸ್ ಸೂಚ್ಯಂಕ 160 ಅಂಕಗಳಷ್ಟು ಏರಿಬಿಟ್ಟಿತು. ಹಾಗಾದರೆ ಪ್ರಣಬ್ ಜನ ವೇದಿಕೆಯಾದ ಸಂಸತ್ತಿನಲ್ಲಿ ಹೇಳಿದ್ದು ಸತ್ಯವಾ? ಅಥವಾ ಬಜಾಜ್, ಅಂಬಾನಿಗಳ ಕಾರ್ಪೊರೇಟ್ ವೇದಿಕೆಯಲ್ಲಿ ಹೇಳಿದ್ದು ಸತ್ಯವಾ?

ಪ್ರಣಬ್ ದಾದಾ ಮಂಡಿಸಿದ ಬಜೆಟ್ಟಿನಲ್ಲಿ ಯಾವ ಸರಕಿಗೆ ಎಷ್ಟು ತೆರಿಗೆ ಕಡಿಮೆ ಮಾಡಿದ್ದಾರೆ ಅಥವಾ ಜಾಸ್ತಿ ಮಾಡಿದ್ದಾರೆ ಎನ್ನುವುದು ಅಷ್ಟು ಮುಖ್ಯವಲ್ಲ. ಬಜೆಟ್ಟೆಂದರೆ ಅಷ್ಟೆ ಅಲ್ಲ. ಬಜೆಟ್ಟು ಮೂಲಭೂತವಾಗಿ ಹೇಳುವುದು ಸರ್ಕಾರ ಯಾವ ಮೂಲಗಳಿಂದ ಎಷ್ಟೆಷ್ಟು ಹಣವನ್ನು ಸಂಗ್ರಹಿಸಿ ಯಾವ್ಯಾವ ಬಾಬತ್ತಿಗೆ ಖರ್ಚು ಮಾಡುತ್ತದೆ ಎಂದು ಹೇಳುವ ದಾಖಲೆ. ಹೀಗಾಗಿ ಪ್ರತಿ ಬಜೆಟ್ಟಿನ ಹಿಂದೆ ಒಂದು ಸರ್ಕಾರದ ಆರ್ಥಿಕ ಸಿದ್ಧಾಂತ ಕೆಲಸ ಮಾಡುತ್ತಿರುತ್ತದೆ. ಅದು ಯಾವ ವಸ್ತುಗಳ ಮೇಲೆ ತೆರಿಗೆ ವಿಧಿಸಿ ಯಾವುದನ್ನು ಬಿಡುತ್ತಿದ್ದಾರೆ ಎಂಬುದರಲ್ಲಿ ಪ್ರತಿಫಲಿತವಾದರೂ ಅದರ ಸರಿಯಾದ ಚಿತ್ರಣ ಸಿಗುವುದು ಬಜೆಟಿನ ಸ್ಥೂಲ ಮತ್ತು ಒಟ್ಟಾರೆ ಧೋರಣೆಯಲ್ಲಿ.

ಈ ಬಾರಿ ಬಜೆಟ್ ಮಂಡನೆಯಾಗುವ ವೇಳೆಗೆ ಇಡೀ ಜಗತ್ತು ದೊಡ್ಡ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದೆ. ಉದ್ಯಮಿಗಳು ಲಾಭದ ಕೊರತೆಯನ್ನು ಎದುರಿಸುತ್ತಿದ್ದರೆ, ಜನತೆ ಬದುಕಲು ಬೇಕಾದ ಉದ್ಯೋಗ, ಆಹಾರಗಳ ಕೊರತೆಯನ್ನು ಎದುರಿಸುತ್ತಿದ್ದಾರೆ. ಉದ್ಯಮಿಗಳ ಬಳಿ ಲಾಭ ಶೇಖರವಾದರೆ ಅದು ಕ್ರಮೇಣ ಜಿನುಗುತ್ತಾ ಕೆಳಗೆ ಹರಿದು ದೇಶದ ಎಲ್ಲಾ ಜನರಿಗೂ ದೊರಕುತ್ತದೆ, ಆದ್ದರಿಂದ ಮಾರುಕಟ್ಟೆಗೆ ಅರ್ಥಾತ್ ಉದ್ಯಮಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಸರ್ಕಾರ ಹೊರಗಿರಬೇಕು ಎಂಬ ಸಿದ್ಧಾಂತವನ್ನು ಈವರೆಗೆ ಜಗತ್ತು ಮತ್ತು ಭಾರತ ಅನುಸರಿಸುತ್ತಿತ್ತು.

ಆದರೆ ಈ ಆರ್ಥಿಕ ಹಿಂದ್ಸರಿತ ಅವೆಲ್ಲವನ್ನೂ ಸುಳ್ಳಾಗಿಸಿದೆ. ಪ್ರಪಂಚದೆಲ್ಲೆಡೆ ಉದ್ಯಮಿಗಳೇ ಪ್ರಭುತ್ವವು ತಮ್ಮ ಪರವಾಗಿ ಮಧ್ಯ ಪ್ರವೇಶ ಮಾಡಿ ತಮ್ಮನ್ನು ಬದುಕಿಸಬೇಕೆಂದು ಕೇಳುತಿವೆ. ಹೀಗಾಗಿ ಈಗ ಪ್ರಭುತ್ವ ಮಧ್ಯಪ್ರವೇಶ ಮಾಡುತ್ತಿದೆ. ನಿಜ. ಆದರೆ ಜನರ ಪರವಾಗಿಯಲ್ಲ. ಉದ್ಯಮಿಗಳ ಪರವಾಗಿ. ಅಮೆರಿಕವನ್ನೂ ಒಳಗೊಂಡಂತೆ ಪ್ರಪಂಚಾದ್ಯಂತ ನಡೆಯು ತಿರುವುದು ಇದೇ. ಈ ಹಿನ್ನೆಲೆಯಲ್ಲೇ ಪ್ರಣಬ್ ದಾದಾ ಸಹ ಮಧ್ಯ ಪ್ರವೇಶ ಮಾಡಿದ್ದಾರೆ. ಈಗ ವಿಶ್ಲೇಷಿಸಬೇಕಿರುವುದು ಅವರು ಜನರ ಪರವಾಗಿ ಮಧ್ಯಪ್ರವೇಶ ಮಾಡಿದ್ದಾರೋ ಅಥವಾ ಉದ್ಯಮಿಗಳ ಪರವಾಗಿ ಪ್ರವೇಶ ಮಾಡಿದ್ದಾರೋ ಎಂಬುದನ್ನು!


ಸೌಜನ್ಯ: ಪ್ರಜಾವಾಣಿ

ಈ ಬಾರಿ ಸರ್ಕಾರ ಮಾಡುತ್ತಿರುವ ವಾರ್ಷಿಕ ವೆಚ್ಚ ಭಾರತದ ಇತಿಹಾಸದಲ್ಲೇ ಅತಿ ಹೆಚ್ಚು. 10.21ಲಕ್ಷ ಕೋಟಿ ರೂ! ಇದರಲ್ಲಿ ಗ್ರಾಮೀಣ ಸೇವೆಗಳಿಗೆ ಅಂದರೆ ಗ್ರಾಮೀಣ ಉದ್ಯೋಗ ಖಾತರಿ, ಗ್ರಾಮೀಣ ಆರೋಗ್ಯ, ಆಹಾರ ಖಾತರಿ ಇನ್ನಿತರ ಬಾಬತ್ತುಗಳಿಗೆ ಹೋದ ವರ್ಷಕ್ಕಿಂತ ಹೆಚ್ಚಿನ ಅನುದಾನವನ್ನು ನೀಡಲಾಗಿದೆ. ಉದಾಹರಣೆಗೆ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಫಲಾನುಭವಿ ಕುಟುಂಬಗಳ ಸಂಖ್ಯೆಯನ್ನು 3.2 ಕೋಟಿಯಿಂದ 4.4ಕೋಟಿಗೇರಿಸಲಾಗಿದೆ. ಅಲ್ಲದೆ ಈವರೆಗೆ ಅವರಿಗೆ ಕೊಡು ತ್ತಿದ್ದ ದಿನಕ್ಕೆ 75 ರೂಗಳ ಕೂಲಿಯನ್ನು 100ರೂ. ಗೇರಿಸ ಲಾಗಿದೆ.

ಈ ಬಾಬತ್ತಿಗೆ ಹೋದವರ್ಷಕ್ಕಿಂತ ಶೇ.144ರಷ್ಟು ಅನುದಾನವನ್ನು ಏರಿಸಿ 39,000 ಕೋಟಿ ರೂ. ನೀಡಲಾಗಿದೆ. ಆದರೆ ವಾಸ್ತವವೇನೆಂದರೆ 4.4ಕೋಟಿ ಫಲಾನುಭವಿಗಳಿಗೆ ದಿನಕ್ಕೆ 100ರೂ.ನಂತೆ 100ದಿನಗಳ ಕಾಲ ಖಾತರಿ ಉದ್ಯೋಗ ನೀಡಿದರೆ ಬೇಕಾಗುವುದು 44,000 ಕೋಟಿರೂ.ಗಳು. 39,000 ಕೋಟಿಗಳಲ್ಲ! ಆದ್ದರಿಂದ ಈಗ ನಿಗದಿ ಆಗಿರುವ ಹಣದಲ್ಲಿ 4.4 ಕೋಟಿ ಕುಟುಂಬಗಳಿಗೆ ಉದ್ಯೋಗ ಖಾತರಿಗೊಳಿಸಲು ಆಗುವುದೇ ಇಲ್ಲ! ದೇಶದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ 3ರೂ.ದರದಲ್ಲಿ 25 ಕೆಜಿ ಅಕ್ಕಿ ಕೊಡುವ ಪ್ರಸ್ತಾಪವನ್ನು ಮಾಡಲಾಗಿದೆ. ಅದರ ವಿವರಗಳನ್ನು ಮತ್ತು ಅದಕ್ಕೆ ಬೇಕಿರುವ ಹಣದ ಮೊತ್ತವನ್ನು ಈ ಬಜೆಟ್ ಭಾಷಣದಲ್ಲಿ ಖಚಿತಪಡಿಸಿಲ್ಲವಾದರೂ ಅದರ ಒಟ್ಟಾರೆ ಮೊತ್ತ ಕೆಲವು ಸಾವಿರ ಕೋಟಿಗಳನ್ನು ದಾಟುವುದಿಲ್ಲ. ಇದಲ್ಲದೆ ಗ್ರಾಮೀಣ ಮತ್ತು ನಗರ ರಸ್ತೆ ಅಭಿವೃದ್ಧಿ ಇನ್ನಿತ್ಯಾದಿ ಬಾಬತ್ತಿಗೆ ಮೊದಲಿಗಿಂತ ಅತಿ ಹೆಚ್ಚು ಹಣವನ್ನು ನಿಗದಿ ಪಡಿಸಲಾಗಿದೆ.

ಅಂದರೆ ಒಟ್ಟಿನಲ್ಲಿ ನೋಡಿದರೆ ಜನತೆಯ ಕೊಳ್ಳುವ

ಶಕ್ತಿಯನ್ನು ಜಾಸ್ತಿ ಮಾಡುವ ಮತ್ತು ಮೂಲ ಭೂತ ಸೌಕರ್ಯಗಳಲ್ಲಿ ಹೂಡಿಕೆ ಮಾಡುವ ಮೂಲಕ ಬೇಡಿಕೆಯನ್ನು ಸೃಷ್ಟಿ ಮಾಡಿ ಆರ್ಥಿಕತೆಯನ್ನು ಪುನಶ್ಚೇತನಗೊಳಿಸುವ ಸಿದ್ಧಾಂತವನ್ನು ಇದರ ಹಿಂದೆ ಕಾಣಬಹುದಾಗಿದೆ. ಆದರೆ ಇಂಥ ಯೋಜನೆ ಜನಪರವಾಗಿ ಕೆಲಸ ಮಾಡಬೇಕೆಂದರೆ ಅತ್ಯಂತ ಮುಖ್ಯವಾಗಿ ಉಳ್ಳವರಿಗೆ ಹೆಚ್ಚು ತೆರಿಗೆ ವಿಧಿಸುವ ಮೂಲಕ ಬೇಕಾದ ಸಂಪನ್ಮೂಲವನ್ನು ಕ್ರೋಢೀಕರಿಸಬೇಕು. ಪ್ರಾರಂಭದಲ್ಲಿ ಸಾಲ ಮಾಡಿದರೂ ಅದನ್ನು ತೀರಿಸುವ ಹೊಣೆ ಪರೋಕ್ಷವಾಗಿ ಜನರ ಮೇಲೆ ವರ್ಗಾಯಿಸಿದರೆ ಅದು ಕೊಳ್ಳುವ ಶಕ್ತಿಯನ್ನೇನೂ ಹೆಚ್ಚಿಸುವುದಿಲ್ಲ. ಆದ್ದರಿಂದ ಬಜೆಟ್‌ನಲ್ಲಿ ಉದ್ಯೋಗ ಖಾತರಿಯಂಥ ಯೋಜನೆಗಳಿಗೆ ಎಲ್ಲಿಂದ ಹಣವನ್ನು ಕ್ರೋಢೀಕರಿಸಲಾಗುತ್ತಿದೆ ಎಂಬುದೂ ಮತ್ತು ಅದು ಮತ್ತೆ ಜನರ ಮೇಲೆ ಹೊರೆಯನ್ನು ವರ್ಗಾಯಿಸುತ್ತಿದೆಯೇ ಎಂಬುದರ ವಿಶ್ಲೇಷಣೆ ಮಾಡುವುದು ಅತ್ಯಗತ್ಯ.

ಸಾಮಾನ್ಯವಾಗಿ ಯಾವುದೇ ಸರ್ಕಾರ ತನ್ನ ಸಂಪನ್ಮೂಲವನ್ನು ತೆರಿಗೆಗಳು, ಸರ್ಕಾರ ಮಾಡಿರುವ ಹೂಡಿಕೆಗಳಿಂದ ಉದ್ಯಮಿಗಳಿಂದ ಬರುವ ಲಾಭಗಳು, ಬಾಡಿಗೆ ಮತ್ತು ಜನರಿಂದ ಹಾಗೂ ಹೊರದೇಶಗಳಿಂದ ಎತ್ತುವ ಸಾಲಗಳಿಂದ ಕ್ರೋಢೀಕರಿಸುತ್ತದೆ. ಈ ಬಜೆಟ್ಟಿನಲ್ಲಿ 4.2 ಲಕ್ಷ ಕೋಟಿಯಷ್ಟು ಹಣವನ್ನು ಅಂದರೆ ಒಟ್ಟಾರೆ ವೆಚ್ಚದ ಶೇ.40 ಭಾಗವನ್ನು ಸಾಲ ಮಾಡಿ ಎತ್ತಲಾಗುವುದೆಂದು ನಿರೀಕ್ಷಿಸಲಾಗಿದೆ. ಬಜೆಟ್ ದಿನ ಶೇರ್ ಮಾರ್ಕೆಟ್ ಕುಸಿದು ಬೀಳಲೂ ಇದೇ ಕಾರಣ. ಏಕೆಂದರೆ ಸರ್ಕಾರದ ಸಾಲದ ಮೂಲ ಬ್ಯಾಂಕು ಮತ್ತು ವಿಮೆ ಸಂಸ್ಥೆಗಳೇ. ಬ್ಯಾಂಕುಗಳು ಮತ್ತು ವಿಮಾಸಂಸ್ಥೆಗಳು ನಮ್ಮಿಂದ ಎತ್ತುವ ಡಿಪಾಜಿಟ್ ಮತ್ತು ಪ್ರಿಮಿಯಂನ ಒಟ್ಟು ಮೊತ್ತಗಳನ್ನೇ ಸರ್ಕಾರ ಎರವಲು ಪಡೆಯುತ್ತದೆ.

ಖಾಸಗೀ ಉದ್ಯಮಿಗಳು ಕಣ್ಣಿಟ್ಟಿದ್ದು ಇದೇ ಸಾಲದ ಮೂಲವನ್ನೇ! ಈ ಬಜೆಟ್ಟಿನಲ್ಲಿ ಕೇಂದ್ರ ಸರ್ಕಾರ ಮಾತ್ರವಲ್ಲ! ರಾಜ್ಯ ಸರ್ಕಾರಗಳು ಸಹ ತಲಾ 21,000 ಕೋಟಿ ರೂ. ಸಾಲವನ್ನು ಬ್ಯಾಂಕುಗಳಿಂದ ಪಡೆ ಯಬಹುದು ಎಂದು ಕೇಂದ್ರ ಅನುಮತಿಕೊಟ್ಟಿದೆ. ಸರ್ಕಾರಗಳೆ ಇಷ್ಟೊಂದು ಸಾಲ ಪಡೆದ ಮೇಲೆ ತಮ್ಮ ಬಂಡವಾಳ ಹೂಡಿಕೆಗೆ ಸಾಲ ದೊರೆಯುವುದೇ ಇಲ್ಲವೆಂಬ ದಿಗಿಲಿನಿಂದಲೇ ಶೇರ್ ಮಾರ್ಕೆಟ್ ಕುಸಿದು ಬಿತ್ತು.

ಈ ಕಾರ್ಪೊರೇಟ್ ಉದ್ಯಮಿಗಳ ಪ್ರಕಾರ ಸರ್ಕಾರ ಈ ಸಾಲದ ಮೂಲದ ಮೇಲೆ ಕಣ್ಣಿಡಲೇಬಾರದಾಗಿತ್ತು. ಅವೆಲ್ಲಾ ಅವರಿಗೇ ಮೀಸಲಾಗಿರಬೇಕಿತ್ತು. ಹಾಗಿದ್ದಮೇಲೆ ಸರ್ಕಾರ ಈ ಎಲ್ಲಾ ವೆಚ್ಚಗಳಿಗೆ ಬೇಕಿರುವ ಹಣವನ್ನು ಎಲ್ಲಿಂದ ಸಂಗ್ರಹಿಸಬೇಕಿತ್ತು? ಅವರ ಪ್ರಕಾರ ಸರ್ಕಾರ ಉದ್ಯಮಗಳಲ್ಲಿ ಹೂಡಿರುವ ಬಂಡವಾಳವನ್ನು ಹಿಂತೆಗೆಯುವ ಮೂಲಕ ಅಂದರೆ ಖಾಸಗೀಕರಿಸುವ ಮೂಲಕ ಹಾಗೂ ಜನರ ಮೇಲೆ ಇನ್ನೂ ಹೆಚ್ಚಿನ ತೆರಿಗೆ ವಿಧಿಸುವ ಮೂಲಕ ಸಂಗ್ರಹಿಸಬೇಕೇ ಹೊರತು ತಮ್ಮ ಮೇಲೆ ತೆರಿಗೆ ಹೆಚ್ಚಿಸುವುದನ್ನಾಗಲೀ, ಬ್ಯಾಂಕುಗಳ ಸಾಲಕ್ಕಾಗಲೀ ಕೈ ಹಾಕಬಾರದು. ಅದನ್ನು ಒಪ್ಪಿಕೊಂಡೇ ಸರ್ಕಾರ 2002 ರಲ್ಲಿ ಸಂಸತ್ತಿನಲ್ಲಿ Fiscal Responsibility and Budget Management Act (FRBM) ಎಲ್ಲಾ ಪಕ್ಷಗಳ ಸಮ್ಮತಿಯೊಂದಿಗೆ ಜಾರಿಗೆ ತಂದಿದೆ.

ಅದನ್ನೇ ವಿತ್ತೀಯ ಶಿಸ್ತು–Fiscal Responsibility ಎಂದೂ ಕರೆಯಲಾಗುತ್ತದೆ. ಹಳೆಯ ಕಾಲದಲ್ಲಿ ಯಾವುದೇ ವರ್ಣದ ರಾಜರು ಅಧಿಕಾರಕ್ಕೆ ಬಂದರೂ ವರ್ಣಾಶ್ರಮವನ್ನು ಕಾಪಾಡುವುದು ಅಂದರೆ ಬ್ರಾಹ್ಮಣ್ಯದ ಹಿರಿಮೆಯನ್ನು ಕಾಪಾಡುವುದು ಎಷ್ಟು ಮುಖ್ಯವಾಗಿತ್ತೋ ಈ ಕಾಲದಲ್ಲಿ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಈ ವಿತ್ತೀಯ ಶಿಸ್ತನ್ನು ಅಂದರೆ ಕಾರ್ಪೊರೇಟ್ ಉದ್ಯಮಿಗಳ ಹಿತಾಸಕ್ತಿಯನ್ನು ಕಾಪಾಡು ವುದು ಅಷ್ಟೇ ಮುಖ್ಯ.

ಹಾಗಿದ್ದ ಮೇಲೆ ಸರ್ಕಾರ ಸರ್ಕಾರಿ ಉದ್ದಿಮೆಗಳಿಂದ ಹಣ ಹಿಂತೆಗೆದುಕೊಳ್ಳುವ ಪ್ರಸ್ತಾಪವನ್ನು ಮಾಡದೆ, ಜನರ ಮೇಲೆ ತೆರಿಗೆ ಜಾಸ್ತಿ ಮಾಡದೆ, ಸಾಲ ಮಾಡುವ ಮೂಲಕ ತನ್ನ ವೆಚ್ಚವನ್ನು ಸರಿದೂಗಿಸಿಕೊಳ್ಳುವ ನೀತಿಯನ್ನು ಅನುಸರಿಸಲು ಹೇಗೆ ಸಾಧ್ಯವಾಯಿತು? ಅಥವಾ ಹಿಡನ್ ಅಜೆಂಡಾ ಬೇರೆ ಏನಾದರೂ ಇದೆಯೇ? ಖಂಡಿತಾ ಇದೆ. ಅದಕ್ಕೆ ಹೇಳುವುದು ಮಾತಿನ ನಿಜವಾದ ಅರ್ಥವಿರುವುದು ಆಡದ ಮಾತಿನಲ್ಲಿಯೇ ವಿನಃ ಆಡಿದ ಮಾತಿನಲ್ಲಲ್ಲ ಎಂದು! ವಾಸ್ತವವಾಗಿ ಇಷ್ಟು ದಿನ ಇದೇ ಸರ್ಕಾರಗಳೇ ವಿತ್ತೀಯ ಶಿಸ್ತಿನ ನೆಪಹೇಳಿ ಸಾಲದ ಸುದ್ದಿಗೂ ಹೋಗುತ್ತಿರಲಿಲ್ಲ. ಜನೋಪಯೋಗಿ ಯೋಜನೆಗಳನ್ನೂ ಜಾರಿಗೆ ತರುತ್ತಿರಲಿಲ್ಲ. ಸಾಲ ಮಾಡಿ ಜನರ ಆದಾಯವನ್ನು ಜಾಸ್ತಿ ಮಾಡುವಂಥ ದೂರಗಾಮಿ ಯೋಜನೆಗಳನ್ನು ಹಾಕಿಕೊಳ್ಳುವುದರಲ್ಲಿ ತಪ್ಪೇನೂ ಇಲ್ಲವೆಂದು ಎಲ್ಲಾ ಜನಪರ ಅರ್ಥಶಾಸ್ತ್ರಜ್ಞರು ಹೇಳುತ್ತಿದ್ದರೂ ಅದನ್ನು ಅವರು ಕೇಳಲು ಸಿದ್ಧರಿರಲಿಲ್ಲ. ಏಕೆಂದರೆ ಅವರು ಆಗ (ಈಗಲೂ)ಸಾಲದ ಮಾರುಕಟ್ಟೆಯನ್ನು ತಮಗೇ ಸಂಪೂರ್ಣವಾಗಿ ಬಿಟ್ಟುಕೊಡಬೇಕೆಂಬ ಖಾಸಗೀ ಹೂಡಿಕೆದಾರರ ಒತ್ತಡಕ್ಕೆ ಮಣಿದಿದ್ದರು.

ಬಜೆಟ್ ನಂತರದ ಕೆಲವು ಉದಾಹರಣೆಗಳನ್ನು ಗಮನಿಸೋಣ. ಸರ್ಕಾರ ಬಜೆಟ್ಟಿನಲ್ಲಿ ಸರ್ಕಾರಿ ಉದ್ಯಮಗಳಲ್ಲಿ ಶೇ.51 ರಷ್ಟು ಪಾಲನ್ನು ಸರ್ಕಾರವೇ ಇಟ್ಟುಕೊಳ್ಳುತ್ತದೆಂದು ಘೋಷಿಸಿದೆ. ಉಳಿದ ಶೇ.49 ಪಾಲಿನಲ್ಲೂ ಶೇ.25ರಷ್ಟನ್ನು ಈ ದೇಶದ ಜನರಿಗೆ ಮಾರುವುದಾಗಿ ಹೇಳಿದೆ. ಆದರೆ ಬಜೆಟ್ ಮಂಡಿಸಿದ ಮಾರನೇ ದಿನವೇ ರಸ್ತೆ ಸಾರಿಗೆ ಮಂತ್ರಿ ಕಮಲ್‌ನಾಥ್ ಸರ್ಕಾರದ ಮಹತ್ವಾಕಾಂಕ್ಷಿ ಹೆದ್ದಾರಿ ನಿರ್ಮಾಣದ ಯೋಜನೆಗೆ ಶೇ.50ರಷ್ಟು ವಿದೇಶೀ ಬಂಡವಾಳವನ್ನು ಆಹ್ವಾನಿಸುತ್ತಿರುವುದಾಗಿ ಘೋಷಿಸಿದರು. ಆದರೆ ರಸ್ತೆ ನಿರ್ಮಾಣದಲ್ಲಿ ದುಪ್ಪಟ್ಟು ಲಾಭದ ಖಾತರಿಯಿಲ್ಲದೆ ವಿದೇಶಿ ಬಂಡವಾಳಿಗರು ಏಕೆ ಹೂಡಿಕೆ ಮಾಡುತ್ತಾರೆ? ಹಾಗೆಯೇ ಪ್ರಣಬ್ ದಾದಾರ ಬಜೆಟ್ ಭಾಷಣದಲ್ಲಿ ವಿದೇಶಿ ಬಂಡವಾಳವನ್ನು ಉತ್ತೇಜಿಸುವ ಮಾತುಗಳು ಇರಲಿಲ್ಲ. ಆದರೆ ಅದರ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವೇ ಇಲ್ಲವೆಂಬುದನ್ನು ಭಾರತವನ್ನು ಚೆನ್ನಾಗಿ ಬಲ್ಲ ಜಗತ್ತಿನ ಅತಿದೊಡ್ಡ ವಿದೇಶಿ ಹೂಡಿಕೆದಾರನಾದ ಮೊರ್ಗಾನ್ ಸ್ಟಾನ್ಲಿ ಸಂಸ್ಥೆಯ ಅಭಿಪ್ರಾಯ.

ಆದರೆ ಇದರ ಸಾಮಾಜಿಕ ಪರಿಣಾಮ ಪ್ರತಿಕೂಲವಾಗಿತ್ತು. ಅದರಲ್ಲೂ ಆರ್ಥಿಕ ಹಿಂದ್ಸರಿತದಿಂದ ಸಾಮಾನ್ಯ ಜನರ ಬದುಕು ಬೀದಿಪಾಲಾಗಲು ಪ್ರಾರಂಭವಾಗಿದೆ. ಪ್ರಜಾತಂತ್ರದಲ್ಲಿ ಪ್ರಜೆಗಳು ಮತದಾರರೂ ಆಗಿರುತ್ತಾರಾದ್ದರಿಂದ ತಮ್ಮ ಕಾರ್ಪೊರೇಟ್‌ಪರ ನೀತಿಗಳಿಗೆ ಜನರ ಸಮ್ಮತಿ ಮುದ್ರೆ ಪಡೆದುಕೊಳ್ಳಲು ಸರ್ಕಾರ ಹಲವಾರು ಸರ್ಕಸ್‌ಗಳನ್ನು ಮಾಡಲೇಬೇಕಾಗುತ್ತದೆ. ಈ ಗ್ರಾಮೀಣ ಉದ್ಯೋಗ ಖಾತರಿ, ಆಹಾರ ಭದ್ರತೆ ಇವೆಲ್ಲಾ ಈ ಸರ್ಕಸ್ಸಿನ ಭಾಗಗಳೇ! ಹೀಗಾಗಿ ಅಸಲಿ ಬಜೆಟ್ ಇರುವುದು ಈ ಅಂಕಿಸಂಖ್ಯೆ ಮತ್ತು ಜನಪ್ರಿಯ ಯೋಜನೆಗಳಾಚೆಯೇ!

ಜನವೇದಿಕೆಯಲ್ಲಿ ಬಜೆಟ್ ಮಂಡಿಸಿದ ಮರುದಿನ ಪ್ರಣಬ್ ದಾದಾ ಕಾರ್ಪೊರೇಟ್ ವೇದಿಕೆಯಲ್ಲಿ ಭಾಷಣ ಮಾಡಿದರಲ್ಲ..ನಿಜವಾದ ಬಜೆಟ್ ಮಂಡನೆಯಾದದ್ದು ಅಲ್ಲಿ! ಸಂಸತ್ತಿನಲ್ಲೂ ಸಹ ಪ್ರಣಬ್‌ದಾದಾ ವಿತ್ತೀಯ ಶಿಸ್ತನ್ನು ಆದಷ್ಟು ಬೇಗ ಪಾಲಿಸಿ ಸಾಲದ ಹೊರೆಯನ್ನು ಕಡಿಮೆ ಮಾಡಿಕೊಳ್ಳುವುದಾಗಿಯೇ ಹೇಳಿದ್ದರು. ಯಾರೂ ಗಮನಹರಿಸಿರಲಿಲ್ಲ ಅಷ್ಟೇ! ಅವರ ಪ್ರಕಾರ ಈ ವಿತ್ತೀಯ ಹೊರೆ ಈ ಸಾರಿ ಶೇ.6.8 ಇದ್ದರೂ ಮುಂದಿನ ವರ್ಷ ಶೇ.5.5ಕ್ಕೂ ಅದರ ಮುಂದಿನ ವರ್ಷ ಶೇ.4ಕ್ಕೂ ಇಳಿಸಿ ವಿತ್ತೀಯ ಶಿಸ್ತನ್ನು ಮತ್ತೆ ತಹಬದಿಗೆ ತರುವುದಾಗಿ ಹೇಳಿದ್ದರು. ಇದರರ್ಥ ಸರ್ಕಾರ ತನ್ನ ಖರ್ಚಿಗೆ ಸಾಲವನ್ನು ಬಿಟ್ಟು ಬೇರೆ ಮೂಲವನ್ನು ಹುಡುಕಿಕೊಳ್ಳುತ್ತದೆ ಎಂದರ್ಥ. ಹಾಗಿದ್ದಲ್ಲಿ ಏನವು?

ಬಜೆಟ್ ನಂತರದ ಕೆಲವು ಉದಾಹರಣೆಗಳನ್ನು ಗಮನಿಸೋಣ. ಸರ್ಕಾರ ಬಜೆಟ್ಟಿನಲ್ಲಿ ಸರ್ಕಾರಿ ಉದ್ಯಮಗಳಲ್ಲಿ ಶೇ.51ರಷ್ಟು ಪಾಲನ್ನು ಸರ್ಕಾರವೇ ಇಟ್ಟುಕೊಳ್ಳುತ್ತದೆಂದು ಘೋಷಿಸಿದೆ. ಉಳಿದ ಶೇ.49 ಪಾಲಿನಲ್ಲೂ ಶೇ.25ರಷ್ಟನ್ನು ಈ ದೇಶದ ಜನರಿಗೆ ಮಾರುವುದಾಗಿ ಹೇಳಿದೆ. ಆದರೆ ಬಜೆಟ್ ಮಂಡಿಸಿದ ಮಾರನೇ ದಿನವೇ ರಸ್ತೆ ಸಾರಿಗೆ ಮಂತ್ರಿ ಕಮಲ್‌ನಾಥ್ ಸರ್ಕಾರದ ಮಹತ್ವಾಕಾಂಕ್ಷಿ ಹೆದ್ದಾರಿ ನಿರ್ಮಾಣದ ಯೋಜನೆಗೆ ಶೇ.50ರಷ್ಟು ವಿದೇಶೀ ಬಂಡವಾಳವನ್ನು ಆಹ್ವಾನಿಸುತ್ತಿರುವುದಾಗಿ ಘೋಷಿಸಿದರು. ಆದರೆ ರಸ್ತೆ ನಿರ್ಮಾಣದಲ್ಲಿ ದುಪ್ಪಟ್ಟು ಲಾಭದ ಖಾತರಿಯಿಲ್ಲದೆ ವಿದೇಶಿ ಬಂಡವಾಳಿಗರು ಏಕೆ ಹೂಡಿಕೆ ಮಾಡುತ್ತಾರೆ?

ಹಾಗೆಯೇ ಪ್ರಣಬ್‌ದಾದಾರ ಬಜೆಟ್ ಭಾಷಣದಲ್ಲಿ ವಿದೇಶಿ ಬಂಡವಾಳವನ್ನು ಉತ್ತೇಜಿಸುವ ಮಾತುಗಳು ಇರಲಿಲ್ಲ. ಆದರೆ ಅದರ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವೇ ಇಲ್ಲವೆಂಬುದ್ದು ಭಾರತವನ್ನು ಚೆನ್ನಾಗಿ ಬಲ್ಲ ಜಗತ್ತಿನ ಅತಿದೊಡ್ಡ ವಿದೇಶಿ ಹೂಡಿಕೆದಾರನಾದ ಮೊರ್ಗಾನ್ ಸ್ಟಾನ್ಲಿ ಸಂಸ್ಥೆಯ ಅಭಿಪ್ರಾಯ. ಆ ಸಂಸ್ಥೆಯ ಅರ್ಥಶಾಸ್ತ್ರಜ್ಞ ಚೇತನ್ ಆಹ್ಯನ ಪ್ರಕಾರ "ರಾಜಕೀಯವಾಗಿ ಅತ್ಯಂತ ಸೂಕ್ಷ್ಮವಾದ ವಿದೇಶಿ ಬಂಡವಾಳ ಹೂಡಿಕೆಯ ಪ್ರಶ್ನೆಯ

(33ನೇ ಪುಟಕ್ಕೆ)

ಮೈಕಲ್ ಜಾಕ್ಸನ್ - ನಿಜ ಭ್ರಮೆಗಳ ರೂಪಕ

ಡಾ. ಸಿ. ಜಿ. ಲಕ್ಷ್ಮೀಪತಿ

ಮೈಕೆಲ್ ನಿರ್ಗಮಿಸಿದ ಕೂಡಲೇ ಹಬ್ಬಿದ ಸುದ್ದಿಗಳಾದರೂ ಯಾವುವು? ಅವನು ವಿಪರೀತ ಮಾದಕವಸ್ತುಗಳನ್ನು, ನೋವು ನಿವಾರಕಗಳನ್ನು ಸೇವಿಸಿದ್ದ. ಮೈತುಂಬ ಸೂಜಿಯಿಂದ ಚುಚ್ಚಿಕೊಂಡ ಗಾಯಗಳಿದ್ದವು. ಒಳಗೆ ಮೂಳೆಗಳು ಮುರಿದುಹೋಗಿದ್ದವು. ಬ್ರಿಟನ್‌ನಲ್ಲಿ ೫೦ ಶೋ ಕೊಡಲು ಒಪ್ಪಿಕೊಂಡಿದ್ದ. ಅದನ್ನು ಎಲ್ಲಿ ಮಾಡಲಾಗಲಿಲ್ಲವೋ ಎಂದು ಎದೆಬಿದ್ದು ತೀರಿಕೊಂಡ ಇತ್ಯಾದಿ, ಇತ್ಯಾದಿ... ಈ ರೀತಿಯ ಅಭಿಪ್ರಾಯಗಳೆಲ್ಲ, ನಿಜವಿದ್ದರೂ ಇರಬಹುದೇನೋ ಎಂದುಕೊಳ್ಳುವಷ್ಟರಲ್ಲಿ ಅವನು ಬ್ರಿಟನ್ ಶೋಗಾಗಿ ಮಾಡಿದ್ದ ರಿಹರ್ಸಲ್‌ನ ವಿಡಿಯೋಗಳನ್ನು ತೋರಿಸಿದರು. ಸ್ವಲ್ಪ ಸುಸ್ತಾದವನಂತೆ ಕಂಡರೂ ರಿಹರ್ಸಲ್ ವಿಡಿಯೋಗಳಲ್ಲಿ ಮಿಡಿನಾಗರದಂತೆ ಮಿಂಚುತ್ತಾ ಸುಳಿದಾಡುತ್ತಿದ್ದ. ಹಾಗಾದರೆ ಅವನು ಸಾಯುವ ಮುನ್ನ ಕೊಡಲ್ಪಟ್ಟ ಕಾರಣಗಳೆಲ್ಲಾ ಎಲ್ಲಿ ಹೋದವು.

ಇಡೀ ರಾತ್ರಿ ಲಾಸ್‌ಏಂಜಲೀಸ್‌ನ ಸ್ಟೇಪಲ್ ಹಾಲ್‌ನಲ್ಲಿ ಮೈಕೆಲ್ ನೆನಪಿಗಾಗಿ ನಡೆದ ಕಾರ್ಯಕ್ರಮ ನೋಡಿದ ನಂತರ ಬರೆಯಲು ಪ್ರಾರಂಭಿಸುತ್ತಿದ್ದೇನೆ. ಜೂನ್ 25, 2009ರಂದು ಕ್ರಿಶ್ಚಿಯನ್ ಮೈಕೇಲ್ ಅಥವಾ ಮುಸ್ಲಿಂ ಮಿಖಾಯಿಲ್ ನಿರ್ಗಮಿಸಿದ ಸುದ್ದಿ ಕೇಳಿ ಆಳದಲ್ಲಿ ಖಾಲಿತನ ಮತ್ತು ಸಂಕಟ ಕಾಡತೊಡಗಿತ್ತು. ತನ್ನ ಕನಸಿನ ವೈಭವದ ಪ್ರತೀಕವಾಗಿ ನಿರ್ಮಿಸಿಕೊಂಡಿದ್ದ ನೆವರ್ ಲ್ಯಾಂಡಿನ ಮನೆಯನ್ನು ಮಾರಿ, ಲಾಸ್‌ಏಂಜಲೀಸ್‌ನ ಬಾಡಿಗೆ ಮನೆಯಲಿ ವಾಸವಾಗಿದ್ದ. ಅವನು ತೀರಿಕೊಂಡ ಸುದ್ದಿ ಕೇಳಿ ಜನ ಅವನ ಮನೆಯ ಕಡೆ ಓಡತೊಡಗಿದ್ದರು. ಬಿಬಿಸಿ ನೋಡುತ್ತಿದ್ದ ನನ್ನ ಮನಸ್ಸು ಆ ಓಟದಲ್ಲಿ ಭಾಗಿಯಾಗಿಬಿಟ್ಟಿತ್ತು. ಮೈಲುಗಳ ದೂರವಿದ್ದ, ಮಾಧ್ಯಮಗಳ ಮೂಲಕ ಮಾತ್ರ ಪರಿಚಯವಿದ್ದ ಮೈಕೆಲ್ ಹೀಗೆ ಕಾಡಬಹುದೆಂದು ನನಗೇ ತಿಳಿದಿರಲಿಲ್ಲ. ಆ ಅಗಲಿಕೆ ತಂದ ಆಘಾತ ಮತ್ತು ದುಃಖ ನೀಗಿಕೊಳ್ಳಲು ಎರಡು ಮಾರ್ಗಗಳಿದ್ದವು. ಒಂದೋ ಅವನ ಕುರಿತ ಸುದ್ದಿಗಳನ್ನು ಓದುತ್ತಾ, ಆಲ್ಬಂಗಳನ್ನು ನೋಡುತ್ತಾ, ಸಂಗೀತ ಆಲಿಸುತ್ತಾ ಕಾಲ ಕಳೆಯುವುದು. ಎರಡು, ಅವನ ಕುರಿತು ಬರೆಯುವುದು.

ಒಂದನೆಯ ಮಾರ್ಗ ಬಹಳ ಸುಲಭವಾಗಿತ್ತು. ಅವನ ಸಂಗೀತ ನೃತ್ಯದ ನೆನಪು, ಮಾಧ್ಯಮಗಳ ವರದಿ– ಸಾವು ತಂದಿಟ್ಟ ಸಂಭ್ರಮದಂತೆಯೇ ಇತ್ತು. ಮೈಕೆಲ್‌ನ ಸಾವು ಸಂಭ್ರಮವಾಗಿ ಪರಿವರ್ತನೆಯಾಗಿ, ಮಾಧ್ಯಮಗಳ ಉದ್ದಿಮೆಯಾಗಿ, ಕೊನೆಗೆ ಸ್ಟೇಪಲ್ ಹಾಲ್‌ನಲ್ಲಿ ಮೈಕೆಲ್ ನೆನಪಿನ ಸಮಾರಂಭದಲ್ಲಿ ಸಾವೋ–ಸಂಭ್ರಮವೋ ತಿಳಿಯದಂತೆ ಮುಗಿದೇಹೋಯಿತು. ಮೊದಲನೇ ಮಾರ್ಗದ ತಾರ್ಕಿಕ ಅಂತ್ಯವಾದ ಮೇಲೆ ನಿರಾಕರಿಸಲಾಗದ ಕಾರ್ಯದಂತೆ ಉಳಿದದ್ದು ಅವನನ್ನು ಕುರಿತು ಬರೆಯುವುದು.

ಆಧುನಿಕೋತ್ತರ ಜಗತ್ತಿನ ರೂಪಕದಂತೆ ಸೃಷ್ಟಿಯಾದ ಮೈಕೆಲ್‌ನ ಕುರಿತು ಲೇಖನ ರಚಿಸುವುದು ಪ್ರಯಾಸಕರ ಕೆಲಸವೇ ಸರಿ. ಆಧುನಿಕೋತ್ತರ ರೂಪದ ಲಕ್ಷಣವೇ ಅದು ತಾನೇ. ಇಲ್ಲಿ ಯಾವುದೂ ಅಂತಿಮ ಸತ್ಯವಲ್ಲ, ಸಂಪೂರ್ಣ ನಿಜವೆಂಬುದೇ ಪ್ರಶ್ನಾರ್ಹ. ಸಹಜವೆಂಬುದು ಸೃಷ್ಟಿಯೇ? ಅಥವಾ ಸೃಷ್ಟಿಯೇ ಸಹಜವೋ? ವಾಸ್ತವ ಮತ್ತು ಭ್ರಮೆಯ ನಡುವಿನ ಗೆರೆಯೇ ಅಳಿಸಿಹೋಗಿ ಬಿಡುತ್ತದೆ. ಈ ರೂಪಕದ ಪ್ರತಿಬಿಂಬವಾದ ಜಾಕ್‌ಸನ್‌ನನ್ನು ಕುರಿತು ಏನು ಬರೆಯ ಹೊರಡುವುದು ಏಕಕಾಲದಲ್ಲಿ ಕಲ್ಪಿತವೂ – ನಿಜವೂ ಅಥವಾ ಅವೆರಡರ ಅನುಸಂಧಾನ ಏನೂ ಬೇಕಾದರೂ ಆಗಬಹುದು.

ಇದಕ್ಕೆಲ್ಲಾ ತಾರ್ಕಿಕ ಅಂತ್ಯವೆಂಬಂತೆ, ಮೈಕಲ್‌ನ ಆತ್ಮವೂ ಸುಳಿದಾಡಿತು ಎಂಬ ಸುದ್ದಿಯನ್ನು ಮಾಧ್ಯಮಗಳು ಹಬ್ಬಿಸಿದವು. ಒಟ್ಟು ಕಥೆಯನ್ನು ಹೀಗೆ ಶುರುಮಾಡಿಕೊಳ್ಳಬಹುದು.

ಮೈಕೆಲ್ ನಿರ್ಗಮಿಸಿದ ಕೂಡಲೇ ಹಬ್ಬಿದ ಸುದ್ದಿಗಳಾದರೂ ಯಾವುವು? ಅವನು ವಿಪರೀತ ಮಾದಕವಸ್ತುಗಳನ್ನು, ನೋವು ಸಿಹಿರಕಗಳನ್ನು ಸೇವಿಸಿದ್ದ. ಮೈತುಂಬ ಸೂಜಿಯಿಂದ ಚುಚ್ಚಿಕೊಂಡ ಗಾಯಗಳಿದ್ದವು. ಒಳಗೆ ಮೂಳೆಗಳು ಮುರಿದುಹೋಗಿದ್ದವು. ಬ್ರಿಟನ್‌ನಲ್ಲಿ 50 ಶೋ ಕೊಡಲು ಒಪ್ಪಿಕೊಂಡಿದ್ದ. ಅದನ್ನು ಎಲ್ಲಿ ಮಾಡಲಾಗಲಿಲ್ಲವೋ ಎಂದು ಎದೆಬಿದ್ದು ತೀರಿಕೊಂಡ ಇತ್ಯಾದಿ, ಇತ್ಯಾದಿ... ಈ ರೀತಿಯ ಅಭಿಪ್ರಾಯಗಳೆಲ್ಲ, ನಿಜವಿದ್ದರೂ ಇರಬಹುದೇನೋ ಎಂದುಕೊಳ್ಳುವಷ್ಟರಲ್ಲಿ ಅವನು ಬ್ರಿಟನ್ ಶೋಗಾಗಿ ಮಾಡಿದ್ದ ರಿಹರ್ಸಲ್‌ನ ವಿಡಿಯೋಗಳನ್ನು ತೋರಿಸಿದರು. ಸ್ವಲ್ಪ ಸುಸ್ತಾದವನಂತೆ ಕಂಡರೂ ರಿಹರ್ಸಲ್ ವಿಡಿಯೋಗಳಲ್ಲಿ ಮಿಡಿನಾಗರದಂತೆ ಮಿಂಚುತ್ತಾ ಸುಳಿದಾಡುತ್ತಿದ್ದ. ಹಾಗಾದರೆ ಅವನು ಸಾಯುವ ಮುನ್ನ ಕೊಡಲ್ಪಟ್ಟ ಕಾರಣಗಳೆಲ್ಲಾ ಎಲ್ಲಿ ಹೋದವು. ಹೀಗೆಯೇ ಅವನ ಬದುಕೆಲ್ಲಾ ವಾಸ್ತವ ಕಲ್ಪನೆಗಳ ನಡುವೆ ಒಂದು ಸಣ್ಣ ವ್ಯತ್ಯಾಸದ ಗೆರೆಯೂ ಇಲ್ಲದಂತೆ ಕಳೆದುಹೋಯಿತೇನೋ ಎನಿಸಿಬಿಡುತ್ತದೆ.

ಇವತ್ತು ಬೆಳಗಿನ ಜಾವ (7–7–09) ತಾನೇ ಅವನ ಅಂತ್ಯಸಂಸ್ಕಾರವಾಗಿದೆ. ಮುಸ್ಲಿಂ ಮಿಖಾಯಲ್ ತೀರಿಕೊಂಡಿದ್ದಾನೆ. ನೆನಪಿನ ಕಾರ್ಯಕ್ರಮ ಮಾತ್ರ ಕ್ರಿಶ್ಚಿಯನ್ ಮೈಕೆಲ್ ಜಾಕ್ಸನ್ನನ ನೆನಪಿನಲ್ಲಿ ನಡೆಯಿತು. ಪಾಪ್ ಸಂಗೀತ ಜಗತ್ತಿನಿಂದ ಅವನು ಮರೆಯಾಗಿ ಹೋಗಿಬಿಟ್ಟಿದ್ದಾನೇನೋ ಎಂದು ಸಂಭ್ರಮಿಸುತ್ತಿದ್ದ ಅವನ ವಿರೋಧಿಗಳಿಗೆ ಎದೆಯೊಡ್ಡುವಂತೆ ಇಡೀ ಪ್ರಪಂಚದ ಜನ ಮೈಕೆಲ್‌ನನ್ನು ಇಹಲೋಕದಿಂದ ಬೀಳ್ಕೊಟ್ಟರು. ಅವನು ಜಪಾನಿನಲ್ಲಿ ನಡೆಸಿಕೊಟ್ಟ ಪಾಪ್ ಶೋ ನಿರ್ಮಿಸಿದ ಗಿನ್ನಿಸ್ ದಾಖಲೆ ಚೂರು ಚೂರಾಗುವಂತೆ ಅವನಿ

ಲ್ಲದ ಅವನ ಗ್ರಾಂಡ್ ಶೋ ನಡೆದೇಹೋಯಿತು.

ಈ ದ್ವಂದ್ವಗಳಲ್ಲೇ ಮೈಕೆಲ್‌ನನ್ನು ಕುರಿತು ಬರೆಯ ಬೇಕೆನಿಸುತ್ತದೆ. ಅದಲ್ಲದೇ ಬರೆಯಲು ಸಾಧ್ಯವೇ? ಅವನ ದೇಹ ಅವನದೇ ಆಗಿತ್ತೇ? ಆಧುನಿಕೋತ್ತರ ದಿನಗಳಲ್ಲಿ ಯಾರ ದೇಹದ ಮೇಲೂ ಯಾರಿಗೂ ಸಂಪೂರ್ಣ ಒಡೆತನವಿದೆ ಎನ್ನಿಸುವುದೇ ಇಲ್ಲ. ಆಫ್ರಿಕನ್ ಅಮೆರಿಕನ್ ಅಪ್ಪನ ಹೊಟ್ಟೆಯಲ್ಲಿ ಹುಟ್ಟಿದ. ಅಪ್ಪ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದ. ಆಫ್ರಿಕಾದಿಂದ ತಂದ ಕಪ್ಪುದೇಹಗಳು ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಹರಾಜಾಗುತ್ತಿದ್ದ ಕಾಲ ರೂಪಾಂತರ ಹೊಂದಿದಂತೆಯೇ ಅನಿಸುತ್ತದೆ. ಯಾಕೆಂದರೆ ಕಪ್ಪು ದೇಹಗಳು ಯಾವಾಗಲೂ ಜೀವವಿಲ್ಲದ, ದುಡಿಯಲು ಮಾತ್ರ ಹುಟ್ಟಿವೆ ಎಂದು ಬಿಳಿಯ ಸಮಾಜ ಭಾವಿಸುತ್ತಿತ್ತು. ಹಾಗೆ ಭಾವಿಸಲು ಸಾಧ್ಯವಿಲ್ಲವೆಂದ ಕೂಡಲೇ ಪ್ರಭುತ್ವ, ಉದ್ಯಮ, ಬಹುರಾಷ್ಟ್ರೀಯ ಕಂಪನಿಗಳು, ಮಾಧ್ಯಮಗಳು ತಮಗೆ ಬೇಕಾದಂತೆ ರೂಪಿಸಿಕೊಳ್ಳಲು ಪ್ರಾರಂಭಿಸಿದವು.

ದುರದೃಷ್ಟವಶಾತ್ ಮೈಕೆಲ್‌ನ ಬಾಲ್ಯದಲ್ಲಿ ಅವನ ದೇಹದ ಶಕ್ತಿಯನ್ನು ಅವರಪ್ಪ ಕಂಡುಕೊಂಡ. ಎಂದಾದರೂ ಮೈಕೆಲ್ ಶ್ರೇಷ್ಠ ನೃತ್ಯ ಪಟುವಾಗಿ ಸಂಗೀತಗಾರನಾಗಿ ಅಪಾರ ದುಡ್ಡು ದುಡಿಯಬೇಕೆಂಬುದು ಅವನ ಆಸೆಯಾಗಿತ್ತು. ಅದು ಅವನ ವೈಯಕ್ತಿಕ ಆಸೆಯಾಗಿತ್ತೋ ಅಥವಾ ಕಪ್ಪು ಜನಾಂಗದ ಗಿರಣಿ ಕಾರ್ಮಿಕನೊಬ್ಬನ ಅನಿವಾರ್ಯತೆಯಾಗಿತ್ತೋ. ಮೈಕೆಲ್‌ನಿಗೆ ಕಠಿಣ ತರಬೇತಿ ಕೊಟ್ಟ. ಇವನ ಮೂಗನ್ನು ಕಂಡರೆ ಅವರಪ್ಪನಿಗೆ ಅಷ್ಟ ಕ್ಕಷ್ಟೆ. ನನ್ನ ಮಗನನ್ನು ಅವರಪ್ಪ ಗುದ್ದುತ್ತಿದ್ದ ಎಂದು ಮೈಕೆಲ್ ಹೇಳಿಕೊಂಡಿದ್ದಾನೆ. ತನ್ನ ಸುಂದರ ಬಾಲ್ಯ ನಿರರ್ಥಕವಾಗಿ ಬೈಗುಳಗಳಲ್ಲಿ ಕಳೆದುಹೋಯಿತೆಂದು ಹಲುಬುತ್ತಿದ್ದ ಮೈಕೆಲ್ ಯೌವನವೂ ಇದಕ್ಕಿಂತ ಯಾವ ಬಗೆಯಲ್ಲಿ ಭಿನ್ನವಾಗಿತ್ತು?

ಮೈಕೆಲ್‌ನ ದೇಹ ಆಘಾತವಾಗುವ ರೀತಿಯ ಬದಲಾವಣೆ ಪಡೆಯುತ್ತಿತ್ತು. ಬಾಡಿ ಇಂಜಿನಿಯರಿಂಗ್‌ನ ಪರಾಕಾಷ್ಠೆ ತಲುಪಿಬಿಟ್ಟಿತ್ತು. ಬಾಲ್ಯದಲ್ಲಿದ್ದ ಮೈಕೆಲ್ ಯೌವನದಲ್ಲಿ ಬೇರೆಯೇ ಆಗಿದ್ದ. ಇತ್ತೀಚೆಗಂತೂ ಗುರುತು ಸಿಕ್ಕದಂತೆ ಆಗಿಹೋಗಿದ್ದ. ಮುಖ ಮುಚ್ಚಿಕೊಂಡು ಓಡಾಡುತ್ತಿದ್ದ. ಅವನ ಮುಖದ ಬಣ್ಣ ಬದಲಾವಣೆಯ ಬಗ್ಗೆ ಹಲವಾರು ಥಿಯರಿಗಳಿವೆ. ಬಿಳಿಯನಂತಾಗಲು ಮುಖದ ಬಣ್ಣವನ್ನೇ ಬದಲಿಸಿಕೊಂಡ. ಅದನ್ನು ಆಲ್‌ಫ್ರೆಡ್ ಪಿನ್‌ಫ್ರಾಳ ಟಿ.ವಿ. ಸಂದರ್ಶನದಲ್ಲಿ ನಿರಾಕರಿಸಿದ. ಡಾನ್ಸ್ ಮಾಡುವಾಗ ಮೂಗು ಮುರಿದು ಅದನ್ನು ವೈದ್ಯರಿಂದ ಅಂಟಿಸಿಕೊಂಡು 'ವಿಟಿಲಿಗೊ' ಎನ್ನುವ ಕಾಯಿಲೆಗೆ ತುತ್ತಾದ್ದರಿಂದ ಅವನ ಮುಖದ ಚರ್ಮ ಬೆಳ್ಳಗಾಯಿತು ಎನ್ನುವ ವಾದವೂ ಇದೆ. ಇರುವುದು ಮೈಕೆಲ್‌ನ ಒಂದೇ ದೇಹ. ಅದರ ಬದಲಾದ ವಿನ್ಯಾಸಗಳನ್ನು ಕುರಿತು ವಿವರಗಳಿಲ್ಲ. ವಿವರಗಳಿದ್ದರೂ ಅವುಗಳನ್ನು ಪೂರ್ಣವಾಗಿ ನಂಬುವಂತಿಲ್ಲ. ಮೈಕೆಲ್‌ಗೆ ಮಾತ್ರ ಗೊತ್ತಿರುವ ವಿವರವಿದ್ದರೂ ಅದನ್ನು ಹೇಳಲಾರ. ಅಥವಾ ಒಮ್ಮೆ ಹೇಳಿ ಮತ್ತೊಮ್ಮೆ ನಿರಾಕರಿಸುವ ಇದನ್ನು ಜನ Stlit Personality (ಒಡೆದ ವ್ಯಕ್ತಿತ್ವ) ಎಂದು ಮನಃಶಾಸ್ತ್ರದ ಪರಿಭಾಷೆಯಲ್ಲಿ ಸುಲಭವಾಗಿ ಕರೆದುಬಿಡಬಲ್ಲರು ಎಂಬುದೇ ದುರಂತ.

ಆಫ್ರಿಕನ್ ಅಮೆರಿಕನ್ ಒಬ್ಬನ, ಈ ಅವಮಾನಿತ ಪದವೆಂದು ಭಾವಿಸಲಾಗುತ್ತಿರುವ ನೀಗ್ರೋ ಮೂಲದ

ಮೈಕೆಲ್‌ನ ದೇಹ ಆಘಾತವಾಗುವ ರೀತಿಯ ಬದಲಾವಣೆ ಪಡೆಯುತ್ತಿತ್ತು. ಬಾಡಿ ಇಂಜಿನಿಯರಿಂಗ್‌ನ ಪರಾಕಾಷ್ಠೆ ತಲುಪಿಬಿಟ್ಟಿತ್ತು. ಬಾಲ್ಯದಲ್ಲಿದ್ದ ಮೈಕೆಲ್ ಯೌವನದಲ್ಲಿ ಬೇರೆಯೇ ಆಗಿದ್ದ. ಇತ್ತೀಚೆಗಂತೂ ಗುರುತು ಸಿಕ್ಕದಂತೆ ಆಗಿಹೋಗಿದ್ದ. ಮುಖ ಮುಚ್ಚಿಕೊಂಡು ಓಡಾಡುತ್ತಿದ್ದ. ಅವನ ಮುಖದ ಬಣ್ಣ ಬದಲಾವಣೆಯ ಬಗ್ಗೆ ಹಲವಾರು ಥಿಯರಿಗಳಿವೆ. ಬಿಳಿಯನಂತಾಗಲು ಮುಖದ ಬಣ್ಣವನ್ನೇ ಬದಲಿಸಿಕೊಂಡ. ಅದನ್ನು ಆಲ್‌ಫ್ರೆಡ್ ಪಿನ್‌ಫ್ರಾಳ ಟಿ.ವಿ. ಸಂದರ್ಶನದಲ್ಲಿ ನಿರಾಕರಿಸಿದ. ಡಾನ್ಸ್ ಮಾಡುವಾಗ ಮೂಗು ಮುರಿದು ಅದನ್ನು ವೈದ್ಯರಿಂದ ಅಂಟಿಸಿ ಕೊಂಡು 'ವಿಟಲಿಗೊ' ಎನ್ನುವ ಕಾಯಿ ಲೆಗೆ ತುತ್ತಾದ್ದರಿಂದ ಅವನ ಮುಖದ ಚರ್ಮ ಬೆಳ್ಳಗಾಯಿತು ಎನ್ನುವ ವಾದವೂ ಇದೆ. ಇರುವುದು ಮೈಕೆಲ್‌ನ ಒಂದೇ ದೇಹ. ಅದರ ಬದಲಾದ ವಿನ್ಯಾಸಗಳನ್ನು ಕುರಿತು ವಿವರಗಳಿಲ್ಲ. ವಿವರಗಳಿದ್ದರೂ ಅವುಗಳನ್ನು ಪೂರ್ಣವಾಗಿ ನಂಬು ವಂತಿಲ್ಲ. ಮೈಕೆಲ್‌ಗೆ ಮಾತ್ರ ಗೊತ್ತಿರುವ ವಿವರವಿದ್ದರೂ ಅದನ್ನು ಹೇಳಲಾರ.

ವ್ಯಕ್ತಿಗೆ ಯಾರಾದರೂ ಈ ಬಗೆಯ ಪಟ್ಟ ಕಟ್ಟಿಬಿಡಬಹುದು. ಇಂತಹ ಪಟ್ಟವನ್ನು ನಿರಾಕರಿಸುತ್ತಾ ಡಬ್ಲ್ಯು. ಇ. ಬರ್ಗ್‌ಹರ್ಟ್ ದುಬಾಯ್ಸ್ ಎಂಬ ಅಮೆರಿಕನ್ ಸಮಾಜಶಾಸ್ತ್ರಜ್ಞ 'Double Consciences' ಎಂಬ ಪುಸ್ತಕ ಬರೆದಿದ್ದಾನೆ. ನೀಗ್ರೋ ಸಾಮಾನ್ಯರಲ್ಲಿ, ಕಲಾವಿದರಲ್ಲಿ, ಬುದ್ಧಿಜೀವಿಗಳಲ್ಲಿ ಇಬ್ಬಗೆಯ ಪ್ರಜ್ಞೆ (Double Consciences) ರೂಪುಗೊಳ್ಳುವ ಬಗೆಯನ್ನು ಹೀಗೆ ವಿವರಿಸುತ್ತಾನೆ.

ಅಮೆರಿಕಾದಲ್ಲಿ ಈಜಿಪ್ಷಿಯನ್, ಭಾರತೀಯ, ಗ್ರೀಕ್, ರೋಮನ್, ಟ್ಯೂಟನ್ ಮತ್ತು ಮಂಗೋಲಿಯನ್ನರ ನಂತರ ಬರುವ ಏಳನೆಯ ಮಗನೇ ನೀಗ್ರೋ. ಅವನಿಗೆ ಈ ಪರದೆ ಮತ್ತು ಪರದೃಷ್ಟಿಯಿಂದ ತನ್ನನ್ನು ಅಳೆದುಕೊಳ್ಳುವ ಉಡುಗೊರೆಯನ್ನು ಈ ಅಮೆರಿಕನ್ ಜಗತ್ತು ನೀಡಿದೆ. ಅವನಿಗೆ ಸ್ವಂತಪ್ರಜ್ಞೆಯನ್ನು ತನ್ನದೇ ದೃಷ್ಟಿಯನ್ನು ನಿರಾಕರಿಸುವ ಜಗತ್ತು, ತನ್ನನ್ನು ತಾನೇ ಇತರರ ಕಣ್ಣಲ್ಲಿ ನೋಡಿಕೊಳ್ಳುವಂತೆ ಮಾಡಿದೆ. ಇದೊಂಥರಾ ವಿಚಿತ್ರ ಪರಿಸ್ಥಿತಿ ಅಥವಾ ಸಂವೇದನೆ. ತನ್ನನ್ನು ಯಾವ ಜಗತ್ತು ಅವಮಾನ ಮತ್ತು ಅನುಕಂಪದಿಂದ ನೋಡುತ್ತಿದೆಯೋ, ಅದು ನೀಡುವ ಟೇಪಿನಲ್ಲಿ ತನ್ನ ಆತ್ಮವನ್ನು ಅಳೆದುಕೊಳ್ಳುವುದು. ಯಾವಾಗಲೂ ನೀಗ್ರೋ ಇಬ್ಬಂದಿ ಭಾವನೆಯನ್ನು ಹೊಂದುವಂತೆ ಮಾಡುತ್ತದೆ. ಅದು ಯಾವುದೆಂದರೆ ಒಂದು ಅಮೆರಿಕನ್ ಮತ್ತೊಂದು ನೀಗ್ರೋ. ಎರಡು ಆತ್ಮದ ಎರಡು ಬಗೆಯ ಚಿಂತನಾಕ್ರಮ, ಎಂದೂ ಒಂದಾಗದ ಮುಖಾಮುಖಿಯಾಗಿ ನಿಂತ ವಿರೋಧಿ ನೆಲೆಗಳು. ಇರುವ ಒಂದು ದೇಹದಲ್ಲಿ ಸದಾ ಯುದ್ಧ ಮಾಡುತ್ತಾ ನಿಂತ ಭಿನ್ನ ಆದರ್ಶದ ನೆಲೆಗಳು, ಹರಿದುಹೋಗದಂತೆ ತಡೆದದ್ದು ನೀಗ್ರೋಗಳ ಪ್ರಬಲವಾಗಿದ್ದ ಅಂತಃಶಕ್ತಿ ಮಾತ್ರ. ಈ ಇಬ್ಬಂದಿ ಭಾವನೆ ಮೈಕೆಲ್‌ನನ್ನು ಬಿಡದೆ ಕಾಡಿದ್ದರೆ ಆಶ್ಚರ್ಯವಿಲ್ಲ.

ಮೈಕೆಲ್‌ನ ಅಪ್ಪ ಜೋಸೆಫ್‌ನ ಸ್ಥಿತಿಯೂ ಭಿನ್ನವಾಗಿರಲಿಲ್ಲ. ಬಾಲ್ಯವನ್ನು ಕಳೆದುಕೊಂಡನೆಂದು ಸದಾ ಕೊರಗುತ್ತಿದ್ದ ಮೈಕೆಲ್ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡುತ್ತಾ ಕಪ್ಪು ಜನಾಂಗದ ಪರಂಪರಾನುಗತ

[illegible] ಹೀಗೆ ಹೇಳಿದ.

"ನಮ್ಮಪ್ಪ ತನ್ನ ಮಿತಿಯಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಮಾಡಿದ. ಎಷ್ಟು ಪ್ರೀತಿಯನ್ನು ತೋರಲು ಸಾಧ್ಯವೋ ಅಷ್ಟನ್ನು ತೋರಿದ. ಅವನಿಗೆ ಅವನದೇ ಆದ ಸವಾಲುಗಳಿದ್ದವು. ನಮ್ಮಪ್ಪನ ಕುರಿತು ಕೆಲವು ವಿಚಾರಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕು. ನಮ್ಮಪ್ಪ ದಟ್ಟದರಿದ್ರ ಕುಟುಂಬದಲ್ಲಿ ಜನಿಸಿದ. ದಕ್ಷಿಣ ಅಮೆರಿಕಾದಲ್ಲಿ ಬೆಳೆದ. ಅವರಪ್ಪನ ಜೊತೆ 1930ರ ಆರ್ಥಿಕ ಹಿಂಜರಿತದ ಕಷ್ಟಸುಖಗಳನ್ನು ಅನುಭವಿಸಿದ. ನಮ್ಮ ತಾತ ನಮ್ಮಪ್ಪನನ್ನು ಬೆಳೆಸಲು ಬಹಳ ಕಷ್ಟಪಟ್ಟಿದ್ದ. ಕರಿಯ ಮನುಷ್ಯನೊಬ್ಬ ದಕ್ಷಿಣ ಅಮೆರಿಕಾದಲ್ಲಿ ಅಂತಹ ಸಂದರ್ಭದಲ್ಲಿ ಮಕ್ಕಳನ್ನು ಬೆಳೆಸುವುದು ಎಷ್ಟು ಕಷ್ಟ ಎಂಬುದನ್ನು ನೀವು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಘನತೆಯಿಂದ ವಂಚಿತವಾದ ಭರವಸೆಯೇ ಇಲ್ಲದ ಕೇವಲ ಮನುಷ್ಯನಾಗಲು ಹೆಣಗಾಡಬೇಕಾದ ಪರಿಸ್ಥಿತಿ ಇದ್ದ ಜಗತ್ತು ನಮ್ಮಪ್ಪನನ್ನು ಯಾವಾಗಲೂ ಕೀಳಾಗಿಯೇ ಕಂಡಿತ್ತು." ಬರ್ಗ್‌ಹರ್ಟ್ ದುಬಾಯಿಸ್ ಹೇಳಿದ ಮಾತುಗಳ ಸುಧಾರಿತ ರೂಪವಾಗಿವೆ. ಮೈಕೆಲ್ ಹೆಚ್ಚೆಂದರೆ ಕೇವಲ 200 ವರ್ಷಗಳ ಹಿಂದೆ ಆಫ್ರಿಕಾದಿಂದ ಕೊಂಡು ತಂದ ಕಪ್ಪುದೇಹಗಳ ಮುಂದುವರಿದ ಭಾಗವಾಗಿದ್ದ ಅಷ್ಟೆ. ಹಾಗಾಗಿ ಅವನ ದೇಹ ಅವನ ಪಾಲಿಗೆ ಇಡೀ ಜಗತ್ತಿನ ಪಾಲಿಗೆ ವೈದ್ಯರ ಶಸ್ತ್ರಚಿಕಿತ್ಸೆಯ ಮೇಜಿನ ಮೇಲಿಟ್ಟ ವಸ್ತುವಿನಂತಾಗಿದ್ದರೆ ಆಶ್ಚರ್ಯಪಡುವ ಅವಶ್ಯಕತೆಯೇನೂ ಇಲ್ಲ. ಮೈಕೆಲ್‌ನ ರೂಪ ಬದಲಾಗುತ್ತಾ ಹೋಯಿತು.

ಗೋಧಿ ಮಿಶ್ರಿತ ಕಪ್ಪು ಬಣ್ಣ ಹೊಂದಿದ್ದ ಮೈಕೆಲ್‌ನ ಬಣ್ಣ 1980ರ ನಂತರ ಬದಲಾಗುತ್ತಾ ಹೋಯಿತು. ಚರ್ಮವನ್ನು ಬಿಳುಪಾಗಿಸಿಕೊಳ್ಳಲು ಶಸ್ತ್ರಕ್ರಿಯೆಗೆ ಒಳಗಾಗಿದ್ದಾನೆ ಎಂಬ ಸುದ್ದಿ ಹರಡಿತು. ಮಾಧ್ಯಮಗಳಿಗೆ ದಿನವೂ ಇದನ್ನು ಚರ್ಚಿಸುವುದೇ ದೊಡ್ಡ ಕಾಯಕವಾಗಿತ್ತು. ಅವನ ಮನೆಯ ಮುಂದೆ ನೂರಾರು ಕ್ಯಾಮೆರಾಗಳು ಕಣ್ಗಾವಲು ಕಾಯುತ್ತಿದ್ದವು. ಚರ್ಮ ಬಿಳುಪಾಗಲು ಬ್ಲೀಚಿಂಗ್ ಕಾರಣವಲ್ಲ ಬದಲಾಗಿ ವಿಟಲಿಗೊ ಮತ್ತು ಲೂಪಸ್‌ಗೆ ತುತ್ತಾಗಿದ್ದಾನೆ ಎಂದು ಅಭಿಪ್ರಾಯಪಡಲಾಯಿತು. ಅದು ಅವನು ಸ್ವಇಚ್ಛೆಯಿಂದ ರೂಪಿಸಿಕೊಂಡ ದೇಹವೋ– ಕಾಯಿಲೆಯೋ ಎನ್ನುವುದು ವಿವಾದವೇ ಆಗಿಹೋಗಿದೆ. ಆದರೂ ಕಪ್ಪು ಜನಾಂಗದವನು ಬಿಳಿಯನಾಗಲು ಕಸರತ್ತು ನಡೆಸುವ ಅನಿವಾರ್ಯತೆ ಏಕೆ ಉಂಟಾಗುತ್ತದೆ? ಕಪ್ಪು ದೇಹವನ್ನು ಬಿಳುಪಾಗಿಸುವುದೇ ಮಿಲಿಯನ್ ಡಾಲರ್‌ಗಟ್ಟಲೇ ಉದ್ಯಮವಾಗಿಬಿಟ್ಟಿದೆ. ಆ ಉದ್ಯಮವೇ ಅಗತ್ಯವಾದ ಅಭಿರುಚಿ ರೂಪಿಸುತ್ತದೆ. ಯಾವುದೋ ಶ್ರೇಷ್ಠ ಬಣ್ಣವೆಂದು ಪರಿಗಣಿಸಲ್ಪಡುತ್ತದೆಯೋ ಆ ಜನರೇ ಶ್ರೇಷ್ಠರು. ಆ ಮನೋಭಾವದ ಕಣ್ಣಿನಲ್ಲಿ ಮೈಕೆಲ್ ತನ್ನನ್ನು ಬಿಳಿಯ ಕಣ್ಣಿನಲ್ಲಿ ನೋಡಿಕೊಂಡ. ಕರಿಯ ಜನಾಂಗದ ಇಬ್ಬಂದಿತನದ ಭಾವನೆಯನ್ನು ಮೀರಲಾರದೇ ಹೋದ.

ನ್ಯಾಯದಾನದ ಕ್ರಿಯೆಯು ಆಧುನಿಕ ತರ್ಕವನ್ನು ಮೀರಬೇಕೆಂದರೆ ಅದಕ್ಕೊಂದು ಕಾಲ್ಪನಿಕ ತರ್ಕವೇಬೇಕು. ಬರ್ಟೋಲ್ ಬ್ರೆಕ್ಟ್‌ನ 'ಕಕೇಸಿಯನ್ ಚಾಕ್ ಸರ್ಕಲ್' ನಾಟಕದ ಥರ ಅತಾರ್ತಿಕ ನೆಲೆಗಳಲ್ಲಿ ಸತ್ಯವಿರಬಹುದೆಂಬ ಕಲ್ಪನೆಯು ಕೂಡ ಇರಲು ಸಾಧ್ಯವಿಲ್ಲವಲ್ಲ. 30–35 ವರ್ಷಗಳ ಕಾಲ ದೇಹವನ್ನು ಇಂಜಿನಿಯರಿಂಗ್ ಮಾಡಿ, ಅಪ್ಪನಿಗೆ ರೆಕಾರ್ಡಿಂಗ್ ಕಂಪೆನಿಗಳಿಗೆ ಮತ್ತು ಅಭಿಮಾನಿಗಳಿಗೆ ತಕ್ಕಂತೆ ಬಗ್ಗಿಸಿ ದಣಿದಿದ್ದ ಮಿಖೇಲ್‌ನ ದೇಹಕ್ಕೆ ಇದೆಲ್ಲಕ್ಕಿಂತ ಅವಮಾನಕರವಾದ ಘಳಿಗೆಗಳು ಕಾದಿದ್ದವು. ಪಾಪ್ ಸಂಗೀತದ ಸಾಮ್ರಾಟನಾಗಿ, ಕಪ್ಪು ದೇಹದ ಮೈಕಲ್ ಎಂ.ಟಿ.ವಿಯಲ್ಲಿ ಸಾಮ್ರಾಟನಂತೆ ಮೆರೆದಿದ್ದ. ಅವನ ದೇಹವನ್ನು ಲೈಂಗಿಕ ಆರೋಪದ ನೆಪದಲ್ಲಿ ತನಿಖೆಗೊಳಪಡಿಸಲಾಯಿತು. ಜಾಕ್ಸನ್ನನ ಕಪ್ಪುದೇಹ ವಿಚಿತ್ರ ಅವಮಾನಕ್ಕೆ ತುತ್ತಾಯಿತು.

ಮೈಕಲ್ ಖ್ಯಾತಿಯ ಉತ್ತುಂಗ ತಲುಪಿ, ಅತಿ ಶ್ರೀಮಂತನಾದ. ಖ್ಯಾತಿ ಮತ್ತು ಹಣವನ್ನು ಅಮೆರಿಕನ್ ಬಂಡವಾಳಶಾಹಿ ಬೇಟೆಯಾಡತೊಡಗಿತು. ಆತ್ಮೀಯ ಗೆಳೆಯ ಇವಾನ್ ಚಾಂಡ್ಲರ್ ತನ್ನ ಮಗನ ಮೇಲೆ ಮೈಕಲ್ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ, ಎಂಬ ಆಪಾದನೆ ಹೊರಿಸಿ ಕೋರ್ಟಿಗೆ ಎಳೆದ. ಪ್ರಪಂಚದಾದ್ಯಂತ ಮಾಧ್ಯಮಗಳು ಈ ವಿಷಯವನ್ನು ಅಡ್ಡಾದಿಡ್ಡಿ ಎಳೆದಾಡಿ ರಂಪಮಾಡಿದವು. ಅವುಗಳಿಗೆ ಕನಿಷ್ಠ ತಾಳ್ಮೆ ಇರಲಿಲ್ಲ ಎಂಬುದು ಮೇಲ್ನೋಟಕ್ಕೇ ಗೋಚರವಾಗುತ್ತಿತ್ತು. ಅವನನ್ನು ಕೊಂಡಾಡಿ ಮುಖಪುಟದಲ್ಲೇ ಅಚ್ಚಿಸಿ ತಮ್ಮ ಪ್ರಸಾರವನ್ನು ಹೆಚ್ಚಿಸಿಕೊಂಡ ಪತ್ರಿಕೆಗಳು, ಅವನ ನೃತ್ಯ ಪ್ರಯೋಗಗಳನ್ನು ತೋರಿಸಿಯೇ ಟಿಆರ್‌ಪಿ ಜಾಸ್ತಿ ಮಾಡಿಕೊಂಡಿದ್ದ ಚಾನಲ್‌ಗಳು ಈಗ ಅತ್ಯಂತ ಪರಕೀಯವಾಗಿ ವರ್ತಿಸಿದವು. ಹೀಗೆ, ಈ ಪ್ರಮಾಣದಲ್ಲಿ ಮಾಧ್ಯಮಗಳು ಶಿಖಾರಿ ಮಾಡಬಹುದೆಂದು ಮೈಕಲ್ ಕನಸು ಮನಸ್ಸಿನಲ್ಲಿಯೂ ಎಣಿಸಿರಲಿಕ್ಕಿಲ್ಲ. ಬಂಡವಾಳಶಾಹಿ ಸಮಾಜ ತನ್ನ ವಿಕೃತ ರೂಪವನ್ನು ತೋರಿಸಿತ್ತು. ಇಡೀ ಸಮಾಜವು ಸಾವಯವ ಸಂಬಂಧದಿಂದ ತನ್ನನ್ನು ಬೇರ್ಪಡಿಸಿಕೊಂಡು ಪರಕೀಯವಾಗಿ ಕೇವಲ ಲಾಭ ಮಾಡುವುದಷ್ಟನ್ನೇ ಗುರಿಯಾಗಿಟ್ಟುಕೊಂಡದ್ದು ಸ್ಪಷ್ಟವಾಗಿತ್ತು.

ಇಡೀ ಪ್ರಕರಣ ಅವನಿಗೇ ಎಷ್ಟು ಪರಕೀಯವಾಗಿತ್ತೆಂದರೆ ಈ ಘಟನೆಗಳಲ್ಲಿ ಬೇರೆಯದೆ ಆದ ಮೈಕಲ್ ಎನ್ನುವ ವ್ಯಕ್ತಿಯೊಬ್ಬ ಭಾಗವಹಿಸಿದ್ದಾನೆ ಎನಿಸಿರಬೇಕು. ಏಕೆಂದರೆ ಬಾಲ್ಯದಲ್ಲಿ ಅಪ್ಪನಿಂದ ಒದೆ ತಿಂದು, ಉಗಿಸಿಕೊಂಡು ನೊಂದಿದ್ದವನು ಮೈಕಲ್. ಲೈಂಗಿಕ ದುರುಪಯೋಗಕ್ಕಲ್ಲದಿದ್ದರೂ ಎಲ್ಲ ಬಗೆಯ 'ಉಪಯೋಗಕ್ಕೆ' ಬಲಿಪಶುವಾಗಿ 'ಬಾಲ್ಯವನ್ನೇ ಕಳೆದುಕೊಂಡಿದ್ದ'. ಮೇಲ್ನೋಟಕ್ಕೆ ವಯಸ್ಕನಂತೆ ಕಾಣುತ್ತಿದ್ದರೂ ಆಳದಲ್ಲಿ ಅವನು ಮಗುವಾಗಿಯೇ ಇದ್ದ. ಆದ್ದರಿಂದ ಮಕ್ಕಳ ಜೊತೆಗಿನ ಸ್ನೇಹ ಅವನಿಗೆ ಸುರಕ್ಷಾ ಕವಚದಂತಿತ್ತು. ಪ್ರತಿ ಸ್ಪರ್ಶವು ಲೈಂಗಿಕ ಅರ್ಥ ಪಡೆಯುವ ಅಮೆರಿಕನ್ ಸಮಾಜದಲ್ಲಿ ಮೈಕಲ್ ಮಗುವನ್ನು ಮುಟ್ಟಿದ್ದು ಯಾವ ಅರ್ಥ ಹೊರಡಿಸಿತ್ತೋ ಯಾರಿಗೆ ಗೊತ್ತು? ಮಕ್ಕಳ ಬಗೆಗಿನ ತನ್ನ ಅಪಾರ ಪ್ರೀತಿ ಇಡೀ ಜಗತ್ತಿಗೆಲ್ಲಾ ಗೊತ್ತು ಎಂದುಕೊಂಡಿದ್ದ ಅವನು.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡುವಾಗ ಆಳವಾದ ಪ್ರಾಮಾಣಿಕ ಕಾಳಜಿಯಿಂದ ಮಕ್ಕಳ ಹಕ್ಕುಗಳನ್ನು ಕುರಿತು ಪ್ರಸ್ತಾಪಿಸಿದ. ಭಾಷಣದ ಕೆಲವು ಕಡೆಯಂತೂ ಮಕ್ಕಳನ್ನು ಪ್ರೀತಿಸಿ ಎಂದು ತಂದೆತಾಯಿಗಳನ್ನು ಗೋಗರೆದು ಕೇಳಿಕೊಂಡ. ಆ ಭಾಷಣ ಓದಿದ ಕೇಳಿದ ಎಂಥವರಿಗೂ ಕರುಳು ಚುರುಕ್ ಎನಿಸುತ್ತದೆ. ಅಂಥವನನ್ನು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಆಪಾದನೆ ಮೇಲೆ ಕೋರ್ಟಿಗೆಳೆಯುವುದು ಸುದೀರ್ಘ ಕುತಂತ್ರದ ಭಾಗವಾಗಿತ್ತು. ಏಕೆಂದರೆ ಇವಾನ್ ಚಾಂಡ್ಲರ್ ತನ್ನ ಗೆಳೆಯರ ಬಳಿ ಮೈಕಲ್‌ನ ವಿರುದ್ಧ ಸುಳ್ಳು ಆಪಾದನೆ ಹೊರಿಸಿ ಕೋರ್ಟಿಗೆ ಹೋಗುವುದಾಗಿ ಹೇಳಿಕೊಂಡಿದ್ದ. 'ಈ ವಿಷಯ ಹಿಡಿದು ಕೋರ್ಟಿಗೆ ಹೋದರೆ ನಾನು ಗೆಲ್ಲುವುದಂತೂ ಖಚಿತ. ಕಳೆದುಕೊಳ್ಳುವುದೇನೂ ಇಲ್ಲ. ನನಗೆ ಏನು ಬೇಕೋ ಎಲ್ಲಾ ಸಿಗುತ್ತದೆ. ಅವನಂತೂ ಸರ್ವನಾಶವಾಗುತ್ತಾನೆ. ಒಂದೇ ಸಾರಿ ಮುಗಿದು ಹೋಗುತ್ತಾನೆ." ಎಂದು ಹೇಳಿದ್ದನ್ನು ಯಾರೋ ರೆಕಾರ್ಡ್ ಮಾಡಿ ಕೊಂಡು ಮೈಕಲ್‌ಗೂ ಕೇಳಿಸಿದ್ದರು.

ಈ ಪ್ರಕರಣದಲ್ಲಿ ಮತ್ತೊಂದು ಒಳತಿರುವಿತ್ತು. ಫ್ಯೂಡಲ್ ಕುಟುಂಬಗಳು ಒಡೆದು ಪ್ರಜಾಪ್ರಭುತ್ವ ಆಧಾರಿತ ಕುಟುಂಬಗಳು ಅಸ್ತಿತ್ವಕ್ಕೆ ಬಂದ ಮೇಲೆ ಕುಟುಂಬ ಎಂಬುದು ಗಂಡ–ಹೆಂಡತಿ–ಮಗು ಎಲ್ಲರನ್ನು ಒಂದು ಉಂಡೆಯಂತೆ ತೋರಿಸುವ ಕಾಲ ಎಂದೋ ಮುಗಿದು ಹೋಗಿದ್ದು. ಲೈಂಗಿಕ ದೌರ್ಜನ್ಯಕ್ಕೆ ತುತ್ತಾದನೆಂದು ಹೇಳಲ್ಪಟ್ಟ ಹುಡುಗನ ಅಮ್ಮ ಯಾವ ಕಾರಣಕ್ಕೂ ಮೈಕಲ್ ತಪ್ಪು ಮಾಡಿಲ್ಲವೆಂದೇ ವಾದಿಸಿದಳು. ಆದರೂ ಆಧುನಿಕ ಸಂಸ್ಥೆಗಳಲ್ಲಿ ಸಾಕ್ಷಿ ಮೀರಿದ ಸತ್ಯವಿರುವುದಕ್ಕೆ ಸಾಧ್ಯವಿಲ್ಲ. ನ್ಯಾಯಾಲಯ ಹುಡುಗನ ತಾಯಿಯ ಮಾತನ್ನು ನಂಬುವುದಕ್ಕೆ ಅದು ಆಧುನಿಕ ಪೂರ್ವಯುಗದ ಸಂಸ್ಥೆಯಲ್ಲವಲ್ಲ.

ನ್ಯಾಯದಾನದ ಕ್ರಿಯೆಯು ಆಧುನಿಕ ತರ್ಕವನ್ನು ಮೀರಬೇಕೆಂದರೆ ಅದಕ್ಕೊಂದು ಕಾಲ್ಪನಿಕ ತರ್ಕವೇ ಬೇಕು. ಬರ್ಟೋಲ್ ಬ್ರೆಕ್ಟ್‌ನ 'ಕಕೇಸಿಯನ್ ಚಾಕ್ ಸರ್ಕಲ್' ನಾಟಕದ ಥರ ಅತಾರ್ತಿಕ ನೆಲೆಗಳಲ್ಲಿ ಸತ್ಯವಿರಬಹುದೆಂಬ ಕಲ್ಪನೆಯು ಕೂಡ ಇರಲು ಸಾಧ್ಯವಿಲ್ಲವಲ್ಲ.

30–35 ವರ್ಷಗಳ ಕಾಲ ದೇಹವನ್ನು ಇಂಜಿನಿಯರಿಂಗ್ ಮಾಡಿ, ಅಪ್ಪನಿಗೆ ರೆಕಾರ್ಡಿಂಗ್ ಕಂಪೆನಿಗಳಿಗೆ ಮತ್ತು ಅಭಿಮಾನಿಗಳಿಗೆ ತಕ್ಕಂತೆ ಬಗ್ಗಿಸಿ ದಣಿದಿದ್ದ ಮಿಖೇಲ್‌ನ ದೇಹಕ್ಕೆ ಇದೆಲ್ಲಕ್ಕಿಂತ ಅವಮಾನಕರವಾದ ಘಳಿಗೆಗಳು ಕಾದಿದ್ದವು. ಪಾಪ್ ಸಂಗೀತದ ಸಾಮ್ರಾಟನಾಗಿ, ಕಪ್ಪು ದೇಹದ ಮೈಕಲ್ ಎಂ.ಟಿ.ವಿಯಲ್ಲಿ ಸಾಮ್ರಾಟನಂತೆ ಮೆರೆದಿದ್ದ. ಅವನ ದೇಹವನ್ನು ಲೈಂಗಿಕ ಆರೋಪದ ನೆಪದಲ್ಲಿ ತನಿಖೆಗೊಳಪಡಿಸಲಾಯಿತು. ಜಾಕ್ಸನ್ನನ ಕಪ್ಪುದೇಹ ವಿಚಿತ್ರ ಅವಮಾನಕ್ಕೆ ತುತ್ತಾಯಿತು.

ಇವಾನ್ ಚಾಂಡ್ಲರ್‌ನ ಮಗ ಮೈಕಲ್‌ನ ದೇಹ ಹೀಗೆ ಹೀಗೆಯೇ ಎಂದು ವಿವರಣೆ ಬೇರೆ ಕೊಟ್ಟಿದ್ದ. ಲೈಂಗಿಕ ಆರೋಪ ನಿಜವೋ ಸುಳ್ಳೋ ತಿಳಿಯಲು ಮೈಕಲ್‌ನ ದೇಹವನ್ನು ಬೆತ್ತಲೆಯಾಗಿ ಪರೀಕ್ಷೆಗೊಳಪಡಿಸಲು ಪೋಲಿಸರು ನಿರ್ದೇಶಿಸಿದರು. 25 ನಿಮಿಷಗಳ ಕಾಲ ಮೈಕಲ್‌ನನ್ನು ಬೆತ್ತಲೆ ಮಾಡಿ ಪರೀಕ್ಷಿಸಲಾಯಿತು. ಕೋಟಿ ಕೋಟಿ ಅಭಿಮಾನಿಗಳ ಬೋರ್ಗರೆಯುವ ಸಮುದ್ರದಲ್ಲಿ ಸಾಮ್ರಾಟನಂತೆ ಮೆರೆಯುತ್ತಿದ್ದ ಮೈಖಲ್ ಏಕಾಂಗಿಯಾಗಿ, ಪೋಲಿಸರು ಅವನ ಶಿಶ್ನವನ್ನು ಒಳಗೊಂಡಂತೆ ಪ್ರತಿ ಅಂಗವನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತಿದ್ದಾಗ ಎಂಥ ಅವಮಾನಕ್ಕೆ ಒಳಗಾದನೋ ಯಾರಿಗೆ ಗೊತ್ತು?

ನಿಜವೋ ಸುಳ್ಳೋ? ದೂರೊಂದು ದಾಖಲಾಗಿದೆ. ಅಮೇರಿಕಾದ್ದಷ್ಟೇ ಅಲ್ಲ ಪ್ರಪಂಚದ ಯಾವುದೇ ಆಧುನಿಕ ನ್ಯಾಯಾಲಯ ಮಾಡುವ ಕೆಲಸವನ್ನೇ ಅಮೆರಿಕನ್ ನ್ಯಾಯಾಲಯವೂ ಮಾಡಿತು. ಸುದೀರ್ಘವಾದ ವಿಚಾರಣೆ ಇದಕ್ಕೆ ಕೊನೆಯೇ ಇಲ್ಲವೇನೋ ಎಂಬಂತೆ ನಡೆಯತೊಡಗಿತು. ಮಿಂಚಿನಂತೆ ಮಿಡಿನಾಗರದಂತೆ ಸುಳಿದು ಮಿಂಚುತ್ತಿದ್ದ ಮೈಕಲ್ ಆಮೆಗತಿಯಲ್ಲಿ ನಡೆಯುತ್ತಿದ್ದ ನ್ಯಾಯಾಲಯದ ವಿಚಾರಣೆಗೆ ಹೆದರಿಬಿಟ್ಟ, ಭಯವಿದ್ದುದು ತೀರ್ಪಿನ ಬಗ್ಗೆಯಲ್ಲ, ಬದಲಾಗಿ ತೀರ್ಪಿಗಾಗಿ ಕಾಯುತ್ತಾ ನರಳಬೇಕಾದ ಪರಿಸ್ಥಿತಿಯೇ ಅವನನ್ನು ಕಂಗಾಲಾಗಿಸಿರಬೇಕು. ನ್ಯಾಯಾಲಯದ ವಿಚಾರಣೆ ಕ್ರಮ ಎಷ್ಟು ವಿಚಿತ್ರವಾಗಿರುತ್ತದೆಯೆಂದರೆ ವಿಚಾರಣೆಗೂ ಅಂತಿಮ ತೀರ್ಪಿಗೂ ಅಷ್ಟೇನೂ ವ್ಯತ್ಯಾಸವಿರುವುದಿಲ್ಲ. ಒಟ್ಟು ಪ್ರತಿಕ್ರಿಯೆಯಲ್ಲಿ ಭಾಗಿಯಾಗುತ್ತಾ ಮೈಕಲ್ ಮತ್ತಷ್ಟು ಪರಕೀಯನಾಗುತ್ತಾ ಹೋದ. ಖ್ಯಾತ ಬ್ರಿಟಿಷ್ ವಿಮರ್ಶಕ ಚಿಂತಕ ಮೈಕಲ್‌ನ ಲೈಂಗಿಕ ವಿಚಾರಣೆಯನ್ನು ಕುರಿತು ಗಾರ್ಡಿಯನ್‌ಗೆ ಬರೆದ ಲೇಖನವಂತೂ ಮೈಖಲ್‌ನಂಥ 'ಆಧುನಿಕೋತ್ತರ' ರೂಪಕವನ್ನು ಅದಕ್ಕಿಂತ ಸರಿಸಾಟಿಯಿಲ್ಲದಂತೆ ಚಿತ್ರಿಸುತ್ತದೆ.

ಟೆರ್ರಿ ಈಗಲ್ಟನ್‌ನ ಆಧುನಿಕೋತ್ತರ ಇಂಗ್ಲಿಷನ್ನು ನಮ್ಮ ಭಾಷೆಯಲ್ಲಿ ಕೆಡದಂತೆ ಬರೆಯಲು ಸಾಧ್ಯವಿಲ್ಲದ ಕಾರಣ, ಅದು ಸ್ಫುರಿಸುವ ಭಾವವನ್ನು ಸಂಗ್ರಹವಾಗಿ ಹೇಳಬಹುದು. ಮೈಕಲ್‌ನಂಥ ವ್ಯಕ್ತಿಗಳು ಮಾಧ್ಯಮಗಳಿಂದ ಎಷ್ಟೊಂದು ಬಿಂಬಿಸಲ್ಪಟ್ಟಿರುತ್ತಾರೆಂದರೆ ಅವರು ನಿಜವಾಗಿಯೂ ಬದುಕಿರುವ ವ್ಯಕ್ತಿಗಳೋ ಅಥವಾ ಕೃತಕ ಸೃಷ್ಟಿಗಳೋ ಎಂಬ ಅನುಮಾನ ಮೂಡುತ್ತದೆ. ನ್ಯಾಯಾಲಯಗಳೂ ಕೂಡ ಕಾದಂಬರಿಗಳ ಹಾಗೆ. ಅವು ವಾಸ್ತವ

ಮತ್ತು ಭ್ರಮೆಯ ನಡುವಿನ ವ್ಯತ್ಯಾಸವನ್ನು ಅಳಿಸಿಬಿಡುತ್ತವೆ. ನ್ಯಾಯಾಲಯಕ್ಕೆ ಅದರದೇ ಪರಿಧಿಯಿರುತ್ತದೆ. ತೀರ್ಪು ದೊರೆಯುವುದು ನಿಜವಾಗಿ ಏನು ನಡೆಯಿತು ಎಂಬುದರ ಆಧಾರದ ಮೇಲಲ್ಲ, ಬದಲಾಗಿ ವಾದಿ ಪ್ರತಿವಾದಿಗಳು ಪ್ರಕರಣವನ್ನು ಸಮರ್ಥಿಸಿಕೊಳ್ಳುವ ಆಧಾರದ ಮೇಲೆ.

ಆಧುನಿಕೋತ್ತರವಾದ ನಂಬಿಕೆಯೇ ಅದು.

ನಿಜವೋ ಸುಳ್ಳೋ? ದೂರೊಂದು ದಾಖಲಾಗಿದೆ. ಅಮೇರಿಕಾದ್ದಷ್ಟೇ ಅಲ್ಲ ಪ್ರಪಂಚದ ಯಾವುದೇ ಆಧುನಕ ನ್ಯಾಯಾಲಯ ಮಾಡುವ ಕೆಲಸವನ್ನೇ ಅಮೆರಿಕನ್ ನ್ಯಾಯಾಲಯವೂ ಮಾಡಿತು. ಸುದೀರ್ಘವಾದ ವಿಚಾ ರಣೆ ಇದಕ್ಕೆ ಕೊನೆಯೇ ಇಲ್ಲವೇನೋ ಎಂಬಂತೆ ನಡೆಯತೊಡಗಿತು. ಮಿಂಚಿನಂತೆ ಮಿಡಿನಾಗರದಂತೆ ಸುಳಿದು ಮಿಂಚುತ್ತಿದ್ದ ಮೈಕಲ್ ಆಮೆಗತಿಯಲ್ಲಿ ನಡೆಯುತ್ತಿದ್ದ ನ್ಯಾಯಾಲಯದ ವಿಚಾರಣೆಗೆ ಹೆದರಿಬಿಟ್ಟ. ಭಯವಿದ್ದುದು ತೀರ್ಪಿನ ಬಗ್ಗೆಯಲ್ಲ, ಬದಲಾಗಿ ತೀರ್ಪಿಗಾಗಿ ಕಾಯುತ್ತಾ ನರಳಬೇಕಾದ ಪರಿಸ್ಥಿತಿಯೇ ಅವನನ್ನು ಕಂಗಾಲಾಗಿಸಿರಬೇಕು. ನ್ಯಾಯಾಲಯದ ವಿಚಾರಣೆ ಕ್ರಮ ಎಷ್ಟು ವಿಚಿತ್ರವಾಗಿರುತ್ತದೆಯೆಂದರೆ ವಿಚಾರಣೆಗೂ ಅಂತಿಮ ತೀರ್ಪಿಗೂ ಅಷ್ಟೇನೂ ವ್ಯತ್ಯಾಸವಿರುವುದಿಲ್ಲ. ಒಟ್ಟು ಪ್ರತಿಕ್ರಿಯೆಯಲ್ಲಿ ಭಾಗಿಯಾಗುತ್ತಾ ಮೈಕಲ್ ಮತ್ತಷ್ಟು ಪರಕೀಯನಾಗುತ್ತಾ ಹೋದ.

ಎಲ್ಲಿಯೂ ನಿಜವಾದ ಸಾಕ್ಷ್ಯ ಅಥವಾ ಸತ್ಯವೆಂಬುದು ಇಲ್ಲ. ಹಾಗೇನಾದರೂ ಇದ್ದರೆ ವ್ಯಾಖ್ಯಾನಗಳು ಮಾತ್ರ. ಇಲ್ಲಿ ಇಡೀ ಪ್ರಕರಣದಂತೆ ಮೈಕಲ್‌ನ ವ್ಯಕ್ತಿತ್ವವೂ ವಾಸ್ತವ ಮತ್ತು ಭ್ರಮೆಯ ನಡುವಿನ ಗೆರೆಯಂತಿತ್ತು.

ಕಾಸ್ಮೆಟಿಕ್ ಸರ್ಜರಿಗೆ ಒಳಗಾಗಿ ತನ್ನ ಮೂಲ ಸ್ವರೂಪವನ್ನೇ ಕಳೆದು ಕೊಂಡಿತ್ತು. ವಾಸ್ತವ ಮತ್ತು ಭ್ರಮೆಯ ನಿರಂತರ ಘರ್ಷಣೆಯ ನಡುವೆ ಸಂಸ್ಕೃತಿಯ ಮೇಲೆ ಜೀವಶಾಸ್ತ್ರವೇ ಗೆದ್ದಂತೆ ತೋರುತ್ತಿತ್ತು. ಎರಡನೆ ಪೀಳಿಗೆಯ ಮಕ್ಕಳಿಗಂತೂ ಅವನು ಕರಿಯನೆಂಬುದು ಗೊತ್ತೇ ಇರಲಿಲ್ಲ. ಅವನ ಮೂಗನ್ನೇ ನೋಡಿ ಮೂಗು ತನ್ನಿಷ್ಟದ ಆಕಾರಕ್ಕೆ ಒಗ್ಗಿಸಿಕೊಳ್ಳಬಲ್ಲ ಅರ್ಥಹೀನ ವಸ್ತುವಾಗಿ ಹೋಯಿತು. ಹಾಗೆಯೇ ಆಧುನಿಕೋತ್ತರ ದಿನಗಳಲ್ಲಿ ಪ್ರಪಂಚದ ನಿಜವಾದ ಒಳಾರ್ಥಗಳು ಕಳೆದೇ ಹೋಗಿವೆ. ನಮಗೆ ಹಚ್ಚೆ ಹುಯ್ಯುವ ಕ್ರಿಯೆ ಮತ್ತು ಬುಷ್‌ನ ವಿದೇಶಾಂಗ ನೀತಿ ಬಹುದೂರದ ಒಂದಕ್ಕೊಂದು ಸಂಬಂಧವಿಲ್ಲದ ಕ್ರಿಯೆಗಳಂತೆ ಗೋಚರಿಸಬಹುದು. ವಾಸ್ತವದಲ್ಲಿ ಹಾಗೇನೂ ಇಲ್ಲ. ಪ್ರಜಾಪ್ರಭುತ್ವ ಮುಖವಾಡವುಳ್ಳ ಸಾಮ್ರಾಜ್ಯಶಾಹಿಯು ತನ್ನಿಷ್ಟಕ್ಕೆ ಹಚ್ಚೆ ಹೊಯ್ಯುವಂತೆ ಪರರ ಮೇಲೆ ಅಧಿಕಾರ ಹೇರಬಹುದು. ಮೈಕಲ್‌ನ ವಿಚಾರಣೆಯಲ್ಲಿ ನಡೆದದ್ದು ಅಷ್ಟೇ. ವಾಸ್ತವ ಮತ್ತು ಕಲ್ಪನೆಯ ನಡುವಿನ ವ್ಯತ್ಯಾಸ ಅಳಿಸಿಹೋಗಿತ್ತು. ಮಾಧ್ಯಮಗಳಂತೂ ವಿಚಾರಣೆಗೆ ದಿನಕ್ಕೊಂದು ಬಣ್ಣ ನೀಡುತ್ತಿದ್ದವು.

ಪ್ರತಿಯೊಂದು ವರದಿಯು ಮತ್ತೊಂದಕ್ಕೆ ತದ್ವಿರುದ್ಧವಾಗಿರುತ್ತಿದ್ದವು. ಸ್ವಲ್ಪ ಹೆಚ್ಚು ಕಡಿಮೆ ವಿಚಾರಣೆಯನ್ನು ಮುಗಿಸಿಹಾಕಿದ್ದವು. ಮೊದಲಾಗಿದ್ದರೆ ವಿಚಾರಣೆ ಎಂಬುದೇ ರಾಜಾಸ್ಥಾನದಲ್ಲೋ, ಕಟಕಟೆಯಲ್ಲೋ ನಡೆಯುತ್ತಿತ್ತು. ಅದಕ್ಕೆ ನೈತಿಕತೆ ಅಥವಾ ಅನೈತಿಕತೆಯ ಚೌಕಟ್ಟಿರುತ್ತಿತ್ತು. ಹ್ಯಾಮ್‌ಲ್ಯಾಕ್ ವಿಷ ಕುಡಿಸುವ ಮುನ್ನ ಅಥೆನ್ಸಿನ ನ್ಯಾಯಾಲಯದಲ್ಲಿ ಸಾಕ್ರೆಟಿಸ್‌ನನ್ನು ಸುದೀರ್ಘ ವಿಚಾರಣೆಗೆ ಒಳಪಡಿಸಲಾಗಿತ್ತು. ಶಿಲುಬೆಗೇರುವ ಮುನ್ನ ಜೆರುಸಲೇಮಿನ ಪಿಲಾತ ದೊರೆಯ ಆಸ್ಥಾನದಲ್ಲಿ ಕ್ರಿಸ್ತನನ್ನು ತನ್ನ ಒಳ್ಳೆಯತನವನ್ನು ಸಾಬೀತುಪಡಿಸಲು ಅವಕಾಶ ನೀಡಲಾಗಿತ್ತು. ಅವರಂತೆ ಮಹಾತ್ಮನಲ್ಲದ, ಇವನ

ಲೈಂಗಿಕ ಆರೋಪದ ಪ್ರಕರಣ ನಾನಾ ಬಗೆಯಲ್ಲಿ ಮೈಕಲ್‌ಗೆ ವಿಪರೀತ ಸುಸ್ತನ್ನು ಉಂಟುಮಾ ಡಿತ್ತು. ನ್ಯಾಯಾಲಯ ದೋಷಿಯೋ ನಿರ್ದೋಷಿಯೋ ಎಂದು ತೀರ್ಮಾನ ನೀಡುವ ಮೊದಲೇ ಕೋರ್ಟಿನ ಹೊರಗಡೆ ಈ ಪ್ರಕರಣವನ್ನು ಬಗೆಹರಿಸಿಕೊಳ್ಳಲಾಯಿತು.

ವಿಚಾರಣೆಯನ್ನು ಅವನಿಗೆ ಯಾವ ಅವಕಾಶವನ್ನು ಕೊಡದೆ ಮಾಧ್ಯಮಗಳು ಏಕಮುಖವಾಗಿ ನಡೆಸಿದ್ದವು. ಭರಾಟೆಯಲ್ಲಿ ಅಪರಾಧವೆಸಗದಿದ್ದವನೂ 'ಅಪರಾಧಿ' ಎಂಬ ಭಾವನೆಯನ್ನು ಆರೋಪಿಯೇ ಭಾವಿಸುವಂಥ ವಾತಾವರಣ ಸೃಷ್ಟಿಯಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಸಂಗೀತದ ಪ್ರತಿಸ್ವರ, ತಾಳಕ್ಕೂ ಇಡಿಯಾಗಿ ಮಿಡಿಯುತ್ತಿದ್ದ ಮೈಕಲ್‌ನಂಥ ಸೂಕ್ಷ್ಮಕಲಾವಿದ ಮಾರುವ ಸರಕಾಗಿಬಿಟ್ಟಿದ್ದ. ಬಿಳಿ ಮಾಧ್ಯಮಗಳು ಆಫ್ರಿಕಾದ ಕಡುಕಪ್ಪು ನೀಗ್ರೋನನ್ನು ಮತ್ತೊಮ್ಮೆ ಬಹಿರಂಗ ಸಂತೆಯಲ್ಲಿ ಹರಾಜಿಗಿಟ್ಟಿದ್ದವು.

ಲೈಂಗಿಕ ಆರೋಪದ ಪ್ರಕರಣ ನಾನಾ ಬಗೆಯಲ್ಲಿ ಮೈಕಲ್‌ಗೆ ವಿಪರೀತ ಸುಸ್ತನ್ನು ಉಂಟುಮಾಡಿತ್ತು. ನ್ಯಾಯಾಲಯ ದೋಷಿಯೋ ನಿರ್ದೋಷಿಯೋ ಎಂದು ತೀರ್ಮಾನ ನೀಡುವ ಮೊದಲೇ ಕೋರ್ಟಿನ ಹೊರಗಡೆ ಈ ಪ್ರಕರಣವನ್ನು ಬಗೆಹರಿಸಿಕೊಳ್ಳಲಾಯಿತು.

ಯಾವುದಾದರೂ ಒಂದು ಪ್ರಕರಣ ನಿಜ ಭ್ರಮೆಗಳ ರೂಪಕದಂತೆ ನಡೆದರೆ ಅದು ಸಹಜವೇ. ಆದರೆ ಇಡೀ ಐವತ್ತು ವರ್ಷಗಳ ಜೀವನದ ಎಲ್ಲ ತಿರುವುಗಳೂ ಹೀಗೆಯೇ ಆಗಬಹುದೇ?

ತನ್ನ ಗೆಳತಿ ಲಿಸಾಮೇರಿ ಪ್ರೆಸ್ಲಿಯನ್ನು ಗುಟ್ಟಾಗಿ ಮದುವೆಯಾಗಿ ಎರಡು ಮಕ್ಕಳನ್ನೂ ಪಡೆದ. ನಮ್ಮಿಬ್ಬರ ನಡುವೆ ಲೈಂಗಿಕ ಸಂಬಂಧ ಜೀವಂತವಾಗಿತ್ತು ಎಂದು ಹೇಳಿಕೊಂಡ. ಆ ಮದುವೆ ವಿಚ್ಛೇದನದಲ್ಲಿ ಕೊನೆಗೊಂಡಿತು. ಮತ್ತೊಂದು ಮದುವೆಯಾದ. ಕೃತಕ ಗರ್ಭಧಾರಣೆಯ ಮೂಲಕ ಅವನ ಎರಡನೇ ಹೆಂಡತಿ ಮಕ್ಕಳನ್ನು ಪಡೆದಳು. ಸಹಜವಾದ ನೈಸರ್ಗಿಕ ವ್ಯಾಪಾರಗಳನ್ನು ಎಂದೋ ಮೀರಿದ್ದ ಮೈಕಲ್‌ನ ಖಾಸಗಿ ಬದುಕು ಮತ್ತೊಮ್ಮೆ ಮಕ್ಕಳ ರೂಪದಲ್ಲಿ ಪುನರ್‌ಸೃಷ್ಟಿಯಾಗಿತ್ತಷ್ಟೇ.

ಅತಿ ಹೆಚ್ಚು ಜನರಿಗೆ ನೃತ್ಯ- ಸಂಗೀತ ಪ್ರದರ್ಶನ ಕೊಟ್ಟಿದ್ದ ಮೈಕಲ್ ಬ್ರಿಟನ್‌ನಲ್ಲಿ 50 ಶೋಗಳನ್ನು ಕೊಡಲು ಬೆಚ್ಚಿಬಿದ್ದಿದ್ದ. ಅತಿ ಹೆಚ್ಚು ಶ್ರೀಮಂತನಾದ - ಸಾಲಗಾರನಾದ. ಸಾಲ ತೀರಿಸಲು ಕೊನೆಗೂ ಅವನ ನಿರ್ಜೀವ ದೇಹ ಪ್ರದರ್ಶನಕ್ಕೊಳಪಟ್ಟಿತು. ಅಂತಿಮ ಸಂಸ್ಕಾರ ಇಸ್ಲಾಂ ರೀತಿಯಲ್ಲಿ ಜರುಗಿತ್ತು - ಕ್ರಿಶ್ಚಿಯನ್ ರೀತಿಯಲ್ಲಿ ಗುಟ್ಟಾಗಿಡಲಾಯಿತು. ಆತ್ಮಹತ್ಯೆ ಮಾಡಿಕೊಂಡನೋ ಕೊಲ್ಲಲ್ಪಟ್ಟನೋ ಬಗೆಹರಿದಿಲ್ಲ. ಕೊನೆಗೂ ಅವನ ವಿಚಾರದಲ್ಲಿ ಇದೇ 'ದಿಟ' ಎಂದು ಯಾರೂ ಹೇಳಲಾಗದಂತೆ ಬದುಕಿದ ಮತ್ತು ನಿರ್ಗಮಿಸಿದ. ಆಫ್ರಿಕನ್ ಅಮೇರಿಕನ್ನರ 150 ವರ್ಷಗಳ ಹೋರಾಟ 1960ರ ಅಮೆರಿಕಾದ ನ್ಯೂಲೆಫ್ಟ್ ಚಳುವಳಿ, ಕಪ್ಪು ಜನರ ಛಲ ಇವೆಲ್ಲ ಒಗ್ಗೂಡಿ ರಂಗದ ಮೇಲೆ ಕಾರಂಜಿಯಂತೆ ಚಿಮ್ಮಿದ, ಸ್ಫೋಟಿಸಿದ ಮೈಕಲ್ ಕೊನೆಗೂ ನಿಜ ಯಾವುದು ಭ್ರಮೆ ಯಾವುದು ಎಂಬ ಪ್ರಶ್ನೆಗಳನ್ನು ನಮ್ಮ ಮುಂದಿಟ್ಟು ದೈಹಿಕವಾಗಿ ಚಂದಿರನೆಡೆಗೆ ನಡೆದುಹೋದ ಅವನ ಎಂದಿನ ಆಧುನಿಕೋತ್ತರ ಶೈಲಿಯಲ್ಲಿ. □

ಪಾಸು ಮತ್ತು ಫೇಲು

ಬೇಸರವೂ ಕವನವಾಗುತ್ತದೆ
ಆಸ್ಥೆಯಲ್ಲಿ ದಾಖಲಿಸಿದಾಗ
ಅದನ್ನೇ ಪ್ರೀತಿಸಿದಾಗ

ಪುರಾವೆ ಬೇಕೆಂದರೆ
ಮುದುಡಿದ ಮನವನ್ನು
ಅರಳಿಸಲು ಹೋಗದೆ
ಅದರಷ್ಟಕ್ಕದನ್ನು ಬಿಟ್ಟು
ನೋವು ತಿನ್ನಬೇಕು

ಮಂಕು ಮುಖ-ಆಲಸ್ಯ
ಎಲ್ಲವ ಒಂದೊಂದಾಗಿ ಗಮನಿಸುತ್ತ
ಅಂಕ ನೀಡುತ್ತ ಬರಬೇಕು
ಕೊನೆಗೆ ಶ್ರದ್ಧೆಯಲ್ಲಿ ನೂರಕ್ಕೆ ನೂರು
ಅಂಕ ಸಿಕ್ಕಿ ಬಿಟ್ಟು
ಇನ್ನೂ ಜೀವ ಉಳಿದಿದ್ದರೆ
ರ್‍ಯಾಂಕ್ ಸ್ಟೂಡೆಂಟ್ ಎಂದೇ ಅರ್ಥ!

ಮಧ್ಯದಲ್ಲೇ ಸುಸ್ತಾಗಿ-ಸಾಕಾಗಿ
ಪ್ರಾಣ ತ್ಯಾಗ ಮಾಡಿದರೆ
ಅಥವಾ ಪ್ರಾಣ ತಾನೇ ಹೋಗಿ ಬಿಟ್ಟರೆ
ಮುಲಾಜಿಲ್ಲದೆ ಫೇಲ್ ಎಂದೇ ಅರ್ಥ

ಫೇಲ್ ಆದವರು ಕಳೆದು ಹೋಗುವುದರಿಂದ
ಅವರೊಡನೆ ಕವನವೂ ಕಳೆದು ಹೋಗುತ್ತದೆ
ಪಾಸಾದವರು ಬೇಸರವನ್ನು ದಾಟಿ
ಮುಂದೆ ಅಡಿಯಿಡುವುದರಿಂದ
ಬೇಸರ ನಾಚಿ ನಾಚಿ ಕವನವಾಗಿ ಬಿಡುತ್ತದೆ
ಕೊನೆಗೆ ಕಣ್ಣೀರ ಹನಿ ತುಟಿಯಂಚಿನಲ್ಲಿ
ನಗಲು ತೊಡಗುತ್ತದೆ-
ಚಾಪ್ಲಿನ್‌ನಂತೆ!

○ ಜ್ಯೋತಿ ಗುರುಪ್ರಸಾದ್

ಕೇಂದ್ರ ಬಜೆಟ್-೨೦೦೯-೧೦ ಕಿಬ್ಬದಿಯ ಕೀಲುಗಳು ಜಾಗ್ರತೆ!

(27ನೇ ಪುಟದಿಂದ)

ಬಗ್ಗೆ ಬಜೆಟ್ಟಿನಲ್ಲಿ ಅವರು ಹೆಚ್ಚಿನ ಸದ್ದು ಮಾಡಲಿಲ್ಲ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬಲ್ಲೆವು. ಆದೇನೇ ಇದ್ದರೂ 'ಬಜೆಟ್ಟಿನಲ್ಲಿ ಹೇಳಲಾಗಿಲ್ಲ' ಎಂದಮಾತ್ರಕ್ಕೆ ಅವರ ಬಗ್ಗೆ 'ಯಾವ ಕ್ರಮವನ್ನು ತೆಗೆದುಕೊಳ್ಳುವುದೂ ಇಲ್ಲ' ಎಂದೇನೂ ಅರ್ಥಮಾಡಿಕೊಳ್ಳಬೇಕಿಲ್ಲ!"

ಅಷ್ಟು ಮಾತ್ರವಲ್ಲ. ಸರ್ಕಾರಿ ಸಂಸ್ಥೆಗಳಿಂದ ಹೂಡಿಕೆ ಹಿಂತೆಮುಕೊಳ್ಳುವ ಬಗ್ಗೆಯೂ ಬಜೆಟ್ಟಿನಲ್ಲಿ ಹೆಚ್ಚೇನೂ ಹೇಳಿಲ್ಲ. ಸಂಸತ್ತಿನಲ್ಲಿ ಮಂಡಿಸಿದ ಬಜೆಟ್ ಪ್ರಕಾರ 2010ರ ಏಪ್ರಿಲ್ ವೇಳೆಗೆ ಸರ್ಕಾರ ಬಂಡವಾಳ ಹಿಂತೆಗೆದುಕೊಳ್ಳುವಿಕೆಯ ಮೂಲಕ ಕೇವಲ 1200 ಕೋಟಿ ರೂ.ಗಳನ್ನು ಕ್ರೋಢೀಕರಿಸಲಿದೆಯಷ್ಟೆ. ಆದರೆ ಮೋರ್ಗಾನ್ ಸ್ಟಾನ್ಲಿ ಸಂಸ್ಥೆಯ ಪ್ರಕಾರ "ಸರ್ಕಾರ ಸರ್ಕಾರಿ ಉದ್ಯಮಗಳಲ್ಲಿ ತನ್ನ ಹೂಡಿಕೆಯನ್ನು ಹಿಂತೆಗೆದುಕೊಳ್ಳುವ ಮೂಲಕ 2010ರ ಮಾರ್ಚಗೆ ಮುನ್ನ ಏನಿಲ್ಲವೆಂದರೂ 25,000 ಕೋಟಿ ರೂ. ಹಣವನ್ನು ಕ್ರೋಢೀಕರಿಸಲಿದೆ" ಮತ್ತೊಂದು ನುರಿತ ದೇಶಿ ಕಾರ್ಪೊರೇಟ್ ಸಂಸ್ಥೆಯಾದ RPG Foundation ಪ್ರಕಾರ "ಈ ಬಾರಿ ಸರ್ಕಾರ ತನ್ನ ಬಜೆಟ್ಟನ್ನು ಓಟುಕೊಟ್ಟವರಿಗೆ ಕೃತಜ್ಞತೆ ಹೇಳಲು ಬಳಸಿಕೊಂಡಿದೆ. ಮುಂದಿನ ಬಜೆಟ್ಟುಗಳಲ್ಲಿ ಅಸಲಿ ಆರ್ಥಿಕ ಸುಧಾರಣೆಯ ಬಜೆಟ್ಟುಗಳು ಮಂಡನೆಯಾಗಲಿವೆ."

ಇವೆಲ್ಲಕ್ಕಿಂತ ಹೆಚ್ಚಿನ ನಿಜಾಯತಿಯನ್ನು ಯೋಜನಾ ಆಯೋಗ ತೋರಿಸಿದೆ. ಅದರ ಸದಸ್ಯರಾದ ಸೌಮಿತ್ರ ಚೌಧರಿಯವರ ಪ್ರಕಾರ "ಸರ್ಕಾರಿ ಯೋಜನೆಗಳ ಬಗ್ಗೆ ಸೋಮವಾರ ಸಂಸತ್ತಿನಲ್ಲಿ ಮಂಡಿಸಲಾದ ಬಜೆಟ್ ಅಂತಿಮ ಮಾತನ್ನೇನೂ ಹೇಳಿಲ್ಲ. ಹಲವಾರು ವಿಷಯಗಳಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುತ್ತವೆ. ಉದಾಹರಣೆಗೆ ಪೆಟ್ರೋಲ್ ಬೆಲೆ ನಿಗದಿಯಂಥ ವಿಚಾರಗಳನ್ನು ಬಜೆಟ್ಟಿನ ಆಚೆಗೆ ಇರಿಸಲಾಗಿದೆ. ಇಂಥ ಹಲವಾರು ವಿಷಯಗಳಿವೆ!"

ಇವಲ್ಲದೆ 2010ರ ಏಪ್ರಿಲ್ ಇಂದ ಬಡವರ ಮೇಲೆ ಇನ್ನೂ ಹೆಚ್ಚಿನ ತೆರಿಗೆ ಭಾರವನ್ನು ಹೂರಿಸುವ ಹೊಸ ತೆರಿಗೆ ಪದ್ಧತಿಯಾದ Goods and Service Tax (GST) ಪದ್ಧತಿ ಜಾರಿಗೆ ಬರಲಿದೆಯೆಂಬುದನ್ನೂ ಸಹ ಘೋಷಿಸಲಾಗಿದೆ. ಅಂದರೆ ಸಾಲ ಮಾಡಿ ಸರ್ಕಾರ ಅನ್ನ ಹಾಕುತ್ತಿದೆ, ಕೆಲಸ ಕೊಡುತ್ತಿದೆ. ಅದಕ್ಕಿಂತ ಹೆಚ್ಚಾಗಿ ಖಾಸಗಿ ಉದ್ಯಮಗಳಿಗೆ ಬೇಕಿರುವುದೆಲ್ಲವನ್ನೂ ಈ ಸಾಲದಿಂದಲೇ ಮಾಡುತ್ತಿದೆ. ಆದರೆ ಆ ಸಾಲವನ್ನು ತೀರಿಸಲು ಜಿಎಸ್‌ಟಿ ತೆರಿಗೆ ಪದ್ಧತಿ ಮೂಲಕ ಬಡಜನರ ಜೇಬಿಗೆ ಕತ್ತರಿ ಹಾಕುತ್ತಿದೆ. ಸರ್ಕಾರಿ ಸಂಸ್ಥೆಗಳನ್ನು ಖಾಸಗೀಕರಿಸುವ ಮೂಲಕ ಜನರ ಆಸ್ತಿಯನ್ನು ಹರಾಜು ಮಾಡಿ ಶ್ರೀಮಂತರಿಗಾಗಿ ಮಾಡಿರುವ ಸಾಲವನ್ನು ತೀರಿಸಲಿದೆ. ಅಂದರೆ ಸಾರಾಂಶ ಇಷ್ಟೆ!

ಈ ಬಜೆಟ್ಟಿನ ಮೂಲಕ "ಸಾಲವೆಂಬ ಹಾಲೋಗರವನ್ನು" ಉದ್ಯಮಪತಿಗಳೇ ಉಂಡರೂ "ಸಾಲಿಗರು ಬಂದಾಗ" "ಕಿಬ್ಬದಿಯ ಕೀಲು" ಮುರಿಯುವುದೂ ಮಾತ್ರ ಶ್ರೀಸಾಮಾನ್ಯನದೇ...! □

ಸಂಸ್ಕೃತ ವಿಶ್ವವಿದ್ಯಾನಿಲಯ ಏಕೆ ಬೇಡ?

(15ನೇ ಪುಟದಿಂದ)

ಯನ್ನು ತಡೆಗಟ್ಟಲು ಮುನ್ನುಗ್ಗಬೇಕು. ಜನತಾ ಆಂದೋಲನವನ್ನು ಸಂಘಟಿಸಲು ಸಿದ್ಧವಾಗುವರೆಂದು ನಂಬೋಣ.

ಏಕೆಂದರೆ ಇಂಥ ವಿಶ್ವವಿದ್ಯಾನಿಲಯದ ಸ್ಥಾಪನೆಯಿಂದ ಜನಸಾಮಾನ್ಯರಿಗೆ ಏನೇನೂ ಪ್ರಯೋಜನವಾಗುವುದಿಲ್ಲ. ತೆರಿಗೆ ಪಾವತಿದಾರರ ಹಣ ಮತ್ತು ಮೂಕ ಜನಕೋಟಿಯ ಬೆವರಿನ ದುಡಿಮೆಯ ದುಡ್ಡು ಸಂಪೂರ್ಣವಾಗಿ ಪೋಲಾಗುವುದು. ಈ ಬಗೆಯ ಮಹಾ ಅಪವ್ಯಯವನ್ನು ಎಲ್ಲರೂ ಸೇರಿ ನಿಲ್ಲಿಸಲೇಬೇಕು. ಜನರಿಗೆ ಬೇಕಿದ್ದಾಗ ಸಂಸ್ಕೃತ ಶಿಕ್ಷಣವನ್ನು ಬೇಕೆಂದೇ ಕೊಡಲಿಲ್ಲ. ಈಗ ಬೇಡವಾದಾಗ ಅದನ್ನು ನೀಡಲು ಹೊರಟಿರುವುದು ವಿಪರ್ಯಾಸ. ಮರಣಾಂತಿಕ ಕ್ರಿಯೆ!

ಹೊರ ದೇಶಗಳ ವಿಶ್ವವಿದ್ಯಾನಿಲಯಗಳನ್ನಾದರೂ ನೋಡಿ ನಾವು ಕಲಿಯಬೇಕಾಗಿದೆ. ಒಂದು ಕಾಲದಲ್ಲಿ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳದೆ ಅಲ್ಲಿ ಪ್ರಾಬಲ್ಯ ಇತ್ತು. ಈ ಪ್ರಾಮುಖ್ಯತೆಯನ್ನು ಗೌಣಗೊಳಿಸಿ ತಂತಮ್ಮ ದೇಶಗಳ ಭಾಷೆಗಳನ್ನು ಅವು ವಿರಾಜಮಾನವಾಗಿಸಿವೆ. ಇಂಗ್ಲಿಷ್, ಫ್ರೆಂಚ್, ಜರ್ಮನ್, ಸ್ಪ್ಯಾನಿಷ್, ಮುಂತಾದ ನುಡಿಗಳು ಸಾರ್ವಭೌಮತೆ ಪಡೆದಿರುವುವು. ಅಲ್ಲಿನ ಸಾಹಿತಿಗಳು, ವಿಜ್ಞಾನಿಗಳು, ಸಮಾಜಶಾಸ್ತ್ರಜ್ಞರು ಅರ್ಥಶಾಸ್ತ್ರಜ್ಞರು ಮುಂತಾದವರು ತಮ್ಮ ತಮ್ಮ ಭಾಷೆಗಳಲ್ಲಿ ನೋಬೆಲ್ ಬಹುಮಾನ ಗಳಿಸಿರುವುದನ್ನು ನಾವು ಅರಿಯಬೇಕಾಗಿದೆ.

ಹಿಂದೆ ಪ್ರಮುಖ ಸ್ಥಾನಗಳಲ್ಲಿ ಮೆರೆಯುತ್ತಿದ್ದ ಪ್ರಾಚೀನ ಭಾಷೆಗಳಾದ, ಗ್ರೀಕ್, ಲ್ಯಾಟಿನ್, ಇತ್ಯಾದಿಗಳು ಯುರೋಪು ಮತ್ತು ಅಮೇರಿಕೆಯ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ವಿಷಯಗಳಾಗಿ ಉಳಿದಿವೆ, ಅಷ್ಟೆ. ಅವು ಶಾಸ್ತ್ರೀಯ ಭಾಷೆಗಳೆಂದು ಅವುಗಳಿಗಾಗಿ ಪ್ರತ್ಯೇಕ ವಿಶ್ವವಿದ್ಯಾನಿಲಯಗಳು, ನನಗೆ ತಿಳಿದಂತೆ, ಅಲ್ಲಿ ಸ್ಥಾಪಿತವಾಗಿಲ್ಲ. ಬದಲಿಗೆ ಆಯಾ ರಾಷ್ಟ್ರಗಳ ಪ್ರಧಾನ ಭಾಷೆಗಳು ಸಾರ್ವಭೌಮ ಪೀಠಗಳನ್ನು ಅಲಂಕರಿಸಿವೆ.

ಸ್ವಾತಂತ್ರ್ಯ ಬಂದ ಮೇಲೆ ಭಾರತ ದೇಶ ಭಾಷಾವಾರು ರಾಜ್ಯಗಳನ್ನು ರಚನೆ ಮಾಡಿತು. ಇದರಿಂದ ಭಾರತ ಒಕ್ಕೂಟದ ಪ್ರತಿಯೊಂದು ರಾಜ್ಯದಲ್ಲಿಯೂ ಅಲ್ಲಿನ ಭಾಷೆಗೆ ಎಲ್ಲಾ ಪ್ರಶಸ್ತ್ಯ ಸಿಗಬೇಕು ಎಂಬುದು ಉದ್ದೇಶ. ಜನ ಭಾಷೆಯೇ ಜನರ ಅಧಿಕೃತ ಭಾಷೆ. ಬೇರಾವ ಭಾಷೆಯೂ ಅದರ ಜಾಗಕ್ಕೆ ಬರುವಂತಿಲ್ಲ, ಬರಬಾರದು. ಇಲ್ಲದಿದ್ದರೆ ಭಾಷಾವಾರು ರಾಜ್ಯಗಳು ವಿಂಗಡಣೆಯೇ ಅರ್ಥಹೀನವಾಗುತ್ತದೆ. ಭಾರತದ ಸಂವಿಧಾನಕ್ಕೆ ಲೆಕ್ಕವಿಲ್ಲದಷ್ಟು(ತೊಂಬತ್ತು ಸಾರಿ) ತಿದ್ದುಪಡಿಗಳನ್ನು ತರಲಾಗಿದೆ. ಆದರೆ ರಾಜ್ಯಗಳನ್ನು ಪ್ರಬಲಗೊಳಿಸುವ ಭಾಷೆಯ ಬಗೆಗಿನ ತಿದ್ದುಪಡಿಯನ್ನು ಇದುವರೆವಿಗೂ ಮಾಡದಿರುವುದು ನಿಜಕ್ಕೂ ಶೋಚನೀಯ. ಈ ದಿಸೆಯಲ್ಲಿ ರಾಜ್ಯದ ಸಂಸದರು ಕಾರ್ಯೋನ್ಮುಖರಾಗಿ ಇತರ ರಾಜ್ಯಗಳ ಸಂಸದರಲ್ಲಿ ಜಾಗೃತಿ ಮೂಡಿಸುವ ಜವಾಬ್ದಾರಿ ಹೊರುವರೆಂದು ನಿರೀಕ್ಷಿಸೋಣ. ಇದರಿಂದ ಶಿಕ್ಷಣ ಮಾಧ್ಯಮದ ಸಮಸ್ಯೆ ಶಾಶ್ವತವಾಗಿ ಪರಿಹಾರವಾಗುವುದು. ಪದೇ ಪದೇ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲುಗಳನ್ನು ಹತ್ತುವ ತೊಂದರೆ ತಪ್ಪುತ್ತದೆ. □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಾಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಸಂವಿಧಾನದಲ್ಲಿ ಜಾತಿಪದ್ಧತಿ ನಿರ್ಮೂಲನೆ

ಡಾ. ಮೂಡ್ನಾಕೂಡು ಚಿನ್ನಸ್ವಾಮಿ

ಭಾರತದಲ್ಲಿ ದಲಿತರ ವಿರುದ್ಧ ನಡೆಯುವ ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಅಂತರರಾಷ್ಟ್ರೀಯ ಮಟ್ಟದ ಚರ್ಚೆಗಳು ನಡೆಯುತ್ತಲೇ ಇವೆ. ವಿಪರ್ಯಾಸವೆಂದರೆ ಭಾರತವು ಮಾನವ ಹಕ್ಕುಗಳನ್ನು ಪ್ರತಿಪಾದಿಸುವ ಅನೇಕ ಅಂತರರಾಷ್ಟ್ರೀಯ ಒಪ್ಪಂದಗಳಿಗೆ ಸಹಿ ಹಾಕಿದೆ. ಮಾನವ ಹಕ್ಕುಗಳ ಜಾಗತಿಕ ಘೋಷಣೆ ಮತ್ತು ಎಲ್ಲಾ ವಿಧವಾದ ಜನಾಂಗೀಯ ತಾರತಮ್ಯಗಳ ನಿರ್ಮೂಲನೆ ಮುಂತಾದುವು. ಭಾರತವು ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡ ಪ್ರಜಾಪಭುತ್ವ ರಾಷ್ಟ್ರವೆಂದೆನಿಸಿಕೊಂಡಿದೆ. ಆದರೂ ಈ ಪ್ರಜಾಪ್ರಭುತ್ವ ಕೆಲವರಿಂದ, ಕೆಲವರ ಕೆಲವರಿಗಾಗಿ ಎನ್ನುವಂತಿದೆ. ಮಾನವ ಹಕ್ಕುಗಳ ಉಲ್ಲಂಘನೆ ಜಗತ್ತಿನಲ್ಲೇ ಅತೀ ಹೆಚ್ಚು ಭಾರತದಲ್ಲಿ ನಡೆಯುತ್ತಿದೆ ಎನ್ನುವುದು ವಿಪರ್ಯಾಸ.

ಮಾನವ ಹಕ್ಕುಗಳ ಪ್ರತಿಪಾದನ ಸಂಸ್ಥೆ – ಈ ಹೆಸರೆ ಚೇತೋಹಾರಿಯಾಗಿದೆ. ಇದುವರೆವಿಗೆ ಶೋಷಿತರು ಬಡವರು ಸಂಘರ್ಷ ಸೂಚಕವಾದ ಸಂಘಟನೆಗಳನ್ನು ಕಟ್ಟಿಕೊಳ್ಳುವುದನ್ನು ಕೇಳಿದ್ದೆ. ಮೊದಲ ಬಾರಿಗೆ ಮಾನವ ಹಕ್ಕುಗಳ ಸಂಘಟನೆ ರೂಪುಗೊಳ್ಳುತ್ತಿರುವುದು ಉನ್ನತೀಕರಿಸಿದ ಆಲೋಚನಾ ವಿಧಾನವೆಂದು ಹೇಳಬಹುದು. ನನ್ನ ಪ್ರಕಾರ ಅಸ್ಪೃಶ್ಯತೆಯ ಆಚರಣೆ ಜಗತ್ತಿನಲ್ಲೇ ನಡೆಯುತ್ತಿರುವ ಅತಿ ದೊಡ್ಡ ಮಾನವ ಹಕ್ಕಿನ ಉಲ್ಲಂಘನೆ. ಒಬ್ಬ ವ್ಯಕ್ತಿಯ ವಂಶಪಾರಂಪರ್ಯವನ್ನು ಅವಮಾನಿಸುವ, ಅವಹೇಳನ ಮಾಡುವ ಈ ರೀತಿಯ ಉಲ್ಲಂಘನೆ ಪ್ರಪಂಚದಲ್ಲಿ ಎಲ್ಲಿಯೂ ಇಲ್ಲ. ಜಗತ್ತಿನ ಇತರೆಡೆಗಳಲ್ಲಿ ಸಂಭವಿಸುವ ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ಗಮನಿಸಿದಾಗ ಕಂಡುಬರುವ ಅಂಶವೇನೆಂದರೆ ಅವೆಲ್ಲವೂ ಕ್ರೌರ್ಯದ ಹಿನ್ನೆಲೆಯಲ್ಲಿ ನಡೆಯುವಂತಹವು. ಅವೆಲ್ಲವೂ ಉದ್ದೇಶ ಪೂರ್ವಕವಾದವು ಮತ್ತು ಅವೆಲ್ಲವೂ ದುರ್ಜನರಿಂದ ಉಂಟಾಗುವಂತಹವು. ಆದರೆ ಭಾರತದ ಜಾತಿ ಪದ್ದತಿಯೊಳಗಿನ ಅಸ್ಪೃಶ್ಯತೆ ಎಂಬ ಈ ಮಾನವ ಹಕ್ಕಿನ ಉಲ್ಲಂಘನೆಗೆ ಉದ್ದೇಶಿತ ಕ್ರೌರ್ಯದ ಹಿನ್ನೆಲೆಯಿಲ್ಲ.

ಇದು ನಿರುದ್ದೇಶಿತವಾಗಿಯೇ ಒಂದು ರಿಚುಯಲ್‌ನಂತೆ ಆಚರಿಸಲ್ಪಡುವಂತಹದು ಮತ್ತು ಈ ಉಲ್ಲಂಘನೆ ಅತೀ ಸಂಭಾವಿತ ಜನರಿಂದಲೇ ನಡೆಯುವಂತಹದು. ಧಾರ್ಮಿಕ ಆಯಾಮವನ್ನು ಒಳಗೊಂಡಿರುವ ಈ ಕಠೋರವಾದ ಮಾನವ ಹಕ್ಕಿನ ಉಲ್ಲಂಘನೆ ಪ್ರಶ್ನಿಸಲು ಸಾಧ್ಯವಾಗದ ರೀತಿಯಲ್ಲಿ ಜನಜೀವನದಲ್ಲಿ ಹಾಸುಹೊಕ್ಕಾಗಿದೆ. ಇದು ಶತಮಾನಗಳಿಂದ ನಡೆದುಕೊಂಡು ಬರುತ್ತಿದೆ. ಒಂದು ವರ್ಗಕ್ಕೆ ಆಸ್ತಿಯ ಹಕ್ಕು, ವಿದ್ಯೆಯ ಹಕ್ಕುಗಳನ್ನು ಕಸಿಯುವುದು ಸಹ ಕನಿಷ್ಠ ಮಾನವ ಹಕ್ಕಿನ ಉಲ್ಲಂಘನೆಯೆನಿಸದಿರುವುದು ಶೋಚನೀಯವಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದು 62 ವರ್ಷಗಳು ಕಳೆದರೂ ಹಳ್ಳಿಗಳ ನಾಡಾದ ಇಲ್ಲಿ ಮುಟ್ಟಿಸಿಕೊಳ್ಳದೆ ಅವಮಾನಿಸುವಂಥ ಗುರುತರವಾದ ಮಾನವ ಹಕ್ಕಿನ ಉಲ್ಲಂಘನೆ ಎಗ್ಗಿಲ್ಲದೆ ಇನ್ನೂ ಚಾಲ್ತಿಯಲ್ಲಿದೆ. ಸಂವಿಧಾನದಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲಾಗಿದೆ. ಅದರ ಆಚರಣೆ ಒಂದು ಮಹಾಪರಾಧ. ಆದರೆ ಜಾತಿ ಪದ್ಧತಿಯನ್ನು ಕುರಿತು ಸಂವಿಧಾನ ಏನನ್ನೂ ಹೇಳುವುದಿಲ್ಲ. ಜಾತಿ ಪದ್ಧತಿಯ ಆಚರಣೆಯಲ್ಲಿ ಮೇಲು ಕೀಳಿನ ಅಂಶವಿದೆ. ಈ ನೇರ ವಿಭಜನೆಯಲ್ಲಿ (ವರ್ಟಿಕಲ್ ಡಿವಿಷನ್) ಕಟ್ಟ ಕಡೆಯವನಾಗಿ ಅಸ್ಪೃಶ್ಯನಿರಲೇಬೇಕಾಗುತ್ತದೆ. ಆದ್ದರಿಂದ ಜಾತಿ ಪದ್ಧತಿಯನ್ನು ಸಂವಿಧಾನದಲ್ಲಿ ಅಪರಾಧವೆಂದು ಪರಿಗಣಿಸಿ ಹೋಗಲಾಡಿಸಬೇಕಾಗುತ್ತದೆ. ಈ ದ್ವಂದ್ವ ಇರುವವರೆಗೂ ಮಾನವ ಹಕ್ಕಿನ ಉಲ್ಲಂಘನೆ ನಡೆಯುತ್ತಲೇ ಇರುತ್ತದೆ.

ಇದನ್ನು ಇನ್ನಷ್ಟು ಸ್ಪಷ್ಟಪಡಿಸಲು ಖ್ಯಾತ ಮರಾಠಿ ಲೇಖಕ ನರೇಂದ್ರ ಜಾದವ್ ಅವರ ಆತ್ಮಕತೆ "ಬಹಿಷ್ಕೃತ" ದಿಂದ ಒಂದು ಘಟನೆಯನ್ನು ಹೇಳಲಿಚ್ಚಿಸುತ್ತೇನೆ. ಅದು ಜಾದವ್‌ರವರ ತಂದೆಯ ಕತೆ. ದಾಮು ಎಂದಿನಂತೆ ತನ್ನ ಕೆಲಸ ಮುಗಿಸಿಕೊಂಡು ಮನೆಗೆ ಹಿಂದಿರುಗುತ್ತಿರುತ್ತಾನೆ. ಎದುರಿಗೆ ಸಿಕ್ಕ ಪೋಲಿಸಿನವನು ಇವನನ್ನು ಕರೆದು (ಬೈಗುಳ ಬಾಷೆಯಲ್ಲಿ ಕರೆಯುತ್ತಾನೆ– ಕೆಳಜಾತಿಯವರನ್ನು ಉದ್ದೇಶಿಸಿ ಮಾತಾಡಿಸುವ ರೀತಿಯಲ್ಲಿ) ಈ ಊರ ಹೊರಗಿರುವ ಹಾಳು ಬಾವಿಯಲ್ಲಿ ಒಂದು ಹೆಣ ಬಿದ್ದಿದೆ, ಯಾರೋ ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಈಗಲೇ ನೀನು ಅಲ್ಲಿಗೆ ಹೋಗಿ ಬೆಳಿಗ್ಗೆ ಪೌಜುದಾರರು ಬರುವವರೆಗೆ ಹೆಣವನ್ನು ಕಾಯಬೇಕು ಎಂದು ಆದೇಶಿಸುತ್ತಾನೆ. ದಾಮು ಊಟ ಮಾಡಿ ಬರುತ್ತೇನೆಂದರೂ ಮತ್ತು ಮನೆಗೆ ಹೋಗಿ ಹೆಂಡತಿಗೆ ಹೇಳಿ ಬರುತ್ತೇನೆಂದರೂ ಕೇಳುವುದಿಲ್ಲ. ಎದರು ಮಾತನಾಡುವುದೇ ವಿಪರೀತವಾಯಿತೆಂದು ಗದರಿಸುತ್ತಾನೆ. ಇವನು ವಿಧಿಯಿಲ್ಲದೆ ಪಾಳು ಬಾವಿಯ ಬಳಿ ರಾತ್ರಿಯೆಲ್ಲ ಹೆಣ ಕಾಯುತ್ತಾ ಚಳಿಯಲ್ಲಿ ನಡುಗುತ್ತ ಕುಳಿತಿರುತ್ತಾನೆ.

ಮುಂಜಾನೆ ಬಹಿರ್ದೆಸೆಗೆಂದು ಬರುವ ಹೆಣ್ಣುಮಕ್ಕಳು ಮಾತನಾಡಿಕೊಳ್ಳುವುದನ್ನು ಕದ್ದು ಕೇಳಿಸಿಕೊಂಡಾಗ ಇವನಿಗೆ ತಿಳಿಯುತ್ತದೆ ಸತ್ತಿರುವುದು ಮೇಲ್ಜಾತಿಯ ಹೆಣ್ಣು ಎಂದು. ಅಂತೂ ಬೆಳಿಗ್ಗೆ ಪೌಜುದಾರರು ಪೋಲೀಸಿನವನು ಬರುತ್ತಾರೆ. ಇವನು ರಾತ್ರಿ ಊಟವಿಲ್ಲದೆ ಚಳಿಯಲ್ಲಿ ನಡುಗಿ ತಾನೆ ಹೆಣದಂತಾಗಿರುತ್ತಾನೆ. ಪೌಜುದಾರ ಮಹಜರ್ ನಡೆಸಿ ಪಂಚನಾಮೆ ಇತ್ಯಾದಿ ಮಾಡಿ ಮುಗಿಸುತ್ತಾನೆ. ಆದರೆ ಬಾವಿಯಿಂದ ಹೆಣ ಎತ್ತಬೇಕಾದವರು ಬಂದಿರುವುದಿಲ್ಲ. ಪೌಜುದಾರ ಇವ

ನನ್ನೆ ಹೆಣ ಎತ್ತಲು ಆದೇಶಿಸುತ್ತಾನೆ. ಇವನಿಗೆ ತಡೆಯಲಾರದಷ್ಟು ಸಿಟ್ಟು ಬರುತ್ತದೆ. ನನ್ನ ಕೆಲ್ಸಸ ಹೆಣ ಕಾಯುವುದು ಮಾತ್ರ ಹೆಣ ಎತ್ತುವುದಲ್ಲ ಎಂದು ವಿರೋಧಿಸುತ್ತಾನೆ. ಮೇಲ್ಜಾತಿ ಸತ್ತವರು ಮೇಲ್ಜಾತಿಯವರು, ನಾನೇನಾದ್ರು ಮುಟ್ಟಿದ್ರೆ ದ್ರೋಹಮಾಡಿದಾಗಾಗುತ್ತದೆ ಎನ್ನುತ್ತಾನೆ. ನನ್ನ ಎದುರು ಮಾತನಾಡುವಷ್ಟು ಕೊಬ್ಬೆ ನಿನಗೆ ಎಂದು ಪೌಜುದಾರ ಇವನನ್ನು ಹಿಡಿದು ತಳಿಸಲು ಮುಂದಾಗುತ್ತಾನೆ. ಆದರೂ ದಾಮು 'ನಾನು ಹೊರಗೆ ತೆಗೆದರೆ ವಾರಸುದಾರರ ಕೋಪಕ್ಕೆ ಗುರಿಯಾಗುತ್ತೀನಿ ಎಂದು ಪ್ರತಿಭಟಿಸುತ್ತಾನೆ. ಆಗ ಪೌಜುದಾರ ಹೇಳುವ ಮಾತು ಕುತೂಹಲಕರವಾಗಿದೆ. "ನೀವು ಕೀಳ್ಜಾತಿಯೋರು ನಮ್ಮನ್ನು ದಿಟ್ಟಿಸಿ ನೋಡಿ, ಎದುರು ಮಾತಾಡ್ತಾ ಇರೋದ್ರ ಕಾರಣ ನಂಗೊತ್ತು.

ಇದಕ್ಕೆಲ್ಲ ಆ ದುಷ್ಟ ಮಹರ್ ಅಂಬೇಡ್ಕರ್ ಕಾರಣ. ಅವ್ನು ಒಂದೆರಡು ಪುಸ್ತಕ ಓದಿಬಿಟ್ರೆ ಕೀಳ್ಜಾತಿಯಿಂದ ಮೇಲ್ಜಾತಿ ಬ್ರಾಹ್ಮಣ ತಕ್ಷಣ ಆಗೋಗ್ತಾನೆ ಅಂದ್ಕೊಂಡಿದ್ದಾನೆ. ಮತ್ತೆ ನೀವು ತಾಯ್ಗಂಡ ಮಕ್ಳು, ಅವನ ಮಾತ್ಕೇಳಿ ನಮಗೆ ಎದುರಾಡ್ತಹುದು ಅಂದ್ಕೋತೀರಿ ನನಗೆ ಗೊತ್ತು ಆ ಅಂಬೇಡ್ಕರ್ ಇದ್ದಾನಲ್ಲ ಅವನ ಭಾಷಣಗಳನ್ನು ಕೇಳಿ ನೀವು ಹೀಗೆ ಹಾಳಾಗಿದ್ದೀರಿ" ಎಂದು ತನ್ನ ಅಸಹನೆಯನ್ನು ವ್ಯಕ್ತ ಪಡಿಸುತ್ತಾನೆ. ಈ ಘಟನೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಎಂತಹ ಅಮಾನವೀಯ ಕ್ರೌರ್ಯ ತಾಂಡವವಾಡುತ್ತಿದೆ ಎಂದು ತಿಳಿಯುತ್ತದೆ. ಹೀಗೆ ಹೆಣ ಕಾಯುವುದಕ್ಕೆ ಒಂದು ಜಾತಿ, ಹೆಣ ಎತ್ತುವುದಕ್ಕೆ ಒಂದು ಜಾತಿ ತಮ್ಮ ಜೀವನ ಪರಿಯಂತ ಹೀಗೆಯೇ ನಡೆದುಕೊಂಡು ಬಂದ ರೀತಿ ಇವೆಲ್ಲವೂ ಭಾರತದಲ್ಲಿ ಮಾನವ ಹಕ್ಕುಗಳು ಇದ್ದುವೆ ಎಂಬ ಪ್ರಶ್ನೆಯನ್ನು ಮುಂದಿಡುತ್ತವೆ.

ಭಾರತದಲ್ಲಿ ದಲಿತರ ವಿರುದ್ಧ ನಡೆಯುವ ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಅಂತರರಾಷ್ಟ್ರೀಯ ಮಟ್ಟದ ಚರ್ಚೆಗಳು ನಡೆಯುತ್ತಲೇ ಇವೆ. ವಿಪರ್ಯಾಸವೆಂದರೆ ಭಾರತವು ಮಾನವ ಹಕ್ಕುಗಳನ್ನು ಪ್ರತಿಪಾದಿಸುವ ಅನೇಕ ಅಂತರರಾಷ್ಟ್ರೀಯ ಒಪ್ಪಂದಗಳಿಗೆ ಸಹಿ ಹಾಕಿದೆ. ಮಾನವ ಹಕ್ಕುಗಳ ಜಾಗತಿಕ ಘೋಷಣೆ (ಯುನಿವರ್ಸಲ್ ಡಿಕ್ಲರೇಷನ್ ಆಫ್ ಹ್ಯೂಮನ್ ರೈಟ್ಸ್) ಮತ್ತು ಎಲ್ಲಾ ವಿಧವಾದ ಜನಾಂಗೀಯ ತಾರತಮ್ಯಗಳ ನಿರ್ಮೂಲನೆ (ಎಲಿಮಿನೇಷನ್ ಆಪ್ ಆಲ್ ಫಾರ್ಮ್ಸ್ ಆಫ್ ರೇಸಿಯಲ್ ಡಿಸ್‌ಕ್ರಿಮಿನೇಷನ್) ಮುಂತಾದುವು. ಭಾರತವು ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡ ಪ್ರಜಾಪಭುತ್ವ ರಾಷ್ಟ್ರವೆಂದೆನಿಸಿಕೊಂಡಿದೆ. ಆದರೂ ಈ ಪ್ರಜಾಪ್ರಭುತ್ವ ಕೆಲವರಿಂದ, ಕೆಲವರ ಕೆಲವರಿಗಾಗಿ ಎನ್ನುವಂತಿದೆ. ಮಾನವ ಹಕ್ಕುಗಳ ಉಲ್ಲಂಘನೆ ಜಗತ್ತಿನಲ್ಲೇ ಅತೀ ಹೆಚ್ಚು ಭಾರತದಲ್ಲಿ ನಡೆಯುತ್ತಿದೆ ಎನ್ನುವುದು ವಿಪರ್ಯಾಸ. ಸಂಪ್ರದಾಯದ, ಧರ್ಮದ ಹೆಸರಿನಲ್ಲಿ ಅತ್ಯಂತ ಕುರೂಪವಾದ ಅಮಾನವೀಯವಾದ ಜಾತಿ ಪದ್ಧತಿಯೆಂಬ ಸಂರಚನೆ ದಲಿತರನ್ನು ಹೀನಾಯ ಬದುಕಿಗೆ ದೂಡಿದೆ. ಅವರು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ದಿನನಿತ್ಯ ಶೋಷಣೆಗೆ ಒಳಗಾಗುತ್ತಲೆ ತಮ್ಮ ಬದುಕನ್ನು ಸವೆಸುತ್ತಿದ್ದಾರೆ. ಸಾಮಾನ್ಯ ಜನತೆಯ ಜೊತೆಗೆ ಇರಲಾರದ, ಊರ ಹೊರಗಿನ ಘೆಟ್ಟೋಗಳಲ್ಲಿ ವಾಸಿಸುವ ಇವರಿಗೆ ಕುಡಿಯುವ ನೀರಿಗಾಗಿ ಬೇರೆಯಾದ ಬಾವಿ, ತಮ್ಮದೇ ಆದ ದೇವರುಗಳು, ದೇವಸ್ಥಾನಗಳು ಇವೆ, ಇತರೆ ದೈನಿಕ ವಹಿವಾಟುಗಳು ಬೇರೆಯೇ ಆಗಿದ್ದು ಸ್ವಾವಲಂಬನೆ ಇಲ್ಲದ ಕಡುಬಡುತನದ ಜೀವನ ನಡೆಸುತ್ತಾರೆ.

ಮಾನವ ಹಕ್ಕುಗಳ ಉಲ್ಲಂಘನೆ ದಲಿತ ಮಕ್ಕಳನ್ನೂ ಒಳಗೊಂಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗ ನೀಡಿರುವ ವರದಿಯಂತೆ ಸುಮಾರು 1ಕೋಟಿ 15 ಲಕ್ಷ ಮಕ್ಕಳು ಜೀತ ಪದ್ಧತಿಯಲ್ಲಿ ಬಂಧಿಯಾಗಿವೆ. ಇವರಲ್ಲಿ ಶೇ. 90 ರಷ್ಟು ಮಂದಿ ದಲಿತರು. ನಗರ ಪ್ರದೇಶದಲ್ಲಿಯೂ ಹೊಟೆಲ್, ಅಂಗಡಿಗಳು ಮುಂತಾದ ಕಡೆ ಈ ಮಕ್ಕಳು ಕೆಲಸ ಮಾಡುತ್ತಾರೆ. ಸರಕಾರದ ಬಳಿ ಇರುವ ಅಂಕಿಅಂಶಗಳ ಪ್ರಕಾರವೇ ಸುಮಾರು 8 ಲಕ್ಷ ದಲಿತರು ದೇಶದ ನಾನಾ ಕಡೆಗಳಲ್ಲಿ ಮಲ ಹೊರುವ ಪದ್ಧತಿಯನ್ನು ಮುಂದುವರೆಸಿದ್ದಾರೆ. ಈ ತೆರನಾದ ವೃತ್ತಿ ಪ್ರಂಪಚದಲ್ಲಿ ಬೇರೆಲ್ಲಿಯೂ ಇಲ್ಲ. ಇದಲ್ಲದೆ ಪ್ರತೀ ವರ್ಷ ಸುಮಾರು 50 ಸಾವಿರ ದಲಿತ ಹೆಣ್ಣುಮಕ್ಕಳು ದೇವದಾಸಿ ವೃತ್ತಿಯನ್ನು ಕೈಗೊಳ್ಳುತ್ತಾರೆ. ಇವರೆಲ್ಲರೂ ಅಂತಿಮವಾಗಿ ಬೆಲೆವೆಣ್ಣುಗಳಾಗಿ ಜೀವನ ಸಾಗಿಸುತ್ತಾರೆ. ಒಟ್ಟಾರೆ ಈ ದೇಶದ ಶಾಪವಾಗಿರುವ ಜಾತಿಪದ್ಧತಿಯನ್ನು ಸಂವಿಧಾನಾತ್ಮಕವಾಗಿ ತೊಡೆದು ಹಾಕಬೇಕಾಗಿದೆ.

ಮಾನವ ಹಕ್ಕುಗಳ ರಾಷ್ಟ್ರೀಯ ಆಯೋಗದ ವರದಿಯೊಂದರ ಪ್ರಕಾರ ಪ್ರತೀ ವರ್ಷವೂ ಸರಾಸರಿ 62 ಸಾವಿರ ಮಾನವ ಹಕ್ಕುಗಳ ಉಲ್ಲಂಘನೆ ವರದಿಯಾಗುತ್ತದೆ. ಒಂದು ಗಂಟೆಯಲ್ಲಿ ಸರಾಸರಿ ಇಬ್ಬರು ದಲಿತರ ಮೇಲೆ ಹಲ್ಲೆ ನಡೆಯುತ್ತದೆ. ಮೂರು ದಲಿತ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ನಡೆಯುತ್ತದೆ. ಇಬ್ಬರು ದಲಿತರು ಕೊಲ್ಲಲ್ಪಡುತ್ತಾರೆ. ದಿನದಲ್ಲಿ ಕನಿಷ್ಟ ಇಬ್ಬರು ದಲಿತರಿಗೆ ದೈಹಿಕ ಹಿಂಸೆ ನೀಡಿ ಸುಡಲಾಗುತ್ತದೆ. ಇವುಗಳ ವಿವರಗಳನ್ನು ಈ ಲೇಖನದ ಮಿತಿಯೊಳಗೆ ನೀಡಲಾಗುವುದಿಲ್ಲ. ಇತ್ತೀಚಿನ ವರದಿಯೊಂದರ ಪ್ರಕಾರ ತಮಿಳು ನಾಡಿನ ಮದುರೈ ಜಿಲ್ಲೆಯ ಒಂದು ಹಳ್ಳಿಯಲ್ಲಿ ದಲಿತರ ಕೇರಿಗೂ ಮತ್ತು ಸವರ್ಣೀಯರ ಕೇರಿಗೂ ಒಂದು ದೊಡ್ಡ ಗೋಡೆ ನಿರ್ಮಾಣವಾಗಿತ್ತು.

ಇದು ಭಾರತದ ಸ್ವಾತಂತ್ರ್ಯಾ ನಂತರ ನಿರ್ಮಿತವಾಗಿದ್ದು ಸುಮಾರು 40 ವರ್ಷಗಳಿಗೂ ಮಿಕ್ಕು ಅಸ್ತಿತ್ವದಲ್ಲಿತ್ತು ಎಂಬುದೆ ದುರದೃಷ್ಟಕರ. ಇದು ಸದನದಲ್ಲಿ ಚರ್ಚೆಯಾಗಿ ಮುಖ್ಯ ಮಂತ್ರಿಗಳು ಮಧ್ಯಪ್ರವೇಶಿಸಿದ ನಂತರವೆ ಗೋಡೆಯನ್ನು ತೆರವುಗೊಳಿಸಲಾಯಿತು. ಮಧ್ಯಪ್ರದೇಶದ ಒಂದು ಹಳ್ಳಿಯಲ್ಲಿ ಠಾಕೂರ್ ಒಬ್ಬನ ಶವಸಂಸ್ಕಾರ ನಡೆಯುತ್ತಿರುವಾಗ ದಲಿತನೊಬ್ಬ ಬೀಡಿ ಸೇದಿದನೆಂಬ ಕಾರಣಕ್ಕೆ ಅವನನ್ನು ಕೊಲ್ಲಲಾಯಿತು ಮತ್ತು ಊರ ದಲಿತರನ್ನು ಒಕ್ಕಲೆಬ್ಬಿಸಲಾಯಿತು. ಒರಿಸ್ಸಾ ರಾಜ್ಯದ ಒಂದು ಹಳ್ಳಿಯಲ್ಲಿ ದಲಿತ ಹೆಣ್ಣು ಮಗಳೊಬ್ಬಳು ಪಕ್ಕದ ಹಳ್ಳಿಗೆ ಹೈಸ್ಕೂಲಿಗೆ ಹೋಗಲು ಸೈಕಲ್ ಕೊಂಡಳು ಎಂಬ ಕಾರಣಕ್ಕಾಗಿ ಅವಳನ್ನು ದಹಿಸಲಾಯಿತು. ಮಹಾರಾಷ್ಟ್ರದ ಖೈರ್ಲಾಂಜಿ ಎಂಬ ಊರಿನಲ್ಲಿ ತನ್ನ ಜಮೀನನ್ನು ವಾಪಸು ಪಡೆದಳು ಎಂಬ ಕಾರಣಕ್ಕಾಗಿ ಒಂದೇ ಕುಟುಂಬದ ನಾಲ್ವರನ್ನು ಕೊಲ್ಲಲಾಯಿತು. ಅದರಲ್ಲೂ ತಾಯಿ ಮತ್ತು ಮಗಳ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿ ಬೆತ್ತಲೆ ಮೆರವಣಿಗೆ ಮಾಡಿ ಕೊಲ್ಲಲಾಯಿತು. ಇಂತಹ ಅನೇಕ ಘಟನೆಗಳನ್ನು ಕೊನೆ ಮೊದಲಿಲ್ಲದೆ ಉದಾಹರಿಸಬಹುದು.

ಮಾನವ ಹಕ್ಕುಗಳ ವರದಿಯ ಪ್ರಕಾರವೇ ಇಂತಹ ಪ್ರಕರಣಗಳಲ್ಲಿ ಕೇವಲ ಶೇ. 3.5 ರಷ್ಟು ತಪ್ಪಿತಸ್ಥರನ್ನು ಬಂಧಿಸಲಾಗುತ್ತದೆ. ಮತ್ತು ಹತ್ತರಲ್ಲಿ ಒಂದು ಪ್ರಕರಣ ಮಾತ್ರ ದಾಖಲಾಗುತ್ತದೆ. ಸಮಸ್ಯೆಯಿರುವುದು ಕಾನೂನಿನಲ್ಲ. ಅದನ್ನು ಕಾರ್ಯಗತಗೊಳಿಸಬೇಕಾದ ಶೇ. 15 ರಷ್ಟಿರುವ ಮೇಲ್ ಜಾತಿಯ ಜನರಲ್ಲಿ ಎಂಬುದು ಸ್ಪಷ್ಟವಾಗಿದೆ. ಭೂಮಿ ಒಡೆತನ, ರಾಜಕೀಯ ಶಕ್ತಿ, ಮಾಧ್ಯಮ ಮತ್ತು ಪೋಲೀಸ್ ವ್ಯವಸ್ಥೆಯಲ್ಲಿ ಇವರದೇ ಸಿಂಹಪಾಲು. ಹೀಗಾಗಿ ತಪ್ಪಿತಸ್ಥರು ಶಿಕ್ಷೆಗೆ ಒಳಪಡುವುದು ಕಡಿಮೆ.

ಮಾನವ ಹಕ್ಕುಗಳ ಉಲ್ಲಂಘನೆ ದಲಿತ ಮಕ್ಕಳನ್ನೂ ಒಳಗೊಂಡಿದೆ. ಪ. ಜಾತಿ ಮತ್ತು ಪ. ಪಂಗಡಗಳ ಆಯೋಗ ನೀಡಿರುವ ವರದಿಯಂತೆ ಸು. 1 ಕೋಟಿ 15 ಲಕ್ಷ ಮಕ್ಕಳು ಜೀತ ಪದ್ಧತಿಯಲ್ಲಿ ಬಂಧಿಯಾಗಿವೆ. ಇವರಲ್ಲಿ ಶೇ. 90 ರಷ್ಟು ಮಂದಿ ದಲಿತರು. ನಗರ ಪ್ರದೇಶದಲ್ಲಿಯೂ ಹೊಟೆಲ್, ಅಂಗಡಿಗಳು ಮುಂತಾದ ಕಡೆ ಈ ಮಕ್ಕಳು ಕೆಲಸ ಮಾಡುತ್ತಾರೆ. ಸರಕಾರದ ಬಳಿ ಇರುವ ಅಂಕಿ ಅಂಶಗಳ ಪ್ರಕಾರವೇ ಸುಮಾರು 8 ಲಕ್ಷ ದಲಿತರು ದೇಶದ ನಾನಾ ಕಡೆಗಳಲ್ಲಿ ಮಲ ಹೊರುವ ಪದ್ಧತಿಯನ್ನು ಮುಂದುವರೆಸಿದ್ದಾರೆ. ಈ ತೆರನಾದ ವೃತ್ತಿ ಪ್ರಂಪಚದಲ್ಲಿ ಬೇರೆಲ್ಲಿಯೂ ಇಲ್ಲ. ಇದಲ್ಲದೆ ಪ್ರತೀ ವರ್ಷ ಸುಮಾರು 50 ಸಾವಿರ ದಲಿತ ಹೆಣ್ಣು ಮಕ್ಕಳು ದೇವದಾಸಿ ವೃತ್ತಿಯನ್ನು ಕೈಗೊಳ್ಳುತ್ತಾರೆ. ಇವರೆಲ್ಲರೂ ಅಂತಿಮವಾಗಿ ಬೆಲೆವೆಣ್ಣುಗಳಾಗಿ ಜೀವನ ಸಾಗಿಸುತ್ತಾರೆ.

ಒಟ್ಟಾರೆ ಈ ದೇಶದ ಶಾಪವಾಗಿರುವ ಜಾತಿಪದ್ಧತಿಯನ್ನು ಸಂವಿಧಾನಾತ್ಮಕವಾಗಿ ತೊಡೆದು ಹಾಕಬೇಕಾಗಿದೆ ಮತ್ತು ಅದು ವಾಸ್ತವ ಜೀವನದಲ್ಲಿಯೂ ಸಮಾನತೆಗೆ, ಸಹಬಾಳ್ವೆಗೆ ಅಡ್ಡಿಯಾಗದಂತೆ ನೋಡಿಕೊಳ್ಳಬೇಕಾಗಿದೆ. ಅನಕ್ಷರತೆಯು, ಹಳ್ಳಿಗಳು ಒಟ್ಟಿಗೆ ಇರುವವರೆಗೆ ಜಾತಿಯೆಂಬ ಪೆಡಂಭೂತ ತನ್ನ ಸಹಸ್ರಾರು ಹೆಡೆಗಳನ್ನು ಸಮಾಜದ ಮೇಲೆ ಬೀಸುತ್ತಾ ಮನಸ್ಸುಗಳನ್ನು ವಿಷಮಯವಾಗಿಸುತ್ತದೆ. ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರೂ ಆಗಿರುವ ಸನ್ಮಾನ್ಯ ಶ್ರೀ ಎಸ್. ಆರ್. ನಾಯಕ್ ರವರ ಉಪಸ್ಥಿತಿಯಲ್ಲಿ ನಡೆಯುತ್ತಿರುವ ಈ ವಿಚಾರ ಸಂಕಿರಣ ಅತ್ಯಂತ ಮೌಲಿಕವಾದದ್ದಾಗಿದೆ. ಇಂತ ಸಹಸ್ರಾರು ಸಂಕಿರಣಗಳು ಜಾತಿಪೀಡಿತ ದೇಶಕ್ಕೆ ಮಾನವೀಯತೆಯ ಕಿರಣಗಳನ್ನು ಚೆಲ್ಲಲಿ ಎಂದು ಹಾರೈಸುತ್ತೇನೆ.

ದಿನಾಂಕ 13/4/09 ರಂದು ಹುಬ್ಬಳ್ಳಿಯಲ್ಲಿ 'ಮಾನವ ಹಕ್ಕುಗಳ ಪ್ರತಿಪಾದನ ಸಂಸ್ಥೆ' ಯ ಉದ್ಘಾಟನಾ ಸಮಾರಂಭದಲ್ಲಿ ಆಡಿದ ಮಾತುಗಳು. □

(ಹಿಂದಿನ ಸಂಚಿಕೆಯಿಂದ)

ಕೊಂಕಣಿಗಳು ಮತ್ತು ಮುಸ್ಲಿಮರ ನಡುವೆ ವ್ಯಾವಹಾರಿಕ ಸಾಮರಸ್ಯ:

ಕೊಂಕಣಿ ವರ್ತಕರ ಹಡಗುಗಳಿಗೆ ಮುಸ್ಲಿಂ ನಾವಿಕರು ಇದ್ದ ಉಲ್ಲೇಖಗಳು ಎರಡು ಸಮುದಾಯಗಳ ನಡುವೆ ವ್ಯವಹಾ ರಿಕ ಸೌಹಾರ್ದವಿತ್ತು ಎನ್ನುವುದಕ್ಕೆ ಸಾಕ್ಷಿಯಾಗುತ್ತವೆ. ಈ ಉಲ್ಲೇ ಖಗಳನ್ನು ಪೋರ್ಚುಗೀಸರು ಸಮುದ್ರ ಪ್ರಯಾಣಕ್ಕೆ ಹಡಗುಗಳಿಗೆ ನೀಡುತ್ತಿದ್ದ ಕಾರ್ಟೇ ಝುಸ್ ಎಂಬ ರಹದಾರಿಯ ದಾಖಲೆಗಳು ಸೂಚಿಸುತ್ತವೆ[24]. ಇದಕ್ಕೆ ಪೂರಕವಾಗಿ ಇಂದಿಗೂ ಕೊಂಕಣಿಗಳ ಲಾರಿಗಳಿಗೆ ಮುಸ್ಲಿಮರು ಚಾಲಕರಾಗಿರುವುದು ಸರ್ವೇ ಸಾಮಾನ್ಯ.

1764ರಲ್ಲಿ ಹೈದರಾಲಿಯು ತುಳುನಾಡನ್ನು ಆಕ್ರಮಿಸಿ ವಶ ಪಡಿಸಿಕೊಂಡ ಬಳಿಕ ಮತ್ತು ಟಿಪ್ಪುವಿನ ಆಡಳಿತ ಕಾಲದಲ್ಲಿಯೂ ಕೆನರಾ ಸೊರಗಿತು ಎಂದು ಬ್ರಿಟಿಶ್ ದಾಖಲೆಗಳು ತಿಳಿಸುತ್ತದೆ. ಹೊಸ ತೆರಿಗೆಗಳು ಹುಟ್ಟಿಕೊಂಡವು, ಅಕ್ರಮಣಕಾರಿ ಸೈನಿಕ ಪಡೆ ಗಳ ದಬ್ಬಾಳಿಕೆಯಿಂದ ವ್ಯಾಪಾರವು ಕುಂಠಿತವಾಯಿತು ಎಂಬ ಉಲ್ಲೇಖಗಳಿವೆ[25]. ಆದರೂ 1770ರ ಆಸುಪಾಸಿನಲ್ಲಿ ತಲ್ಲಿಶೇರಿಗೆ ಮಂಗಳೂರಿನಿಂದ ಕುಂಬಳೆದಾರಿಯಾಗಿ ಸಾಗಿದ ಹೈದರನ ಬೃಹತ್ ದಂಡಿನ ಸೈನಿಕರಿಗೆ ಊಟ ಮತ್ತು ವಸತಿಯ ಹೊಣೆ ಯನ್ನು ಕೊಂಕಣಿ ವ್ಯಾಪಾರಿಗಳಾದ ಕುಂಬಳೆ ನಾಯಕ್ ಕುಟುಂಬದವರು ವಹಿಸಿಕೊಂಡಿದ್ದನ್ನು ಕುಂಬಳೆನಾಯಕರ ಕುಟುಂಬದ ದಾಖಲೆಗಳು ತಿಳಿಸುತ್ತವೆ[26]. ಈ ವಿವರವು ತುಳುನಾ ಡಿನಲ್ಲಿ ಮುಸ್ಲಿಂ ಆಡಳಿತದ ಕಾಲದಲ್ಲಿಯೂ ಕೊಂಕಣಿಗಳು ಮುಸ್ಲಿಂ ಸಮುದಾಯದೊಂದಿಗೆ ಸೌಹಾರ್ದ ರೀತಿಯಲ್ಲಿದ್ದರು ಎಂಬ ಒಂದು ಊಹೆಯನ್ನು ಒದಗಿಸುತ್ತದೆ.

ಟಿಪ್ಪು ಸುಲ್ತಾನನ ಹಣಕಾಸಿನ ವಹಿವಾಟುಗಳನ್ನು ನೋಡಿ ಕೊಳ್ಳುವ ವ್ಯಕ್ತಿ ರಾಗವೇಂದ್ರ ನಾಯಕ್ ಎಂಬ ಕೊಂಕಣಿಯಾಗಿದ್ದ ಎಂದು ಇತಿಹಾಸಕಾರರು ಉಲ್ಲೇಖಿಸಿದ್ದಾರೆ[27].

ಕ್ರಿ.ಶ. 1774ರ ಸುಮಾರಿಗೆ ಕೊಂಕಣಿಗಳ ಹದಿನೆಂಟು ಪೇಟೆಗೆ ಸಲ್ಲುವ ದೇವಸ್ಥಾನವಾದ ಮಂಜೇಶ್ವರ ಶ್ರೀ ಅನಂತೇಶ್ವರ ದೇವರ ಭಂಡಾರಕ್ಕೆ ಕೊಡಿಯಾಲ ಪೇಟೆಯ ಹತ್ತು ಸಮಸ್ತರು ಹರವರು ಸ್ಥಳ ಪರಸ್ಥಳದವರು, ಮಹಾನಾಡು, ಗುಜ್ಜಾರು ಮಹಾ ಜನಂಗಳು ಸಕಲರು ಮುಂತಾಗಿ ಬರಶಿಕೊಟ್ಟ ಧರ್ಮಶಾಸನ ಪಟ್ಟಿ ಯಂತೆ ಕೊಡೆಯಾಲ ಪೇಟೆಯಲ್ಲಿ ವ್ಯವಹರಿಸಲಾಗುವ ವಿವಿಧ ದವ ಸಧಾನ್ಯ ಸಾಮಾಗ್ರಿಗಳ ನಿರ್ದಿಷ್ಟ ಪ್ರಮಾಣದ ಅನುಪಾತದಲ್ಲಿ ಸುಂಕ ವನ್ನು ಸಂಗ್ರಹಿಸಿ ದೇವರ ಅಮೃತ ಪಡಿ, ನಂದಾದೀಪ್ತಿ ಮೊದಲಾದ ಸೇವೆಯನ್ನು ಕೈಗೊಳ್ಳುವರೇ ಅನೇಕ ವ್ಯಾಪಾರಿಗಳ ಬಿಂನಹವನ್ನು ಈ ಪಟ್ಟೆಯಲ್ಲಿ ನಮೂದಿಸಲಾಗಿದ್ದು "ಮಾಪಳೆ ಬರ ಹದಲ್ಲಿ ಮಾಪಳೆರ ಗುರ್ತ" ಈ ಪಟ್ಟೆಯಲ್ಲಿ ಇರುವುದೆಂದು ಗಣಪತಿ ರಾವ್ ಐಗಳ್‌ರ ವರು ಉಲ್ಲೇಖಿಸಿದ್ದಾರೆ[28]. ಈ ಉಲ್ಲೇಖವು ಮಂಗಳೂರಿನ ಕೊಂಕಣಿ ವ್ಯಾಪಾರಿಗಳ ದೇವಕಾರ್ಯಕ್ಕೆ ಮುಸ್ಲಿಂ ವ್ಯಾಪಾರಿಗಳೂ ಬೆಂಬಲ ಸೂಚಿಸಿದ್ದರು ಎಂದು ತಿಳಿದು ಬರುತ್ತದೆ. ತಾವು ವ್ಯವಹರಿಸುವ ವ್ಯಾಪಾರದಲ್ಲಿ ಒಂದು ಸಣ್ಣ ಪಾಲುಪರರ ದೇವ ಕಾರ್ಯಕ್ಕೆ ವಿನಿ ಯೋಗವಾಗುವುದಕ್ಕೆ ಮುಸ್ಲಿಂ ವ್ಯಾಪಾರಿಗಳು ಯಾವುದೇ ಅಭ್ಯಂತರ ವನ್ನು ಸೂಚಿಸದಿರುವುದು ಅವರ ಹೃದಯ ವೈಶಾಲ್ಯವನ್ನೂ ಕೊಂಕ ಣಿಗಳೊಂದಿಗೆ ಅವರಿಗಿದ್ದ ಸಾಮರಸ್ಯವನ್ನೂ ಸೂಚಿಸುತ್ತದೆ. ಆ ಹೊತ್ತಿನಲ್ಲಿ ಮಂಗಳೂರು ಟಿಪ್ಪು ಸುಲ್ತಾನನ ಆಡಳಿತಕ್ಕೆ ಒಳಪಟ್ಟಿತ್ತು ಎಂದು ಗಮನಿಸಬೇಕು.

20ನೇ ಶತಮಾನದ ಕಾಲಕ್ಕೆ ವ್ಯಾಪಾರ ಚಟುವಟಿಕೆಗಳ ಆಯಾಮ ಬದಲಾಗಿತ್ತು. ಕೊಂಕಣಿಗಳು ದಕ್ಷಿಣಕನ್ನಡದಾದ್ಯಂತ ಹರ ಡಿಕೊಂಡು ಅವರದೇ ಹಲವು ಪೇಟೆಗಳು ಉಗಮವಾಗಿ ಇನ್ನಷ್ಟು ಪ್ರಬಲರಾಗಿದ್ದರು. ಕೊಂಕಣಿ ಪೇಟೆಗಳಿಗೆ ಹೊಂದಿಕೊಂಡು ಮುಸ್ಲಿಂ ಪೇಟೆಗಳು ಬೆಳೆದವು. ಈ ಯುಗಳ-ವಸಾಹತು (ಟ್ವಿನ್ ಕಾಲನೀಸ್) ಗಳ ಪ್ಯಾಟರ್ನ್ ದಕ್ಷಿಣ ಕನ್ನಡದ ಹಲವು ಪೇಟೆಗಳಲ್ಲಿ ಗಮನಿಸ ಬಹುದು. ಕೊಂಕಣಿಗಳು ನೆಲೆನಿಂತು ಪೇಟೆ ಬೆಳೆಸಿದರೆ ಮುಸ್ಲಿಮರು ಅವರ ವ್ಯಾಪಾರಕ್ಕೆ ಒಂದು ಸಪೋರ್ಟ್ ಸಿಸ್ಟಮ್ ನಿರ್ಮಿಸಿದವರು. ಕೂಲಿಗಳು, ಸರಕು ಸಾಗಣೆ, ಕಾರ್ಮಿಕವರ್ಗ ಇತ್ಯಾದಿ. ಆದಕಾರಣ ಅನತಿದೂರದಲ್ಲಿ ಅವರದೇ ಕಾಲನಿ ಹುಟ್ಟಿಕೊಂಡಿತು. ತುಳುನಾಡಿನ ಇತರ ವರ್ಗಗಳ ಜನರು ಹೆಚ್ಚಾಗಿ ಕೃಷಿಕೆಲಸಗಳನ್ನೇ ನೆಚ್ಚಿಕೊಂಡಿ

೨೦ನೇ ಶತಮಾನದ ಕಾಲಕ್ಕೆ ವ್ಯಾಪಾರ ಚಟುವಟಿಕೆಗಳ ಆಯಾಮ ಬದಲಾಗಿತ್ತು. ಕೊಂಕಣಿಗಳು ದಕ್ಷಿಣ ಕನ್ನಡದಾದ್ಯಂತ ಹರಡಿಕೊಂಡು ಅವರದೇ ಹಲವು ಪೇಟೆಗಳು ಉಗಮವಾಗಿ ಇನ್ನಷ್ಟು ಪ್ರಬಲರಾಗಿದ್ದರು. ಕೊಂಕಣಿ ಪೇಟೆಗಳಿಗೆ ಹೊಂದಿಕೊಂಡು ಮುಸ್ಲಿಂ ಪೇಟೆಗಳು ಬೆಳೆದವು. ಈ ಯುಗಳ-ವಸಾಹತು (ಟ್ವಿನ್ ಕಾಲನೀಸ್)ಗಳ ಪ್ಯಾಟರ್ನ್ ದಕ್ಷಿಣ ಕನ್ನಡದ ಹಲವು ಪೇಟೆಗಳಲ್ಲಿ ಗಮನಿಸಬಹುದು. ಕೊಂಕಣಿಗಳು ನೆಲೆನಿಂತು ಪೇಟೆ ಬೆಳೆಸಿದರೆ ಮುಸ್ಲಿಮರು ಅವರ ವ್ಯಾಪಾರಕ್ಕೆ ಒಂದು ಸಪೋರ್ಟ್ ಸಿಸ್ಟಮ್ ನಿರ್ಮಿಸಿದವರು. ಕೂಲಿಗಳು, ಸರಕು ಸಾಗಣೆ, ಕಾರ್ಮಿಕವರ್ಗ ಇತ್ಯಾದಿ. ಆದಕಾರಣ ಅನತಿದೂರ ದಲ್ಲಿ ಅವರದೇ ಕಾಲನಿ ಹುಟ್ಟಿಕೊಂಡಿತು.

ಕೊಂಕಣಿಗಳು ಮತ್ತು ಸಂಘನಿಷ್ಟೆ

ಗುರು ಬಾಳಿಗ

ದ್ದರಿಂದ ವ್ಯಾಪಾರಕ್ಕೆ ಸಂಬಂಧಿಸಿದ ಕಾರ್ಮಿಕ ಸಮುದಾಯದಲ್ಲಿ ಅವರ ಸಂಖ್ಯೆ ಕಡಿಮೆಯಿತ್ತು. ಈ ಟ್ವಿನ್ ಕಾಲನಿಗಳು ಕೊಂಕಣಿಗಳ ಮತ್ತು ಮುಸ್ಲಿಮರ ನಡುವಿನ ಪರಸ್ಪರ ವ್ಯಾವಹಾರಿಕ ಅವಲಂಬನೆಯನ್ನೂ ಸಾಮರಸ್ಯವನ್ನೂ ತೋರಿಸುತ್ತದೆ. ಈ ಅವಲಂಬನೆಯು ಅನೇಕ ಸನ್ನಿವೇಶಗಳಲ್ಲಿ ಭಿನಾಭಿಪ್ರಾಯಗಳನ್ನು ಬಗೆಹರಿಸುವ ಅಗತ್ಯವನ್ನು ಈ ಎರಡು ಸಮುದಾಯದವರಿಗೆ ಕಲ್ಪಿಸಿದೆ.

ಉದಾಹರಣೆಗೆ ವ್ಯಾಪಾರದ ಕಾರಣಗಳಿಂದ ಮುಸ್ಲಿಮರನ್ನು ದಮನಿಸಲು ಬಯಸುವುದಿದ್ದರೆ ದೇಶದ ವಿಭಜನೆಯ ಹೊತ್ತಿಗೆ ಕೊಂಕಣಿ ಸಮುದಾಯಕ್ಕೆ ಸುವರ್ಣ ಅವಕಾಶವಿತ್ತು. ಕೊಂಕಣಿಗಳು ಆ ಹೊತ್ತಿಗೆ ಆಧುನಿಕ ವಿದ್ಯೆಯಿಂದಲೂ, ವ್ಯಾಪಾರದ ಪ್ರಾಬಲ್ಯದಿಂದಲೂ ಮುಸ್ಲಿಮರಿಗಿಂತ ಉನ್ನತ ಸ್ತರದಲ್ಲಿದ್ದರು. ಮುಸ್ಲಿಂ ವ್ಯಾಪಾರಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದು ಕೊಂಕಣಿಗಳಿಗೆ ಪ್ರತಿಸ್ಪರ್ಧೆ ನೀಡುತ್ತಿದ್ದರು. ಆದರೆ ಆ ಸಂದರ್ಭದಲ್ಲಿ ತುಳುನಾಡಿನಲ್ಲಿ ಅಂತಹ ಯಾವುದೇ ಗಹನ ಕೋಮು ದಂಗೆ ನಡೆದ ಉಲ್ಲೇಖವಿಲ್ಲ. ಆ ಸಂದರ್ಭದಲ್ಲಿ ಕೊಂಕಣಿ ಕಾಂಗ್ರೆಸಿಗರಿಗೆ ಮತ್ತು ಕೊಂಕಣಿ ವ್ಯಾಪಾ ರಿಗಳಿಗೆ ಸಮಾಜದ ಮೇಲಿದ್ದ ನಿಯಂತ್ರಣವೂ ಇದಕ್ಕೆ ಕಾರಣ. ಹೆಚ್ಚಿನ ಮುಸ್ಲಿಂ ಪೇಟೆಗಳು ಕೊಂಕಣಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದುದು ಎರಡೂ ಸಮುದಾಯದ ಹಿರಿಯರ ಐಕ್ಯಮತ್ಯಕ್ಕೆ ಕಾರಣವಾಗಿ ಶಾಂತಿ ಕದಡಲಿಲ್ಲ.

ತುಳುನಾಡಿನ ಮುಸ್ಲಿಮರ ಬಗ್ಗೆ ವಿಶೇಷ ಅಧ್ಯಯನ ನಡೆಸಿ "ತುಳುನಾಡಿನ ಮುಸ್ಲಿಮರು" ಎಂಬ ಗ್ರಂಥವನ್ನು ರಚಿಸಿದ ಡಾ. ವಹಾಬ್ ದೊಡ್ಡಮನೆ ಅವರು ಕೊಂಕಣಿಗಳ ಮತ್ತು ಮುಸ್ಲಿಮರ ನಡುವಿನ ಸಾಮರಸ್ಯವನ್ನು ಈ ರೀತಿ ಉಲ್ಲೇಖಿಸುತ್ತಾರೆ:[29]

"ಆ ಕಾಲದಲ್ಲಿ (1900–1910) ಮಂಗಳೂರಿನ ಸಾಂಪ್ರದಾಯಿಕ ಗೌಡ ಸಾರಸ್ವತರು ಆಡಳಿತದಲ್ಲಿದ್ದ ಕೆನರಾ ಹೈಸ್ಕೂಲಿನಲ್ಲಿ ಶೇಕ್ ಅಹಮ್ಮದ್ ಮತ್ತು ನೂರು ದ್ದೀನ್ ಅಹಮದ್ ಎನ್ನುವ ಇಬ್ಬರು ಕ್ರೀಡಾ ಉಪಾಧ್ಯಾಯರುಗಳಿದ್ದರು. ಗೌಡ ಸಾರಸ್ವತರು ಮತ್ತು ಮುಸ್ಲಿಮರ ನಡುವೆ ಭಾವೈಕ್ಯತೆ ಇತ್ತು ಮತ್ತು ಯಾವುದೇ ಧಾರ್ಮಿಕ ಕ್ಲೇಶ ಇರಲಿಲ್ಲ ಎನ್ನುವುದಕ್ಕೆ ಇದೊಂದು ನಿದರ್ಶನ. ಕೆನರಾ ಹೈಸ್ಕೂಲಿನಲ್ಲಿ ಉರ್ದು ಕೂಡ ಒಂದು ಐಚ್ಛಿಕ ವಿಷಯವಾಗಿದ್ದು, ಒಬ್ಬ ಮುಸ್ಲಿಂ ಮುನ್ಶಿಯೊಬ್ಬರು ಶಾಲಾ ಸಿಬ್ಬಂದಿಗಳಲ್ಲಿ ಒಬ್ಬರಾಗಿದ್ದರು. ಹೆಚ್ಚಿನ ಮುಸ್ಲಿಂ ಸಾಹುಕಾರರು ಅವಿದ್ಯಾವಂತರಾಗಿದ್ದು ಅವರ ಲೆಕ್ಕಪತ್ರಗಳ ವಹಿವಾಟನ್ನೂ ಗೌಡ ಸಾರಸ್ವತ ಗುಮಾಸ್ತರೇ ನಿರ್ವಹಿಸುತ್ತಿದ್ದರು ಎನ್ನುವುದು ಈಗ ಇತಿಹಾಸ".

ದಕ್ಷಿಣ ಕನ್ನಡದ ಯಾವುದೇ ಕೊಂಕಣಿ ರಖಂ ವ್ಯಾಪಾರಿಗೂ ಮುಸ್ಲಿಂ ಕಿರುವ್ಯಾಪಾರಿಗಳೇ ಹೆಚ್ಚು ಗಿರಾಕಿಗಳು. ಇದರ ಬಗ್ಗೆ ಸ್ಪಷ್ಟವಾದ ಅಂಕಿ ಅಂಶಗಳು ನನ್ನಲ್ಲಿಲ್ಲ ಆದರೂ ಮೇಲ್ನೋಟಕ್ಕೆ ನಲುವತ್ತು ಪ್ರತಿಶತಕ್ಕೂ ಹೆಚ್ಚು ಪಾಲು ಮುಸ್ಲಿಂ ಗಿರಾಕಿಗಳದ್ದಿರಬಹುದು. ಆದುದರಿಂದ ಕೊಂಕಣಿಗಳು ಸಂಘವನ್ನು ಮುಸ್ಲಿಂ ದಮನಕ್ಕೋಸ್ಕರ ಬಳಸಿದರೆ ನಷ್ಟವಾಗುವುದು ಕೊಂಕಣಿಗಳಿಗೇ. ಇದನ್ನು ಅರಿಯಲಾರದಷ್ಟು ಮುಗ್ಧರು ಕೊಂಕಣಿಗಳಲ್ಲ.

ಉಳಿದಂತೆ ಈ ವ್ಯಾವಹಾರಿಕ ಅವಲಂಬನೆಯು ಇವತ್ತಿನವರೆಗೂ ಮುಂದುವರೆದುಕೊಂಡು ಬಂದಿದೆ. ಕೊಂಕಣಿಗಳ ಬೀಡಿ ಉದ್ಯಮದ ಬ್ರಾಂಚ್‌ಗಳನ್ನು ಮುಸ್ಲಿಮರೆ ನಡೆಸುತ್ತಿದ್ದರು, ಅದು ಇಂದಿಗೂ ಮುಂದುವರೆದಿದೆ.

ಕೊಂಕಣಿಗಳ ನಿಷ್ಠಾಂತರದಿಂದ ಸಂಘಕ್ಕೂ ಭಾಜಪಾಕ್ಕೂ ಲಾಭವಾಯಿತಾದರೂ ಕೊಂಕಣಿ ಸಮುದಾಯಕ್ಕೆ ಇದರಿಂದೇನೂ ಲಾಭವಾಗಲಿಲ್ಲ. ಮತ್ತು "ಲಾಭ ಇಜ್ಜಾಂದಿನ ಕೊಂಕಣೆ.." ಮುಂತಾದ ತುಳುಗಾದೆಮಾತಿಗೆ ವ್ಯತಿರಿಕ್ತವಾಗಿ ಇಲ್ಲಿ ಭಾವನಾತ್ಮಕ ಆಸರೆಯನ್ನು ಬಿಟ್ಟು ಬೇರಾವ ಲಾಭವನ್ನೂ ಕೊಂಕಣಿ ಸಮುದಾಯ ಅಪೇಕ್ಷಿಸಿಲ್ಲ ಎಂಬುದೂ ಸತ್ಯ. ಹೆಚ್ಚಿನ ಕೊಂಕಣಿಗಳು ಭಾಜಪಾಗೆ ಮತ ಹಾಕುವುದು ಮತ್ತು ಲೋಕಲ್ ಕಟ್ಟೆ ಹರಟೆಗಳಲ್ಲಿ ಭಾಜಪಾ ಪರವಾಗಿ ವಾದಿಸಿ ತೀರ್ಪು ನೀಡುವಷ್ಟಕ್ಕೆ ತಮ್ಮ ಸಂಘ ಪ್ರೇಮವನ್ನು ಸೀಮಿತಗೊಳಿಸಿದರೆ ಅನೇಕ ಕೊಂಕಣಿಗಳು ಸಂಘದೊಂದಿಗೆ ದಿನನಿತ್ಯದ ಸಂಪರ್ಕ ಇರಿಸಿಕೊಂಡವರು. ಸಂಘದ ಮನೆಯಾಗಿ ನಡೆದುಕೊಂಡವರು. ಹೆಚ್ಚಿನ ಕೊಂಕಣಿಗಳು ತಮ್ಮ ಚರ್ಚೆ ಮುಗಿದ ಬಳಿಕ ದಿಡ್ಡಿಬಾಗಿಲು ಮುಚ್ಚಿ ಗೂಡಿನೊಳಗೆ ಸೇರಿಕೊಂಡರೆ ಇವರು ಶಿಸ್ತಿನಿಂದ ಸಂಘದ ಏಳು ಬೀಳುಗಳಲ್ಲೂ ಸ್ಥಿರವಾಗಿ ನಿಂತವರು.

ಇದರ ಪರಿಣಾಮವಾಗಿ ಅನೇಕ ಮುಸ್ಲಿಮರು ತಮ್ಮದೆ ಬೀಡಿ ಬ್ರಾಂಡ್‌ಗಳನ್ನು ಹೊರತಂದು ಯಶಸ್ಸು ಸಾಧಿಸಿದ್ದಾರೆ.

ಕ್ರಿಶ್ಚಿಯನ್ ಕ್ಯಥೋಲಿಕರು ಮತ್ತು ಕೊಂಕಣಿಗಳ ಸಂಬಂಧ:

ಮಂಗಳೂರಿನ ಕ್ಯಥೋಲಿಕರ ಬಗ್ಗೆ ಕೊಂಕಣಿಗಳಿಗೊಂದು ಸಾಫ್ಟ್ ಕಾರ್ನರ್ ಇದ್ದೇ ಇದೆ. ಈ ಎರಡೂ ಸಮುದಾಯಗಳು ಸಮಾನ ವಂಶವಾಹಿಗಳಿಂದ ಬಂದಿರುವ ಬಗ್ಗೆ ಯಾವುದೇ ಸಂದೇಹಗಳಿಲ್ಲ. ಎರಡೂ ಸಮುದಾಯಗಳ ಕೊಂಕಣಿ ಭಾಷೆಯ ಬೋಲಿಯಲ್ಲಿ ವ್ಯತ್ಯಾಸ ವಿದ್ದರೂ ಎರಡು ದಶಕಗಳ ಹಿಂದೆ ಹುಟ್ಟಿಕೊಂಡ ಕೊಂಕಣಿ ಭಾಷಾ ಚಳುವಳಿ ಈ ಎರಡೂ ಸಮುದಾಯದವರನ್ನು ಇನ್ನಷ್ಟು ಹತ್ತಿರಕ್ಕೆ ತಂದಿದೆ. ಕೆ.ಕೆ.ಪೈ, ದಾಮೋದರ ಪ್ರಭು, ರೊನಾಲ್ಡ್ ಕೊಲಾಸೋ, ಬಸ್ತಿವಾಮನ್ ಶೆಣೈ, ಎರಿಕ್ ಒಝಾರಿಯೋ, ಪೌಲ್ ಮೊರಾಸ್ ಮೊದಲಾದವರು ಕಟ್ಟಿದ ಈ ಇಡೀ ಚಳುವಳಿಯ ಒಂದು ಸಮಗ್ರ ಪ್ರತಿಫಲವಾಗಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಕಲಾಂಗಣ್ ಮತ್ತು ವಿಶ್ವಕೊಂಕಣಿಕೇಂದ್ರದಂತಹ ಅಂತರಾಷ್ಟ್ರೀಯಸ್ತರದ ಭಾಷಾ ಯೋಜನೆಗಳು ಮೂಡಿವೆ. ಲಿಪಿಯ ಬಗೆಗಿನ ವಿವಾದಗಳು ತಲೆದೋರಿದ್ದರೂ ಎರಡೂ ಕಡೆಯ ಮುತ್ಸದ್ದಿಗಳು ವೈಚಾರಿಕ ಎಚ್ಚರ ಸಾಧಿಸಿದ್ದರಿಂದ ಚಳುವಳಿಯ ಕೆಲಸ ನಿಂತಿಲ್ಲ. ಜೊತೆಗೆ ಈ ಬಗೆಗಿನ ಭಿನ್ನಾಭಿಪ್ರಾಯಗಳನ್ನು ಮಾತುಕತೆಯಿಂದ ಬಗೆಹರಿಸುವ ಪ್ರಯತ್ನಗಳು ಫಲಕಾರಿಯಾಗುತ್ತಿರುವುದು ಕೂಡ ಶ್ಲಾಘನೀಯ.

ಮತಾಂತರದ ಚರ್ಚೆಗಳಲ್ಲಿ ಕೊಂಕಣಿಗಳ ಹಿಂದೂ ಇಗೋ ಎಚ್ಚರವಾಗಿ ಅನೇಕ ವೇದಿಕೆಗಳಲ್ಲಿ ಬಿಸಿ ಚರ್ಚೆಗಳು ಉತ್ಪನ್ನವಾಗಿದ್ದರೂ ಮೂರ್ತಿಭಂಜನೆಯಂತಹ ವಿಕೃತ ಮನೋಭಾವವನ್ನು ಕೊಂಕಣಿಗಳು ಹೊಂದಿಲ್ಲ. ಚರ್ಚ್ ದಾಳಿಗೆ ಸಂಬಂಧಿಸಿ ಬಂಧಿತರಾದವರಲ್ಲಿ ಕೊಂಕಣಿಗಳು ಸೇರಿಲ್ಲ ಎನ್ನುವುದು ಗಮನಾರ್ಹ ಅಂಶವಾದರೂ ಸಂಘದ ಐಡಿಯಾಲಜಿಯ ಸ್ಥಾಪನೆ ಸಮಾಜದ ಇತರ ಸ್ತರಗಳಲ್ಲಿಯೂ ಕೈಗೂಡಿರುವುದರಿಂದ ಬದಲಾದ ಸನ್ನಿವೇಶಗಳಲ್ಲಿ ಈ ಸ್ಥಾಪನೆಯಿಂದ ಉಂಟಾದ ಪರಿಣಾಮಗಳ ನೈತಿಕ ಹೊಣೆಯನ್ನು ಕೊಂಕಣಿಗಳು ಹೊರಲು ಸಿದ್ಧರಿದ್ದಾರೆಯೇ ಎನ್ನುವುದೂ ಒಂದು ಪ್ರಶ್ನೆಯೇ.

ಸಂಘನಿಷ್ಠ ಕೊಂಕಣಿಗಳ ಪಾಪಪ್ರಜ್ಞೆ:

ಕೊಂಕಣಿಗಳ ನಿಷ್ಠಾಂತರದಿಂದ ಸಂಘಕ್ಕೂ ಭಾಜಪಾಕ್ಕೂ ಲಾಭವಾಯಿತಾದರೂ ಕೊಂಕಣಿ ಸಮುದಾಯಕ್ಕೆ ಇದರಿಂದೇನೂ ಲಾಭವಾಗಲಿಲ್ಲ. ಮತ್ತು "ಲಾಭ ಇಜ್ಜಾಂದಿನ ಕೊಂಕಣೆ.." ಮುಂತಾದ ತುಳುಗಾದೆಮಾತಿಗೆ ವ್ಯತಿರಿಕ್ತವಾಗಿ ಇಲ್ಲಿ ಭಾವನಾತ್ಮಕ ಆಸರೆಯನ್ನು ಬಿಟ್ಟು ಬೇರಾವ ಲಾಭವನ್ನೂ ಕೊಂಕಣಿ ಸಮುದಾಯ ಅಪೇಕ್ಷಿಸಿಲ್ಲ ಎಂಬುದೂ ಸತ್ಯ

ಹೆಚ್ಚಿನ ಕೊಂಕಣಿಗಳು ಭಾಜಪಾಗೆ ಮತ ಹಾಕುವುದು ಮತ್ತು ಲೋಕಲ್ ಕಟ್ಟೆ ಹರಟೆಗಳಲ್ಲಿ ಭಾಜಪಾ ಪರವಾಗಿ ವಾದಿಸಿ ತೀರ್ಪು ನೀಡುವಷ್ಟಕ್ಕೆ ತಮ್ಮ ಸಂಘ ಪ್ರೇಮವನ್ನು ಸೀಮಿತಗೊಳಿಸಿದರೆ ಅನೇಕ ಕೊಂಕಣಿಗಳು ಸಂಘದೊಂದಿಗೆ ದಿನನಿತ್ಯದ ಸಂಪರ್ಕ ಇರಿಸಿಕೊಂಡವರು. ಸಂಘದ ಮನೆಯಾಗಿ ನಡೆದುಕೊಂಡವರು. ಹೆಚ್ಚಿನ ಕೊಂಕಣಿಗಳು ತಮ್ಮ ಚರ್ಚೆ ಮುಗಿದ ಬಳಿಕ ದಿಡ್ಡಿಬಾಗಿಲು ಮುಚ್ಚಿ ಗೂಡಿನೊಳಗೆ ಸೇರಿಕೊಂಡರೆ ಇವರು ಶಿಸ್ತಿನಿಂದ ಸಂಘದ ಏಳು ಬೀಳುಗಳಲ್ಲೂ ಸ್ಥಿರವಾಗಿ ನಿಂತವರು. ಇವರ ಮಾತು, ಚರ್ಯೆಗಳು ಉಳಿದವರಿಗಿಂತ ಹೆಚ್ಚು ತೂಕದ್ದು. ಇವರನ್ನು ಸಂಘನಿಷ್ಠ ಕೊಂಕಣಿಗಳು ಎಂದು ಮುಂದಕ್ಕೆ ಉಲ್ಲೇಖಿಸಬಯಸುತ್ತೇನೆ.

ಕೊಂಕಣಿಗಳು ತಮ್ಮೊಳಗಿನ ಒಗ್ಗಟ್ಟಿಗಾಗಿ ಇತರ ಸಮುದಾಯದವರಿಂದ ಉಲ್ಲೇಖಿಸಲ್ಪಡುತ್ತಾರೆ. ಇದಕ್ಕೆ ಪೂರಕವಾಗಿ ಕೊಂಕಣಿ ಸಮುದಾಯವು ಇಂದಿಗೂ ಒಂದು ಗೇಟೆಡ್ ಕಮ್ಯೂನಿಟಿಯಾಗಿಯೇ ಉಳಿದುಕೊಂಡಿದೆ. ತನ್ನ ಸಮುದಾಯದ ಒಳಗಿನ ಆರ್ಥಿಕ ಅವಶ್ಯಕತೆಗಳನ್ನು ಸ್ವಾವಲಂಬಿಯಾಗಿ ಪೂರೈಸಿಕೊಳ್ಳುತ್ತಾ ತನ್ನ ಧಾರ್ಮಿಕ ಚಟುವಟಿಕೆಗಳನ್ನು ವೈಭವ ಮತ್ತು ವಿಜ್ರಂಬಣೆಗಳಿಂದ ನಡೆಸಿಕೊಂಡು ಬಂದಿದೆ. ಕೊಂಕಣಿಗಳ ದೇವಸ್ಥಾನಗಳು ಇತರ ಸಮುದಾಯಗಳ ದೇವಸ್ಥಾನಗಳಂತೆಯೇ ಜಾತಿವರ್ಗ ಆಧಾರಿತ ನಿರ್ಬಂಧವನ್ನು ಮಾಡದೇ ನಿರ್ಲಿಪ್ತವಾಗಿದ್ದುಕೊಂಡು ಬಂದರೂ ಉಳಿದ ಸಮುದಾಯಗಳು ತೆರೆಯುವಂತೆ ತನ್ನ ಚಟುವಟಿಕೆಗಳಲ್ಲಿ ಇತರ ಸಮುದಾಯಗಳನ್ನು ಸೇರಿಸಿಕೊಂಡಿಲ್ಲ. ಉದಾಹರಣೆಗೆ ಇತರ ಸಮುದಾಯಗಳ ದೇವಸ್ಥಾನಗಳು ಬ್ರಹ್ಮಕಲಶೋತ್ಸವದಂತಹ ಬ್ರಹತ್ ಕಾರ್ಯಗಳಲ್ಲಿ ಆರ್ಥಿಕ ಉಪಯುಕ್ತತೆಯ ದೃಷ್ಟಿಯಿಂದಾದರೂ ಸರಿಯೇ, ಒಂದು ಸ್ವಾಗತ ಸಮಿತಿ, ಕಾರ್ಯಕಾರಿ ಸಮಿತಿ ಮುಂತಾದವುಗಳನ್ನು ರಚಿಸಿ ಇತರ ಸಮುದಾಯದ ಯಾ ಒಟ್ಟೂ ಸಮಾ

[illegible] ಗಣ್ಯರನ್ನು [illegible] ರೀತಿಗಳಲ್ಲಿ ಪದಾಧಿಕಾರಿಗಳನ್ನು [illegible]ಚುವುದು ರೂಢಿಯಲ್ಲಿದೆ. ಆದರೆ ಇದುವರೆಗೆ ಕೊಂಕಣಿ ಸಮುದಾಯದ ದೇವಸ್ಥಾನಗಳು ಹಮ್ಮಿಕೊಂಡ ಯಾವ ಪ್ರಮಾಣದ ಕಾರ್ಯಕ್ರಮಗಳಲ್ಲೂ ಇತರ ಸಮುದಾಯದವರನ್ನು ಸೇರಿಸಿಕೊಂಡಿಲ್ಲ.

ಈ ಅರಿವು ಸಂಘದ ನಿಷ್ಠಾವಂತ ಕೊಂಕಣಿಗಳಿಗೆ ಅಸಮಾಧಾನವನ್ನು ಉಂಟುಮಾಡುತ್ತದೆ. ಕೊಂಕಣಿ ಸಮುದಾಯಕ್ಕೆ ಸೀಮಿತವಾದ ಚಟುವಟಿಕೆಗಳಲ್ಲಿ ಇಂತಹ ಸಂಘನಿಷ್ಠ ಕೊಂಕಣಿಗಳು ಭಾಗವಹಿಸದೇ ಬಹಿರಂಗವಾಗಿ ಅಸಮಾಧಾನವನ್ನು ವ್ಯಕ್ತಪಡಿಸಿದ್ದಿದೆ. ಸಮಗ್ರ ಹಿಂದೂ ಸಮಾಜಕ್ಕೋಸ್ಕರ ಏನನ್ನಾದರೂ ಮಾಡುವುದಿದ್ದಲ್ಲಿ ಮಾತ್ರ ತಮ್ಮ ಬಳಿಗೆ ಬನ್ನಿ ಎಂಬಂತಹ ಮಾತುಗಳಿಂದ ಜಾತಿ ರಹಿತ ಹಿಂದೂ ಸಮಾಜದ ಏಕೀಕರಣದಂತಹ ಸಂಘೋದ್ದೇಶವನ್ನು ಅವರು ಮುಂದಕ್ಕೊಯ್ಯುತ್ತಾರೆ. ಜಿಲ್ಲೆಯಾದ್ಯಂತ ಹರಡಿರುವ ತಮ್ಮ ದೇವಸ್ಥಾನಗಳಿಂದ ಕೊಂಕಣಿಗಳ ಧಾರ್ಮಿಕ ಅಗತ್ಯಗಳು ಪೂರೈಸಿದರೂ ಸಮುದಾಯದ ಇನ್ನಿತರ ಜ್ವಲಂತ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅಗತ್ಯವಾದ ಸಾಮಾಜಿಕ ಒಗ್ಗಟ್ಟು ಕೊಂಕಣಿಗಳಲ್ಲಿ ಬೆಳೆಯಲು ಇದೇ ವಿಚಾರಧಾರೆ ತೊಡಕಾಯಿತು. ಸಂಘನಿಷ್ಠ ಕೊಂಕಣಿಗಳು ಜಿ.ಎಸ್.ಬಿ. ಸಮಾಜ ಸೇವಾ ಸಮಿತಿಗಳಂತಹ ಪ್ರಯತ್ನಗಳು ನಡೆದಾಗ ಅವುಗಳನ್ನು ಪ್ರೋತ್ಸಾಹಿಸದೇ ತಮ್ಮ ಅಸಮ್ಮತಿಯನ್ನು ಸೂಚಿಸಿದರು.

ಕೊಂಕಣಿ ಸಮುದಾಯದ ಉತ್ತಮ ಸಂಘಟಕರು ಸಂಘನಿಷ್ಠರಾದುದರಿಂದ ಸಮುದಾಯದ ಸ್ವಂತದ ಸಾಮಾಜಿಕ ಕೆಲಸಕ್ಕೆ ಸಂಘಟಕರ ಕೊರತೆ ಎದ್ದು ಕಾಣುತ್ತದೆ. ಧಾರ್ಮಿಕ ಕಾರ್ಯಕ್ರಮಗಳು ಇದರಿಂದ ನಿರ್ಬಾಧಿತವಾದರೂ ಸಾಮಾಜಿಕ ಸಂಘಟನೆಗೆ ಹೆಚ್ಚು ಉತ್ಸಾಹ ಕಂಡು ಬರುತ್ತಿಲ್ಲ. ಸಮುದಾಯ ಒಂದು ರೀತಿಯಲ್ಲಿ ನಿಂತ ನೀರಾದಂತೆ ತೋರುತ್ತದೆ. ಧಾರ್ಮಿಕ ಕಾರ್ಯಕ್ರಮಗಳನ್ನು ಬಿಟ್ಟು ಬೇರೆ ಯಾವ ಕಾರ್ಯಕ್ರಮಗಳಿಗೂ ತೀವ್ರ ನಿರ್ಲಕ್ಷ್ಯವನ್ನು ಸಮುದಾಯ ತೋರುತ್ತಿದೆ.

ಬಹುಶ ಈ ಮನೋಭಾವವು ಸಂಘದ ಸಂಪರ್ಕ ಈ ನಿಷ್ಠರಲ್ಲಿ ಉಂಟು ಮಾಡಿದ ಮೇಲ್ವರ್ಗಕ್ಕೆ ಫಲಿತವಾದ ಪಾಪಪ್ರಜ್ಞೆಯ ಇನ್ನೊಂದು ರೂಪ ಎಂದು ನನಗೆ ಅನಿಸುತ್ತಿದ್ದೆ. ಸಂಘದ ಉಳಿದ ಮೇಲ್ವರ್ಗದ ಪ್ರಮುಖರು ತುಳುನಾಡಿನ ಪಾರಂಪರಿಕ ಸಮಾಜ ವ್ಯವಸ್ಥೆಯಲ್ಲಿ ಕೊಂಕಣಿಗಳಂತೆ "ಹೊರಗಿ"ನವರಲ್ಲ. ಇತರ ಜಾತಿಯವರೊಡನೆ ಸಾಮಾಜಿಕ, ಧಾರ್ಮಿಕ, ಮತ್ತು ವ್ಯಾವಹಾರಿಕ ಸಂವಹನಗಳೂ ಈ ಮೇಲ್ವರ್ಗದವರಿಗೆ ಸಹಜ ಸಾಧ್ಯವಾಗುತ್ತದೆ. ಈ ಕಾರಣಗಳಿಂದ ಬ್ರಾಹ್ಮಣರು, ಮತ್ತು ಇತರ ಮೇಲ್ವರ್ಗದವರಂತೆ ಕೊಂಕಣಿಗಳು ಸಂಘದೊಳಗಿನ ನಾಯಕತ್ವಗಳಿಗೆ ಸ್ವಾಭಾವಿಕ ಆಯ್ಕೆ ಆಗಲು ತೊಡಕಾಯಿತು.

ಜೊತೆಗೆ ಭಾಜಪಾದೊಳಗೂ ಇರುವ ಜಾತಿ ರಾಜಕಾರಣದ ಲೆಕ್ಕಾಚಾರಗಳು ಎಂದಿಗೂ ಕೊಂಕಣಿ ಅಭ್ಯರ್ಥಿಗಳಿಗೊಂದು ಸ್ವಾಭಾವಿಕ ಸ್ಥಾನವನ್ನು ನಿರ್ಮಾಣ ಮಾಡಲೇ ಇಲ್ಲ. ಕೊಂಕಣಿಗಳಿಗಿಂತ ಕಡಿಮೆ ಸಂಖ್ಯೆ ಇರುವ ಕೊಂಕಣೇತರ ಸಮುದಾಯದ ಅಭ್ಯರ್ಥಿ ಸ್ಪರ್ಧಾಳುವಾಗಿ ಆರಿಸಿಬಂದು ಚುನಾವಣೆಯನ್ನು ಗೆದ್ದು ಬರುವ ಸಾಧ್ಯತೆಯಿದ್ದರೂ ಆ ಸ್ಥಾನದಲ್ಲಿ ಕೊಂಕಣಿಯೊಬ್ಬ ಸೋಲುವ ಸಾಧ್ಯತೆಗಳು ಹೆಚ್ಚು ಧ್ವನಿಸುತ್ತದೆ. ಅದಕ್ಕೆ

ಕೊಂಕಣಿಗಳು ಪೋಷಿಸಿಕೊಂಡು ಬಂದ ಗೇಟೆಡ್ ಮನೋಭಾವ ಕಾರಣ ಎನ್ನುವ ಸಾರ್ವಕಾಲಿಕ ಸತ್ಯವನ್ನು ಸಂಘನಿಷ್ಠ ಕೊಂಕಣಿಗಳು ಒಪ್ಪಿಕೊಳ್ಳಬಹುದು. ಸಂಘದ ಚಟುವಟಿಕೆಗಳಲ್ಲಿ ತನು ಮನ ಧನಗಳಿಂದ ಫಲಾಪೇಕ್ಷೆಯಿಲ್ಲದೇ ತೊಡಗಿಸಿಕೊಂಡು ಈ ಪಾಪಪ್ರಜ್ಞೆಯನ್ನು ನಿವಾರಿಸಿಕೊಳ್ಳುವ ಅವಕಾಶವನ್ನು ಸಂಘವು ಕೊಂಕಣಿಗಳಿಗೆ ನೀಡಿದೆ.

ಇತರ ಎಲ್ಲ ಸಮುದಾಯಗಳು ತಮ್ಮ ಸಮುದಾಯದ ಅಭ್ಯರ್ಥಿಪದದಿಂದ ತೊಡಗಿ ಮಂತ್ರಿ ಪದವಿಯ ತನಕ ಹಠ ಹಿಡಿದು ಪಡೆದುಕೊಳ್ಳುತ್ತಿರುವಾಗ ಕೊಂಕಣಿ ಸಮುದಾಯಕ್ಕೆ ಸೇರಿದ ಭಾಜಪಾ ಶಾಸಕನ ಸ್ವಂತ ಪದ

ದಕ್ಷಿಣ ಕನ್ನಡದ ಯಾವುದೇ ಕೊಂಕಣಿ ರಖಂ ವ್ಯಾಪಾರಿಗೂ ಮುಸ್ಲಿಂ ಕಿರು ವ್ಯಾಪಾರಿಗಳೇ ಹೆಚ್ಚು ಗಿರಾಕಿಗಳು. ಇದರ ಬಗ್ಗೆ ಸ್ಪಷ್ಟವಾದ ಅಂಕಿ ಅಂಶಗಳು ನನ್ನಲ್ಲಿಲ್ಲ ಆದರೂ ಮೇಲ್ನೋಟಕ್ಕೆ ನಲವತ್ತು ಪ್ರತಿಶತಕ್ಕೂ ಹೆಚ್ಚು ಪಾಲು ಮುಸ್ಲಿಂ ಗಿರಾಕಿಗಳದ್ದಿರಬಹುದು. ಆದುದರಿಂದ ಕೊಂಕಣಿಗಳು ಸಂಘವನ್ನು ಮುಸ್ಲಿಂ ದಮನಕ್ಕೋಸ್ಕರ ಬಳಸಿದರೆ ನಷ್ಟವಾಗುವುದು ಕೊಂಕಣಿಗಳಿಗೇ. ಇದನ್ನು ಅರಿಯಲಾರದಷ್ಟು ಮುಗ್ಧರು ಕೊಂಕಣಿಗಳಲ್ಲ. ಉಳಿದಂತೆ ಈ ವ್ಯಾವಹಾರಿಕ ಅವಲಂಬನೆಯು ಇವತ್ತಿನವರೆಗೂ ಮುಂದುವರೆದುಕೊಂಡು ಬಂದಿದೆ. ಕೊಂಕಣಿಗಳ ಬೀಡಿ ಉದ್ಯಮದ ಬ್ರಾಂಚ್‌ಗಳನ್ನು ಮುಸ್ಲಿಮರೆ ನಡೆಸುತ್ತಿದ್ದರು, ಅದು ಇಂದಿಗೂ ಮುಂದುವರೆದಿದೆ. ಇದರ ಪರಿಣಾಮವಾಗಿ ಅನೇಕ ಮುಸ್ಲಿಮರು ತಮ್ಮದೆ ಬೀಡಿ ಬ್ರಾಂಡ್‌ಗಳನ್ನು ಹೊರ ತಂದು ಯಶಸ್ಸು ಸಾಧಿಸಿದ್ದಾರೆ.

ನಿರ್ಮೋಹದ ಹೊರತಾಗಿಯೂ ಸಚಿವ ಪದವಿಗೆ ಸಲ್ಲಿಸಿದ ಸಮುದಾಯದ ಬೇಡಿಕೆಯನ್ನು ಬಿಸುಮಾತಿನ ಗದರಿಕೆಗಳಿಂದ ತಣ್ಣೀರೆರಚಿದ್ದ ಸಂಘ, ಕೊಂಕಣಿ ಸಂಘನಿಷ್ಠೆಯನ್ನು ಟೇಕನ್ ಫಾರ್ ಗ್ರಾಂಟೆಡ್ ಎಂದು ಪರಿಗಣಿಸಿದೆ ಎನ್ನುವುದರಲ್ಲಿ ಯಾವುದೇ ಸಂದೇಹಗಳಿಲ್ಲ. ಕೊಂಕಣಿ ಸಮುದಾಯವನ್ನು ಗುಡ್ ಬೊಯ್ ಪದವಿ ನೀಡಿ ನೀವು ಕೂಡ ಹಠ ಹಿಡಿದರೆ ನಿಮಗೂ ಉಳಿದವರಿಗೂ ಏನು ವ್ಯತ್ಯಾಸ ಎಂಬ ದಿವ್ಯ ಸತ್ಯವನ್ನು ಸಂಘ ಉಪದೇಶಿಸಿ ಕೊಂಕಣಿ ಕಾರ್ಯಕರ್ತರನ್ನು ಸಂತೈಸಿದ್ದು ಈಗ ಸಮುದಾಯಕ್ಕೆ ಅರ್ಥವಾಗಿದೆ. ಕೊಂಕಣಿಗಳ ಓಟಿನಿಂದಷ್ಟೆ ಒಬ್ಬ ಅಭ್ಯರ್ಥಿಯು ಗೆಲ್ಲಲು ಸಾಧ್ಯವಿಲ್ಲದಿದ್ದರೂ ಕೊಂಕಣಿಗಳ ಓಟಿಲ್ಲದೆಯೂ ಅದು ಕಷ್ಟ ಸಾಧ್ಯ ಎಂಬುದನ್ನು ಭಾಜಪಾದ ಚುಕ್ಕಾಣಿ ಹಿಡಿದಿರುವ ಸಂಘದ ಮುತ್ಸದ್ದಿಗಳಿಗೆ ಮನವರಿಕೆ ಮಾಡಿಕೊಡುವ ಛಾತಿಯೂ ಕೊಂಕಣಿಗಳಲ್ಲಿ ಇದೆ ಎಂಬುದರ ಬಗ್ಗೆ ನನಗೆ ಸಂಶಯವಿದೆ.

ಸೈದ್ಧಾಂತಿಕವಾಗಿ ಭಾಜಪಾ ಕೊಂಕಣಿ ಸಮುದಾಯ ಬಯಸುತ್ತಿರುವ ಆಶೋತ್ತರಗಳನ್ನು ಉಳಿಸಿಕೊಂಡಿದೆಯೇ? ಎನ್ನುವುದು ಒಂದು ಪ್ರಶ್ನೆ. ಗಣಿವೈಭವ ಸಾಮ್ರಾಜ್ಯವು ಉತ್ತರ ಕರ್ನಾಟಕವನ್ನು ಕುಲಗೆಡಿಸಿಕೊಂಡಿರುವಾಗ ದಕ್ಷಿಣ ಕನ್ನಡದಲ್ಲಿ ತಣ್ಣಗೆ ಕುಳಿತು ಸಂಘದ ಮನಿಬ್ಯಾಗ್ ಆಗಿರುವ ಮಾತ್ರಕ್ಕೆ ನಡೆಯುತ್ತಿರುವ ಸಮಗ್ರ ಆಗುಹೋಗುಗಳಿಗೆ ಹೊಣೆಗಾರಿಕೆಯನ್ನು ಹೊತ್ತುಕೊಳ್ಳಬೇಕಾದ ಇಂದಿನ ಪರಿಸ್ಥಿತಿಯಲ್ಲಿ ಕೊಂಕಣಿ ಸಮುದಾಯ ತನ್ನ ಸಂಘನಿಷ್ಠೆಯನ್ನು ಪುನರ್ ವಿಮರ್ಶಿಸಿಕೊಳ್ಳಬೇಕು.

ಉಪಸಂಹಾರ:

ಈ ಮೇಲಿನ ಎಲ್ಲ ಆಧಾರಪೂರ್ವಕ ವಿವರಣೆಗಳನ್ನು ಆಧಾರವಾಗಿಟ್ಟುಕೊಂಡು ಈ ಇಡೀ ಪ್ರಬಂಧವು ಶ್ರುತಪಡಿಸುವ ಅಂಶಗಳನ್ನು ಕೆಳಗೆ ನೀಡುತ್ತಿದ್ದೇನೆ.

1. ತುಳುನಾಡಿನಲ್ಲಿ 7ನೇ ಶತಮಾನದಿಂದಲೇ ಮುಸ್ಲಿಮರು ವ್ಯಾಪಾರದಲ್ಲಿ ಪ್ರಬಲರಾಗಿದ್ದುದಕ್ಕೆ ಇತಿಹಾಸ ಪುರಾವೆ ನೀಡುತ್ತಿದೆ. ಆದುದರಿಂದ 20ನೇ ಶತಮಾನದ ಉತ್ತರಾರ್ಧದಲ್ಲಿ ಮುಸ್ಲಿಮರು ವ್ಯಾಪಾರದಲ್ಲಿ ಪ್ರಬಲರಾಗ ತೊಡಗಿದರು ಎಂದು ಊಹಿಸುವುದು ಅಸಮಂಜಸ.

2. ತುಳುನಾಡಿನಲ್ಲಿ ಕೊಂಕಣಿಗಳು ನೆಲೆಯೂರುವ ಮೊದಲೇ ಹಿಂದುಗಳ ಮತ್ತು ಮುಸ್ಲಿಮರ ನಡುವೆ ಗಹನತರದ ಗಲಭೆಗಳು ನಡೆದಿರುವುದನ್ನು ಇತಿಹಾಸ ಉಲ್ಲೇಖಿಸುತ್ತದೆ. ತುಳುನಾಡಿನಲ್ಲಿ ಮುಸ್ಲಿಮರ ಬಗೆಗೊಂದು ಅಸಹನೆ ಬಹಳ ಹಿಂದಿನಿಂದಲೂ ಇತ್ತು ಎನ್ನುವುದನ್ನು ಈ ಉಲ್ಲೇಖಗಳು ಸೂಚಿಸುತ್ತವೆ. ಆದುದರಿಂದ ಕೊಂಕಣಿ ಮತ್ತು ಮುಸ್ಲಿಂ ವ್ಯಾಪಾರಿಗಳ ನಡುವಿನ ಸ್ಪರ್ಧೆಯು ಕೋಮುದ್ವೇಶದ ಅಗತ್ಯವನ್ನು ಹುಟ್ಟುಹಾಕಿತು ಎಂದು ಊಹಿಸುವುದು ಕೂಡ ಅಸಮಂಜಸವೇ.

3. ಕೊಂಕಣಿ ಮತ್ತು ಮುಸ್ಲಿಮ್ ಈ ಎರಡೂ ಸಮುದಾಯಗಳಲ್ಲಿ ಒಂದು ವ್ಯಾವಹಾರಿಕವಾದ ಸಂಬಂಧವಿದೆ. ಇದು ಎರಡೂ ಸಮುದಾಯಗಳು ಒಂದು ಅವಿನಾಭಾವ ಸಂಬಂಧವನ್ನಿರಿಸಿಕೊಂಡಿರುವುದನ್ನು ಸೂಚಿಸುತ್ತವೆ.

4. ಕೊಂಕಣಿಗಳು ಸಂಘದತ್ತ ನಿಷ್ಠಾಂತರವಾದದ್ದು ತುರ್ತುಪರಿಸ್ಥಿತಿಯ ಆಸುಪಾಸಿನ ಸಾಮಾಜಿಕ, ರಾಜಕೀಯ ಮತ್ತು ಭಾವನಾತ್ಮಕ ಕಾರಣಗಳಿಂದಲ್ಲದೇ, "ಮುಸ್ಲಿಂ ವ್ಯಾಪಾರಿಗಳ ದಮನ" ವೆನ್ನುವ ವ್ಯಾಪಾರಿ ಕಾರಣದಿಂದಲ್ಲ. ಹಿಂದೂ ಧರ್ಮವೆನ್ನುವ ಇಗೋ ಮತ್ತು ದೇಶ ಪ್ರೇಮದ ಉನ್ಮಾದ ಇವೆರಡನ್ನೂ ಬಿಟ್ಟು ವ್ಯಾಪಾರಿ

ಕಾರಣಗಳಿಂದ ಕೊಂಕಣಿಗಳನ್ನು ನಿಯಂತ್ರಿಸಲು ಯಾರಾದರೂ ಬಯಸಿದಲ್ಲಿ ಅದಕ್ಕೆ ಒಳಗ್ಗಾಗದೆ ತಪ್ಪಿಸಿಕೊಳ್ಳುವಷ್ಟು ಚಾಣಾಕ್ಷತನ ಕೊಂಕಣಿಗಳ ಬಳಿ ಇದೆ. ಆದುದರಿಂದ ಮುಸ್ಲಿಂ ವ್ಯಾಪಾರಿಗಳ ವಿರುದ್ಧ ಕೊಂಕಣಿ ವ್ಯಾಪಾರಿಗಳನ್ನು ಸಂಘವು ಎತ್ತಿ ಕಟ್ಟಿತು ಎಂಬಂತಹ ಅಭಿಪ್ರಾಯವೂ ಅಸಮಂಜಸ.

5. ಸ್ವತಹ ಕೊಂಕಣಿ ವ್ಯಾಪಾರಿಗಳೇ ಮುಸ್ಲಿಂ ವ್ಯಾಪಾರಿಗಳ ದಮನಕ್ಕೋಸ್ಕರ ಸಂಘವನ್ನು ದಕ್ಷಿಣ ಕನ್ನಡದಲ್ಲಿ ಕಟ್ಟಿದರು ಎನ್ನುವುದು ಕೂಡ ಅಸಮಂಜಸವೇ. ಮುಸ್ಲಿಂ ವ್ಯಾಪಾರಿಗಳ ಶಕ್ತಿ, ಸಾಮರ್ಥ್ಯ, ರಿಸ್ಕ್ ತೆಗೆದುಕೊಳ್ಳುವ ಛಾತಿ, ಯಾವ ಕೆಲಸಕ್ಕೂ ಸಿದ್ಧರಾಗಿರುವ ಮನೋಭಾವ, ಕಸುಬುಗಾರಿಕೆ ಇವುಗಳ ಬಗ್ಗೆ ಕೊಂಕಣಿ ವ್ಯಾಪಾರಿಗಳಿಗೆ ಮೆಚ್ಚುಗೆ ಇದೆ. ತಮ್ಮ ವ್ಯಾಪಾರದಲ್ಲಿ ಮುಸ್ಲಿಂ ಗ್ರಾಹಕರ ಗಣನೀಯ ಪಾಲನ್ನು ಗಮನಿಸಿದಾಗ ಅಂತಹ ಯಾವ ಪ್ರಯತ್ನವೂ ತಮಗೆ ಮಾರಕವಾದೀತು ಎಂಬ ಸರಳ ಸತ್ಯದ ಅರಿವು ಕೊಂಕಣಿಗಳಿಗಿದೆ. ಅಂಗಡಿ ವ್ಯಾಪಾರದಲ್ಲಿ ಉತ್ಸಾಹವನ್ನೂ ಕೊಂಕಣಿಗಳು ಕಳೆದುಕೊಂಡು ಕಾರ್ಪೊರೇಟ್ ಜಗತ್ತಿನತ್ತ ತಿರುಗಿ ದಶಕಗಳೇ ಕಳೆದಿವೆ. ಜೊತೆಗೆ ಅಂತಹ ದಮನದ ಉದ್ದೇಶವಿರುತ್ತಿದ್ದರೆ ಕೊಂಕಣಿ ಸಮುದಾಯದ ಸದಸ್ಯರು ಮುಸ್ಲಿಮರಿಗೆ ಭಂಡಸಾಲೆಗಳನ್ನು ಮಾರಿದ ಸನ್ನಿವೇಶಗಳು ನಿರ್ಮಾಣವಾಗುತ್ತಿರಲಿಲ್ಲ.

ಸ್ವತಹ ಕೊಂಕಣಿ ವ್ಯಾಪಾರಿಗಳೇ ಮುಸ್ಲಿಂ ವ್ಯಾಪಾರಿಗಳ ದಮನಕ್ಕೋಸ್ಕರ ಸಂಘವನ್ನು ದಕ್ಷಿಣ ಕನ್ನಡದಲ್ಲಿ ಕಟ್ಟಿದರು ಎನ್ನುವುದು ಕೂಡ ಅಸಮಂಜಸವೇ. ಮುಸ್ಲಿಂ ವ್ಯಾಪಾರಿಗಳ ಶಕ್ತಿ, ಸಾಮರ್ಥ್ಯ, ರಿಸ್ಕ್ ತೆಗೆದುಕೊಳ್ಳುವ ಛಾತಿ, ಯಾವ ಕೆಲಸಕ್ಕೂ ಸಿದ್ಧರಾಗಿರುವ ಮನೋಭಾವ, ಕಸುಬುಗಾರಿಕೆ ಇವುಗಳ ಬಗ್ಗೆ ಕೊಂಕಣಿ ವ್ಯಾಪಾರಿಗಳಿಗೆ ಮೆಚ್ಚುಗೆ ಇದೆ. ತಮ್ಮ ವ್ಯಾಪಾರದಲ್ಲಿ ಮುಸ್ಲಿಂ ಗ್ರಾಹಕರ ಗಣನೀಯ ಪಾಲನ್ನು ಗಮನಿಸಿದಾಗ ಅಂತಹ ಯಾವ ಪ್ರಯತ್ನವೂ ತಮಗೆ ಮಾರಕವಾದೀತು ಎಂಬ ಸರಳ ಸತ್ಯದ ಅರಿವು ಕೊಂಕಣಿಗಳಿಗಿದೆ. ಅಂಗಡಿ ವ್ಯಾಪಾರದಲ್ಲಿ ಉತ್ಸಾಹವನ್ನೂ ಕೊಂಕಣಿಗಳು ಕಳೆದುಕೊಂಡು ಕಾರ್ಪೊರೇಟ್ ಜಗತ್ತಿನತ್ತ ತಿರುಗಿ ದಶಕಗಳೇ ಕಳೆದಿವೆ. ಜೊತೆಗೆ ಅಂತಹ ದಮನದ ಉದ್ದೇಶವಿರುತ್ತಿದ್ದರೆ ಕೊಂಕಣಿ ಸಮುದಾಯದ ಸದಸ್ಯರು ಮುಸ್ಲಿಮರಿಗೆ ಭಂಡ ಸಾಲೆಗಳನ್ನು ಮಾರಿದ ಸನ್ನಿವೇಶಗಳು ನಿರ್ಮಾಣವಾಗುತ್ತಿರಲಿಲ್ಲ.

6. ಕೊಂಕಣಿಗಳು ಸಂಘನಿಷ್ಠರಾದುದರಿಂದ ಕೊಂಕಣಿ ಸಮುದಾಯಕ್ಕೆ ಯಾವ ತರದ ಲಾಭವೂ ಆಗಲಿಲ್ಲ. ಬದಲಾಗಿ ಕೊಂಕಣಿ ಸಮುದಾಯದ ಒಳಗಿನ ಸಾಮಾಜಿಕ ಒಗ್ಗಟ್ಟು ಬೆಳೆಯಲು ಸಂಘದ ವಿಚಾರಧಾರೆಯು ತೊಡಕಾಯಿತು.

ಒಟ್ಟಿನಲ್ಲಿ ಕೊಂಕಣಿಗಳು ವ್ಯಾಪಾರಿ ಲಾಭಕ್ಕೋಸ್ಕರ ಕೋಮು ದ್ವೇಷವನ್ನು ಹುಟ್ಟು ಹಾಕಿದರು ಎನ್ನುವುದಕ್ಕಿಂತ ಸಂಘ ಪ್ರೇರಿತ ಹಿಂದೂ ಮೂಲಭೂತ ಸಿದ್ಧಾಂತದ ಉಪಉತ್ಪನ್ನವಾಗಿ ಹೊರಹೊಮ್ಮಿದ ಕೋಮು ದ್ವೇಷದಿಂದ ಕೊಂಕಣಿಗಳ ಮತ್ತು ಮುಸ್ಲಿಮರ ನಡುವಿನ ವ್ಯಾಪಾರಿ ಸಂಬಂಧವು ಮೊದಲಿನ ವಿಶ್ವಾಸವನ್ನು ಕಳೆದುಕೊಂಡು ಅಪನಂಬಿಕೆ ಸುತ್ತಿಕೊಂಡಿತು ಎನ್ನುವುದು ಸೂಕ್ತ. ಈ ಎಲ್ಲಾ ಕೋಮುಗಲಭೆಗಳ ಕಾರಣದಿಂದ ಸಂಭವಿಸುವ ನಷ್ಟವು ವ್ಯಾಪಾರಿಗಳದ್ದೇ ಹೆಚ್ಚು ಆಗಿರುವ ಕಾರಣದಿಂದ ಕೊಂಕಣಿ ವ್ಯಾಪಾರಿಗಳನ್ನು ಆರೋಪಿಯನ್ನಾಗಿ ನೋಡದೇ ಸಂತ್ರಸ್ತ ಎಂಬುದಾಗಿಯೇ ಗ್ರಹಿಸಿಕೊಳ್ಳಬೇಕಾಗುತ್ತದೆ.

ವಿಶ್ವಸ್ತರದಲ್ಲಿ ಆಕ್ರಮಿಸಿಕೊಳ್ಳುತ್ತಿರುವ ಭಯೋತ್ಪಾದನೆ ಎಂಬ ಗುಮ್ಮವನ್ನು ಸ್ಥಳೀಯ ಮುಸ್ಲಿಮರ ವಿಶ್ವಾಸವನ್ನು ಗಳಿಸಿಕೊಳ್ಳದೇ ಎದುರಿಸುವುದು ಅಸಾಧ್ಯ. ಸಂಸ್ಕೃತಿ ಉಳಿಸುವ ನೆವದಲ್ಲಿ ಅಸಹನೆಯ ಆಕ್ರಮಣಗಳು, ಪ್ರಚೋದನಾತ್ಮಕ ಪಿಸುಗುಟ್ಟುವಿಕೆಗಳು, ಆಧಾರ ರಹಿತ ಹೇಟ್ ಈಮೇಲ್ಗಳು ಇವೆಲ್ಲ ಈ ಸಮಾಜವನ್ನು ಇನ್ನಷ್ಟು ಶಿಥಿಲಗೊಳಿಸುತ್ತದೆ. ಹಿಂದೂ ಮುಸ್ಲಿಮರ ನಡುವೆ ಸಾಮರಸ್ಯ ಸಾಧಿಸಲು ಮುಸ್ಲಿಮರೊಂದಿಗೆ ಹೆಚ್ಚಿನ ಸಂಪರ್ಕವಿರುವ ಕೊಂಕಣಿಗಳೇ ಮುಂದಾಗಬೇಕು.

1. M.N. Pearson: Banyas and Brahmins-their role in the Portuguese Indian Economy: Coastal Western India: Page: 93-111.

2. B.S.Shastry: Goa-Kanara Portuguese Relations 1498 – 1763: Various Ref.

3. K.V.Ramesh: Tulunadu Jaina Art and Architecture: Encyclopedia of Jainism: Page: 6819

4. Vishweshvar Rao M: Ourkarnataka.com.

5. Ibn Battuta/HAR Gibb: Selections from the travels of Ibn Battuta: Page 233

6. South Indian Inscritpions: Vol VII: No. 182

7. Karnataka Inscriptions: Vol I: 48

8. Francis H. Buchanan: A Journey fro Madras through the countries of Mys ore, Canara and Malabar: Vol II: Page: 5

9. ಗಣಪತಿರಾವ್ ಐಗಳ್: ಶ್ರೀ ಮದನಂತೇಶ್ವರ ದೇವಸ್ಥಾನಕ್ಕೆ ಸಂಮ್ಮಂಧಪಟ್ಟ ಶಾಸನಗಳೂ ಕರಾರುಗಳೂ: ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ: ಪರಿಶಿಷ್ಟ1.

10. Francis Buchanan: A Journey From Madras… : Vol II: Page: 58

11. Kuldip Nayyar: Between the Lines:

12. Election Commission of India: Statistical Report on Gen. Elections 1957, The Legislative Assembly of Mysore.: 175-Udipi

13. Election Commission of India: Statistical Report on Gen. Elections 1957, The Legislative Assembly of Mysore.: 171-Mangalore I

14. Election Commission of India: Statistical Report on Gen. Elections 1951, The First Loksabha: Vol I

15. Refer Election Commission of India Statistical Reports of consecutive years for Loksabha.

16. Election Commission of India Statistical Reports of Gen. Elections, The Legislative Assembly of Karnataka.

17. Ibid, The legislative assembly of mysore 1957

18. Prof. Balraj Mudhok: Indianisation? What, Why and How. 1970: Page 108; Prof. Muzaffar Assadi: Communal Violence in Coastal Belt, Economic and Political Weekly, September, 2004.

19. Christopher Jefferlot: The Hindu Nationalist Movement and Indian Politics. Page: 238

20. Prof. Balraj Mudhok: Indianisation? What, why and how. 1970: Page 108

21 Christopher Jeffrelot: The Hindu Nationalistic Movement and Indian Politics: Page:275

22. Election Commission of India: Statistical Report on Gen. Elections, The seventh LokSabha: 18-Udupi

23. B.A.Prakash: Trends and Patterns of Emigration to the West Asian Countries: Page:102 of Kerala's Economic Development.

24. Historical Archives of Goa: Conselho Da Fazenda, No 2(1618-25) ; M.N.Pearson: Indian Seafarers in the Sixteenth Century: Coastal Western India: Page 116-137

25. Dharma Kumar: Land and Castes in South India: Page 8

26. ಕುಂಬಳೆ ನಾಯಕರ ಕುಟುಂಬದ ದಾಖಲೆಗಳು.

27. ಡಾ. ವಹಾಬ್ ದೊಡ್ಡಮನೆ: ತುಳುನಾಡಿನ ಮುಸ್ಲಿಮರು: ಪುಟ 85

28. ಮಂಜೇಶ್ವರ ಗಣಪತಿ ರಾವ್ ಐಗಳ್: ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ: ಪರಿಶಿಷ್ಟ 1. ಪುಟ: 333.

29. ಡಾ. ವಹಾಬ್ ದೊಡ್ಡಮನೆ: ತುಳುನಾಡಿನ ಮುಸ್ಲಿಮರು, ಪುಟ 129. □

ಬಳ್ಳಾರಿ ಜಿಲ್ಲೆ : ಬರಿದಾಗುತ್ತಿರುವ ಅದಿರು ನಿಕ್ಷೇಪ : ಬಂದೆರಗಲಿರುವ ಬರದ ಶಾಪ

ಬಹಳ ಹಿಂದಿನಿಂದಲೂ ಬಳ್ಳಾರಿ ಜಿಲ್ಲೆಯಲ್ಲಿ 'ಬೇಸಿಗೆ-ಅತಿ ಬೇಸಿಗೆ' ಎಂಬ ಎರಡೇ ಕಾಲವಿರುವುದು ಎನ್ನಲಾಗುತ್ತಿತ್ತು. ಅದನ್ನು ಬದಲಾಯಿಸುವ ಕಾಲವೀಗ ಬಂದಿದೆ. ಅದೇನೆಂದರೆ ಈಗ ಅಲ್ಲಿರುವುದು ಒಂದೇ ಕಾಲ. ಅದೇ 'ಅತಿ ಬೇಸಿಗೆ' ಅಥವಾ 'ಉರಿ ಬೇಸಿಗೆ' ಅಥವಾ 'ರಣ ಬೇಸಿಗೆ'. ಒಂದು ಕಾಲಕ್ಕೆ ಬಳ್ಳಾರಿಗೆ 'ಹಂಪೆ ಒಂದು ಪರಂಪರೆಯಾದರೆ, ತುಂಗಭದ್ರಾ ಅಣೆಕಟ್ಟು ಒಂದು ಪ್ರಾರಬ್ಧ' ಎನ್ನಲಾಗುತ್ತಿತ್ತು. ಈ ಎರಡು ಸಂಗತಿಗಳ ಪಾಲಿಗೆ ಈಗ ಮೂರನೆಯ ಒಂದು ಸಂಗತಿಯನ್ನು ಸೇರಿಸಬೇಕಾಗಿದೆ. ಅದೇ ಬಳ್ಳಾರಿ ಜಿಲ್ಲೆಯಲ್ಲಿ ನಡೆದಿರುವ ಕಬ್ಬಿಣ-ಮ್ಯಾಂಗನೀಸು ಅದಿರಿನ ಗಣಿಗಾರಿಕೆ. ಅದು ಬಳ್ಳಾರಿ ಜಿಲ್ಲೆಗೆ ಬಡಿದಿರುವ ಅಭಿಶಾಪ. ಈ ಜಿಲ್ಲೆಯಲ್ಲಿ ಒಂದು ಪರಂಪರೆಯಾದರೆ, ಒಂದು ಪ್ರಾರಬ್ಧ - ಮತ್ತೊಂದು ಅಭಿ -ಶಾಪ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ಜನಸಮುದಾಯಕ್ಕೆ ತುಂಗಭದ್ರ ಅಣೆಕಟ್ಟೆಯಿಂದಾಗಲಿ-ಗಣಿಗಾರಿಕೆಯಿಂದಾಗಲಿ ಯಾವುದೇ ಪ್ರಯೋಜನವಾಗುತ್ತಿಲ್ಲ.



ಡಾ. ಟಿ.ಆರ್. ಚಂದ್ರಶೇಖರ್

ಈ ಸಂಚಿಕೆಯಿಂದ ಕರ್ನಾಟಕದ ಕೆಲವು ಅತ್ಯಂತ ದುಸ್ಥಿತಿಯಲ್ಲಿರುವ, ತೀವ್ರ ಹಿಂದುಳಿದಿರುವ ಜಿಲ್ಲೆಗಳ ಅಭಿವೃದ್ಧಿ ನೆಲೆ ಕುರಿತಂತೆ ಚರ್ಚೆ ಮಾಡಲಿದ್ದೇನೆ. ಅದರ ಮೊದಲನೆಯ ಭಾಗವಾಗಿ ಇಂದು ರಾಜಕೀಯವಾಗಿ ರಾಜ್ಯದಲ್ಲಿ ಒಂದು ರೀತಿಯ ಅಸ್ಫೋಟವನ್ನು ಉಂಟು ಮಾಡುತ್ತಿರುವ ಆದರೆ ಸಾಮಾಜಿಕವಾಗಿ ಮತ್ತು ಜನರ ಬದುಕಿನ ಸ್ಥಿತಿಗತಿಯ ದೃಷ್ಟಿಯಿಂದ ಸಮಕಷ್ಟದಲ್ಲಿರುವ ಗಣಿಗಾರಿಕೆಯಿಂದಾಗಿ ಸತ್ತೇ ಹೋಗುತ್ತಿರುವ ಬಳ್ಳಾರಿ ಜಿಲ್ಲೆಯ ಬಗ್ಗೆ ಬರೆಯುತ್ತಿದ್ದೇನೆ. ಹಣವೇ ಎಲ್ಲವೂ ಅಲ್ಲ ಎಂಬುದಕ್ಕೆ ಬಳ್ಳಾರಿ ಜಿಲ್ಲೆಯಲ್ಲಿ ನಡೆದಿರುವ ಅಭಿವೃದ್ಧಿ ಪ್ರಕ್ರಿಯೆಯೇ ಸಾಕ್ಷಿ.

ಬಹಳ ಹಿಂದಿನಿಂದಲೂ ಬಳ್ಳಾರಿ ಜಿಲ್ಲೆಯಲ್ಲಿ 'ಬೇಸಿಗೆ ಮತ್ತು ಅತಿ ಬೇಸಿಗೆ' ಎಂಬ ಎರಡೇ ಕಾಲವಿರುವುದು ಎನ್ನಲಾಗುತ್ತಿತ್ತು (ಬೀಚಿ). ಅದನ್ನು ಬದಲಾಯಿಸುವ ಕಾಲವೀಗ ಬಂದಿದೆ. ಅದೇನೆಂದರೆ ಈಗ ಅಲ್ಲಿರುವುದು ಒಂದೇ ಕಾಲ. ಅದೇ 'ಅತಿ ಬೇಸಿಗೆ' ಅಥವಾ 'ಉರಿ ಬೇಸಿಗೆ' ಅಥವಾ 'ರಣ ಬೇಸಿಗೆ'. ಒಂದು ಕಾಲಕ್ಕೆ ಬಳ್ಳಾರಿಗೆ 'ಹಂಪೆ ಒಂದು ಪರಂಪರೆಯಾದರೆ, ತುಂಗಭದ್ರಾ ಅಣೆಕಟ್ಟು ಒಂದು ಪ್ರಾರಬ್ಧ' ಎನ್ನಲಾಗುತ್ತಿತ್ತು (ಮೈದೂರು ಅನಂತಾಚಾರ್). ಈ ಎರಡು ಸಂಗತಿಗಳ ಪಾಲಿಗೆ ಈಗ ಮೂರನೆಯ ಒಂದು ಸಂಗತಿಯನ್ನು ಸೇರಿಸಬೇಕಾಗಿದೆ. ಅದೇ ಬಳ್ಳಾರಿ ಜಿಲ್ಲೆಯಲ್ಲಿ ನಡೆದಿರುವ ಕಬ್ಬಿಣ ಮತ್ತು ಮ್ಯಾಂಗನೀಸು ಅದಿರಿನ ಗಣಿಗಾರಿಕೆ. ಅದು ಬಳ್ಳಾರಿ ಜಿಲ್ಲೆಗೆ ಬಡಿದಿರುವ ಅಭಿಶಾಪ. ಈ ಜಿಲ್ಲೆಯಲ್ಲಿ ಒಂದು ಪರಂಪರೆಯಾದರೆ, ಒಂದು ಪ್ರಾರಬ್ಧ ಮತ್ತು ಮತ್ತೊಂದು ಅಭಿಶಾಪ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ಜನಸಮುದಾಯಕ್ಕೆ ಹಂಪೆಯಿಂದಾಗಲಿ, ತುಂಗಭದ್ರ ಅಣೆಕಟ್ಟೆಯಿಂದಾಗಲಿ ಅಥವಾ ಗಣಿಗಾರಿಕೆಯಿಂದಾಗಲಿ ಯಾವುದೇ ಪ್ರಯೋಜನವಾಗುತ್ತಿಲ್ಲ. ಅವುಗಳಿಂದ ದಿನಗೂಲಿ ದುಡಿಮೆಗಾರರ ಹೊಟ್ಟೆ ತುಂಬುತ್ತಿಲ್ಲ. ಜನರಿಗೆ ಬರದಿಂದ, ಬಿಸಿಲ ಬೇಗೆಯಿಂದ, ಮುಕ್ತಿಯಿಲ್ಲವಾಗಿದೆ. ಜಿಲ್ಲೆಯಲ್ಲಿನ ಕಬ್ಬಿಣದ ಅದಿರು ನಿಕ್ಷೇಪದ ಗಣಿಗಾರಿಕೆಯು ಈಗ ನಡೆದಿರುವ ವೇಗದಲ್ಲಿ ಮುಂದುವರಿದರೆ ಅಲ್ಲಿ ಬರ ಅನ್ನುವುದು ಶಾಶ್ವತವಾದ ಶಾಪವಾಗುವ ಸಾಧ್ಯತೆಯಿದೆ.

ಈಗಿರುವ ಪ್ರಕೃತಿಯು ನೀಡುತ್ತಿರುವ ತಾಪಮಾನ ಸಾಕಾಗುವುದಿಲ್ಲವೆಂದು ಜಿಲ್ಲೆಯಲ್ಲಿ ಎರಡು ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲಾಗಿದೆ(1:ಬಳ್ಳಾರಿ ಶಾಖೋತ್ಪನ್ನ ಸ್ಥಾವರ ಮತ್ತು 2: ಜಿಂದಾಲ್ ಶಾಖೋತ್ಪನ್ನ ಸ್ಥಾವರ). ಅವು ಜಿಲ್ಲೆಯ ರೂಢಿಗತ ತಾಪಮಾನವನ್ನು ಉಲ್ಬಣಗೊಳಿಸುತ್ತಿವೆ. ಈಗಾಗಲೆ ಅಲ್ಲಿರುವುದು ಉರಿ ಬೇಸಿಗೆ. ಅದೀಗ ರಣಉರಿ ಬೇಸಿಗೆಯಾಗುತ್ತಿದೆ. ಗಣಿಕಾರಿಕೆಯಿಂದಾಗಿ ಜಿಲ್ಲೆಯಲ್ಲಿ ಗಗನ ಸದೃಶ ಪ್ರಮಾಣದಲ್ಲಿ ನಡೆದಿರುವ ಸರಕು ಸಾರಿಗೆ ವ್ಯವಸ್ಥೆಯ ವಿಸ್ತರಣೆ ಮತ್ತು ಅದರಿಂದ ಉಲ್ಬಣಗೊಳ್ಳುತ್ತಿರುವ CO_2ನ ಆಸ್ಫೋಟ ಜಿಲ್ಲೆಯಲ್ಲಿನ ತಾಪಮಾನದ ಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತಿದೆ. ಇದು ಯಾವ ಗಂಭೀರ ಸ್ವರೂಪವನ್ನು ತಳೆದಿದೆ ಎಂದರೆ ಇಲ್ಲಿ ದ್ಯುತಿಸಂಶ್ಲೇಷಣಾ ಕ್ರಿಯೆಯೆಂಬ ಕ್ರಿಯೆಯೇ ನಡೆಯುವುದು ದುರ್ಲಭವಾಗುತ್ತಿದೆ. ಮರ-ಗಿಡ, ಹೂವು-ಹಣ್ಣು, ಖಗ-ಮೃಗ, ಜಾನುವಾರುಗಳು, ಮೀನುಗಾರಿಕೆ ಯಾವುವು ಅಲ್ಲಿ ಉಳಿಯುವ ಸಾಧ್ಯತೆಯು ಕ್ಷೀಣಿಸುತ್ತಿದೆ. ಇನ್ನು ಅಲ್ಲಿ ಹುಲು ಮಾನವರು ಎಲ್ಲಿ – ಹೇಗೆ ಉಳಿದಾರು!

ಇಲ್ಲಿ ಸ್ಥಿತಿಯನ್ನು ಉತ್ಪ್ರೇಕ್ಷಿಸಲಾಗುತ್ತಿದೆಯೆಂದು ಭಾವಿಸಬೇಕಾಗಿಲ್ಲ. ಇದು ವಾಸ್ತವ ಮತ್ತು ಕಟು ಸತ್ಯ. ಸತ್ಯ ಯಾವಾಗಲೂ ಕಹಿಯಾಗಿರುತ್ತದೆ ಮತ್ತು ಅದು ಕಟುವಾಗಿರುತ್ತದೆ ಎಂಬುದನ್ನೂ ಹೇಳಬೇಕಾದ ಅಗತ್ಯವಿಲ್ಲ. ಎಲ್ಲವನ್ನು ಹಣದಿಂದಲೆ ಸಾಧಿಸಿಕೊಳ್ಳಬಲ್ಲೆ ಎಂಬ ದಾಷ್ಟ್ಯದಿಂದ ಮೆರೆಯುತ್ತಿರುವ ಜಿಲ್ಲೆಯ ರಾಜಕೀಯ ನಾಯಕತ್ವಕ್ಕೆ ಇದಾವುದು ಚಿಂತಿಸಬೇಕಾದ ಸಂಗತಿಯೇ ಅಲ್ಲ.

ಜಿಲ್ಲೆಯಿರುವುದೆ ತಮ್ಮ ಲೋಲುಪತೆಗೆಂದು, ಅಲ್ಲಿನ ಸಂಪನ್ಮೂಲವಿರುವುದೇ ತಮ್ಮ ಭೋಗಕ್ಕೆಂದು ರಾಜಕೀಯ ನಾಯಕತ್ವ, ಆಡಳಿತ ವರ್ಗ, ಉದ್ಯಮಿಗಳು ತಿಳಿದಿರುವಾಗ, ಪೈಪೋಟಿಯಲ್ಲಿ ಅಲ್ಲಿನ ಸಂಪನ್ಮೂಲದ ದರೋಡೆ ನಡೆದಿರುವಾಗ ಯಾರಲ್ಲಿ ನಾವು ನಮ್ಮ ಅಳಲನ್ನು, ದೂರುಗಳನ್ನು ಹೇಳಿಕೊಳ್ಳುವುದು!

ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದರೆ ನಿಲಲುಬಾರದು.
ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ
ನಾರಿ ತನ್ನ ಮನೆಯಲ್ಲಿ ಕಳುವಡೆ
ತಾಯ ಮೊಲೆವಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆ ಕೂಡಲಸಂಗಮದೇವ (ಬಸವಣ್ಣ)

ಈ ಸ್ಥಿತಿ ಜಿಲ್ಲೆಯಲ್ಲಿದೆ. ದಾರಿ ತೋರಿಸಬೇಕಾದವರೇ ಕುಣಿ ತೋಡುತ್ತಿರುವಾಗ, ದರಿಯ ಕಡೆಗೆ ಕೊಂಡೊಯ್ಯುತ್ತಿರುವಾಗ ಅಲ್ಲಿ ಮಾಗದರ್ಶನವನ್ನು ಯಾರಿಂದ ಅಪೇಕ್ಷಿಸುವುದು? ಈ ಜಿಲ್ಲೆಯಲ್ಲಿ ಮರ-ಗಿಡಗಳಿರಲಿ, ಹೊಲ-ಗದ್ದೆಗಳಿರಲಿ ಗುಡ್ಡ-ಬೆಟ್ಟಗಳನ್ನು ಬಿಡದಂತೆ 'ಸಮ'ಮಾಡಲಾಗುತ್ತಿದೆ. ಗಣಿಗಾರಿಕೆಯೆಂಬ ರಾಕ್ಷಸ ಸ್ವರೂಪಿ ದಂದೆಗೆ ಒಂದಿಷ್ಟು ಕರುಣೆಯಿಲ್ಲದಾಗಿದೆ. ಇದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲದೆ ಎಂಬುದೆ ದೊಡ್ಡ ಪ್ರಶ್ನೆ. ಇಲ್ಲಿ ಲೂಟಿಗೆ-ದರೋಡೆಗೆ ಇತಿಮಿತಿಯೆಂಬುದೆ ಇಲ್ಲವಾಗಿದೆ. ಈ ಲೂಟಿಯಲ್ಲಿ, ದರೋಡೆಯಲ್ಲಿ, ಪ್ರಕೃತಿಯ ಮೇಲಿನ ದೌರ್ಜನ್ಯದಲ್ಲಿ, ಪ್ರಾಕೃತಿಕ ಸಂಪನ್ಮೂಲದ ಮೇಲಿನ ಆಕ್ರಮಣದಲ್ಲಿ 'ಉಂಡೋರೇ ಜಾಣರು' ಎಂಬ ಸ್ಥಿತಿ ನಿರ್ಮಾಣವಾಗಿಬಿಟ್ಟಿದೆ.

ಕರ್ನಾಟಕದ ಗಣಿಗಾರಿಕೆ ಬಗೆಗಿನ ಲೋಕಾಯುಕ್ತ ವರದಿಯಲ್ಲಿ ಇನ್ನಿಲ್ಲದಂತೆ ಸಕಲರೂ

ಕಾನೂನನ್ನು ಉಲ್ಲಂಘಿಸಿಯೇ ಜಿಲ್ಲೆಯ ಅಮೂಲ್ಯವಾದ ಪ್ರಾಕೃತಿಕ ಸಂಪನ್ಮೂಲವನ್ನು ಲೂಟಿ-ದರೋಡೆ ಮಾಡುತ್ತಿದ್ದಾರೆಂಬುದನ್ನು ಎಳೆ ಎಳೆ ಯಾಗಿ ಬಿಚ್ಚಿಟ್ಟಿದ್ದಾರೆ. ಇಷ್ಟಾದರೂ ಇಲ್ಲಿ ಯಾರೂ ಇದು ವರೆವಿಗೂ ಕಣ್ಣು ಬಿಟ್ಟಿಲ್ಲ. ಬಿಡೋದರ ಬಗ್ಗೆಯೂ ಅನು ಮಾನವಿದೆ!

ಬಳ್ಳಾರಿ ಜಿಲ್ಲೆಯನ್ನು ಸಾಮಾನ್ಯವಾಗಿ ಹಿಂದುಳಿದಿದೆಯೆಂದು ತಿಳಿಯಲಾಗುತ್ತದೆ. ಇದು ಸರಿಯಿರಬಹುದು. ಆದರೆ 2006-07ರಲ್ಲಿ ಜಿಲ್ಲೆಯ ತಲಾ ಅಂತರಿಕ ಉತ್ಪನ್ನ ರೂ50,000 ದಾಟಿದೆ. (ರಾಜ್ಯದ ಸರಾಸರಿ ತಲಾ ವರಮಾನ ಕೇವಲ ರೂ 35459. ಆರ್ಥಿಕ ಸಮೀಕ್ಷೆ : 2007-08) ತಲಾ ಆದಾಯದಲ್ಲಿ ಅದು ರಾಜ್ಯದಲ್ಲಿ ಮೂರನೆಯ ಸ್ಥಾನದಲ್ಲಿದೆ. ಜಿಲ್ಲೆಯಲ್ಲಿ ಕಳೆದ ಹತ್ತು ವರ್ಷಗಳಿಂದ ಸರಿಸುಮಾರು ಒಂದು ಲಕ್ಷ ಕೋಟಿಯಷ್ಟು ವರಮಾನ ಗಣಿ ಉದ್ದಿಮೆಗಾರರ ತಿಜೋರಿ ತುಂಬಿದೆಯೆಂಬ ಅಂದಾಜಿದೆ. ಈ ವರಮಾನದಲ್ಲಿ ಶೇಕಡ 5 ರಷ್ಟು ಸರ್ಕಾರಕ್ಕೆ, ಸಮಾಜಕ್ಕೆ ದೊರೆತಿಲ್ಲ. ಆದ್ದರಿಂದಲೇ ಇದನ್ನು ದರೋಡೆಯೆಂದು ಕರೆಯುತ್ತಿರುವುದು. ಈ ಹಿನ್ನೆಲೆಯಲ್ಲಿ ಜಿಲ್ಲೆಯನ್ನು ಹಿಂದುಳಿದಿದೆಯೆಂದು ಕರೆಯುವುದು ಹೇಗೆ?

ಇದು ಮುಖ್ಯವಾದ ಪ್ರಶ್ನೆ. ಸಾಕ್ಷರತೆ, ಶಿಕ್ಷಣ, ಜೀವನಾಯುಷ್ಯ(ಆರೋಗ್ಯ) ಮತ್ತು ತಲಾ ವರಮಾನಗಳನ್ನು ಒಳಗೊಂಡಿರುವ ಅಭಿವೃದ್ಧಿಯ ಸಂಯುಕ್ತ ಮಾಪನವಾದ 'ಮಾನವ ಅಭಿವೃದ್ಧಿ ಸೂಚ್ಯಂಕ'ದಲ್ಲಿ ಜಿಲ್ಲೆಯು ರಾಜ್ಯದಲ್ಲಿ ಹದಿನೆಂಟನೆಯ ಸ್ಥಾನದಲ್ಲಿದೆ('ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ-2005'). ಈ ದೃಷ್ಟಿಯಿಂದ ಅದು ಮುಂದುವರಿದ ಜಿಲ್ಲೆಯೇನಲ್ಲ. ಈಗ ನಡೆದಿರುವ ಮುಕ್ತ ಮತ್ತು ನಗ್ನ ಗಣಿಗಾರಿಕೆಯಿಂದಾಗಿ ಅಲ್ಲಿ ಜನರ ಬದುಕು ನರಕ ಸದೃಶವಾಗುತ್ತಿದೆ. ಆದರೆ ಅಲ್ಲಿ ಹಾಲಿನ ಹಳ್ಳ ಮತ್ತು ಜೇನಿನ ಹೊಳೆಹರಿಯುತ್ತಿದೆಯೆಂಬ ಭ್ರಮೆಯನ್ನು ಉಂಟು ಮಾಡಲಾಗುತ್ತಿದೆ. ಗಣಿ ದಣಿಗಳು ತಾವು ಗಣಿಗಾರಿಕೆ ಮೂಲಕ ದೇಶ ವನ್ನು ಉದ್ಧಾರಮಾಡುತ್ತಿರುವುದಾಗಿ ಬೊಬ್ಬೆ ಹೊಡೆದುಕೊಳ್ಳುತ್ತಿದ್ದಾರೆ. ರಾಷ್ಟ್ರೀಯಗ್ರಾಮೀಣ ಆರೋಗ್ಯ ಸಮೀಕ್ಷೆಯ ಮೂರನೆಯ ಸುತ್ತಿನ ವರದಿಯಲ್ಲಿ ಸ್ಪಷ್ಟವಾಗಿರುವಂತೆ ಜಿಲ್ಲೆಯಲ್ಲಿ ರಕ್ತಹೀನತೆಯಿಂದ ನರಳುತ್ತಿರುವ ಮಹಿಳೆಯರ ಪ್ರಮಾಣ ಅಧಿಕವಾಗುತ್ತಿದೆ. ಜಿಲ್ಲೆಯಲ್ಲಿನ ಐದು ವರ್ಷಕ್ಕಿಂತಕಡಿಮೆ ವಯೋಮಾನದ ಮಕ್ಕಳ ಮರಣ ಪ್ರಮಾಣ 116. ಇದು ಯಾವ ಮಾನದಂಡದಿಂದ ನೋಡಿದರೂ ಅಪಾಯಕಾರಿ ಮಟ್ಟವಾಗಿದೆ. ಗಣಿಗಾರಿಕೆಯ ಆಸ್ಫೋಟಕಾರಿ ಬೆಳವಣಿಗೆ ಅರಂಭವಾದ ಮೇಲೆ ಉಂಟಾಗಿರುವ ದುಸ್ಥಿತಿ ಇದಾಗಿದೆ. ಇಲ್ಲಿ ಏರಿಕೆಯಾದ ವರಮಾನವು ಜನರ ಬದುಕಾಗಿ ಪರಿವರ್ತನೆಯಾಗುತ್ತಿಲ್ಲ. ಅದು ಉಳ್ಳವರ ತಿಜೋರಿಯಲ್ಲಿ ಮಡುಗಟ್ಟಿಕೊಂಡಿದೆ. ಜನರ ಮೂಗಿಗೆ ಕೇವಲ ತುಪ್ಪವನ್ನು ಬಳಿಯಲಾಗುತ್ತದೆ.ಬಾಳೆಯ ಹಣ್ಣಿನ ಭಾಗದಣಿಗಳದಾದರೆ ಸಿಪ್ಪೆಯು ಅಲ್ಲಿನ ದುಡಿಯುವ ಮಹಿಳೆಯರ ಮತ್ತು ಪುರುಷರ ಪಾಲಾಗುತ್ತಿದೆ.

ಇದಕ್ಕೆ ಪರಿಹಾರವೇನು?

ಕರ್ನಾಟಕ ರಾಜ್ಯದ ಲೋಕಾಯುಕ್ತರು ಗಣಿಗಾರಿಕೆ ಕುರಿತಂತೆ ಸಿದ್ಧಪಡಿಸಿರುವ ವರದಿಯಲ್ಲಿ ಶಿಫಾರಸ್ಸು ಮಾಡಿರುವಂತೆ ಮೊದಲನೆಯದಾಗಿ ಜಿಲ್ಲೆಯಲ್ಲಿನ ಕಬ್ಬಿಣದ ಅದಿರಿನ ರಫ್ತುವನ್ನು ತಕ್ಷಣ ನಿಲ್ಲಿಸಲು ಅಗತ್ಯವಾದ ಕ್ರಮ ತೆಗೆದುಕೊಳ್ಳುವಂತೆ ಸರ್ಕಾರದ ಮೇಲೆ ಒತ್ತಡ ತರಬೇಕು.ಅದಕ್ಕಾಗಿ ನಾವು ಹೋರಾಟ ಮಾಡಬೇಕು: ಕಬ್ಬಿಣದ ಅದಿರನ್ನು ಸ್ಥಳೀಯವಾಗಿ ಮಾತ್ರ ಉಪಯೋಗಿಸಬೇಕು. ಆಗ ಇಲ್ಲಿ ಉದ್ಯೋಗದ ಅವಕಾಶಗಳು ವಿಸ್ತರಣೆಗೊಳ್ಳುವ ಸಾಧ್ಯತೆಯಿದೆ.

ಬಳ್ಳಾರಿ ಜಿಲ್ಲೆಯನ್ನು ಸಾಮಾನ್ಯವಾಗಿ ಹಿಂದುಳಿದಿದೆಯೆಂದು ತಿಳಿಯಲಾಗುತ್ತದೆ. ಇದು ಸರಿಯಿರಬಹುದು. ಆದರೆ 2006 -07ರಲ್ಲಿ ಜಿಲ್ಲೆಯ ತಲಾ ಅಂತರಿಕ ಉತ್ಪನ್ನ ರೂ50,000 ದಾಟಿದೆ. (ರಾಜ್ಯದ ಸರಾಸರಿ ತಲಾ ವರಮಾನ ಕೇವಲ ರೂ 35459. ಆರ್ಥಿಕ ಸಮೀಕ್ಷೆ : 2007 -08) ತಲಾ ಆದಾಯದಲ್ಲಿ ಅದು ರಾಜ್ಯದಲ್ಲಿ ಮೂರನೆಯ ಸ್ಥಾನದಲ್ಲಿದೆ. ಜಿಲ್ಲೆಯಲ್ಲಿ ಕಳೆದ ಹತ್ತು ವರ್ಷಗಳಿಂದ ಸರಿಸುಮಾರು ಒಂದು ಲಕ್ಷ ಕೋಟಿಯಷ್ಟು ವರಮಾನ ಗಣಿ ಉದ್ದಿಮೆಗಾರರ ತಿಜೋರಿ ತುಂಬಿದೆಯೆಂಬ ಅಂದಾಜಿದೆ. ಈ ವರಮಾನದಲ್ಲಿ ಶೇಕಡ 5 ರಷ್ಟು ಸರ್ಕಾರಕ್ಕೆ, ಸಮಾಜಕ್ಕೆ ದೊರೆತಿಲ್ಲ. ಆದ್ದರಿಂದಲೇ ಇದನ್ನು ದರೋಡೆಯೆಂದು ಕರೆಯುತ್ತಿರುವುದು. ಈ ಹಿನ್ನೆಲೆಯಲ್ಲಿ ಜಿಲ್ಲೆಯನ್ನು ಹಿಂದುಳಿದಿದೆಯೆಂದು ಕರೆಯುವುದು ಹೇಗೆ?

ಎರಡನೆಯದಾಗಿ ಈಗ ನಡೆದಿರುವ ಗಣಿಗಾರಿಕೆಯ ಎಲ್ಲ ಅನಾಹುತಗಳಿಗೂ ಕಾರಣ ಖಾಸಗಿ ಗಣಿಗಾರಿಕೆ. ಅದನ್ನು ಮೊದಲು ನಿಲ್ಲಿಸಬೇಕು-ನಿಷೇಧಿಸಬೇಕು. ಲೋಕಾಯುಕ್ತರ ಗಣಿಗಾರಿಕೆ ಕುರಿತ ವರದಿಯಲ್ಲಿ ಖಾಸಗಿ ಗಣಿಗಾರಿಕೆ ಕಂಪನಿಗಳು ಮಾಡುತ್ತಿರುವ ಎಲ್ಲ ದಂದೆಗಳೂ ಕಾನೂನಿನ ಉಲ್ಲಂಘನೆಯೆಂದು ತಿಳಿಸಿದ್ದಾರೆ. ಕಾನೂನಿನ ಉಲ್ಲಂಘನೆಯೇ ಅಲ್ಲಿ ನಿಯಮವಾಗಿ ಅದರ ಅನುಸರಣೆ ಅಪವಾದವಾಗಿ ಬಿಟ್ಟಿದೆ. ಕಾನೂನಿನ ಉಲ್ಲಂಘನೆಯೇ ಖಾಸಗಿ ಕಂಪನೆಗಳ ಪರಮ ಕಾಯಕವಾಗಿ ಬಿಟ್ಟಿದೆ. ಅವುಗಳಿಗೆ ಯಾವುದೇ ಸಾಮಾಜಿಕವಾದ ಜವಾಬುದಾರಿ ಇದ್ದಂತೆ ಕಾಣುವುದಿಲ್ಲ. ಅವುಗಳನ್ನು ಖಾಸಗಿ ಕಂಪನಿಗಳೆನ್ನುವುದಕ್ಕೆ ಪ್ರತಿಯಾಗಿ 'ಪ್ರಿಡೇಟರು'ಗಳೆಂದು (predators)ಕರೆಯಬಹುದಾಗಿದೆ. ಆದ್ದರಿಂದ ನಾವು ಖಾಸಗಿ ಕಂಪನಿಗಳ ಗಣಿಗಾರಿಕೆ ದಂದೆಯನ್ನು ನಿಲ್ಲಿಸುವಂತೆ ಒತ್ತಾಯ ಮಾಡಬೇಕಾಗಿದೆ.

ಸರ್ಕಾರವು ಖಾಸಗಿ ಕಂಪನಿಗಳು ಕ್ರಮಬದ್ಧವಾಗಿ ಗಣಿಗಾರಿಕೆಯನ್ನು ನಡೆಸಿಕೊಂಡು ಹೋಗುವಂತೆ ಮಾಡುವುದು ಕಷ್ಟ ಸಾಧ್ಯ. ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿರುವ ಕೈಬೆರಳುಗಳಲ್ಲಿ ಎಣಿಸುವಷ್ಟು ಸಿಬ್ಬಂದಿ ಗಣಿದಣಿಗಳನ್ನು ಎದುರಾಕಿಕೊಳ್ಳು ವುದು ಸಾಧ್ಯವೆ?. ಅವರ ದಂದೆಯನ್ನು ತಡೆಯುವುದು ಸಾಧ್ಯವೇ?. ಅಲ್ಲೀಗ ನಮಗಿರುವ ಮಾರ್ಗವೆಂದರೆ ಖಾಸಗಿ ಗಣಿಗಾರಿಕೆಯನ್ನು ನಿಷೇಧಿಸುವುದು. ಸರ್ಕಾರವು ಸಾರ್ವಜನಿಕ ವಲಯದಲ್ಲಿ ಗಣಿಗಾರಿಕೆಯನ್ನು ನಡೆಸಲಿ. ಮುಕ್ತ ಮಾರುಕಟ್ಟೆ ಮತ್ತು ಖಾಸಗೀಕರಣಗಳಿಂದ ಏನೆಲ್ಲ ಅನಾಹುತ ನಡೆಯುತ್ತಿದೆಯೆಂಬುದು ಜಾಗತಿಕವಾಗಿ ಇಂದು ಜಗಜ್ಜಾಹೀರಾಗಿದೆ. ಸಾರ್ವಜನಿಕ ವಲಯದ ಪಾತ್ರದ ಬಗ್ಗೆ ಮತ್ತೆ ಒಲವು ಮೂಡುತ್ತಿದೆ. ಅದನ್ನು ನಾವು ಅಳವಡಿಸಿಕೊಳ್ಳುವ ಅಗತ್ಯವಿದೆ.

ಆಗ ಮಾತ್ರ ಸುಸ್ಥಿರಗತಿ ಕ್ರಮದಲ್ಲಿ ಗಣಿಗಾರಿಕೆಯನ್ನು ನಡೆಸುವುದು ಸಾಧ್ಯವಾಗುತ್ತದೆ. ಆಗ ಮಾತ್ರ 'ಜನರನ್ನು ಒಳಗೊಳ್ಳುವ' ಮತ್ತು 'ಸಮೃದ್ಧವಾದ' ಅಭಿವೃದ್ಧಿ ಸಾಧ್ಯ. ಇದು ಸುಲಭದ ಸಂಗತಿಯಲ್ಲ. ಸರ್ಕಾರನ್ನು ಸೇರಿಸಿಕೊಂಡು ಎಲ್ಲರೂ ಸದ್ಯದ ಅಗತ್ಯಗಳಿಗೆ ಹಾತೊರೆಯುವವರಾಗಿದ್ದಾರೆ. ನಾಳೆಯ ಬಗ್ಗೆ ಚಿಂತಿಸುವವರು ಬಹಳ ಕಡಿಮೆ. ಅದರ ಬಗ್ಗೆ ಚಿಂತಿಸಬೇಕಾದ ಜವಾಬುದಾರಿ ಸ್ಥಾನದಲ್ಲಿರುವವರಿಗೆ ಅದರ ಬಗ್ಗೆ ಕಾಳಜಿಯಿಲ್ಲ. ತಲೆಮಾರು-ತಲೆಮಾರುಗಳ ನಡುವಿನ ಅಸಮಾನತೆಯನ್ನು ನಿವಾರಿಸುವುದು ಸರ್ಕಾರಕ್ಕೆ ಆದ್ಯತೆಯ ಸಂಗತಿಯಾಗಿಲ್ಲ. ಈ ಸಮಾನತೆಯೆಂಬ ಮೌಲ್ಯವು ಆದ್ಯತೆಯ ಸಂಗತಿಯಾಗ ಬೇಕಾದರೆ ಅಲ್ಲಿ ರಾಜಕೀಯ ಮುತ್ಸದ್ದಿತನ ಬೇಕು. ಆದರೆ ಇಂದು ನಮ್ಮಲ್ಲಿ ರುವವರು ಕೇವಲ ರಾಜಕೀಯ ಪುಡಾರಿಗಳೇ ವಿನಾ ರಾಜಕೀಯ ಮುತ್ಸದ್ದಿಗಳಲ್ಲ. ಮುಂದಿನ ಚುನಾವಣೆಯೆ ನಮ್ಮ ರಾಜಕೀಯ ದುರೀಣರ ಗುರಿಯಾಗಿರುವಾಗ ಮುಂದಿನ ತಲೆಮಾರಿನ ಬಗ್ಗೆ ಯಾರು ಯೋಚಿಸಬೇಕು?

ವಿಜಯನಗರವನ್ನು ನುಂಗಿಕೊಂಡ ಜೆಎಸ್‌ಡಬ್ಲ್ಯು

ತೋರಣಗಲ್ಲಿನಲ್ಲಿ ಆರಂಭವಾದ ಉಕ್ಕು ಮತ್ತು ಕಬ್ಬಿಣ ಉದ್ದಿಮೆಯ ಹೆಸರು ಶುರುವಿನಲ್ಲಿ ಜಿಂದಾಲ್ ವಿಜಯನಗರ ಸ್ಟೀಲ್ ಲಿಮಿಟೆಡ್ ಎಂದಿತ್ತು (ಜೆವಿಎಸ್ಎಲ್). ವಾಸ್ತವಾಗಿ 1970-80ರ ದಶಕದಲ್ಲಿ ರಾಜ್ಯದ ತೋರಣಗಲ್ಲಿನಲ್ಲಿ ಒಂದು ಉಕ್ಕು ಕಾರ್ಖಾನೆಯನ್ನು ಸಾರ್ವಜನಿಕ ವಲಯದಲ್ಲಿ ಸ್ಥಾಪಿಸಬೇಕೆಂದು ಚಳುವಳಿ ನಡೆಸಲಾಗಿತ್ತು. 'ವಿಜಯನಗರ ಉಕ್ಕು : ಕರ್ನಾಟಕದ ಹಕ್ಕು' ಎಂಬುದು ಅಂದಿನ ಜನಪ್ರಿಯ ಘೋಷಣೆಯಾಗಿತ್ತು. ಸಾರ್ವಜನಿಕ ವಲಯದಲ್ಲಿ ಕೇಂದ್ರ ಸರ್ಕಾರವು ಅಂದು ಸ್ಥಾಪಿಸಲು ಆಯೋಜಿಸಿದ್ದ ಮೂರು ಉಕ್ಕು ಕಾರ್ಖಾನೆಗಳ ಪೈಕಿ ಇದು ಒಂದಾಗಿತ್ತು. ಉಳಿದ ಎರಡರಲ್ಲಿ ಮೊದಲನೆಯದು ಸೇಲಂ(ತಮಿಳುನಾಡು) ಮತ್ತು ಎರಡನೆಯದು ವಿಶಾಖಪಟ್ಟಣಂ(ಆಂಧ್ರಪ್ರದೇಶ). ಕರ್ನಾಟಕವನ್ನು ಬಿಟ್ಟು ಉಳಿದೆರಡು ರಾಜ್ಯಗಳಲ್ಲಿ ಅಲ್ಲಿನ ರಾಜಕೀಯ ಒತ್ತಾಸೆಯಿಂದಾಗಿ ಕಾರ್ಖಾನೆಗಳು 1970ರ ದಶಕದಲ್ಲಿ ಆರಂಭವಾದವು. ಆದರೆ ಕರ್ನಾಟಕದ ವಿಜಯನಗರ ಸ್ಟೀಲ್ ಉದ್ದಿಮೆ ನೆನೆಗುದಿಗೆ ಬಿದ್ದುಬಿಟ್ಟಿತು. ಅದು 80ರ ದಶಕದಲ್ಲೂ ಸಾಧ್ಯವಾಗಲಿಲ್ಲ. ಮುಂದೆ 90ರ ದಶಕದಲ್ಲಿ ಸಾರ್ವಜನಿಕ ವಲಯವೇ ತನ್ನ ಪ್ರಸ್ತುತತೆಯನ್ನು-ಸೈದ್ಧಾಂತಿಕ ನೆಲೆಯನ್ನು ಕಳೆದುಕೊಂಡು ಬಿಟ್ಟಿತ್ತು. ಈ ಹಿನ್ನೆಲೆಯಲ್ಲಿ ಖಾಸಗಿ ವಲಯದ ಜಿಂದಾಲ್ ಉಕ್ಕು ಕಾರ್ಖಾನೆಯ ಉಗಮವನ್ನು ನೋಡಬೇಕು.

ಜಿಂದಾಲ್ ವಿಜಯನಗರ ಸ್ಟೀಲ್ ಲಿಮಿಟೆಡ್ (ಜೆವಿಎಸ್ಎಲ್) ಎಂಬ ಹೆಸರಿನಲ್ಲಿ ಆರಂಭವಾದ ಉದ್ದಿಮೆಯು ಮುಂದೆ ಅದರ ಮಾಲಿಕರು ತಮ್ಮಷ್ಟಕ್ಕೆ ತಾವು ಅದರ ಹೆಸರನ್ನು ಬದಲಾಯಿಸಿಬಿಟ್ಟರು. ಈಗ ಅದನ್ನು ಜಿಂದಾಲ್ ಸ್ಟಿಲ್ ವರ್ಕ್ಸ್(ಜೆಎಸ್‌ಡಬ್ಲ್ಯು) ಎಂದು ಕರೆಯಲಾಗುತ್ತದೆ. ಈ ಬದಲಾವಣೆಯಲ್ಲಿ ಕಾರ್ಖಾನೆಯ ಶೀರ್ಷಿಕೆಯಲ್ಲಿದ್ದ 'ವಿಜಯನಗರ'ವನ್ನು ಕೈಬಿಡಲಾಗಿದೆ. ಇದು ಕರ್ನಾಟಕಸ್ಥರಿಗೆ ಮಾಡಿದ ದ್ರೋಹವಾಗಿದೆ. ಕರ್ನಾಟಕದ

...ಂದು ಸಂಸ್ಕೃತಿ ಸಂಕೇತವಾಗಿರುವ ವಿಜಯನಗರವನ್ನು ಕೈಬಿಟ್ಟು ನಮ್ಮ ಸಂಸ್ಕೃತಿಗೆ ಅದು ಅವಮಾನ ಮಾಡಿದೆ. ಆದರೆ ಇವರು ಆರಂಭಿಸಿರುವ ಸಮಾಜ ಸೇವೆ ಮಾಡುವ ಸಂಸ್ಥೆಯೊಂದು ಯಾವಾಗಲೂ ಸಂಸ್ಕೃತಿ ಬಗ್ಗೆ ಮಾತನಾಡುತ್ತಿರುತ್ತದೆ. ಇವರು ಸಮಾಜ ಸೇವೆಗಾಗಿ ಆರಂಭಿಸಿರುವ ಸಂಸ್ಥೆಯ ನಿಜವಾದ ಉದ್ದೇಶವೆಂದರೆ ಅವರ ಉದ್ದಿಮೆಯು ನಡೆಸುತ್ತಿರುವ ಅನ್ಯಾಯ, ಮೋಸ, ಶೋಷಣೆಗಳನ್ನು ಮುಚ್ಚಿಟ್ಟುಕೊಳ್ಳಲು ಮಾಡಿರುವ ಒಂದು ತಂತ್ರವಾಗಿದೆ-ಮುಖವಾಡವಾಗಿದೆ.

ಈ ಸಂಸ್ಥೆಯು ಎಂತಹ ಕೆಲಸ ಮಾಡುತ್ತಿದೆ? ಅದಯ ದೇವಾಲಯಗಳ ಜೀರ್ಣೋದ್ಧಾರ ಕಾರ್ಯವನ್ನು ಕೈಗೊಂಡಿದೆ. ಈ ಬಗೆಯ ಕೆಲಸಗಳನ್ನು ಮಾಡುವುದರ ಮೂಲಕ ಅದು ಜನರ ಅಭಿಮಾನವನ್ನು ಗೆಲ್ಲಲು ಪ್ರಯತ್ನಿಸುತ್ತಿದೆ. ಹಾಗೆ ನೋಡಿದರೆ ಎಲ್ಲ ಉದ್ದಿಮೆಗಾರರು ಮಾಡುವ ಸಮಾಜ ಸೇವೆಯ ಹಿಂದೆ ಇಂತಹ ಸ್ವಾರ್ಥವಿರುತ್ತದೆ. ತನ್ನೊಳಗಿನ ಹುಳುಕುಗಳನ್ನು ಮುಚ್ಚಿಕೊಳ್ಳಲು ಅದು ನಡೆಸುವ ಒಂದು ಹುನ್ನಾರ ಇದಾಗಿದೆ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ನಮ್ಮ ಪ್ರಕೃತಿ ಸಂಪತ್ತಿನ ಮೇಲೆ,ಜನರ ಬದುಕಿನ ಮೇಲೆ ಅದು ನಡೆಸಿರುವ ಆಕ್ರಮಣಕ್ಕೆ ಯಾವುದೇ ಕ್ಷಮೆಯಿಲ್ಲವಾಗಿದೆ. ಪ್ರಕೃತಿ ಜೊತೆಗೆ ಸಮತೋಲನವನ್ನು ಕಾಪಾಡಿಕೊಂಡು ಉದ್ದಿಮೆ ನಡೆಸುವ ಸಾಮರ್ಥ್ಯ ಅದಕ್ಕಿಲ್ಲ.

ಈ ಕಂಪನಿಯು ತೋರಣಗಲ್ಲಿನ ಹತ್ತಿರವಿರುವ ಗುಡ್ಡಗಳನೆಲ್ಲ ತಿಂದು ಹಾಕುತ್ತಿದೆ. ಕಬ್ಬಿಣದ ಅದಿರಿಲ್ಲದ ಬರೀ ಬೋಳು ಗುಡ್ಡಗಳನ್ನು ಅದು ನೆಲಸಮ ಮಾಡುತ್ತಿವೆ. ಗುಡ್ಡಗಳನ್ನು ಹೀಗೆ ಸಮ ಮಾಡಲು ಇದಕ್ಕೆ ಅನುಮತಿ ಕೊಟ್ಟವರಾರು? ಹೀಗೆ ಸಮ ಮಾಡುವುದರಿಂದ ವಾತಾವರಣದ ಮೇಲೆ, ಭೌಗೋಳಿಕ ಸ್ಥಿತಿ ಮೇಲೆ, ಹವಾಮಾನದ ಮೇಲೆ. ಅಂತರ್ಜಲದ ಮೇಲೆ,ಅಲ್ಲಿನ ಜಾನುವಾರುಗಳ ಮೇಲೆ ಉಂಟಾಗುವ ಪರಿಣಾಮವೇನು? ಇದಾವುದನ್ನು ಪರಿಗಣಿಸದೆ ಸರ್ಕಾರವು ಈ ಕಂಪನಿಗೆ ಕಣ್ಣು ಮುಚ್ಚಿಕೊಂಡು ಜಮೀನನ್ನು ಮುಂಜೂರು ಮಾಡುತ್ತಿದೆ.

ಈ ಕಂಪನಿಯು ತನ್ನದೇ ಆದ ಶಾಖೋತ್ಪನ್ನ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಿಕೊಂಡಿದೆ. ಈ ಸ್ಥಾವರದಿಂದ ಅದು ವಿದ್ಯುತ್ತನ್ನು ಸರ್ಕಾರಕ್ಕೆ ಮಾರುತ್ತಿದೆ. ಅದು ಜಿಲ್ಲೆಯಲ್ಲಿ ತಾಪಮಾನವನ್ನು ಹೆಚ್ಚಿಸುವ ಕೆಲಸ ಮಾಡುತ್ತಿದೆ. ಅದರಿಂದ ಹೊರಬಹುವ ಭೂದಿಯನ್ನು(ಫ್ಲೈಆಶ್) ವಿಲೇವಾರಿ ಮಾಡುವ ಬಗ್ಗೆ ಯಾವ ಕ್ರಮಗಳನ್ನು ಕೈಗೊಂಡಿದೆ ಎಂಬುದು ಯಾರಿಗೂ ತಿಳಿದಿಲ್ಲ. ಪ್ರಕೃತಿಯನ್ನು ನಾಶ ಮಾಡುವ ದಿಶೆಯಲ್ಲಿ ಅದರ ಕಾಣಿಕೆಯು ಅಪಾರವಾದುದಾಗಿದೆ. ಜೆಎಸ್‌ಡಬ್ಲ್ಯು ಎಂಬುದು ಒಂದು ಕಂಪನಿ. ಅದರೆ ಈ ಮೂಲ ಕಂಪನಿಯ ಆವರಣದೊಳಗೆ ಅದು ಹತ್ತಾರು ಕಂಪನಿಗಳನ್ನು ಅದು ನಡೆಸುತ್ತಿದೆ. ಅದರೊಳಗೆ ಅದು ಹತ್ತಾರು ಕಂಪನಿಗಳನ್ನು ಸ್ಥಾಪಿಸಿಕೊಂಡು ಸರ್ಕಾರಕ್ಕೆ ಮತ್ತು ಜನರಿಗೆ ಮೋಸ ಮಾಡುತ್ತಿದೆ. ತೆರಿಗೆಗಳ್ಳತನಕ್ಕೆ ಅದು ದಾರಿ ಮಾಡಿಕೊಂಡಿದೆ.

ಗಣಿ ಕಂಪನಿಗಳು ಮಾಡುವ ಸರ್ಕಾರಿ ಜಮೀನು ಒತ್ತುವರಿ!

ಗಣಿ ಕಂಪನಿಗಳು ಸರ್ಕಾರಿ ಜಮೀನನ್ನು,ಅರಣ್ಯ ಜಮೀನನ್ನು ಕಾನೂನು ಉಲ್ಲಂಘಿಸಿ ಒತ್ತುವರಿ ಮಾಡಿಕೊಳ್ಳುತ್ತಿವೆ. ಇದನ್ನು ಲೋಕಾಯುಕ್ತರು ತಮ್ಮ ಗಣಿಗಾರಿಕೆ ಕುರಿತ ವರದಿಯಲ್ಲಿ ಸ್ಪಷ್ಟವಾಗಿ ಗುರುತಿಸಿದ್ದಾರೆ. ಅವರು ತಮ್ಮ ವರದಿಯಲ್ಲಿ ಕಾನೂನನ್ನು ಯಾವ ಸಂಕೋಚವೂ ಇಲ್ಲದೆ ಗಣಿ ಕಂಪನಿಗಳು ಮುರಿಯುತ್ತಿವೆ. ಸಂಡೂರು ತಾಲ್ಲೂಕಿನ ಅರಣ್ಯ ಸಂಪತ್ತನ್ನು ಹಾಳು ಮಾಡುತ್ತಿವೆಯೆಂದು ವರದಿಯಲ್ಲಿ ತಿಳಿಸಿದೆ. ಸಂಡೂರು ನಗರದಲ್ಲಿನ ಜನರ ಜೀವನವು ಈಗ ನರಕ ಸದೃಶವಾಗುತ್ತಿದೆ.

ಎಲ್ಲಕ್ಕಿಂತ ಮುಖ್ಯವಾದ ಅಪಾಯವೆಂದರೆ ಸಣ್ಣಪುಟ್ಟ ರೈತರ ಜಮೀನನ್ನು ಇವು ಒತ್ತುವರಿ ಮಾಡಿಕೊಂಡು ಈ ಕಂಪನಿಗಳು ಜನರನ್ನು ಬೆದರಿಸಿ,ಅವರಿಗೆ ಅಲ್ಪಸ್ವಲ್ಪ ಹಣ ನೀಡಿ ಮುಗ್ಧ ಜನರಿಗೆ ಮೋಸ ಮಾಡುತ್ತಿವೆ. ಈ ಕಾರ್ಯದಲ್ಲಿ ಅಧಿಕಾರಿಗಳು, ಪೊಲೀಸರು ಶಾಮೀಲಾಗಿದ್ದಾರೆ. ಇದರಿಂದ ಗಣಿದಣಿಗಳ ವಿರುದ್ಧ ಯಾರೂ ಮಾತನಾಡುವುದೆ ಅಸಾಧ್ಯವಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಕಳೆದ 15-20ವರ್ಷಗಳಲ್ಲಿ ಅಪಾರ ಪ್ರಮಾಣದಲ್ಲಿ ಗಣಿಗಾರಿಕೆ ಮೇಲೆ, ಉದ್ದಿಮೆ ಮೇಲೆ ಬಂಡವಾಳ ವಿನಿಯೋಜನೆ ನಡೆದಿದೆ. ಗಣಿಗಾರಿಕೆಯಿಂದಾಗಿ ಜಿಲ್ಲೆಯ ವರಮಾನವು ಆಸ್ಫೋಟಕಾರಿಯಾಗಿ ಏರಿಕೆಯಾಗಿದೆ. ಈಗಾಗಲೆ ತಿಳಿಸಿರುವಂತೆ ರಾಜ್ಯದಲ್ಲಿ ತಲಾ ವರಮಾನವು ರೂ 35000 ದಷ್ಟಿದ್ದರೆ ಜಿಲ್ಲೆಯಲ್ಲಿನ ತಲಾ ವರಮಾನವು 2006-07 ರಲ್ಲಿ ರೂ 50000 ದಾಟಿದೆ. ಆದರೆ ಸಾಕ್ಷರತೆ, ಪ್ರಾಥಮಿಕ ಶಿಕ್ಷಣ, ಆರೋಗ್ಯ, ಆಹಾರ ಭದ್ರತೆ ಮುಂತಾದ ಮೂಲಭೂತ ಸಂಗತಿಗಳಲ್ಲಿ ಜಿಲ್ಲೆಯು ಅತ್ಯಂತ ದುಸ್ಥಿತಿಯಲ್ಲಿವೆ. ಗಣಿಗಾರಿಕೆಯಲ್ಲಿ ಅಸ್ಫೋಟಕಾರಿಯಾಗಿ ಏರಿಕೆಯಾಗುತ್ತಿರುವ ವರಮಾನವು ಜನರ ಬದುಕಾಗಿ ಪರಿವರ್ತನೆಯಾಗುತ್ತಿಲ್ಲ. ಇದು ಮೂಲಭೂತ ಸಮಸ್ಯೆ. ಜನ ಪ್ರತಿನಿಧಿಗಳಿಗೆ ಜಿಲ್ಲೆಯಲ್ಲಿ ವಿಮಾನ ನಿಲ್ದಾಣವನ್ನು ಮಾಡುವುದೆ ಏಕೈಕ ಗುರಿಯಾಗಿದ್ದಂತೆ ಕಾಣುತ್ತಿದೆ. ಇಷ್ಟೆಲ್ಲಾ ವರಮಾನದಲ್ಲಿ ಏರಿಕೆಯಾಗಿದ್ದರೂ, ಬಂಡವಾಳ ವಿನಿಯೋಜನೆ ನಡೆದಿದ್ದರೂ ಅದಕ್ಕೆ ಸರಿಸಮವಾಗಿ ಆರೋಗ್ಯ ಸೌಲಭ್ಯಗಳು ಜಿಲ್ಲೆಯಲ್ಲಿ ಏರಿಕೆಯಾಗುತ್ತಿಲ್ಲ. ಇದರ ಬಗ್ಗೆ ರಾಜಕೀಯ ಮುಂದಾಳಿಗಳಿಗೆ ಯಾವುದೇ ಕಾಳಜಿಯಿಲ್ಲ.

ಸಂಡೂರು ತಾಲ್ಲೂಕಿನ ರಸ್ತೆಗಳಲ್ಲಿ ಓಡಾಡುವುದೇ ಒಂದು ನರಕದ ಅನುಭವವಾಗಿದೆ. ಗಣಿ ಲಾರಿಗಳು, ಜೆಸಿಬಿಗಳು. ಬುಲ್‌ಡೋಜರುಗಳು ಮುಂತಾದ ದೈತ್ಯ ವಾಹನಗಳ ಸಾವಿರಾರು ಸಂಖ್ಯೆಯಲ್ಲಿ ಓಡಾಡುತ್ತಿರುವುದರಿಂದ ಅಲ್ಲಿ ರಸ್ತೆಗಳು ನಾಶವಾಗಿ ಹೋಗುತ್ತಿವೆ. ಈ ವಾಹನಗಳ ಯಮಭಾರವನ್ನು ಇಲ್ಲಿನ ರಸ್ತೆಗಳು ತಡೆಯಲಾರವು. ಈ ವಾಹನಗಳು ಉಂಟು ಮಾಡುವ ರಸ್ತೆಯ ನಾಶದಿಂದಾಗಿ ಜನಸಾಮಾನ್ಯರು ಅದರ ದುಷ್ಪರಿಣಾಮಗಳನ್ನು ಅನುಭವಿಸುವಂತಾಗಿದೆ. ಅವು ಹೊರಬಿಡುವ ಹೊಗೆ, ಅವು ಎಬ್ಬಿಸುವ ಧೂಳು, ಮಾಡುವ ಕರ್ಕಶ ಶಬ್ದ, ಜನರನ್ನು ಮಾನಸಿಕ ರೋಗಿಗಳನ್ನಾಗಿ ಮಾಡುತ್ತಿವೆ. ಸಂಡೂರಿನಿಂದ ಹೊಸಪೇಟೆಗೆ ಕಲ್ಲಳ್ಳಿಯ ಮೂಲಕ ರಸ್ತೆಯಲ್ಲಿ ಸಾಗಿದರೆ ಬಸ್ಸಿನ ಚಾರ್ಜು ರೂ. 20. ಆದರೆ ಆ ರಸ್ತೆಯಲ್ಲಿ ಸಂಚರಿಸುವುದು ಅಸಾಧ್ಯ.

ಅಲ್ಲಿ ಸಂಚಾರ ಸಾಧ್ಯವಿಲ್ಲದಿರುವುದರಿಂದ ಜನರು ಸುತ್ತಿ ಬಳಸಿ ಹೊಸಪೇಟೆಗೆ ತೋರಣಗಲ್ಲಿನ ಮೂಲಕ ಹೋಗಬೇಕಾಗಿದೆ. ಇದರಿಂದ ಜನರು ಡಬಲ್ ಚಾರ್ಜು ನೀಡಬೇಕಾಗಿದೆ. ಎಲ್ಲ ವಿಷಯಗಳಲ್ಲೂ ಗಣಿದಣಿಗಳ

ಹಾಲಿಲ್ಲದೆ ಹಸುಳೆಗಳು
ಉಸಿರು ಕಳೆದುಕೊಳ್ಳುತ್ತಿರುವಾಗ
ಕಲ್ಲು ಮೂರ್ತಿಗಳಿಗೆ
ಹಾಲಿಂದ ಅಭಿಷೇಕ
ಮಾಡುವವರ ಕೊರಳು
ಕುಯುವಾಸೆ
ಹಸುಳೆಗಳ ಗೋರಿಗಳಿಗೆ
ರಕ್ತದ ಅಭಿಷೇಕ
ಮಾಡುವಾಸೆ.

○ ಲಕ್ಷ್ಮಣ್

ಜಿಲ್ಲೆಯ ಅಭಿವೃದ್ಧಿಯ ನೇತೃತ್ವ ವಹಿಸಿರುವವರಿಗೆ ಜನರ ಬದುಕು-ಬವಣೆ ಮುಖ್ಯವಾಗಿಲ್ಲ. ಅವರಿಗೆ ಅಗತ್ಯವಾದ ಆದ್ಯತೆಗಳೇ ಬೇರೆ. ಅವರು ಇಂದು ದೇಶಾದ್ಯಂತ ದೇವರುಗಳಿಗೆ ಕಾಣಿಕೆ ಸಲ್ಲಿಸುವ ಕಾಯಕದಲ್ಲಿ ನಿರತರಾಗಿದ್ದಾರೆ. ಅವರ ದೈವಬೀರತ್ವವನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ನಾವು ಇಂದು ಜೀವಿಸುತ್ತಿರುವ ಪ್ರಜಾತಂತ್ರ ವ್ಯವಸ್ಥೆಯಲ್ಲಿ ದೇವರಿಗೆ, ದೇವಸ್ಥಾನಗಳಿಗೆ ಕೋಟಿ -ಕೋಟಿ ಗಟ್ಟಲೆ ಬೆಲೆಯ ವಜ್ರ-ವೈಡೂರ್ಯದ ಆಭರಣಗಳನ್ನು ಕಾಣಿಕೆ ನೀಡುವುದನ್ನು ಸಮರ್ಥಿಸಿಕೊಳ್ಳುವುದು ಸಾಧ್ಯವಿಲ್ಲ. ಈ ಬಗೆಯ ಕಾರ್ಯವನ್ನು ಅವರು ಪ್ರತಿನಿಧಿಸುವ ರಾಜಕೀಯ ಪಕ್ಷವಾದರೂ ಹೇಗೆ ಸಹಿಸಿಕೊಂಡಿದೆ -ಅದಕ್ಕೆ ಅದು ಹೇಗೆ ಅನುವು ಮಾಡಿಕೊಡುತ್ತಿದೆ ಯೆಂಬುದು ಅಶ್ಚರ್ಯದ ಸಂಗತಿಯಾಗಿದೆ. ಅಗಾದವಾಗಿ ಹಣ ಸಂಪಾದಿಸಿದ ಜನರು ಪ್ರಪಂಚದಲ್ಲಿ ದಾನ ನೀಡುತ್ತಿದ್ದಾರೆ. ಆದರೆ ಅವರು ಪ್ರಜಾತಂತ್ರಕ್ಕೆ ತಕ್ಕುದಾದ ರೀತಿಯಲ್ಲಿ ಅದನ್ನು ಮಾಡುತ್ತಿದ್ದಾರೆ.

ವಿನಾಶಕಾರಿ ದಂದೆಗಳಿಂದಾಗಿ ಜನರು ಬೆಲೆಕಟ್ಟಬೇಕಾಗಿ ಬಂದಿದೆ.

ಜಿಲ್ಲೆಯಲ್ಲಿ ಅಭಿವೃದ್ಧಿ ಆದ್ಯತೆ ಯಾವುದು?

ಜಿಲ್ಲೆಯ ಅಭಿವೃದ್ಧಿಯ ನೇತೃತ್ವ ವಹಿಸಿರುವವರಿಗೆ ಜನರ ಬದುಕು-ಬವಣೆ ಮುಖ್ಯವಾಗಿಲ್ಲ. ಅವರಿಗೆ ಅಗತ್ಯವಾದ ಆದ್ಯತೆಗಳೇ ಬೇರೆ. ಅವರು ಇಂದು ದೇಶಾದ್ಯಂತ ದೇವರುಗಳಿಗೆ ಕಾಣಿಕೆ ಸಲ್ಲಿಸುವ ಕಾಯಕದಲ್ಲಿ ನಿರತರಾಗಿದ್ದಾರೆ. ಅವರ ದೈವಭೀರತ್ವವನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ನಾವು ಇಂದು ಜೀವಿಸುತ್ತಿರುವ ಪ್ರಜಾತಂತ್ರ ವ್ಯವಸ್ಥೆಯಲ್ಲಿ ದೇವರಿಗೆ, ದೇವಸ್ಥಾನಗಳಿಗೆ ಕೋಟಿ-ಕೋಟಿಗಟ್ಟಲೆ ಬೆಲೆಯ ವಜ್ರ-ವೈಡೂರ್ಯದ ಆಭರಣಗಳನ್ನು ಕಾಣಿಕೆ ನೀಡುವುದನ್ನು ಸಮರ್ಥಿಸಿಕೊಳ್ಳುವುದು ಸಾಧ್ಯವಿಲ್ಲ. ಈ ಬಗೆಯ ಕಾರ್ಯವನ್ನು ಅವರು ಪ್ರತಿನಿಧಿಸುವ ರಾಜಕೀಯ ಪಕ್ಷವಾದರೂ ಹೇಗೆ ಸಹಿಸಿಕೊಂಡಿದೆ-ಅದಕ್ಕೆ ಅದು ಹೇಗೆ ಅನುವು ಮಾಡಿಕೊಡುತ್ತಿದೆ ಯೆಂಬುದು ಅಶ್ಚರ್ಯದ ಸಂಗತಿಯಾಗಿದೆ.

ಅಗಾದವಾಗಿ ಹಣ ಸಂಪಾದಿಸಿದ ಜನರು ಪ್ರಪಂಚದಲ್ಲಿ ದಾನ ನೀಡುತ್ತಿದ್ದಾರೆ. ಆದರೆ ಅವರು ಪ್ರಜಾತಂತ್ರಕ್ಕೆ ತಕ್ಕುದಾದ ರೀತಿಯಲ್ಲಿ ಅದನ್ನು ಮಾಡುತ್ತಿದ್ದಾರೆ. ಉದಾಹರಣೆಗೆ ಆಲ್‌ಫ್ರೆಡ್ ನೊಬೆಲ್‌ನನ್ನು ನೋಡಬಹುದು. ತಾನು ಮಾಡಿದ ಸಂಶೋಧನೆಯಿಂದ ಸಂಪಾದಿಸಿದ ಸಂಪತ್ತೆಲ್ಲವನ್ನೂ ಅವನು ಮುದವಟ್ಟಾಗಿಟ್ಟು ಜ್ಞಾನ-ವಿಜ್ಞಾನ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದ ವಿದ್ವಾಂಸರಿಗೆ ನೊಬೆಲ್ ಪ್ರಶಸ್ತಿಯನ್ನು ನೀಡುವ ಕ್ರಮವನ್ನು ಸ್ಥಾಪಿಸಿದ. ಅವನ ಹೆಸರು ಇಂದು ಶಾಶ್ವತವಾಗಿ ಉಳಿದು ಬಿಟ್ಟಿದೆ. ಸಮಾಜದ ಉನ್ನತಿಗೆ ಇಂತವರ ಕಾಣಿಕೆ ನೆರವಾಗುತ್ತಿದೆ. ಇದು ಒಂದು ಉದಾಹರಣೆ ಮಾತ್ರ. ನಮ್ಮಲ್ಲಿಯೂ ಅಂತಹ ನಿದರ್ಶನಗಳು ದೊರೆಯುತ್ತವೆ. ಟಾಟಾಉದ್ದಿಮೆಯ ಕುಟುಂಬವೂ ಅಂತಹ ಕೆಲಸವನ್ನು ಮಾಡುತ್ತಿದೆ. ಅದಕ್ಕೆ ನಮ್ಮ ರಾಜ್ಯದಲ್ಲೆ ಇರುವ ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್(ಬೆಂಗಳೂರು)ಸಂಸ್ಥೆಯನ್ನು ನೋಡಬಹುದು. ಇಂತಹ ನೂರಾರು ನಿದರ್ಶನಗಳು ಪಶ್ಚಿಮದಲ್ಲಿ ದೊರೆಯುತ್ತವೆ.

ಪಶ್ಚಿಮವನ್ನು, ಅಮೆರಿಕವನ್ನು ಮಾತು-ಮಾತಿಗೆ ಹೀಯಾಳಿಸುವ ನಮ್ಮ ಸಂಸ್ಕೃತಿಯ ಆರಾಧಕರು ಅಂತಹ ಸಂಪ್ರದಾಯದಿಂದ ಪಾಠ ಕಲಿಯಬಹುದಾಗಿದೆ. ಆದರೆ 'ಚರಿತ್ರೆಯಿಂದ ಪಾಠಕಲಿಯಲಿಲ್ಲವೆಂಬುದೇ ಚರಿತ್ರೆಯಿಂದ ಕಲಿತ ಪಾಠ'ವೆಂಬ ಮಾತು ಇಲ್ಲಿ ನಿಜವಾಗುತ್ತಿದೆ. ಬಳ್ಳಾರಿ ಜಿಲ್ಲೆಯು ಶ್ರೀಮಂತ ಜಿಲ್ಲೆಯೇನಲ್ಲ. ವರಮಾನದ ದೃಷ್ಟಿಯಲ್ಲಿ ಅದು ಶ್ರೀಮಂತವಾಗಿರಬಹುದು. ಆದರೆ ಜನರ ದೃಷ್ಟಿಯಲ್ಲಿ ಅದು ಕಡುಬಡತನದ, ದಾರುಣ ದುಸ್ಥಿತಿಯ ಜಿಲ್ಲೆಯಾಗಿದೆ. ಆನರಧಾರಣಾ ಸಾಮರ್ಥ್ಯದ ದೃಷ್ಟಿಯಿಂದ ಅದು ತೀವ್ರ ದುಸ್ಥಿತಿಯಲ್ಲಿರುವ ಜಿಲ್ಲೆಯಾಗಿದೆ. ಅಲ್ಲಿ ಯತೇಚ್ಚವಾಗಿ ಹಣ ಸಂಪಾದಿಸಿದ ಜನರಿರಬಹುದು. ಆದರೆ ಅವರ ಸಂಪತ್ತು ಜಿಲ್ಲೆಯ ಜನರ ಉಪಯೋಗಕ್ಕೆ ಸಲ್ಲುತ್ತಿಲ್ಲ.

ಜನರು ಬೆವರು, ಕಣ್ಣೀರು ಮತ್ತು ರಕ್ತ ಹರಿಸಿ ದುಡಿಮೆ ಮಾಡುತ್ತಿದ್ದಾರೆ. ಆದರೆ ಅವರಿಗೆ ವಜ್ರ-ವೈಡೂರ್ಯವನ್ನು ಸಂಪಾದಿಸುವುದು ಸಾಧ್ಯವಾಗುತ್ತಿಲ್ಲ. ನಲವತ್ತೈದು ಕೋಟಿ ಬೆಲೆಯ ವಜ್ರದ ಕಿರೀಟವನ್ನು ದೇವರಿಗೆ ಕಾಣಿಕೆ ನೀಡುವುದಕ್ಕೆ ಪ್ರತಿಯಾಗಿ ಜಿಲ್ಲೆಯಲ್ಲಿ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು, ಗ್ರಾಮೀಣ ಪ್ರದೇಶದಲ್ಲಿ ವೈದ್ಯಕಿಯ ಸೌಲಭ್ಯವನ್ನು ಒದಗಿಸುವ, ಸಂಡೂರಿನ ಗಣಿಗಳಲ್ಲಿ ದಿನನಿತ್ಯವೂ ಬದುಕು-ಸಾವಿನ ನಡುವೆ ಹೋರಾಟ ಮಾಡುತ್ತಾ ಬದುಕು ಮಾಡುತ್ತಿರುವ ಕೂಲಿ ಹೆಣ್ಣು ಮಕ್ಕಳ ಬದುಕಿಗೆ ಆಸರೆಯಾಗುವಂತಹ ಕ್ರಮಗಳ ಬಗ್ಗೆ ದಾನಶೂರರು ಯೋಚಿಸಬಹುದಿತ್ತು. (ಇವರು ಮಾಡುವ ಇಂತಹ ಕ್ರಮಗಳಿಂದ ಜಿಲ್ಲೆಯ ಬಡತನ ಮಾಯವಾಗಿ ಬಿಡುತ್ತದೆಯೆಂದು ಹೇಳುತ್ತಿಲ್ಲ. ಆದರೆ ಸಮಾಜದಲ್ಲಿ ಅವು ಸತ್ಸಂಪ್ರದಾಯವನ್ನು ಹುಟ್ಟು ಹಾಕಬಹುದು. ಅಭಿವೃದ್ಧಿಗೆ ಸಂಬಂಧಿಸಿದಂತೆ ಸರಿಯಾದ ನಿರ್ದೇಶನಗಳನ್ನು ನೀಡಬಹುದು). ಅದು ಪ್ರಜಾತಂತ್ರ ಕ್ರಮವಾಗುತ್ತಿತ್ತು. ಈಗ ಅವರು ಹುಟ್ಟುಹಾಕಿರುವ ಕ್ರಮವು ಸಾಮ್ರಾಜ್ಯಶಾಹಿ ಸ್ವರೂಪದ್ದಾಗಿದೆ.

ಜನರು ಬೆವರು, ಕಣ್ಣೀರು ಮತ್ತು ರಕ್ತ ಹರಿಸಿ ದುಡಿಮೆ ಮಾಡುತ್ತಿದ್ದಾರೆ. ಆದರೆ ಅವರಿಗೆ ವಜ್ರ-ವೈಡೂರ್ಯವನ್ನು ಸಂಪಾದಿಸುವುದು ಸಾಧ್ಯವಾಗುತ್ತಿಲ್ಲ. ನಲವತ್ತೈದು ಕೋಟಿ ಬೆಲೆಯ ವಜ್ರದ ಕಿರೀಟವನ್ನು ದೇವರಿಗೆ ಕಾಣಿಕೆ ನೀಡುವುದಕ್ಕೆ ಪ್ರತಿಯಾಗಿ ಜಿಲ್ಲೆಯಲ್ಲಿ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು, ಗ್ರಾಮೀಣ ಪ್ರದೇಶದಲ್ಲಿ ವೈದ್ಯಕಿಯ ಸೌಲಭ್ಯವನ್ನು ಒದಗಿಸುವ, ಸಂಡೂರಿನ ಗಣಿಗಳಲ್ಲಿ ದಿನನಿತ್ಯವೂ ಬದುಕು-ಸಾವಿನ ನಡುವೆ ಹೋರಾಟ ಮಾಡುತ್ತಾ ಬದುಕು ಮಾಡುತ್ತಿರುವ ಕೂಲಿ ಹೆಣ್ಣು ಮಕ್ಕಳ ಬದುಕಿಗೆ ಆಸರೆ ಯಾಗುವಂತಹ ಕ್ರಮಗಳ ಬಗ್ಗೆ ದಾನ ಶೂರರು ಯೋಚಿಸಬಹುದಿತ್ತು. (ಇವರು ಮಾಡುವ ಇಂತಹ ಕ್ರಮಗಳಿಂದ ಜಿಲ್ಲೆಯ ಬಡತನ ಮಾಯವಾಗಿ ಬಿಡುತ್ತದೆಯೆಂದು ಹೇಳುತ್ತಿಲ್ಲ. ಆದರೆ ಸಮಾಜದಲ್ಲಿ ಅವು ಸತ್ಸಂಪ್ರದಾಯವನ್ನು ಹುಟ್ಟು ಹಾಕಬಹುದು. ಅಭಿವೃದ್ಧಿಗೆ ಸಂಬಂಧಿಸಿದಂತೆ ಸರಿಯಾದ ನಿರ್ದೇಶನಗಳನ್ನು ನೀಡಬಹುದು).

ಈ ಜಿಲ್ಲೆಯ ಮೂಲ ಭೂತ ಸಮಸ್ಯೆಗಳ ಬಗ್ಗೆ ಅಲ್ಲಿನ ಅಭಿವೃದ್ಧಿಯ ನೇತೃತ್ವವ ಹಿಸಬೇಕಾಗಿರುವ ಜನರಿಗೆ ಜನರ ಬಗ್ಗೆ ಕಾಳಜಿಯೇ ಇದ್ದಂತಿಲ್ಲ. ಅವರ ಆದ್ಯತೆಗಳೇ ಬೇರೆಯಾಗಿ ಬಿಟ್ಟಿವೆ. ಅವರು ಇಂದು ಬಡವರಿಗೆ ಸವಾಲು ಹಾಕಿ ಅವರಿಗೆ ಅವಮಾನ ಮಾಡುವ ರೀತಿಯಲ್ಲಿ ವಿಮಾನನಿಲ್ದಾಣ ಮಾಡುವ ಕೆಲಸದಲ್ಲಿ ಪೂರ್ಣವಾಗಿ ನಿರತರಾಗಿ ಬಿಟ್ಟಿದ್ದಾರೆ. ಅವರು ಅನುಸರಿಸುತ್ತಿರುವ ಕ್ರಮಗಳು ಬಡವರನ್ನು ಅನುಲಕ್ಷಿಸಿ ನಡೆಯುತ್ತಿಲ್ಲ. ಅದು ಹಿಂದುಳಿದ ಜಿಲ್ಲೆಗೆ ತಕ್ಕುದಾಗಿ ನಡೆಯುತ್ತಿಲ್ಲ. ಅಭಿವೃದ್ಧಿಯ ನೇತೃತ್ವವಹಿಸಿದ ಜನರು ಹಾಕಿಕೊಟ್ಟ ಸಂಪ್ರದಾಯವನ್ನೇ ಜಿಲ್ಲೆಯ ಬಡವರೆಲ್ಲ ಅನುಸರಿಸ ತೊಡಗಿದರೆ ಏನಾದೀತು?.

ದಾನ-ದತ್ತಿ, ಕಪ್ಪ-ಕಾಣಿಕೆ ಸಲ್ಲಿಸುವುದು ರಾಜ-ಮಹಾರಾಜರ ಕಾಲದ ಪಳೆಯುಳಿಕೆಗಳು. ಅವು ಪ್ರಜಾತಂತ್ರದ ಮೌಲ್ಯಗಳಲ್ಲ. ಇವರು ಮಾಡುತ್ತಿರುವ ಕಾಣಿಕೆಗಳನ್ನು ವೈಯುಕ್ತಿಕವೆಂದು ಸಮರ್ಥಿಸುವಂತಿಲ್ಲ. ಏಕೆಂದರೆ ಇವರು ಕೇವಲ ವ್ಯಕ್ತಿಗಳಲ್ಲ. ಇವರೆಲ್ಲ ಸಾರ್ವಜನಿಕ ನೇತಾರರು. ಇವರ ಬದುಕು ಸಾರ್ವಜನಿಕವಾದುದು. ಈ ರೀತಿ ಪ್ರಜಾಸತ್ತೆಗೆ ಧಕ್ಕೆ ತರುವ ರೀತಿಯಲ್ಲಿ ನೇತಾರರು ನಡೆಯುತ್ತಿರುವುದನ್ನು ಅವರು ಪ್ರತಿನಿಧಿಸುವ ಪಕ್ಷವು ಮತ್ತು ಆ ಪಕ್ಷಕ್ಕೆ ಮಾರ್ಗದರ್ಶನ ನೀಡುತ್ತಿರುವ 'ರಾಜರ್ಷಿ'ಗಳು ತಮ್ಮ ಜವಾಬುದಾರಿಗಳ ಬಗ್ಗೆ ಪರ್ಯಾಲೋಚಿಸಬೇಕಾಗುತ್ತದೆ. ಇದು ಕೇವಲ ಪಕ್ಷದ, ಸದ್ಯದ ರಾಜಕಾರಣದ ಸಂಗತಿಯಲ್ಲ. ಇದು ಸಾಮಾಜಿಕ ಮೌಲ್ಯಗಳನ್ನು ಕುರಿತ ಸಂಗತಿಗಳಾಗಿವೆ.

ಹೀಗೆ ಕೋಟಿಗಟ್ಟಲೆ ಬಂಗಾರವನ್ನು, ವಜ್ರ-ವೈಡೂರ್ಯವನ್ನು ದೇವರುಗಳಿಗೆ, ದೇವಾಲಯಗಳಿಗೆ ಕಾಣಿಕೆ ನೀಡುವ ಕ್ರಮಗಳು, ವಿಮಾನನಿಲ್ದಾಣದ ನಿರ್ಮಾಣದ ಪ್ರಶ್ನೆ, ಗಣಿಗಾರಿಕೆ ಸಮಸ್ಯೆ, ಅರಣ್ಯ ಪ್ರದೇಶದ ನಾಶ, ಜಿಲ್ಲೆಯಲ್ಲಿನ ಕ್ಲೈಮೆಟಿಕ್ ಚೇಂಜ್ ಪರಿಣಾಮಗಳ ಬಗೆಗಿನ ದಿವ್ಯ ಮೌನ, ಜಿಲ್ಲೆಯಲ್ಲಿ ಹೆಚ್ಚುತ್ತಿರುವ ತಾಪಮಾನ ಮುಂತಾದವುಗಳಲ್ಲಿ ಸಮಾಜದಲ್ಲಿ ಅಂತಹ ಸಂದೇಶವನ್ನು ಸಾರುತ್ತವೆಯೆಂಬುದನ್ನು ರಾಜಕೀಯ ಪಕ್ಷಗಳು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ ಇವೆಲ್ಲ ವೈಯುಕ್ತಿಕ ಸಂಗತಿಗಳಲ್ಲ. ಇದನ್ನು ನಾನು ಒತ್ತಿ ಒತ್ತಿ ಹೇಳುತ್ತಿದ್ದೇನೆ. ಹಾಗೆ ನೋಡಿದರೆ ಪ್ರತಿಯೊಬ್ಬ ನಾಗರಿಕ ಕೇವಲ ನಾಗರಿಕ ಮಾತ್ರವಲ್ಲ. ಅವನ/ಅವಳ ಬದುಕು ಸಾರ್ವಜನಿಕವೂ ಹೌದು ಮತ್ತು ಖಾಸಗಿಯೂ ಹೌದು. ಅಂತಹದು ಇರುವುದಿಲ್ಲ. ಖಾಸಗಿ-ಸಾರ್ವಜನಿಕ ಎಲ್ಲವೂ ಒಂದರೊಡನೊಂದು ಬೆರೆತುಕೊಂಡು ಬಿಟ್ಟಿರುತ್ತವೆ. ಸಾರ್ವಜನಿಕವಾದುದು ಖಾಸಗಿಯಾಗಿರುತ್ತದೆ, ಖಾಸಗಿಯಾದುದು ಸಾರ್ವಜನಿಕವಾದುದಾಗಿರುತ್ತದೆ.

ಒಟ್ಟಾರೆ ಬಳ್ಳಾರಿ ಜಿಲ್ಲೆಯಲ್ಲಿ ನಡೆಯುತ್ತಿರುವ ದಿವ್ಯವೂ-ಭವ್ಯವೂ ಆದ ಕಾಣಿಕೆ ರಾಜಕೀಯದಿಂದ, ವಿಮಾನ ನಿಲ್ದಾಣವನ್ನು ಕಟ್ಟಲು ನಡೆಸಿರುವ ಪ್ರತಿಷ್ಠೆಯಿಂದ, ಗಣಿಗಾರಿಕೆಯಿಂದ, ಅರಣ್ಯ ನಾಶದಿಂದ, ಅಲ್ಲಿನ ತಾಪಮಾನದ ಏರಿಕೆಯಿಂದ, ಆರೋಗ್ಯ ದುಸ್ಥಿತಿಯಿಂದ, ಅನಕ್ಷರತೆಯಿಂದ ಬಡವರಿಗೆ, ಮಹಿಳೆಯರಿಗೆ, ಕೂಲಿಕಾರರಿಗೆ, ಮಕ್ಕಳಿಗೆ ಯಾವ ಉಪಯೋಗವೂ ಆಗುತ್ತಿಲ್ಲ. ಬೇಸಿಗೆ-ಕಡುಬೇಸಿಗೆ ಎಂಬ ಎರಡು ಕಾಲಗಳು ಹೋಗಿ ಅಲ್ಲಿ ಕೇವಲ ರಣ ಬೇಸಿಗೆ ಎಂಬ ಒಂದೇ ಕಾಲ ಉಳಿದುಕೊಂಡು ಬಿಡುತ್ತಿದೆ. ಹಂಪೆಯೆಂಬ ಪ್ರಾಚೀನ ಅವಶೇಷದಿಂದಾಗಲಿ, ತುಂಗಭದ್ರೆಯೆಂಬ ಪ್ರಾರಬ್ಧದಿಂದಾಗಲಿ ಅಥವಾ ಗಣಿಗಾರಿಕೆಯೆಂಬ ಉದ್ದಿಮೆಯ ಅಭಿಶಾಪದಿಂದ ಜಿಲ್ಲೆಗೆ ಬಿಡುಗಡೆಯಿದ್ದಂತೆ ಕಾಣುವುದಿಲ್ಲ. ಈ ಬಗ್ಗೆ ನಾವು ಗಂಭೀರವಾಗಿ ಯೋಚಿಸಬೇಕಾಗಿದೆ.

(ದಿನಾಂಕ 31 ಮೇ, 2009 ರಂದು ಸಂಡೂರಿನ ಕಾಡಿನ ಮಧ್ಯೆ ಗಣಿಗಾರಿಕೆ ಶಾಪದಿಂದ ಬಳಲಿದವರ ಜೊತೆಯಲ್ಲಿ ನಡೆದ ಕಾರ್ಯಾಗಾರದಲ್ಲಿ ಮಂಡಿಸಿದ ಪ್ರಬಂಧದ ಆಯ್ದ ಭಾಗಗಳು). □

ನಿತ್ಯ ಬದಲಾವಣೆಯು ಗೋಚರವಾಗುತ್ತಿದ್ದರೂ ವಸ್ತುಗಳಲ್ಲಿ ಶಾಶ್ವತವಾದ ಅಂತಸ್ಸತ್ವವೊಂದನ್ನು ಸಾಮಾನ್ಯ ಮಾನವಮತಿ ಹುಡುಕುತ್ತಿರುತ್ತದೆ. ಇದರ ಹಿಂದೆ ಸಾಮಾನ್ಯ ಲೋಕ ಕಾರಣವೊಂದನ್ನು ಹುಡುಕುವ ಪ್ರಯತ್ನವಿರುತ್ತದೆ. ಇಂತಹ ಹುಡುಕಾಟಗಳು ಬೇರೆ ಬೇರೆ ಉತ್ತರಗಳನ್ನು ಕಂಡುಕೊಳ್ಳುತ್ತವೆ. ದ್ವೈತವಾದ, ಅದ್ವೈತವಾದ ಇತ್ಯಾದಿಗಳಲ್ಲಿ ಅವು ವಿರಮಿಸುತ್ತವೆ. ಇಂತಹ ದೃಷ್ಟಿವಾದಗಳು ಪಾಂಥಿಕ ಶತತ್ವವನ್ನು ಬೆಳೆಸಿಕೊಳ್ಳುತ್ತವೆ. ತಾವು ತೆಗೆದುಕೊಂಡ ನಿಲುವಿಗೆ ವಿರುದ್ಧವಾದ ಹೊಸ ತಿಳುವಳಿಕೆಗಳು ಬಂದರೂ ತಮ್ಮ ನಿಲುವನ್ನು ಬದಲಿಸಿಕೊಳ್ಳುವ ಗೋಜಿಗೆ ಹೋಗದೆ ನಿಂತು ಹೋಗುತ್ತವೆ. ಈ ದೃಷ್ಟಿವಾದಗಳಿಂದ ಬೌದ್ಧ ಧರ್ಮವು ದೂರ ನಿಲ್ಲುತ್ತದೆ. ಲೋಕ ಸೃಷ್ಟಿಯ ಪ್ರಥಮ ಕಾರಣದ ಬಗೆಗೆ ಪ್ರಶ್ನಿಸಿದಾಗ ಬುದ್ಧಗುರು ಮೌನವಹಿಸಿದ.

ಮೀಮಾಂಸೆಯೊಂದರ ಮೊದಲ ಕೆಲಸವೆಂದರೆ ತಾನು ಮತ್ತು ಎದುರಿನ ಲೋಕವನ್ನು ವಿವರಿಸಿಕೊಳ್ಳುವುದು. ಕಲಾವಿದನೊಬ್ಬನಿಗೆ ಎದುರಾಗುವ ಮೊದಲ ಸವಾಲು ಇದೇ ಆಗಿದೆ. ಲೋಕವನ್ನು ವಿವರಿಸಿಕೊಡುವ ಮೀಮಾಂಸೆಗಳ ಈ ಪ್ರಯತ್ನವನ್ನು ಎಲ್ಲ ಕಲಾವಿದರೂ ಎದುರಾಗಲೇಬೇಕು. ನನಗೆ ಯಾವ ಮೀಮಾಂಸೆಯೂ ಬೇಡವೆನ್ನುವವನೂ ತಾನು ಪಾರಂಪರಿಕವಾಗಿ ಬದುಕುತ್ತಿರುವ ನಂಬಿಕೆಯನ್ನೇ, ವಿನ್ಯಾಸವನ್ನೇ ತನ್ನ ಲೋಕವಿವರಣೆಯನ್ನಾಗಿ ಸ್ವೀಕರಿಸಿಬಿಡುವುದರಿಂದ ಮೀಮಾಂಸಾರಹಿತನಾಗಿ ಅವನು ಪ್ರವರ್ತಿಸಲಾರ. ಹಾಗಾಗಿ ಪರಂಪರೆಯ ದೋಷಗಳು ಅವನ ಮೀಮಾಂಸಾ ದೋಷಗಳಾಗಿ ಪರಿಣಮಿಸುತ್ತವೆ.

ಲೋಕ ಸಂಗತಿಗಳನ್ನು ಸರಿಯಾಗಿ ವಿವರಿಸಿಕೊಂಡು, ಅಂದರೆ ನಮ್ಮೆದುರಿನ ಲೋಕವನ್ನು 'ಅದಿರುವಂತೆಯೇ ಅರಿತು' ಅದನ್ನು ಅನ್ವಯಿಸಿಕೊಂಡು ಬದುಕಿನ ನಿತ್ಯಸಂಗತಿಗಳನ್ನು ರೂಢಿಸಿಕೊಳ್ಳಬೇಕೆಂದು ಬುದ್ಧಗುರು ತಿಳಿಸಿಕೊಟ್ಟನು. ಲೋಕವನ್ನು ವಿವರಿಸಿಕೊಳ್ಳುವಲ್ಲಿ ನಾವು ಮಾಡುವ ಪ್ರಮಾದಗಳು ನಮ್ಮ ಬದುಕಿನ ಹದವನ್ನು ಕೆಡಿಸುತ್ತವೆಂದೂ, ಅವು ನಮ್ಮ ಸಂಕಟಕ್ಕೆ ಕಾರಣಗಳಾಗುತ್ತವೆಂದೂ ತೋರಿಸಿಕೊಟ್ಟನು. ನಾವು ನಮ್ಮೆದುರಿನ ಲೋಕವನ್ನು ವಿವರಿಸಿಕೊಳ್ಳುತ್ತಿರುವಲ್ಲಿ ಮಾಡುತ್ತಿರುವ ಪ್ರಮಾದಗಳೇನೇನು ಎಂಬುದನ್ನು ವಿಶ್ಲೇಷಿಸಿದ ಬುದ್ಧಗುರು, ಕೆಳಗಿನ ಪ್ರಮುಖ ಸಂಗತಿಗಳನ್ನು ಮುಂದಿಟ್ಟನು:

1. ಲೋಕದ ಯಾವ ಜೀವಿಗೂ, ಯಾವ ವಸ್ತುವಿಗೂ ಅದರದ್ದೇ ಆದ– ಆತ್ಮವೆಂದು ಕರೆಯಬಹುದಾದ– ಯಾವುದೂ ಇರುವುದಿಲ್ಲ. ಲೋಕವನ್ನು ನಾವು ನೋಡುವ ಕ್ರಮದಲ್ಲಿನ ಬಹಳ ದೊಡ್ಡ ದೋಷ ಇದೇ ಎಂದು ಬುದ್ಧ ತೋರಿಸಿಕೊಟ್ಟನು. ನಾವು ನೋಡುತ್ತಿರುವ ಎಲ್ಲದರಲ್ಲಿಯೂ ಮತ್ತು ನಮ್ಮಲ್ಲಿಯೂ ಅದರದ್ದೇ ಆದ 'ಒಂದು' ಇರುತ್ತದೆಂದು ನಂಬುತ್ತೇವೆ. ಆದರೆ ಲೋಕ ಹಾಗಿಲ್ಲ. ಎಲ್ಲವೂ ಅನೇಕ ಸಂಗತಿಗಳ ಸಂಯೋಜನೆಗಳೆಂಬ ಸಂಗತಿಯನ್ನು ನಾವು ಮರೆತುಬಿಡುತ್ತೇವೆ. ಯಾವ ವಸ್ತುವಿಗೂ, ಜೀವಿಗೂ ಹಾಗೆ ಸ್ವತಂತ್ರ ಅಸ್ತಿತ್ವವಿಲ್ಲವೆಂಬ ನಿಲುವು ಬೌದ್ಧ ಧರ್ಮವನ್ನು ಇತರೆ ಧರ್ಮಗಳಿಂದ ಬೇರ್ಪಡಿಸುವ ಪ್ರಮುಖ ಸಂಗತಿ ಯಾಗಿದೆ.

2.ಮೇಲಿನ ನಿಲುವು ಮತ್ತೊಂದು ಸಂಗತಿಗೆ ಕೈಮಾಡುತ್ತದೆ. ಆತ್ಮವೆಂದು ಕರೆಯಬಹುದಾದದ್ದು ಏನೂ ಇಲ್ಲದ ಎಲ್ಲ ಸಂಗತಿಗಳೂ ಅನೇಕ ಅಂಶಗಳಿಂದಾದ ಸಂಯೋಜನೆಗಳಾಗಿರುವುದರಿಂದ ಅವು ನಿರಂತರ ಬದಲಾಗುತ್ತಲೇ ಇರುವ ಸರಣಿ ಪ್ರಕ್ರಿಯೆ ಮಾತ್ರ ಆಗಿವೆ. ಹಾಗಾಗಿ ಇಲ್ಲಿ 'ಆಗಿ ಇರುವ' ಯಾವ ವಸ್ತುವಾಗಲೀ ಜೀವವಾಗಲೀ ಇಲ್ಲ. ಎಲ್ಲವೂ ಆಗುತ್ತಲೇ ಇರುವ ಪ್ರಕ್ರಿಯೆಯಾಗಿವೆ.

3. ಅನಾತ್ಮ, ಅಶಾಶ್ವತ ಮತ್ತು ದುಃಖ ಈ ಮೂರು ಲಕ್ಷಣಗಳ ವಿವರಣೆಯೇ 'ಶೂನ್ಯತೆ'. ಈ ತಾತ್ವಿಕ ತೆಯ ಒಂದು ಅಸಮಗ್ರ ವಿವರಣೆ ಯನ್ನು ಹೀಗೆ ನೀಡಬಹುದು:

ನಿತ್ಯ ಬದಲಾವಣೆಯು ಗೋಚರವಾಗುತ್ತಿದ್ದರೂ ವಸ್ತುಗಳಲ್ಲಿ ಶಾಶ್ವತವಾದ ಅಂತಸ್ಸತ್ವವೊಂದನ್ನು ಸಾಮಾನ್ಯ ಮಾನವಮತಿ ಹುಡುಕು ತ್ತಿರುತ್ತದೆ. ಇದರ ಹಿಂದೆ ಸಾಮಾನ್ಯ ಲೋಕಕಾರಣವೊಂದನ್ನು ಹುಡುಕುವ ಪ್ರಯತ್ನವಿರುತ್ತದೆ. ಇಂತಹ ಹುಡುಕಾಟಗಳು ಬೇರೆ ಬೇರೆ ಉತ್ತರಗಳನ್ನು ಕಂಡುಕೊಳ್ಳುತ್ತವೆ. ದ್ವೈತವಾದ, ಅದ್ವೈತವಾದ ಇತ್ಯಾದಿಗಳಲ್ಲಿ ಅವು ವಿರಮಿಸುತ್ತವೆ. ಇಂತಹ ದೃಷ್ಟಿವಾದಗಳು ಪಾಂಥಿಕ ಶಠತ್ವವನ್ನು ಬೆಳೆಸಿಕೊಳ್ಳುತ್ತವೆ. ತಾವು ತೆಗೆದುಕೊಂಡ ನಿಲುವಿಗೆ ವಿರುದ್ಧವಾದ ಹೊಸ ತಿಳುವಳಿಕೆಗಳು ಬಂದರೂ ತಮ್ಮ ನಿಲುವನ್ನು ಬದಲಿಸಿಕೊಳ್ಳುವ ಗೋಜಿಗೆ ಹೋಗದೆ ನಿಂತು ಹೋಗುತ್ತವೆ.

ಈ ದೃಷ್ಟಿವಾದಗಳಿಂದ ಬೌದ್ಧ ಧರ್ಮವು ದೂರ ನಿಲ್ಲುತ್ತದೆ. ಲೋಕಸೃಷ್ಟಿಯ ಪ್ರಥಮ ಕಾರಣದ ಬಗೆಗೆ ಪ್ರಶ್ನಿಸಿದಾಗ ಬುದ್ಧಗುರು ಮೌನವಹಿಸಿದ. ವಸ್ತು ಪ್ರಪಂಚದ ಸತ್ಯವನ್ನರಿಯಲು 'ಅನೇಕ'ದಲ್ಲಿ 'ಏಕವನ್ನು' ಗುರುತಿಸುವುದನ್ನಾಗಲೀ, ಅನೇಕಕ್ಕೆ ಮುನ್ನ ಏಕವನ್ನು ಕಂಡುಕೊಳ್ಳುವುದನ್ನಾಗಲೀ, ಭಿನ್ನತೆಯಲ್ಲಿ ಏಕತೆಯನ್ನು ಹುಡುಕುವುದನ್ನಾಗಲೀ ಜಂಗಮದಲ್ಲಿ ಸ್ಥಾವರವೊಂದನ್ನು ಗುರುತಿಸುವುದನ್ನಾಗಲೀ ಅವನು ಒಪ್ಪಲಿಲ್ಲ. ಬೌದ್ಧ ಧರ್ಮ ಯಾವುದೇ ವಿಶೇಷ ಆರೋಪವಿಲ್ಲದೆ, ಅದು ಹೇಗಿದೆಯೋ ಹಾಗೆ ಸ್ವೀಕರಿಸುವುದನ್ನೇ ಅಥವಾ ಅದು ಇರುವಂತೆಯೇ ಭಾವಿಸಿಕೊಳ್ಳುವುದನ್ನು ಸರಿಯೆನ್ನುತ್ತದೆ. ಶಾಶ್ವತ ಅಸ್ತಿತ್ವವಿಲ್ಲದಿರು ವುದೇ ಅದರ ನೈಜ ಧರ್ಮ. ಅಂದರೆ ಸ್ವಭಾವ (ಸ್ವತಂತ್ರ ಅಸ್ತಿತ್ವ) ಇಲ್ಲದಿರುವುದೇ ತಥತೆಯ ಲಕ್ಷಣವಾಗಿದೆ.

4 ಸಾಮಾನ್ಯವಾಗಿ ಬೌದ್ಧೇತರ ದರ್ಶನಗಳು ಲೋಕಾರ್ಥ ಮತ್ತು ಪರಮಾರ್ಥಗಳನ್ನು ಅವಳಿ ವೈರುಧ್ಯಗಳನ್ನಾಗಿ ಗುರುತಿಸಿಕೊಳ್ಳುತ್ತವೆ. ಆದರೆ ಅವು ಸ್ಥಿತ ಬಿಂದುಗಳಾಗಿರದೆ ಪರಸ್ಪರ ಚಲನೆಗೆ ಅವಕಾಶವಿದ್ದು ಅಲ್ಲಿಂದ ಇಲ್ಲಿಗೋ ಇಲ್ಲಿಂದ ಅಲ್ಲಿಗೋ ಚಲಿಸುವ ಕ್ರಮ ವೊಂದನ್ನು ಸಾಧನೆಯ ಹಾದಿಯನ್ನಾಗಿ ಗುರುತಿಸಿಕೊಳ್ಳುತ್ತವೆ. ಈ ಚಲನೆಯ ದಿಕ್ಕೇ ಆಯಾ ದರ್ಶನಗಳ ತಾತ್ವಿಕತೆಯನ್ನು ಬಹುಪಾಲು ನಿರ್ಧರಿಸುತ್ತದ. ದೈವತ್ವ ಮತ್ತು ಮಾನವತ್ವಗಳ ಈ ಧ್ರುವಗಳ ಏಕ ತೆಯೋ ಭಿನ್ನತೆಯೋ ಆಯಾ ದರ್ಶನದ ತಾತ್ವಿಕತೆಯನ್ನು ನಿರ್ಣಯಿಸುವ ಮಾನದಂಡವಾಗುತ್ತದೆ. ಉದಾಹರಣೆಗೆ ಕ್ರಿಶ್ಚಿಯಾನಿಟಿಯಲ್ಲಿ ಈ ಧ್ರುವಗಳು ಕೊನೆಯವರೆಗೆ ಭಿನ್ನವಾಗಿಯೇ ಉಳಿಯುತ್ತವೆ.



ಡಾ. ಎಸ್. ನಟರಾಜ್ ಬೂದಾಳು

ಹಿಂದೂ ದರ್ಶನಗಳಲ್ಲಿ (ದ್ವೈತದ ಹೊರತಾಗಿ)ದೈವತ್ವ ಮತ್ತು ಮಾನವತ್ವಗಳು ಅವುಗಳ ಸಾರ ರೂಪದಲ್ಲಿ ಏಕವೇ ಆಗಿವೆ. ಚಾಂದೋಗ್ಯೋಪನಿಷತ್ತಿನ ತತ್ವ ಮಸಿ ವಾಕ್ಯವೂ ಅದನ್ನೇ ಸೂಚಿಸುತ್ತದೆ. ಆದರೆ ಬೌದ್ಧ ಮಾಧ್ಯಮಕವಾದವು ಸಂವೃತಿ ಸತ್ಯ ಮತ್ತು ಪಾರಮಾರ್ಥಿಕ ಸತ್ಯಗಳನ್ನು ಲೋಕ ಕವಿವರಣೆಯ ಎರಡು ಹಂತಗಳನ್ನಾಗಿ ಮಾನ್ಯ ಮಾಡಿದರೂ ಪರಮಾರ್ಥವು ಲೌಕಿ ಕದಲ್ಲಿಯೇ ಅವತರಿಸಬೇಕಾಗಿದೆ ಮತ್ತು ಮಾನವ ಪ್ರಯತ್ನದಿಂದಲೇ ಅದನ್ನು ಆಗ ಮಾಡಬೇಕು. ಪರಮಾರ್ಥವು ಲೋಕಾರ್ಥದಲ್ಲಿಯೇ ಅವತರಿಸಬೇಕಾಗಿರುವುದರಿಂದ ಲೋಕಾರ್ಥವು ಒಮ್ಮೆಯಾದರೂ

ಅರಿತು ಅನುಸರಿಸದಲ್ಲದೇ ಅನ್ಯಮಾರ್ಗವಿಲ್ಲ

ನಿರಸನಗಳ್ಳಲೇಬೇಕು. ಅಲ್ಲಮನ ಕಾಯಸಿ ದ್ಧಾಂತವೂ ಇದೇ ಮಾದರಿಯದು. ಪರಮಾರ್ಥ ಅವತರಿಸಲು ಲೋಕಾರ್ಥವೇ ವೇದಿಕೆ. ಹಾಗಾಗಿ ಲೋಕಾರ್ಥ ವನ್ನು ಲೋಕವ್ಯವಹಾರವನ್ನು ವಿವರಿಸುವ ಉದ್ಯೋಗದಲ್ಲಿ ಎಲ್ಲ ದರ್ಶನಗಳೂ ತೊಡಗುತ್ತವೆ.

ಬೌದ್ಧ ದಾರ್ಶನಿಕ ನಾಗಾರ್ಜುನ ಈ ಸಂಬಂಧದ ತನ್ನ ವಿವರಣೆಯನ್ನು ಮುಂದಿಡುವ ಹೊತ್ತಿಗೆ (ಕ್ರಿ.ಶ. ಎರಡನೆಯ ಶತಮಾನದ ಹೊತ್ತಿಗೆ) ಅನೇಕ ಹಿಂದೂ ಶಾಖೆಗಳು ತಮ್ಮ ಲೋಕ ವಿವರಣೆಯನ್ನು ಮುಂದಿಟ್ಟಿದ್ದವು. ಇಂತಹ ಅರವತ್ತೆರಡು ದೃಷ್ಟಿವಾದಗಳು ಬುದ್ಧನ ಕಾಲಕ್ಕೆ ಇದ್ದುವೆಂದು ಬ್ರಹ್ಮಜಾಲ ಸುತ್ತಾಂತದಲ್ಲಿ ನಿರೂಪಿತವಾಗಿದೆ. ಮುಖ್ಯವಾದ ವಿವರಣೆಗಳನ್ನು ನೀಡಿದ್ದ ದರ್ಶನಗಳಲ್ಲಿ ಸಾಂಖ್ಯ, ನ್ಯಾಯ, ವೈಶೇಷಿಕ ಮತ್ತು ಬೌದ್ಧ ಶಾಖೆಗಳಲ್ಲಿ ಸರ್ವಾಸ್ತಿವಾದವೂ, ಸೌತ್ರಾಂತಿಕವಾದವೂ ಮಾಧ್ಯಮಕರ ಎದುರಿಗೆ ಇದ್ದವು. ಈ ವಿವರಣೆಗಳನ್ನಾಧರಿಸಿಯೇ ಕಾವ್ಯ ಮೀಮಾಂಸೆ, ಸೌಂದರ್ಯಮೀಮಾಂಸೆಗಳು ರೂಪುಗೊಂಡುದುದರಿಂದ ದರ್ಶನವೊಂದು ಇಲ್ಲಿ ತೆಗೆದುಕೊಳ್ಳುವ ನಿಲುವು ಆಯಾ ಮೀಮಾಂಸೆಯ ಮುಂದಿನ ನಡೆಯನ್ನು ನಿರ್ಧರಿಸುತ್ತದೆ. ಹಾಗಾಗಿ ಈ ನಿಲುವುಗಳಲ್ಲಿನ ಭಿನ್ನತೆಯನ್ನು ಗುರುತಿಸಿಕೊಳ್ಳದ ಹೊರತು ಅವುಗಳಿಂದ ಪ್ರಣೀತವಾದ ಮೀಮಾಂಸೆಯ ಸ್ವರೂಪವನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ವೈಶೇಷಿಕ ಎಂಬ ಪದವು 'ವಿಶೇಷ' ಎಂಬುದರಿಂದ ಬಂದಿದ್ದು, ಅದು ವ್ಯತ್ಯಾಸವನ್ನು ಸೂಚಿಸುವ ಪದವಾಗಿದೆ. ಈ ಸಿದ್ಧಾಂತದ ಪ್ರಕಾರ ವಿಶ್ವದ ಮೂಲದಲ್ಲಿರುವುದು ವಿವಿಧತೆಯೇ ಹೊರತು ಏಕತೆಯಲ್ಲ. ವಿಶ್ವವು ದ್ರವ್ಯ, ಗುಣ, ಕರ್ಮ, ಸಾಮಾನ್ಯ ವಿಶೇಷ, ಸಮವಾಯ ಮತ್ತು ಅಭಾವ–ಈ ಏಳು ಅಂಶಗಳಿಂದಾದುದು. ನ್ಯಾಯ ದರ್ಶನವೂ ಇವುಗಳನ್ನು ಒಪ್ಪಿ ಮಾನ್ಯ ಮಾಡುತ್ತದೆ. ಈ ಅಂಶಗಳು–ಅವುಗಳ ನಡುವಿನ ಸ್ವರೂಪವನ್ನು ಆತ್ಯಂತಿಕ ಸ್ವತಂತ್ರ ವಾಸ್ತವಗಳನ್ನಾಗಿ ಭಾವಿಸಿ ವಿವರಿಸುತ್ತದೆ. ವಸ್ತುಪ್ರಪಂಚದ ನಡುವಿನ ಸಂಬಂಧದಲ್ಲಿ ಉಂಟಾಗುವ ವ್ಯತ್ಯಾಸಗಳೇ ಕಾರಣವೆಂದು ನಂಬಲಾಗುತ್ತದೆ. ಹಾಗಾಗಿ ವೈಶೇಷಿಕ ದರ್ಶನದ ಪ್ರಕಾರ ಲೌಕಿಕದ ನಿರಾಕರಣೆಯು ಲೋಕ ಸಂಗತಿಗಳ ಹೊರತಾದ, ಬೇರೊಂದರ ನಿರಾಕರಣೆಯೇ ಹೊರತು ಶಾಶ್ವತ ಅಸ್ತಿತ್ವದ ನಿರಾಕರಣೆಯಲ್ಲ.

ನ್ಯಾಯ– ವೈಶೇಷಿಕದಂತೆಯೇ ಸಾಂಖ್ಯವೂ ವಸ್ತುವಾದಿ. ಅರಿಯುವ ಮನಸ್ಸಿಗಿಂತ ಭಿನ್ನವಾಗಿ ವಸ್ತುಗಳು ಇರುತ್ತವೆ ಎಂಬುದನ್ನು ಇದೂ ಒಪ್ಪಿಕೊಂಡಿದೆ. ಆದರೆ ಭೌತ ಜಗತ್ತಿನ ಮೂಲಗಳು ಅನೇಕ ಎಂದು ನ್ಯಾಯ–ವೈಶೇಷಿಕವು ಹೇಳಿದರೆ ಸಾಂಖ್ಯ-ಯೋಗದ ಪ್ರಕಾರ ಆ ಮೂಲವು ಒಂದೇ ಒಂದು– ಅದೆಂದರೆ ಪ್ರಕೃತಿ. ಅದು ಗಣಿಸುವ, ಕೊಡುವ ಎರಡು ಅಂತಿಮ ವಸ್ತುಗಳು – ಪ್ರಕೃತಿ ಮತ್ತು ಪುರುಷ. ಯಾವುದರಿಂದಲೂ ಹುಟ್ಟಿದ್ದಲ್ಲದ ಆತ್ಮವೊಂದನ್ನು ಬಿಟ್ಟು ವಿಶ್ವದಲ್ಲಿರುವ ಉಳಿದೆಲ್ಲದರ ಪ್ರಥಮ ಕಾರಣ ಪ್ರಕೃತಿ. ಜಡವಸ್ತು ಮತ್ತು ಶಕ್ತಿಗಳು ಸೇದಿದಂತೆ ಭೌತಿಕವಾದ್ದು ಏನೇನುಂಟೋ ಅದೆಲ್ಲಕ್ಕೂ ಮೂಲ ಕಾರಣ ಇದೇ.

ವಿಶ್ವದ ಸಮಸ್ತ ವೈವಿಧ್ಯವೂ ಅದರಿಂದಲೇ ವಿಕಾಸಗೊಳ್ಳುತ್ತದೆ. ಕಾಲದೇಶಗಳೂ ಪ್ರಕೃತಿಯ ಮುಖಗಳು. ಆದ್ದರಿಂದ ಪ್ರಕೃತಿಯಿಂದ ಪ್ರತ್ಯೇಕವಾದ ಸ್ವತಂತ್ರ ಅಸ್ತಿತ್ವಗಳಾಗಿ ಅವು ಇರಲಾರವು. ಈ ಸಿದ್ಧಾಂತೆ ಒಂದು ಮೂಲ

ವೈಶೇಷಿಕ ಎಂಬ ಪದವು 'ವಿಶೇಷ' ಎಂಬುದರಿಂದ ಬಂದಿದ್ದು, ಅದು ವ್ಯತ್ಯಾಸವನ್ನು ಸೂಚಿಸುವ ಪದವಾಗಿದೆ. ಈ ಸಿದ್ಧಾಂತದ ಪ್ರಕಾರ ವಿಶ್ವದ ಮೂಲದಲ್ಲಿರುವುದು ವಿವಿಧತೆಯೇ ಹೊರತು ಏಕತೆಯಲ್ಲ. ವಿಶ್ವವು ದ್ರವ್ಯ, ಗುಣ, ಕರ್ಮ, ಸಾಮಾನ್ಯ ವಿಶೇಷ, ಸಮವಾಯ ಮತ್ತು ಅಭಾವ–ಈ ಏಳು ಅಂಶಗಳಿಂದಾದುದು. ನ್ಯಾಯ ದರ್ಶನವೂ ಇವುಗಳನ್ನು ಒಪ್ಪಿ ಮಾನ್ಯ ಮಾಡುತ್ತದೆ. ಈ ಅಂಶಗಳು ಮತ್ತು ಅವುಗಳ ನಡುವಿನ ಸ್ವರೂಪವನ್ನು ಆತ್ಯಂತಿಕ ಸ್ವತಂತ್ರ ವಾಸ್ತವಗಳನ್ನಾಗಿ ಭಾವಿಸಿ ವಿವರಿಸುತ್ತದೆ. ವಸ್ತುಪ್ರಪಂಚದ ನಡುವಿನ ಸಂಬಂಧದಲ್ಲಿ ಉಂಟಾಗುವ ವ್ಯತ್ಯಾಸಗಳೇ ಕಾರಣವೆಂದು ನಂಬಲಾಗುತ್ತದೆ. ಹಾಗಾಗಿ ವೈಶೇಷಿಕ ದರ್ಶನದ ಪ್ರಕಾರ ಲೌಕಿಕದ ನಿರಾಕರ ಣೆಯು ಲೋಕ ಸಂಗತಿಗಳ ಹೊರತಾದ, ಬೇರೊಂದರ ನಿರಾಕರಣೆಯೇ ಹೊರತು ಶಾಶ್ವತ ಅಸ್ತಿತ್ವದ ನಿರಾಕರಣೆಯಲ್ಲ. ನ್ಯಾಯ– ವೈಶೇಷಿಕದಂತೆಯೇ ಸಾಂಖ್ಯವೂ ವಸ್ತುವಾದಿ.

ಸೂತ್ರದ ಪ್ರಕಾರ ಭೌತವಿಶ್ವದ ಸಾರಭೂತ ಲಕ್ಷಣಗಳನ್ನು ಸತ್ವ, ರಜಸು ಮತ್ತು ತಮಸ್ಸು ಎಂಬ ಮೂರಕ್ಕೆ ಇಳಿಸಲಾಗಿದೆ. ಪ್ರಕೃತಿಯು ಅವೆಲ್ಲ ಸೇರಿ ಆಗಿದೆ ಎಂದು ಕಲ್ಪಿಸಿಕೊಳ್ಳಲಾಗಿದೆ. ಪುರುಷವೆಂಬುದು ಒಂದು ಚೇತನ ಮಾತ್ರ ಅದು ಅವಿಕಾರಿ, ಶಾಶ್ವತ ಮತ್ತು ಸರ್ವವ್ಯಾಪಿ. ಎಲ್ಲ ಕ್ರಿಯೆಗಳೂ ಪ್ರಕೃತಿಗೆ ಸೀಮಿತವಾಗಿರುವುದರಿಂದ ಪುರುಷ ಸಂಪೂರ್ಣವಾಗಿ ನಿಷ್ಕ್ರಿಯವಾದದ್ದು. ಪ್ರಕೃತಿಯಂತೆ ಇಲ್ಲಿ ಆತ್ಮವನ್ನು ಕೂಡ ತರ್ಕದ ನೆರವಿನಿಂದಲೇ ಸ್ಥಾಪಿಸಲಾಗುತ್ತದೆ. ಇದು ಸಾಂಖ್ಯದ ತೀರಾ ಸ್ಥೂಲ ವಿವರಣೆ.

ಬುದ್ಧನ ನಂತರ ಹುಟ್ಟಿಕೊಂಡ ಅನೇಕ ಶಾಖೆಗಳು ಬೌದ್ಧ ತತ್ವದ ವ್ಯಾಖ್ಯಾನದಲ್ಲಿ ತೊಡಗಿದವು. ಅವುಗಳಲ್ಲಿ ಸರ್ವಾಸ್ತಿವಾದಿಗಳು ಮತ್ತು ಸೌತ್ರಾಂತಿಕರು ಬೌದ್ಧ ಧರ್ಮದೊಳಗೇ ಇದ್ದು ಅದರ ತಾತ್ವಿಕತೆಯನ್ನು ತಿರುಚಲು ಯತ್ತಿಸಿದವರೆಂಬ ಅಪಾದನೆಯನ್ನು ಹೊತ್ತವರು. ಅವುಗಳ ಸ್ಥೂಲ ನಿಲುವು ಇದು:

ಸರ್ವಾಸ್ತಿವಾದ: ಕ್ರಿಪೂ. 240 ರಲ್ಲಿ ಅಶೋಕನ ಕಾಲದಲ್ಲಿ ಜರುಗಿದ ಸಂಗೀತಿಯ ನಂತರ (ಬುದ್ಧ ಗುರುವಿನ ಪದೇಶಗಳ ವ್ಯಾಖ್ಯಾನಗಳನ್ನು ನಡೆಸಿದ ವಿಶ್ಲೇಷಣಾ ಸಭೆಗಳನ್ನು ಸಂಗೀತಿಗಳೆನ್ನುತ್ತಾರೆ) ಸರ್ವಾಸ್ತಿವಾದವು ಕಾಣಿಸಿಕೊಂಡಿತು. ಥೇರಾವಾದಕ್ಕೆ ತೀರಾ ಹತ್ತಿರವಾದ ಈ ಶಾಖೆಯು ಅಶೋಕನ ಕಾಲದಲ್ಲಿ ಅದರಿಂದ ಬೇರ್ಪಟ್ಟಿತು. ತಾತ್ವಿಕ ವಸುಬಂಧುವಿನಿಂದ ಪ್ರಣೀತವಾದದ್ದು. ಭಾರತೀಯ ದರ್ಶನಗಳಲ್ಲಿ ಒಂದಾದ ಸಾಂಖ್ಯಕ್ಕೆ ತೀರಾ ಸಮೀಪದ್ದು. ಇರುವುದೆಲ್ಲವೂ ಶಾಶ್ವತವಾಗಿ ಅಸ್ತಿತ್ವದಲ್ಲಿ ಇದೆ. ನಿರಂತರವಾಗಿ ಬದಲಾವಣೆಗೆ ಒಳಗಾಗುತ್ತಿದೆ. ಹೊಸದು ಪ್ರತ್ಯಕ್ಷವಾಗದು, ಏನೂ ವಿನಾಶಗೊಳ್ಳದು, ಭೂತಕಾಲವು ಸತ್ಯ, ಭವಿಷ್ಯತ್ಕಾಲವೂ ಸತ್ಯ. ಏಕೆಂದರೆ ವರ್ತಮಾನ ಕಾಲವು ಸತ್ಯ

ವರ್ತಮಾನದ ಉಗಮ ಭೂತ–ಭವಿಷಯತ್‌ಗಳಲ್ಲಿದೆ. ಇದನ್ನು ಕುಶ–ಪ್ರಸ್ಥಾನ ಎಂದು ಕೂಡ ಗುರುತಿಸುತ್ತಾರೆ. ಸವಾಸ್ತಿವಾದದ ತಾತ್ವಿಕತೆಯನ್ನು ಕಾತ್ಯಾಯಿನಿಪುತ್ರರ 'ಜ್ಞಾನಪ್ರಸ್ಥಾನ'ದಲ್ಲಿ ವಿವರಿಸಲಾಗಿದೆ. ಸರ್ವಾಸ್ತಿವಾದವು ಮೂರು ರೀತಿಯ ಪರಮಾಣುಗಳನ್ನು ಒಪ್ಪುತ್ತದೆ. 1) ಪರಮಾಣು 2) ಅಣು ಮತ್ತು 3) ರಜಸ್. ಪರಮಾಣು ಒಡೆಯಲಾಗದ್ದು, ಧ್ಯಾನದ ಮೂಲಕ ಮಾತ್ರ ಗ್ರಹಿಸಲು ಸಾಧ್ಯವಾಗುವಂಥದ್ದು. ವಸು ಬಂಧುವಿನ ಪ್ರಕಾರ ಸರ್ವಾಸ್ತಿವಾದದ ತಾತ್ವಿಕತೆಯು ಬುದ್ಧನ ಮೂಲ ಉಪದೇಶಗಳಲ್ಲಿ ಇಲ್ಲ. ನಂತರದ 'ವೈಭಾಷಿಕ' ಸಾಹಿತ್ಯದಲ್ಲಿ ಇದನ್ನು ರೂಪಿಸುವ ಪ್ರಯತ್ನಗಳು ನಡೆದವು. ಬೌದ್ಧ ತಾತ್ವಿಕತೆಯನ್ನು ದಿಕ್ಕು ತಪ್ಪಿಸುವ ವಿದ್ರೋಹಿ ಪ್ರಯತ್ನಗಳನ್ನು ನಾಗಾರ್ಜುನ ಮತ್ತು ಇತರ ಮಾಧ್ಯಮಿಕರು ಇಲ್ಲಿ ಗುರುತಿಸಿದ್ದಾರೆ.

ಸೌತ್ರಾಂತಿಕವಾದ: ಬೌದ್ಧರ 18 ಶಾಖೆಗಳಲ್ಲಿ ಕೊನೆಯದು. ವ್ಯಕ್ತಿತ್ವ ಶೂನ್ಯತೆ (ಪುದ್ಗಲ ಶೂನ್ಯತೆ) ಮತ್ತು ಸರ್ವಧರ್ಮ ಶೂನ್ಯತೆ ಇದರ ತಾತ್ವಿಕತೆ. ಈ ಶಾಖೆ ಹರಿವರ್ಮನ ಪ್ರಕಾರ ಅಸ್ತಿತ್ವದಲ್ಲಿರುವ ಎಲ್ಲವೂ ವಿನಾಶಗೊಳ್ಳಲೇಬೇಕು. ಶೂನ್ಯವೇ ಆತ್ಯಂತಿಕ ಸತ್ಯ ಆದರೆ ಈ ಶೂನ್ಯವನ್ನು ಅದು ಪಡೆಯುವ ಕ್ರಮವೆಂದರೆ ಅಸ್ತಿತ್ವದಲ್ಲಿರುವುದನ್ನು ಛಿದ್ರಗೊಳಿ ಸುತ್ತಾ ಹೋಗಿ ಕಡೆಗೆ ಶೂನ್ಯವನ್ನು ಪಡೆಯುವುದು. ಅದು ಅಸ್ತಿತ್ವದ ಆ ಇನ್ನೊಂದು ತುದೆ. ಅಂತಿವಮಾಗಿ ಗಮನಿಸಿದಾಗ ಬುದ್ಧನ ಮೂಲ ತತ್ವಗಳಲ್ಲಿ ಇದೂ ಇಲ್ಲದಿರುವುದನ್ನು ನಂತರದ ವ್ಯಾಖ್ಯಾನಕಾರರು ಗುರುತಿಸುತ್ತಾರೆ.

ಬುದ್ಧಗುರುವಿನ ಉಪದೇಶಗಳನ್ನು ಶ್ರಾವಕರು (ಕೇಳಿಸಿಕೊಂಡ ಶಿಷ್ಯರು) ಅವುಗಳನ್ನು ತ್ರಿಪಿಟಕಗಳೆಂಬ ಗ್ರಂಥಗಳಲ್ಲಿ ಸಂಗ್ರಹಿಸಿಟ್ಟಿದ್ದಾರೆ. ವಿನಯಪಿಟಕ, ಅಭಿಧಮ್ಮ ಪಿಟಕ ಮತ್ತು ಸುತ್ತ ಪಿಟಕ–ಈ ಮೂರು ಗುಂಪುಗಳಾಗಿ ಬುದ್ಧನ ಉಪದೇಶಲವನ್ನು ವಿಂಗಡಿಸಲಾಗಿದೆ. ವಿನಯಪಿಟಕದಲ್ಲಿ ಸಂಘದ ಭಿಕ್ಕುಗಳಿಗೆ ನಡವಳಿಕೆಗಳನ್ನು ಸೂಚಿಸಲಾಗಿದೆ. ಅಭಿಧಮ್ಮ ಪಿಟಕದಲ್ಲಿ ಬೌದ್ಧತಾತ್ವಿಕತೆಯ ವಿಶ್ಲೇಷಣೆ ಇದೆ. ಕೊನೆಯದಾಗಿ ಸುತ್ತಪಿಟಕದಲ್ಲಿ ಬುದ್ಧನ ಉಪದೇಶಗಳ ಸೂತ್ರ ರೂಪದ ದಾಖಲೆ ಇದೆ. ಬುದ್ಧನ ಪರಿನಿರ್ವಾಣದ ನಂತರ ಬುದ್ಧನ ಶಿಷ್ಯರಿಂದ ಸಂಗ್ರಹಿಸಲ್ಪಟ್ಟ ಈ ತ್ರಿಪಿಟಗಳನ್ನು ಬೌದ್ಧ ಧರ್ಮದ ಎಲ್ಲ ಶಾಖೆಗಳೂ ಗೌರವಿಸುತ್ತವೆ. ಬುದ್ಧನ ಉಪದೇಶದ ಮುಖ್ಯಾಂಶಗಳಾದ ನಾಲ್ಕು ಶ್ರೇಷ್ಠ ಸತ್ಯಗಳು, ಅಷ್ಟಾಂಗ ಮಾರ್ಗ, ಪ್ರತೀತ್ಯ ಸಮುತ್ಪಾದ, ಶೂನ್ಯತೆ, ಅನಾತ್ಮವಾದ ಮುಂತಾದವುಗಳಿಗೆ ಈ ತ್ರಿಪಿಟಕಗಳೇ ಮೂಲ ಆಕರವಾಗಿವೆ.

'ದುಃಖದಿಂದ ಮುಕ್ತಮಾಡುವ ಲೋಕ ಸಂಬಂಧದ ಸರಿಯಾದ ಅರಿವನ್ನು

ಅನುಕಂಪದಿಂದ ಬೋಧಿಸಿ, ಅರಿತು ಅನುಸರಿಸಿದಲ್ಲದೇ

ಅನ್ಯಮಾರ್ಗವಿಲ್ಲವೆಂದ ಬುದ್ಧಗುರುವಿಗೆ ವಂದಿಸುತ್ತೇನೆ.' □

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್

ಜಮೀನ್ದಾರಿಕೆಯ ಕಪಿಮುಷ್ಠಿಯಲ್ಲಿ ಆರ್ಥಿಕತೆ

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಗೆಲುವಿಗೆ ಪಕ್ಷ ಮತದಾರರೊಂದಿಗೆ ಹೊಂದಿದ್ದ ಆರ್ಥಿಕ ಸಂಬಂಧ ಕಾರಣವೆಂದು ನಾನು ಇತ್ತೀಚೆಗೆ ಬರೆದಿದ್ದೆ. ಭೋಗವಸ್ತುಗಳ ಬಗ್ಗೆ ಆಸಕ್ತಿ ತಳೆದಿರುವ ಜನರ ಭಾವನೆಗಳಿಗೆ ಕಾಂಗ್ರೆಸ್ ಹತ್ತಿರವಾದದ್ದು ಈ ಗೆಲುವಿಗೆ ಕಾರಣವಾಯಿತು ಎಂಬುದು ನನ್ನ ವಾದವಾಗಿತ್ತು.

ಆದರೆ ಈ ವಾದವನ್ನು ಸ್ವತಃ ಕಾಂಗ್ರೆಸ್ ನಾಯಕರು ಒಪ್ಪುವುದಿಲ್ಲ. ಕಾಂಗ್ರೆಸ್ ಗೆಲುವಿಗೆ ಪಕ್ಷದ ಮುಂಚೂಣಿ ಕಾರ್ಯಕ್ರಮಗಳು, ವಿಶೇಷವಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಕಾಯ್ದೆ ಕಾರಣ ಎಂಬುದು ಈ ನಾಯಕ ಶಿರೋಮಣಿಗಳ ನಂಬಿಕೆ. ಕಾಂಗ್ರೆಸ್ ಕಾರ್ಯಕರ್ತರು ಯೋಜನೆಯನ್ನು ಕೊಂಡಾಡುವುದರಲ್ಲಿ ಆಶ್ಚರ್ಯವಿಲ್ಲ. ಆದರೆ ಕೆಲವು ಆರ್ಥಿಕ ತಜ್ಞರು ಮತ್ತು ಅಂಕಣಕಾರರು ಕೂಡ ಯೋಜನೆಯ 'ಶಕ್ತಿ'ಗೆ ಮಾರುಹೋಗಿದ್ದಾರೆ. ಬಿಜೆಪಿಯ ಒಂದು ವರ್ಗ ಕೂಡ ಈ ವಾದವನ್ನು ಒಪ್ಪುತ್ತದೆ.

ಆದರೆ ಸತ್ಯಾಂಶ ಇದಕ್ಕೆ ತದ್ವಿರುದ್ಧವಾಗಿದೆ. ದೆಹಲಿ, ಜೈಪುರ್, ಚಂಡೀಗಢ ಮತ್ತು ಡೆಹರಾಡೂನ್‌ಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದ್ದು ಎಲ್ಲರಿಗೂ ತಿಳಿದಿರುವ ವಿಚಾರ. ಆದರೆ ಆಶ್ಚರ್ಯವೆಂದರೆ ಉದ್ಯೋಗ ಖಾತ್ರಿ ಯೋಜನೆ ಇಲ್ಲಿ ಅನುಷ್ಠಾನಗೊಂಡಿರಲೇ ಇಲ್ಲ. ಇನ್ನು ಬಿಹಾರ, ಝಾರ್ಖಂಡ್ ಮತ್ತು ಛತ್ತೀಸ್‌ಗಢ ರಾಜ್ಯಗಳಲ್ಲಿ ಯೋಜನೆ ಕಾಂಗ್ರೆಸ್‌ಗೆ ಗೆಲುವು ತಂದುಕೊಡಬೇಕಿತ್ತು. ಆದರೆ ಈ ರಾಜ್ಯಗಳಲ್ಲಿ ಕಾಂಗ್ರೆಸ್ ನಿರಾಶೆ ಅನುಭವಿಸಬೇಕಾಯಿತು.

ಹಾಗಾದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಕಾಂಗ್ರೆಸ್‌ನ ಗೆಲುವಿನ ಮೇಲೆ ಯಾವುದೇ ರೀತಿಯ ಪರಿಣಾಮ ಬೀರಲಿಲ್ಲವೇ? ಈಗಾಗಲೇ ಕಾಂಗ್ರೆಸ್‌ನ ನಾಯಕರು, ಚಿಂತಕರು, ಆರ್ಥಿಕ ತಜ್ಞರು ಯೋಜನೆಯ ಗುಣಗಾನ ಮಾಡುತ್ತಿದ್ದಾರೆ. ಆದಷ್ಟು ಬೇಗ ವಿಶ್ವಸಂಸ್ಥೆ ಮತ್ತು ವಿಶ್ವಬ್ಯಾಂಕ್ ಕೂಡ ಯೋಜನೆಯ ಅಭಿಮಾನಿಗಳ ಪಟ್ಟಿ ಸೇರಲಿವೆ. ಈ ಹಿಂದೆ ಲಾಲೂಪ್ರಸಾದ್ ಯಾದವ್ ಅವರು ಬಿಹಾರದಲ್ಲಿ ಜಾರಿಗೆ ತಂದಿದ್ದ 'ಚಾರ್ವಾಹ ವಿಶ್ವವಿದ್ಯಾನಿಲಯ' ಶಾಲೆಗಳ ಬಗ್ಗೆ ಕೂಡ ಇದೇ ರೀತಿಯ ಭ್ರಮೆ ಹುಟ್ಟಿಕೊಂಡಿತ್ತು. ದನಗಾಹಿಗಳ ಬಳಿಗೇ ಶಾಲೆಗಳನ್ನು ಕೊಂಡೊಯ್ದು ಅಕ್ಷರ ಕಲಿಸುವ ಪ್ರಯತ್ನ ಇದಾಗಿತ್ತು. ಆದರೆ 'ಚಾರ್ವಾಹ ವಿಶ್ವವಿದ್ಯಾನಿಲಯ'ಗಳ ಪಾಡೇನಾಗಿದೆ ಈಗ? ಹಸು-ಎಮ್ಮೆಗಳ ಜೊತೆಗೆ ತಮ್ಮ ಮಕ್ಕಳು ವಿದ್ಯಾಭ್ಯಾಸ ಮಾಡಲಿ ಎಂದು ಯಾವ ಪೋಷಕರು ತಾನೇ ಬಯಸುತ್ತಾರೆ? ಯಾವ ಬುದ್ಧಿಜೀವಿಗಳು ತಮ್ಮ ಮಕ್ಕಳನ್ನು ಈ ಶಾಲೆಗಳಿಗೆ ಕಳುಹಿಸಿದ್ದರು?

ನನ್ನ ಜೀವಿತಾವಧಿಯ ಅರ್ಧ ಸಮಯವನ್ನು ನಾನು ಚಳ ವಳಿಗಳಲ್ಲಿಯೇ ಕಳೆದುಬಿಟ್ಟಿದ್ದೇನೆ. ಇದರಲ್ಲಿ ಐದು ವರ್ಷ ಭ್ರಷ್ಟ ಸರ್ಕಾರಗಳನ್ನು ತೊಲಗಿಸುವುದರಲ್ಲಿ ಕಳೆದಿದ್ದೇನೆ. ಆದರೆ ಇದುವರೆಗೂ ಯಾವುದೇ ಸಂಘಟನೆಗಳಿಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಂತಹ ಕಾರ್ಯಕ್ರಮಗಳು, ಶಾಲಾ ಮಕ್ಕಳಿಗೆ ಉಚಿತ ಊಟ, ಅಥವಾ ಸಾರ್ವಜನಿಕ ಆಹಾರ ವಿತರಣಾ ವ್ಯವಸ್ಥೆ, ಈ ರೀತಿಯ ಕಾರ್ಯಕ್ರಮಗಳಿಗೆ ಬೇಡಿಕೆ ಬಂದಿಲ್ಲ. ಆದರೆ ಎಡಪಕ್ಷಗಳು ಮಾತ್ರ ಇದಕ್ಕೆ ಅಪವಾದ. ಎಡಪಕ್ಷಗಳಿಗೆ ಸಂಪತ್ತು ಸೃಷ್ಟಿಸುವ ತಾಕತ್ತಿಲ್ಲ. ಹಾಗಾಗಿ ಸರ್ಕಾರವೇ ಬಡಜನರಿಗೆ ಆಹಾರ ಒದಗಿಸಬೇಕೆಂದು ಬಯಸುತ್ತವೆ.

ಜನರು ಬೇಡಿಕೆ ಸಲ್ಲಿಸದೇ ಸರ್ಕಾರ ಈ ರೀತಿಯ ಸೌಲಭ್ಯ ನೀಡುವುದು ನಿಜಕ್ಕೂ ಆಶ್ಚರ್ಯಕರ ವಿಷಯ. ಸ್ಕಾಲರ್‌ಷಿಪ್ ಹೆಚ್ಚಳ ಮತ್ತಿತರ ಶೈಕ್ಷಣಿಕ ಸೌಲಭ್ಯಗಳ ಬೇಡಿಕೆಗಾಗಿ ಹೋರಾಟ ನಡೆಸುವ ದಲಿತ ಚಳವಳಿಕಾರರನ್ನು ಪೊಲೀಸರು ಲಾಠಿ ಬೀಸಿ ಚದುರಿಸಿರುವುದನ್ನು ನಾನು ನೋಡಿದ್ದೇನೆ. ಅವರ ಬೇಡಿಕೆಗಳು ಯಾವತ್ತೂ ಈಡೇರುವುದಿಲ್ಲ. ಆದರೆ ಕೇಳದ ಸೌಲಭ್ಯಗಳು ಮಾತ್ರ ದೊರಕುತ್ತಲೇ ಇರುತ್ತವೆ.

ಸಿಪಿಐ (ಎಂ) ಮತ್ತು ಸಿಪಿಐ, ಈ ಎರಡೂ ಪಕ್ಷಗಳೂ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಮೂಲತಃ ತಮ್ಮ ಯೋಜನೆ ಎಂದು ಸಾರ್ವಜನಿಕವಾಗಿ ಹೇಳಿಕೆ ನೀಡಲಾರಂಭಿಸಿವೆ. ಆದರೆ ಯಾವುದೇ ಯೋಜನೆಗಳ ಬೆಂಬಲವಿಲ್ಲದೆ ಮಮತಾ ಬ್ಯಾನರ್ಜಿ ಪ.ಬಂಗಾಳದಲ್ಲಿ ಎಡಪಕ್ಷಗಳನ್ನು ಬಹುತೇಕ ನಿರ್ನಾಮ ಮಾಡುವ ಹಂತದಲ್ಲಿದ್ದಾರೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಆರ್ಥಿಕ ಪವಾಡವೇನೂ ಅಲ್ಲ. ಯಾವುದೇ ರೀತಿಯ ಆರ್ಥಿಕ ತರ್ಕಕ್ಕೆ ನಿಲುಕದ ಈ ಯೋಜನೆಯನ್ನು ಎಡಪಕ್ಷಗಳು ಕೆಲವು ಸರ್ಕಾರೇತರ ಸಂಘ ಸಂಸ್ಥೆಗಳೊಂದಿಗೆ ಸೇರಿ ರೂಪಿಸಿತ್ತು. ಈ ರೀತಿಯ ಯೋಜನೆಗಳ ಶೇ. 10ರಷ್ಟು ಹಣ ಮಾತ್ರ ಉದ್ದೇಶಿತ ಫಲಾನುಭವಿಗಳಿಗೆ ತಲುಪುತ್ತಿದೆ ಎಂದು ಸ್ವತಃ ರಾಹುಲ್ ಗಾಂಧಿ ಅವರೇ ಹೇಳಿದ್ದಾರೆ. ಹಾಗಾದರೆ ಉದ್ಯೋಗ ಖಾತ್ರಿ ಯೋಜನೆ ಹೇಗೆ ಕಾಂಗ್ರೆಸ್ ಗೆಲುವಿಗೆ ಕಾರಣವಾಗಲು ಸಾಧ್ಯ?

ಇನ್ನು ಉದ್ಯೋಗ ಖಾತ್ರಿ ಯೋಜನೆಯಂತಹ ಕಾರ್ಯಕ್ರಮಗಳು ಪ್ರಧಾನಿ ಮನಮೋಹನ್ ಸಿಂಗ್‌ರನ್ನು ಹೇಗೆ ಮೋಡಿ ಮಾಡಿದವು ಎಂದು ನನಗೆ ಅರ್ಥವಾಗುತ್ತಿಲ್ಲ. ದೇಶದ ಆರ್ಥಿಕ ವೃದ್ಧಿಗೆ ಸಂಪತ್ತಿನ ಸೃಷ್ಟಿ ಮುಖ್ಯವೇ ಹೊರತು ಸಂಪತ್ತಿನ ಮರುವಿತರಣೆಯಲ್ಲ ಎಂಬ ಅಂಶ ಸ್ವತಃ ಆರ್ಥಿಕ ತಜ್ಞರಾಗಿರುವ ಮನಮೋಹನ್ ಸಿಂಗ್ ಅವರಿಗೆ ಗೊತ್ತು.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಳಂತಹ ಕಾರ್ಯಕ್ರಮಗಳು ಆರ್ಥಿಕವಾಗಿ ಸದೃಢವಲ್ಲವೆಂದು ಎಲ್ಲರಿಗೂ ಗೊತ್ತಿದೆ. ಆದರೆ ರಾಜಕೀಯವಾಗಿ ಕೂಡ ಈ ಯೋಜನೆ ಅಸಮರ್ಪಕ ಎಂಬುದನ್ನು ಗಮನಿಸಬೇಕು. ಇದು ಜಮೀನದ್ದಾರಿ ವ್ಯವಸ್ಥೆಯ ಪಳೆಯುಳಿಕೆಯಲ್ಲದೆ ಮತ್ತೇನೂ ಅಲ್ಲ. ಐರೋಪ್ಯ ಅಥವಾ ಏಷ್ಯಾದ ಜಮೀನ್ದಾರಿ ವ್ಯವಸ್ಥೆ ಪ್ಯಾಕೇಜ್ ನೀಡುವುದರಲ್ಲಿ ಎತ್ತಿದ ಕೈ. ಜನರು ಸ್ವಾವಲಂಬಿಗಳಾಗುವುದು ಈ ಜಮೀನ್ದಾರಿ ಧೋರಣೆಯ ನಾಯಕರಿಗೆ ಬೇಕಿಲ್ಲ. ತಮ್ಮ ಅಗತ್ಯಗಳಿಗೆ ಜನ ಈ ನಾಯಕರನ್ನು ಅವಲಂಬಿಸಬೇಕೆನ್ನುವುದು

ನನ್ನ ಜೀವಿತಾವಧಿಯ ಅರ್ಧ ಸಮಯವನ್ನು ನಾನು ಚಳವಳಿಗಳಲ್ಲಿಯೇ ಕಳೆದುಬಿಟ್ಟಿದ್ದೇನೆ. ಇದರಲ್ಲಿ ಐದು ವರ್ಷ ಭ್ರಷ್ಟ ಸರ್ಕಾರಗಳನ್ನು ತೊಲಗಿಸುವುದರಲ್ಲಿ ಕಳೆದಿದ್ದೇನೆ. ಆದರೆ ಇದುವರೆಗೂ ಯಾವುದೇ ಸಂಘಟನೆಗಳಿಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಂತಹ ಕಾರ್ಯಕ್ರಮಗಳು, ಶಾಲಾ ಮಕ್ಕಳಿಗೆ ಉಚಿತ ಊಟ, ಅಥವಾ ಸಾರ್ವಜನಿಕ ಆಹಾರ ವಿತರಣಾ ವ್ಯವಸ್ಥೆ, ಈ ರೀತಿಯ ಕಾರ್ಯಕ್ರಮಗಳಿಗೆ ಬೇಡಿಕೆ ಬಂದಿಲ್ಲ. ಆದರೆ ಎಡಪಕ್ಷಗಳು ಮಾತ್ರ ಇದಕ್ಕೆ ಅಪವಾದ. ಎಡಪಕ್ಷಗಳಿಗೆ ಸಂಪತ್ತು ಸೃಷ್ಟಿಸುವ ತಾಕತ್ತಿಲ್ಲ. ಹಾಗಾಗಿ ಸರ್ಕಾರವೇ ಬಡಜನರಿಗೆ ಆಹಾರ ಒದಗಿಸಬೇಕೆಂದು ಬಯಸುತ್ತವೆ. ಜನರು ಬೇಡಿಕೆ ಸಲ್ಲಿಸದೇ ಸರ್ಕಾರ ಈ ರೀತಿಯ ಸೌಲಭ್ಯ ನೀಡುವುದು ನಿಜಕ್ಕೂ ಆಶ್ಚರ್ಯಕರ ವಿಷಯ.

ಕನ್ನಡಕ್ಕೆ:
ಸತ್ಯಪ್ರಕಾಶ್ ಎಂ ಆರ್

ಇವರ ಪ್ರಮುಖ ಧೋರಣೆ. ಜನರ ಗುರುತರವಾದ ಬೇಡಿಕೆಗಳನ್ನು ಬಹುತೇಕ ನಿರಾಕರಿಸುವ ಈ ನಾಯಕರು, ಅವರು ಕೇಳದ ಹಲವು ಸೌಲಭ್ಯಗಳನ್ನು ಒದಗಿಸುತ್ತಾರೆ. ಕೇಂದ್ರ ಸರ್ಕಾರದ ಯೋಜನೆಗಳು ಕೂಡ ಇಂತಹುದೇ ಧೋರಣೆಯನ್ನು ಹೊಂದಿರುವುದರಲ್ಲಿ ಸಂಶಯವೇ ಇಲ್ಲ.

ಈ ದೇಶದ ಬಡವರು ಸುಖಮಯ ಜೀವನ ನಡೆಸಲು ಪೂರಕವಾದ ಸಂಪನ್ಮೂಲಗಳನ್ನು ಕೇಳಿದರೆ ಅವುಗಳನ್ನು ನಿರಾಕರಿಸಿ ಅನವಶ್ಯಕವಾಗಿ ಉಚಿತ ಸೌಲಭ್ಯಗಳನ್ನು ನೀಡುತ್ತವೆ ಇಲ್ಲಿನ ಸರ್ಕಾರಗಳು. ಆಂಧ್ರದಲ್ಲಿ ನಾಯ್ಡು ಅವರ ಉಚಿತ ಟಿ.ವಿ ಆಮಿಷಕ್ಕೆ ಜನ ಸೊಪ್ಪು ಹಾಕಲಿಲ್ಲ. ಇನ್ನು ಎರಡು ರೂಪಾಯಿಗೆ ಕೆ.ಜಿ ಅಕ್ಕಿ/ಗೋಧಿ ನೀಡುವ ಬಿ.ಜೆ.ಪಿ.ಯ ಭರವಸೆಗೆ ಕೂಡ ಜನ ಮರುಳಾಗಲಿಲ್ಲ.

ಚುನಾವಣೆಯ ಬಳಿಕ ಎಡಪಕ್ಷಗಳ ಕಪಿಮುಷ್ಟಿಯಿಂದ ಹೊರಬಂದಿರುವ ಪ್ರಧಾನಿ ಸಿಂಗ್ ಅವರು ರಾಜಕೀಯ ವಿಚಾರಗಳು ಆರ್ಥಿಕತೆಯನ್ನು ನಿಯಂತ್ರಿಸಲು ಅವಕಾಶ ಕೊಡಬಾರದು. ಬರ, ಪ್ರವಾಹ, ಭೂಕಂಪ, ಸುನಾಮಿಗಳಂತಹ ಪ್ರಕೃತಿ ವಿಕೋಪಗಳು ಉಂಟಾದಾಗ ಸರ್ಕಾರ ಸಹಾಯಹಸ್ತ ಚಾಚುವುದು ತಪ್ಪಲ್ಲ. ಆದರೆ ಅನವಶ್ಯಕವಾಗಿ ಹಣ ನೀಡುವುದರ ಮೂಲಕ ಸರ್ಕಾರ ಬಡವರ ನೈತಿಕ ಶಕ್ತಿಯನ್ನು ಕುಗ್ಗಿಸುವುದು ಅಕ್ಷರಶಃ ತಪ್ಪು.

ಸರ್ಕಾರಿ ಜಮೀನ್ದಾರಿಕೆ

ನನ್ನ ಊರನ್ನು ಮೂರು ಮಾವಿನ ತೋಪುಗಳು ಸುತ್ತುವರೆದಿವೆ. ಪಕ್ಷಿನೋಟವನ್ನು ಬೀರಿದರೆ ಇಡೀ ಊರು ಹಸಿರು ಸಲಾಡ್ ಮಧ್ಯೆ ಇರಿಸಿದ ಕರಿದ ಏಡಿಯಂತೆ ಕಾಣುತ್ತದೆ. ಈ ಮಾವಿನ ತೋಪುಗಳಲ್ಲಿ ಮಾವಿನಹಣ್ಣುಗಳನ್ನು ಬೇಟೆಯಾಡುವುದರಲ್ಲಿಯೇ ನನ್ನ ಬಹುತೇಕ ಬಾಲ್ಯವನ್ನು ನಾನು ಕಳೆದಿದ್ದೇನೆ. ಆದರೆ ಇಂದು ಇಡೀ ಊರಿನ ಸುತ್ತ ಒಂದೇ ಒಂದು ಮಾವಿನ ಮರವೂ ಉಳಿದಿಲ್ಲ.

ದಲಿತರೇ ಹೆಚ್ಚಾಗಿ ವಾಸಿಸುವ ನನ್ನ ಸ್ವಗ್ರಾಮದಲ್ಲಿ ಸುಮಾರು 15 ಮೇಲ್ಜಾತಿ ಕುಟುಂಬಗಳು ಕೂಡ ವಾಸಿಸುತ್ತಿವೆ. ಇವರಲ್ಲಿ 14 ಕುಟುಂಬಗಳು ಭೂಮಿಹಾರ್ ಸಮುದಾಯಕ್ಕೆ ಸೇರಿದ್ದರೆ, ಉಳಿದ ಇನ್ನೊಂದು ಕುಟುಂಬ ಕ್ಷತ್ರಿಯ ಸಮುದಾಯಕ್ಕೆ ಸೇರಿದೆ. ಮೇಲ್ಜಾತಿ ಕುಟುಂಬಗಳ ಬಳಿ ಸಾಕಷ್ಟು ಪ್ರಮಾಣದಲ್ಲಿ ಕೃಷಿ ಭೂಮಿ ಇದೆ. ಎರಡು ಮೇಲ್ಜಾತಿ ಕುಟುಂಬಗಳನ್ನು ಜಮೀನ್ದಾರರು ಎಂದು ಕರೆಯಬಹುದಾದರೆ, ಹತ್ತು ಕುಟುಂಬಗಳನ್ನು ಭೂಮಾಲೀಕರು ಎಂದು ವರ್ಗೀಕರಿಸಬಹುದು. ಇನ್ನುಳಿದ ಮೂರು ಕುಟುಂಬಗಳನ್ನು ಶ್ರೀಮಂತರು ಎನ್ನಬಹುದು.

ಆದರೆ ಇಂದು ಇವರೆಲ್ಲರ ಪರಿಸ್ಥಿತಿ ಬದಲಾಗಿದೆ. ಭೂಮಾಲೀಕ ಕುಟುಂಬಗಳಲ್ಲಿ ಸುಮಾರು ಅರ್ಧದಷ್ಟು ಈಗ ಕೇವಲ 'ಶ್ರೀಮಂತ ಕೃಷಿಕ' ಕುಟುಂಬಗಳಾಗಿ ಉಳಿದಿವೆ. ಸುಮಾರು ಅರ್ಧ ಡಜನ್ ಭೂಮಾಲೀಕ ಕುಟುಂಬಗಳು ಕಷ್ಟಪಟ್ಟು ಜೀವನ ನಡೆಸುವ ಹಂತ ತಲುಪಿವೆ. ಊರಿನ ಶ್ರೀಮಂತ ಜಮೀನ್ದಾರರ ಸೊಸೆ ಖಾಸಗಿ ಶಾಲೆಯಲ್ಲಿ ಕೇವಲ 1,000 ರೂ. ಸಂಬಳಕ್ಕೆ ಕೆಲಸ ಮಾಡುತ್ತಿದ್ದಾರೆ. ಮೇಲ್ಜಾತಿಯ ಕನಿಷ್ಠ ಓರ್ವ ಯುವಕ ಕಸಗುಡಿಸುವ ಸರ್ಕಾರಿ ಕೆಲಸಕ್ಕೆ ಅರ್ಜಿ ಹಾಕಿದ್ದಾನೆ. ಇನ್ನು ಒಂದೆರಡು ಕುಟುಂಬಗಳು ರೇಷನ್ ಕಾರ್ಡ್‌ಗಾಗಿ ಹಾತೊರೆಯುವ ಹಂತಕ್ಕೆ ಬಂದು ನಿಂತಿವೆ.

1948ರಲ್ಲಿ ದೇಶದಲ್ಲಿ ಜಮೀನ್ದಾರಿಕೆಯನ್ನು ನಿರ್ಮೂಲನೆ ಮಾಡಲಾಯಿತು. ಪರಿಣಾಮವಾಗಿ ಭೂಮಿಯಿಂದ ಜಮೀನ್ದಾರರಿಗೆ ಬರುತ್ತಿದ್ದ ಆದಾಯಕ್ಕೆ ಕತ್ತರಿ ಬಿತ್ತು. ಇನ್ನು ಭೂಮಾಲೀಕರು ಕಡಿಮೆ ಕೂಲಿಗೆ ಸಿಗುತ್ತಿದ್ದ ಕೃಷಿ ಕಾರ್ಮಿಕರನ್ನು ಕಳೆದುಕೊಂಡರು. ಈ ಭೂಮಾಲೀಕರ ಮುಂದಿನ ಪೀಳಿಗೆ ಸರ್ಕಾರಿ ಕೆಲಸ ಅಥವಾ ಉದ್ಯಮ ಸ್ಥಾಪನೆಗೆ ಪ್ರಯತ್ನ ನಡೆಸಲಿಲ್ಲ. ಆದಾಯ ಕಡಿಮೆಯಾದರೂ ಕೂಡ ನನ್ನ ಗ್ರಾಮದಲ್ಲಿ ಎಲ್ಲ ಮೇಲ್ಜಾತಿ ಕುಟುಂಬಗಳು ಈಗಲೂ ಕೂಡ ಈ ಹಿಂದಿನ ಐಷಾರಾಮಿ ಜೀವನಶೈಲಿಯನ್ನೇ ನಡೆಸುತ್ತಾ ಬಂದಿದ್ದಾರೆ.

ಐಷಾರಾಮಿ ಜೀವನಶೈಲಿ ಮತ್ತು ಅನವಶ್ಯಕ ಕೊಡುಗೆಗಳನ್ನು ನೀಡುವುದು ಜಮೀನ್ದಾರಿಕೆಯ ಪ್ರಮುಖ ಲಕ್ಷಣ. ಕೂಲಿ ಹೆಚ್ಚಳಕ್ಕಾಗಿ ಕಾರ್ಮಿಕರು ಹೋರಾಟ ಮಾಡಿದರೆ ಸದೆಬಡಿಯುತ್ತಿದ್ದ ಜಮೀನ್ದಾರರು, ತಮ್ಮ ಮಕ್ಕಳ ಮದುವೆ ಸಮಯದಲ್ಲಿ ಊಟ-ಬಟ್ಟೆಯನ್ನು ಧಾರಾಳವಾಗಿ ಬಡವರಿಗೆ ನೀಡುತ್ತಿದ್ದರು. ಕೃಷಿ ಕಾರ್ಮಿಕರ ಸ್ವಾವಲಂಬಿ ಬೇಡಿಕೆಗಳನ್ನು ತಿರಸ್ಕರಿಸುತ್ತಿದ್ದ ಜಮೀನ್ದಾರರು, ಅವರು ಕೇಳದೇ ಊಟ-ಬಟ್ಟೆಗಳ ಕೊಡುಗೆ ನೀಡುತ್ತಿದ್ದರು. ಈ ಜಮೀನ್ದಾರಿ ವ್ಯವಸ್ಥೆಯ ವ್ಯಾಕರಣ ತುಂಬಾ ಸರಳವಾದುದು. ಕೃಷಿ ಕಾರ್ಮಿಕರಿಗೆ ಆರ್ಥಿಕ ಸ್ವಾತಂತ್ರ್ಯ ಲಭಿಸುವಂತಹ ಯಾವುದೇ ಬೆಳವಣಿಗೆಯನ್ನು ತಡೆಗಟ್ಟುವುದು, ಈ ಕೃಷಿ ಕಾರ್ಮಿಕರು ಊಟ-ಬಟ್ಟೆಗೆ ತಮ್ಮನ್ನೇ ಅವಲಂಬಿಸುವಂತೆ ನೋಡಿಕೊಳ್ಳುವುದು ಇದರ ತಂತ್ರಗಾರಿಕೆ. ಈಗ ಭಾರತ ಸರ್ಕಾರ ಮಾಡುತ್ತಿರುವುದು ಕೂಡ ಇದನ್ನೇ.

ನಾನು ಚಿಕ್ಕವನಾಗಿದ್ದಾಗ, ಭೂಮಿಹಾರ್ ಸಮುದಾಯದ ಮದುವೆಗಳಲ್ಲಿ ಆನೆಗಳು ಮತ್ತು ಕುದುರೆಗಳಿಲ್ಲದೆ ಗಂಡಿನ ಕಡೆಯವರು ಬರುತ್ತಲೇ ಇರಲಿಲ್ಲ. ಆನೆ-ಕುದುರೆಗಳ ಹಿಂದೆ, ಕಾರುಗಳು ಮತ್ತು ಜೀಪುಗಳು ಹಿಂಬಾಲಿಸುತ್ತಿದ್ದವು. ಗ್ರಾಮದ ಹೊರವಲಯದಲ್ಲಿ ಫುಟ್‌ಬಾಲ್ ಸ್ಟೇಡಿಯಂನ ಎರಡುಪಟ್ಟು ದೊಡ್ಡದಾದ ಮೈದಾನದಲ್ಲಿ ನಡೆಯುತ್ತಿದ್ದ ಆನೆಗಳು ಮತ್ತು ಕುದುರೆಗಳ ಓಟದ ಸ್ಪರ್ಧೆಯನ್ನು ಇಡೀ ಗ್ರಾಮಸ್ಥರು ಕಾತುರದಿಂದ ನೋಡುತ್ತಿದ್ದರು.

ಮದುವೆಯ ವೇಳೆ ಜಮೀನ್ದಾರಿ ಕುಟುಂಬಗಳು ಬೃಹತ್ ಪ್ರಮಾಣದಲ್ಲಿ ಊಟದ ವ್ಯವಸ್ಥೆ ಮಾಡುತ್ತಿದ್ದವು. ಗ್ರಾಮದ ಪ್ರತಿ ಕುಟುಂಬದಿಂದ ಕನಿಷ್ಠ ಓರ್ವ ಸದಸ್ಯನಾದರೂ ಮದುವೆಗೆ ಬರುತ್ತಿದ್ದ. ಇನ್ನು ಕೆಲವು ಕುಟುಂಬಗಳು ನೆರೆಯ ಗ್ರಾಮಸ್ಥರನ್ನು ಕೂಡ ಮದುವೆಗೆ ನಿಮಂತ್ರಿಸುವ ಪರಿಪಾಠ ಬೆಳೆಸಿಕೊಂಡಿದ್ದವು. ಮದುವೆಯ ಮನೆಯಲ್ಲಿ ಒಂದು ಪಂಕ್ತಿಯಲ್ಲಿ ಸುಮಾರು ಸಾವಿರ ಮಂದಿ ಊಟ ಮಾಡುತ್ತಿದ್ದರು.

ಭೂಮಾಲೀಕರು ತಮ್ಮ ಆದಾಯದ ಮಿತಿಯನ್ನು ಮೀರಿ ಐಷಾರಾಮಿ ಜೀವನ ನಡೆಸುತ್ತಿದ್ದರು. ತಮ್ಮ ವಿಜೃಂಭಣೆಯ ಜೀವನಶೈಲಿಯನ್ನು ಕಾಯ್ದುಕೊಳ್ಳಲು ಮೊದಲು ತಮ್ಮ ಉಳಿತಾಯದ ಹಣವನ್ನು ಖರ್ಚು ಮಾಡುತ್ತಾ ಬಂದ ಇವರು, ನಂತರ ತಮ್ಮ ಕಂಚಿನ ಪಾತ್ರೆ-ಪಗಡಿಗಳನ್ನು ಮಾರಾಟ ಮಾಡಿದರು. ಆಮೇಲೆ ಬೆಳ್ಳಿ ಆಭರಣಗಳನ್ನು ಮಾರಾಟ ಮಾಡಲಾರಂಭಿಸಿದ ಇವರು, ನಂತರ ಮಾವಿನ ಮರಗಳನ್ನು ಕೂಡ ಒಂದೊಂದಾಗಿ ಮಾರಾಟ ಮಾಡಿಬಿಟ್ಟರು. ಸ್ಥಳೀಯ ಬ್ಯಾಂಕರ್‌ಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಈ ಭೂಮಾಲೀಕರ ಬಳಿ ಬಡವರು ಅಲ್ಪ ಮೊತ್ತದ ಹಣಕ್ಕಾಗಿ ತಮ್ಮ ಆಭರಣಗಳನ್ನು ಅಡವಿಟ್ಟು ಸಾಲ ಪಾವತಿಸಲಾಗದೆ ಅವುಗಳನ್ನು ಕಳೆದುಕೊಳ್ಳುತ್ತಿದ್ದರು. ಇಂತಹ ಆಭರಣಗಳನ್ನು ಕೂಡ ಮಾರಿದ ಮೇಲೆ ಕಡೆಯದಾಗಿ ಭೂಮಿಯನ್ನು ಮಾರಾಟ ಮಾಡುವ ಹಂತಕ್ಕೆ ಬಂದಿದ್ದಾರೆ ಒಂದು ಕಾಲದ ಈ ಭೂಮಾಲೀಕರು.

ಐಷಾರಾಮಿ ಜೀವನಶೈಲಿ ಮತ್ತು ಅನವಶ್ಯಕ ಕೊಡುಗೆಗಳನ್ನು ನೀಡುವುದು ಜಮೀನ್ದಾರಿಕೆಯ ಪ್ರಮುಖ ಲಕ್ಷಣ. ಕೂಲಿ ಹೆಚ್ಚಳಕ್ಕಾಗಿ ಕಾರ್ಮಿಕರು ಹೋರಾಟ ಮಾಡಿದರೆ ಸದೆಬಡಿಯುತ್ತಿದ್ದ ಜಮೀನ್ದಾರರು, ತಮ್ಮ ಮಕ್ಕಳ ಮದುವೆ ಸಮಯದಲ್ಲಿ ಊಟ-ಬಟ್ಟೆಯನ್ನು ಧಾರಾಳವಾಗಿ ಬಡವರಿಗೆ ನೀಡುತ್ತಿದ್ದರು. ಕೃಷಿ ಕಾರ್ಮಿಕರ ಸ್ವಾವಲಂಬಿ ಬೇಡಿಕೆಗಳನ್ನು ತಿರಸ್ಕರಿಸುತ್ತಿದ್ದ ಜಮೀನ್ದಾರರು, ಅವರು ಕೇಳದೇ ಊಟ-ಬಟ್ಟೆಗಳ ಕೊಡುಗೆ ನೀಡುತ್ತಿದ್ದರು.

ಈ ಜಮೀನ್ದಾರಿ ವ್ಯವಸ್ಥೆಯ ವ್ಯಾಕರಣ ತುಂಬಾ ಸರಳವಾದುದು. ಕೃಷಿ ಕಾರ್ಮಿಕರಿಗೆ ಆರ್ಥಿಕ ಸ್ವಾತಂತ್ರ್ಯ ಲಭಿಸುವಂತಹ ಯಾವುದೇ ಬೆಳವಣಿಗೆಯನ್ನು ತಡೆಗಟ್ಟುವುದು, ಈ ಕೃಷಿ ಕಾರ್ಮಿಕರು ಊಟ-ಬಟ್ಟೆಗೆ ತಮ್ಮನ್ನೇ ಅವಲಂಬಿಸುವಂತೆ ನೋಡಿಕೊಳ್ಳುವುದು ಇದರ ತಂತ್ರಗಾರಿಕೆ.

ಈಗ ಭಾರತ ಸರ್ಕಾರ ಮಾಡುತ್ತಿರುವುದು ಕೂಡ ಇದನ್ನೇ. ಬಡವರಿಗೆ ಉಚಿತ ಆಹಾರ ನೀಡುವ ಸರ್ಕಾರ, ಅವರಿಗೆ ಆರ್ಥಿಕ ಭದ್ರತೆಯನ್ನು ಒದಗಿಸುವ ಗೋಜಿಗೆ ಹೋಗುತ್ತಿಲ್ಲ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಮಧ್ಯಾಹ್ನದ ಬಿಸಿಯೂಟ, ಸಾರ್ವಜನಿಕ ಆಹಾರ ವಿತರಣಾ ವ್ಯವಸ್ಥೆ, ಮತ್ತೀಗ ಆಹಾರ ಭದ್ರತಾ ಕಾಯ್ದೆ, ಹೀಗೆ ಮನಮೋಹನ್ ಸಿಂಗ್ ಸರ್ಕಾರ, ಸರ್ಕಾರಿ ಜಮೀನ್ದಾರಿಕೆ ನಡೆಸುತ್ತಿದೆ.

ಭೂಮಾಲೀಕರ ಅಹಂಕಾರ ಮತ್ತು ಆರ್ಥಿಕವಾಗಿ ಸುಸ್ಥಿರವಲ್ಲದ ಚಟುವಟಿಕೆಗಳಿಂದ ನನ್ನ ಗ್ರಾಮದಲ್ಲಿ ಜಮೀನ್ದಾರಿಕೆಯ ಕೊನೆಯಾಯಿತು. ಸರ್ಕಾರದ ಜಮೀನ್ದಾರಿಕೆಗೂ ಇದೇ ಗತಿಯಾಗಲಿದೆಯೇ? ಈ ಮೇಲೆ ಹೇಳಿದ ಯೋಜನೆಗಳಿಗೆ ಮುಂದಿನ ದಶಕದವರೆಗೆ ಸರ್ಕಾರ ಹೇಗೆ ಹಣ ಒದಗಿಸುತ್ತದೆ ಆ ದೇವರೆ ಬಲ್ಲ!

ಇದಕ್ಕೆ ಸರ್ಕಾರ ಯೋಚಿಸಿರುವ ಪರಿಹಾರ ಮಾರ್ಗಗಳಲ್ಲೊಂದು, ಬಂಡವಾಳ ಹಿಂಪಡೆತ. ಬಂಡವಾಳ ಹಿಂಪಡೆತದ ಹೆಸರಿನಲ್ಲಿ ಸರ್ಕಾರ, ಸಾರ್ವಜನಿಕ ವಲಯದ ಉದ್ಯಮಗಳನ್ನು ಮಾರಾಟ ಮಾಡುವ ಹವಣಿಕೆಯಲ್ಲಿದೆ. ಇದಾದ ಬಳಿಕ ಕಾರ್ಪೊರೆಟ್ ಸಂಸ್ಥೆಗಳಿಗೆ

ಅಧಿಕ ಪ್ರಮಾಣದಲ್ಲಿ ತೆರಿಗೆ ವಿಧಿಸುವುದು, ನಂತರ ರೈಲ್ವೆ ಸೇವೆಯನ್ನು ಖಾಸಗಿಯವರಿಗೆ ಮಾರಾಟ ಮಾಡುವುದು, ಇವೇ ಮುಂತಾದ ಪರಿಹಾರ ಮಾರ್ಗಗಳು ಸರ್ಕಾರದ ಮುಂದಿವೆ. ಈ ಹಣವನ್ನು ಸುಸ್ಥಿರವಾದ ಉದ್ಯೋಗ ಸೃಷ್ಟಿಗೆ ಬಳಸಿದರೆ ನನ್ನ ಅಭ್ಯಂತರವೇನೂ ಇಲ್ಲ.

ಇಷ್ಟೊಂದು ಬಂಡವಾಳ ಬಯಸುವ ಯೋಜನೆಗಳ ಸೃಷ್ಟಿಕರ್ತರು, ಜಮೀನ್ದಾರರ ಕುಟುಂಬಗಳ ಹಿನ್ನೆಲೆಯೇನಾದರೂ ಹೊಂದಿದ್ದಾರೆಯೇ ಎಂದು ನನಗೆ ಅನುಮಾನ. ಈ ನಿಟ್ಟಿನಲ್ಲಿ ಸರ್ಕಾರ ಶ್ವೇತಪತ್ರ ಯಾಕೆ ಹೊರಡಿಸಬಾರದು?

* * * *

ಪಂಜಾಬ್ ರಾಜ್ಯಕ್ಕೆ ಸಂಬಂಧಿಸಿದ ಕೆಲವು ಸುದ್ದಿ ಇತ್ತೀಚೆಗೆ ನನ್ನ ಗಮನ ಸೆಳೆಯಿತು. ಇದರಲ್ಲಿ ಒಂದು ಸುದ್ದಿ ರಾಜ್ಯದ ವಿದ್ಯುತ್ ಪರಿಸ್ಥಿತಿಯ ಬಗ್ಗೆ ಅಲ್ಲಿನ ಇಂಜಿನಿಯರುಗಳ ಅಸಂಬದ್ಧ ಅವಲೋಕನದ ಕುರಿತಾಗಿತ್ತು.

ಕಳೆದ ವರ್ಷ ಪಂಜಾಬ್‌ನಲ್ಲಿ ಕಾರ್ಮಿಕರ ತೀವ್ರ ಕೊರತೆ ಉಂಟಾಗಿತ್ತು. ಇನ್ನೊಂದು ಸುದ್ದಿ ಇದಕ್ಕೆ ಸಂಬಂಧಿಸಿದ್ದು. ಕೃಷಿ ಕಾರ್ಮಿಕರ ಕೊರತೆಯನ್ನು ನೀಗಿಸಲು ಸರ್ಕಾರ ಭತ್ತದ ಬಿತ್ತನೆಗೆ ಯಂತ್ರಗಳನ್ನು ಪ್ರಾಯೋಗಿಕವಾಗಿ ಬಳಸಲು ಆರಂಭಿಸಿದ ಸುದ್ದಿ ಅದು. ಸಾಮಾನ್ಯವಾಗಿ ಭತ್ತದ ಬಿತ್ತನೆಗೆ ಕೂಲಿಗಳ ಅವಶ್ಯಕತೆ ಹೆಚ್ಚಾಗಿರುತ್ತದೆ. ಆದರೆ ಕೂಲಿಗಳ ಕೊರತೆಯಿಂದಾಗಿ ಪಂಜಾಬ್‌ನಲ್ಲಿ ಬಿತ್ತನೆಯ ಋತುವಿನ ಆರಂಭದಲ್ಲಿ ಪ್ರಾಯೋಗಿಕವಾಗಿ ಬಿತ್ತನೆ ಯಂತ್ರಗಳನ್ನು ಬಳಸಲಾಗಿತ್ತು.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನದಲ್ಲಿ ಹಿಂದೆ ಬಿದ್ದಿದೆ ಎಂದು ಕೇಂದ್ರ ಸರ್ಕಾರ ಇತ್ತೀಚೆಗೆ ಪಂಜಾಬ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಇನ್ನೊಂದು ಸುದ್ದಿ ಇತ್ತೀಚೆಗೆ ಬಾಂಬ್‌ನಂತೆ ಬಂದಪ್ಪಳಿಸಿತು. ಕೇಂದ್ರ ಸರ್ಕಾರದ ಛಡಿಏಟಿನಿಂದ ಕಂಗಾಲಾಗಿ ನೈತಿಕ ಸಂಕಷ್ಟಕ್ಕೆ ಸಿಲುಕಿದ ಪಂಜಾಬ್‌ನ ಮುಖ್ಯಮಂತ್ರಿ ರಾಜ್ಯದ ಪಾಲಿಗೆ ಬಂದಿರುವ ಉದ್ಯೋಗ ಖಾತ್ರಿ ಯೋಜನೆಯ ಹಣವನ್ನು ಹೇಗಾದರೂ ಮಾಡಿ ಬಳಕೆ ಮಾಡುವ ಬಗ್ಗೆ ಹಿರಿಯ ಅಧಿಕಾರಿಗಳ ಸಭೆ ಕರೆದಿದ್ದ ಸುದ್ದಿ ಅದು.

ಕಲ್ಪನೆ ಮತ್ತು ಆದರ್ಶವಾದದ ನಡುವೆ ಇರುವ ಅಂತರವನ್ನು ಪಂಜಾಬ್‌ನ ಕಥೆ ಸ್ಪಷ್ಟಪಡಿಸುತ್ತದೆ. ಆದರ್ಶವಾದ ವ್ಯವಸ್ಥೆ ಲಕ್ಷಾಂತರ ಮಂದಿಗೆ ಸಂಬಂಧಿಸಿದ್ದಾದರೆ, ಕಲ್ಪನೆ ವೈಯುಕ್ತಿಕ ನೆಲೆಗಟ್ಟಿನ ಮೇಲೆ ನಿಂತಿರುತ್ತದೆ. ಮಧ್ಯಯುಗದಲ್ಲಿ ಮಾತ್ರ ರಾಜ-ರಾಣಿಯರು ತಮ್ಮ ಕನಸು-ಕಲ್ಪನೆಗಳನ್ನು ಜನರ ಮೇಲೆ ಹೇರುತ್ತಿದ್ದರು ಎಂದು ನಾನು ಇಲ್ಲಿಯವರೆಗೆ ತಿಳಿದಿದ್ದೆ. ಆಧುನಿಕತೆ ಮತ್ತು ಮಧ್ಯಯುಗದ ನಡುವೆ ಇರುವ ಪ್ರಮುಖ ವ್ಯತ್ಯಾಸವಿದು. ಆಧುನಿಕ ಸಮಾಜದಲ್ಲಿ ಹುಚ್ಚು ಕಲ್ಪನೆಗಳಿಗೆ ಜಾಗವಿಲ್ಲ. ಆದರೆ ಮಧ್ಯಯುಗದಲ್ಲಿ ಕಲ್ಪನೆಗಳೇ ಪ್ರಮುಖ ಪಾತ್ರ ವಹಿಸುತ್ತಿತ್ತು.

ಸಾಮಾನ್ಯ ಜನರ ಆಶೆ-ಆಶೋತ್ತರಗಳನ್ನು ಅರ್ಥೈಸಿಕೊಳ್ಳುವಲ್ಲಿ ಮಧ್ಯಯುಗದ ಸರ್ಕಾರಗಳು ವಿಫಲವಾಗಿದ್ದವು. ಬಡವರು ಮತ್ತು ಬಡತನದ ಬಗ್ಗೆ ಪ್ರಸ್ತುತ ದೇಶದಲ್ಲಿ ಚಾಲ್ತಿಯಲ್ಲಿರುವ ವಿಚಾರಗಳೆಲ್ಲ ದೆಹಲಿ ಮೂಲದ ಕೆಲವು ಆರ್ಥಿಕ ತಜ್ಞರ ಹುಚ್ಚು ಕಲ್ಪನೆಗಳಲ್ಲದೆ ಇನ್ನೇನೂ ಅಲ್ಲ. ದೇಶದಲ್ಲಿ ಬಡವರು ಮತ್ತು ಬಡತನದ ವ್ಯಾಖ್ಯಾನ ಮಾಡುವವರು ಇವರೇ. ಇವರ ಪ್ರಕಾರ ದೇಶದ ಮೂರನೆಯ ಒಂದರಷ್ಟು ಜನ ಎರಡು ಹೊತ್ತಿನ ಊಟ ಸಂಪಾದಿಸಲು ಅನರ್ಹರು. ಹಾಗಾಗಿ ಸರ್ಕಾರವೇ ಇವರಿಗೆ ಆಹಾರ ಒದಗಿಸಬೇಕು. ಬೌದ್ಧಿಕವಾಗಿ ವೃದ್ಧರಾಗಿರುವವರ ರೋಮಾಂಚನಕಾರಿ ಚಿಂತನೆಗಳಿವು. ದೇಶದಲ್ಲಿ ಬಡವರು, ಬಡತನ ಮತ್ತು ಬಡತನ ನಿರ್ಮೂಲನೆಯ ಬಗ್ಗೆ ಚಾಲ್ತಿಯಲ್ಲಿರುವ ಎಲ್ಲ ಅಭಿಪ್ರಾಯಗಳೂ ತಪ್ಪು ಕಲ್ಪನೆಗಳಲ್ಲದೆ ಇನ್ನೇನೂ ಅಲ್ಲ.

ಹೀಗಾಗಿ ಸರ್ಕಾರದ ಸಹಾಯ ಬೇಕಾಗಿರುವ ಬಡವರನ್ನು ಗುರುತಿಸಲು ನಾನು ಈ ಕೆಳಗಿನ ಅಂಶಗಳನ್ನು ಪ್ರತಿಪಾದಿಸುತ್ತಿದ್ದೇನೆ. ಉತ್ತರಭಾರತದ ಗ್ರಾಮೀಣ ಪ್ರದೇಶಕ್ಕೆ ಮಾತ್ರ ಅನ್ವಯವಾಗುವ ಅಂಶಗಳಿವು:

1. ಕೃಷಿ ಕಾರ್ಮಿಕರಾಗಿ ತಮ್ಮ ಜೀವಮಾನ ಸವೆಸಿ, ಆರ್ಥಿಕವಾಗಿ ಕಂಗೆಟ್ಟಿರುವವರು. ಪ್ರತಿ ಗ್ರಾಮದಲ್ಲಿ ಸರಾಸರಿ ಇಂತಹ ಒಂದೆರಡು ಕುಟುಂಬಗಳಿವೆ.

2. ತಮ್ಮ ಮಕ್ಕಳಿಂದ ದೂರ ತಳ್ಳಲ್ಪಟ್ಟ ವೃದ್ಧರು. ಅಥವಾ ನಗರ ಪ್ರದೇಶಗಳಿಗೆ ವಲಸೆ ಬಂದಿರುವ ಪೋಷಕರಿಲ್ಲದ ನತದೃಷ್ಟರು. ಪ್ರತಿ ಗ್ರಾಮದಲ್ಲಿ ಇಂತಹ ಎರಡು-ಮೂರು ಕುಟುಂಬಗಳಿವೆ.

ಕಲ್ಪನೆ ಮತ್ತು ಆದರ್ಶವಾದದ ನಡುವೆ ಇರುವ ಅಂತರವನ್ನು ಪಂಜಾಬ್‌ನ ಕಥೆ ಸ್ಪಷ್ಟಪಡಿಸುತ್ತದೆ. ಆದರ್ಶ ವಾದ ವ್ಯವಸ್ಥೆ ಲಕ್ಷಾಂತರ ಮಂದಿಗೆ ಸಂಬಂಧಿಸಿದ್ದಾದರೆ, ಕಲ್ಪನೆ ವೈಯುಕ್ತಿಕ ನೆಲೆಗಟ್ಟಿನ ಮೇಲೆ ನಿಂತಿರುತ್ತದೆ. ಮಧ್ಯ ಯುಗದಲ್ಲಿ ಮಾತ್ರ ರಾಜ-ರಾಣಿಯರು ತಮ್ಮ ಕನಸು-ಕಲ್ಪನೆಗಳನ್ನು ಜನರ ಮೇಲೆ ಹೇರುತ್ತಿದ್ದರು ಎಂದು ನಾನು ಇಲ್ಲಿಯವರೆಗೆ ತಿಳಿದಿದ್ದೆ. ಆಧುನಿಕತೆ ಮತ್ತು ಮಧ್ಯಯುಗದ ನಡುವೆ ಇರುವ ಪ್ರಮುಖ ವ್ಯತ್ಯಾಸವಿದು. ಆಧುನಿಕ ಸಮಾಜದಲ್ಲಿ ಹುಚ್ಚು ಕಲ್ಪನೆಗಳಿಗೆ ಜಾಗವಿಲ್ಲ. ಆದರೆ ಮಧ್ಯಯುಗದಲ್ಲಿ ಕಲ್ಪನೆಗಳೇ ಪ್ರಮುಖ ಪಾತ್ರ ವಹಿಸುತ್ತಿತ್ತು. ಸಾಮಾನ್ಯ ಜನರ ಆಶೆ-ಆಶೋತ್ತರಗಳನ್ನು ಅರ್ಥೈಸಿಕೊಳ್ಳುವಲ್ಲಿ ಮಧ್ಯಯುಗದ ಸರ್ಕಾರಗಳು ವಿಫಲವಾಗಿದ್ದವು. ಬಡವರು ಮತ್ತು ಬಡತನದ ಬಗ್ಗೆ ಪ್ರಸ್ತುತ ದೇಶದಲ್ಲಿ ಚಾಲ್ತಿಯಲ್ಲಿರುವ ವಿಚಾರಗಳೆಲ್ಲ ದೆಹಲಿ ಮೂಲದ ಕೆಲವು ಆರ್ಥಿಕ ತಜ್ಞರ ಹುಚ್ಚು ಕಲ್ಪನೆಗಳಲ್ಲದೆ ಇನ್ನೇನೂ ಅಲ್ಲ. ದೇಶದಲ್ಲಿ ಬಡವರು ಮತ್ತು ಬಡತನದ ವ್ಯಾಖ್ಯಾನ ಮಾಡುವವರು ಇವರೇ.

3. ಗಂಭೀರವಾದ ಖಾಯಿಲೆಗೆ ತುತ್ತಾದ ಕುಟುಂಬದ ಸದಸ್ಯನಿಗೆ ಚಿಕಿತ್ಸೆ ಕೊಡಿಸುವ ಸಲುವಾಗಿ ಆರ್ಥಿಕವಾಗಿ ದಿವಾಳಿಯಾಗಿರುವ ಕುಟುಂಬಗಳು. ಪ್ರತಿ ಗ್ರಾಮದಲ್ಲಿ ಕನಿಷ್ಠ ಇಂತಹ ಒಂದು ಕುಟುಂಬವಿರುತ್ತದೆ.

4. ಈ ಹಿಂದೆ ಗುಡಿಕೈಗಾರಿಕೆ, ಪೌರೋಹಿತ್ಯಗಳಂತಹ ಪ್ರಸ್ತುತ ಚಾಲ್ತಿಯಲ್ಲಿಲ್ಲದ ಕಸುಬುಗಳನ್ನು ಮಾಡುತ್ತಿದ್ದ ಕುಟುಂಬಗಳು. ಪ್ರತಿ ಗ್ರಾಮದಲ್ಲಿ ಸರಾಸರಿ ಇಂತಹ ಒಂದು ಕುಟುಂಬವಾದರೂ ಇದ್ದೇ ಇರುತ್ತದೆ.

5. ಇನ್ನು ಯಾವುದೇ ಕೆಲಸ ಮಾಡಲು ತಯಾರಿಲ್ಲದ ಸೋಮಾರಿಗಳು. ಪ್ರತಿ ಗ್ರಾಮದಲ್ಲಿ ಇಂತಹ ಒಂದಿಬ್ಬರು ಮಂದಿ ಇರುತ್ತಾರೆ.

ಈ ಮೇಲಿನ ಐದು ವರ್ಗಗಳು ನಿಜವಾಗಲೂ ತೀವ್ರ ಸಂಕಷ್ಟದಲ್ಲಿದ್ದು, ಇವರಿಗೆ ಸರ್ಕಾರವೇ ಆಹಾರ ಭದ್ರತೆ ಒದಗಿಸಬೇಕಿದೆ. ಇನ್ನು ಆರೋಗ್ಯ ಮತ್ತು ಶಿಕ್ಷಣ ಬೇರೆಡೆ ಚರ್ಚೆಯಾಗಬೇಕಾದ ವಿಚಾರವಾಗಿರುವುದರಿಂದ ಇಲ್ಲಿ ಅದು ಅಪ್ರಸ್ತುತ. ಸೈದ್ಧಾಂತಿಕವಾಗಿ ಪ್ರಬಲವಾಗಿರುವ ಬಿಹಾರ, ಪಶ್ಚಿಮಬಂಗಾಳ ಮತ್ತು ತಮಿಳುನಾಡು, ಇಂತಹ ರಾಜ್ಯಗಳಲ್ಲಿ ಈ ಐದು ವರ್ಗಗಳಿಂದ ಹೊರಗಿರುವ ಬಹಳಷ್ಟು ಜನರಿಗೆ ಕೂಡ ಆಹಾರ ಭದ್ರತೆ ಬೇಕಿದೆ. ಸಂಪತ್ತಿನ ಸೃಷ್ಟಿಯೊಂದನ್ನು ಬಿಟ್ಟು ಮಿಕ್ಕೆಲ್ಲವನ್ನೂ ಈ ರಾಜ್ಯಗಳು ಮಾಡುತ್ತವೆ.

ಇನ್ನು ಬುಡಕಟ್ಟು ಸಮುದಾಯಗಳಿಗೂ ಸರ್ಕಾರದ ಸುರಕ್ಷತೆಯ ಅವಶ್ಯಕತೆ ಇದೆ. ಛೋಟಾ ನಾಗಪುರ ಮತ್ತು ದಖನ್ ಪ್ರಸ್ಥಭೂಮಿಯಲ್ಲಿ ಅಧಿಕ ಬುಡಕಟ್ಟು ಸಮುದಾಯಗಳಿದ್ದು, ಇಲ್ಲಿ ಮಳೆ ಕೂಡ ಕಡಿಮೆ. ಝಾರ್ಖಂಡ್, ಬಿಹಾರದ ಕೆಲಭಾಗ, ಪಶ್ಚಿಮಬಂಗಾಳ, ಒರಿಸ್ಸಾ ಮತ್ತು ಛತ್ತೀಸ್‌ಗಢ ರಾಜ್ಯಗಳು ಛೋಟಾ ನಾಗಪುರ ವಲಯಕ್ಕೆ ಸೇರಿದರೆ, ಕರ್ನಾಟಕದ ಕೆಲಭಾಗ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ದಖನ್ ಪ್ರದೇಶಕ್ಕೆ ಸೇರುತ್ತವೆ. ಈ ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯ, ಕೃಷಿ ಮತ್ತು ಕೃಷಿಯೇತರ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸರ್ಕಾರಗಳು ಯಾವ ಕೆಲಸವನ್ನೂ ಮಾಡಿಲ್ಲ. ಹಾಗಾಗಿ ಈ ಸಮುದಾಯಗಳು ಆರ್ಥಿಕವಾಗಿ ಸಬಲರಾಗುವವರೆಗೆ ಸರ್ಕಾರ ಆಹಾರ ಭದ್ರತೆ ಒದಗಿಸಬೇಕಿದೆ. ಇನ್ನು ಬರ ಮತ್ತು ಪ್ರವಾಹ ಪೀಡಿತ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಕೂಡ ಸರ್ಕಾರದ ನೆರವಿನ ಅಗತ್ಯತೆ ಇದೆ.

ನನ್ನ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಶೇ. 10ರಷ್ಟು ಜನರಿಗೆ ಸರ್ಕಾರ ಆಹಾರ ಭದ್ರತೆ ಒದಗಿಸಬೇಕಾದ ಅನಿವಾರ್ಯತೆ ಇದೆ. ಇನ್ನುಳಿದ ಸರ್ಕಾರಿ ಯೋಜನೆಗಳ ಫಲಾನುಭವಿಗಳೆಲ್ಲರೂ ಇಲ್ಲವೇ ಮೋಸಗಾರರು ಅಥವಾ ಇನ್ನೊಬ್ಬರ ಕಲ್ಪನೆಯ ಬಲಿಪಶುಗಳು.

ದೇಶದಲ್ಲಿ ಬಡತನಕ್ಕೆ ಮರುವ್ಯಾಖ್ಯಾನ ನೀಡುವ ಸಮಯ ಈಗ ಬಂದಿದೆ. ಅನರ್ಹರು 'ಬಡತನದ ಬುಟ್ಟಿ'ಯೊಳಗೆ ಸೇರಿಕೊಂಡರೆ, ಬಡವರಿಗೆ ಮಾತ್ರ ಅನ್ಯಾಯವಾಗುವುದಿಲ್ಲ, ಬದಲಿಗೆ ಸರ್ಕಾರದ ಇಂತಹ ಕಾರ್ಯಕ್ರಮಗಳು ನೈತಿಕತೆಯನ್ನು ಕಳೆದುಕೊಳ್ಳುತ್ತವೆ.

ಬಡವರಿಗೇನು ಬೇಕು?

ಕಡಿಮೆ ಮಳೆಯಾಗುವ ಪ್ರದೇಶಗಳಲ್ಲಿ ವಾಸಿಸುವ ಕೆಲವು ಬುಡಕಟ್ಟು ಸಮುದಾಯಗಳನ್ನು ಹೊರತುಪಡಿಸಿ, ಉಳಿದೆಡೆ ವಾಸಿಸುವ ಬಹುತೇಕ ಭಾರತೀಯರಿಗೆ ಆಹಾರದ ಕೊರತೆಯೇನಿಲ್ಲ. ಆದರೆ ಬಹುತೇಕ ಬಡವರು ಪೌಷ್ಠಿಕ ಆಹಾರ ಮತ್ತು ಉತ್ತಮ ಗುಣಮಟ್ಟದ ಕುಡಿ

ಬಡತನದ ಹೊಸ ವ್ಯಾಖ್ಯಾನ

ಯುವ ನೀರಿನಿಂದ ವಂಚಿತರಾಗಿದ್ದಾರೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸೃಷ್ಟಿಕರ್ತರು ಬಹುಶಃ ಈ ಅಂಶವನ್ನು ಮರೆತ ಹಾಗಿದೆ.

ದೇಶದ ಎಲ್ಲ ಬಡವರು ಕೃಷಿ ಚಟುವಟಿಕೆಗಳಿಂದ, ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಹಳ್ಳಿಗಳಿಂದ ನಗರಗಳಿಗೆ ಬರಲು ಆಸಕ್ತರಾಗಿದ್ದಾರೆ. ಯಾಕೆಂದರೆ ನಗರಗಳಲ್ಲಿ ಸಿಗುವ ಉದ್ಯೋಗಾವಕಾಶಗಳಿಂದಾಗಿ ಊಟ-ಬಟ್ಟೆಯ ಜೊತೆಗೆ ಗೌರವಯುತ ಜೀವನ ಸಾಗಿಸುವುದು ಸಾಧ್ಯ ಎಂದು ಈ ಜನರಿಗೆ ಅರ್ಥವಾಗಿದೆ. ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನದ ನಂತರ ಕೂಡ ಕೃಷಿ ಚಟುವಟಿಕೆಗಳಿಂದ ಮುಕ್ತರಾಗಲು ಬಹುತೇಕ ಬಡ ಗ್ರಾಮಸ್ಥರು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ.

ಆದರೆ, ಈ ಬಡವರಿಗೆ ದೊಡ್ಡ ಸಮಸ್ಯೆಯಾಗಿ ಕಾಡುತ್ತಿರುವುದು, ಶಿಕ್ಷಣ ಮತ್ತು ಆರೋಗ್ಯ ಸಂಬಂಧಿತ ವಿಚಾರಗಳು. ಈಗ, ಬಡವರು ಕೂಡ ಆರೋಗ್ಯವಂತರಾಗಿರಲು ಬಯಸುವುದಷ್ಟೇ ಅಲ್ಲದೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಒದಗಿಸಲು ಆಸಕ್ತರಾಗಿದ್ದಾರೆ. ನನ್ನ ಬಾಲ್ಯದ ದಿನಗಳಲ್ಲಿ, ಅನೇಕ ಬಡಜನರು ಕಡಿಮೆ ವಯಸ್ಸಿನಲ್ಲಿ ಸಾವನ್ನಪ್ಪುತ್ತಿದ್ದುದನ್ನು ನಾನು ಕಂಡಿದ್ದೇನೆ. ಇವರಲ್ಲಿ ಬಹುತೇಕ ಜನರ ಬಳಿ ಆಸ್ಪತ್ರೆಗೆ ಹೋಗಲು ಕೂಡ ಹಣವಿರುತ್ತಿರಲಿಲ್ಲ. ಯಾವಾಗ ಖಾಯಿಲೆ ಉಲ್ಬಣವಾಗುತ್ತಿತ್ತೋ ಸಾವು ಖಚಿತವೆಂದು ಯಾರೂ ಅಂತಹವರನ್ನು ಗಮನಿಸುತ್ತಿರಲಿಲ್ಲ. ಆದರೆ ಈಗ ಪರಿಸ್ಥಿತಿ ಬದಲಾಗುತ್ತಿದೆ.

ಆಜಂಗಢ್ ಜಿಲ್ಲೆಯಲ್ಲಿರುವ ನನ್ನ ಪೂರ್ವಜರ ಮನೆಯಿಂದ ಸ್ವಲ್ಪ ದೂರದಲ್ಲಿ ಒಂದು ದಲಿತ ಕುಟುಂಬ ವಾಸಿಸುತ್ತಿದೆ. ಈ ಕುಟುಂಬದ ಮುಖ್ಯಸ್ಥ ಶ್ಯಾಂ ರಾಜ್ ನನಗಿಂತ ಹತ್ತು ವರ್ಷ ಹಿರಿಯವ. ಈ ಹಿಂದೆ ಈತ ನಮ್ಮ ಗ್ರಾಮದ ಕಬಡ್ಡಿ ತಂಡದ ಪ್ರಮುಖ ಸದಸ್ಯನಾಗಿದ್ದ. ಅಷ್ಟೇ ಅಲ್ಲದೆ, ಉತ್ತಮ ದೇಹದಾರ್ಢ್ಯ ಪಟುವೂ ಆಗಿದ್ದ. ಆದರೆ ಈಗ ಸಕ್ಕರೆ ಖಾಯಿಲೆಯಿಂದ ಬಳಲುತ್ತಿದ್ದಾನೆ. ಯಾವುದೇ ಭೂಮಿಯ ಒಡೆತನವಿಲ್ಲದ ಈತ ಸಹಕಾರ ಕೃಷಿ ಮತ್ತು ಕೂಲಿ ಮಾಡಿ ಬಂದ ಹಣದಿಂದ ಜೀವನ ನಡೆಸುತ್ತಿದ್ದಾನೆ. ಹೆಚ್ಚು ವರ್ಷ ಬದುಕುವ ಆಸೆಯಿರುವ ಈತನಿಗೆ ತನ್ನ ಖಾಯಿಲೆಯ ಚಿಕಿತ್ಸೆಗೆ ಹಣ ಹೊಂದಿಸಲಾಗುತ್ತಿಲ್ಲ. ವೈಯುಕ್ತಿಕವಾಗಿ ನಾನು ಈತನಿಗೆ ಸ್ವಲ್ಪಮಟ್ಟಿಗೆ ಸಹಾಯ ಮಾಡಿದ್ದೇನೆ.

ಅದೇ ರೀತಿ ನಮ್ಮ ಮನೆಯ ಪಕ್ಕದಲ್ಲಿಯೇ ಮತ್ತೊಂದು ದಲಿತ ಕುಟುಂಬ ವಾಸ ಮಾಡುತ್ತಿದೆ. ಕುಟುಂಬದ ಮುಖ್ಯಸ್ಥ ಹರಬನ್ಸ್ ರಾಂ ನನ್ನ ಸಮಕಾಲೀನ. ಹಂದಿ ಸಾಕಣೆ ಫಾರಂ ನಡೆಸುತ್ತಿದ್ದ ಈತ, ತನ್ನ ತಂದೆಯ ಮರಣಾನಂತರ ಹಂದಿಗಳನ್ನು ಮಾರಿ ದೆಹಲಿ ನಗರವನ್ನು ಸೇರಿಕೊಂಡ. ಈ ಘಟನೆ ನಡೆದದ್ದು, ಸುಮಾರು 25 ವರ್ಷಗಳ ಹಿಂದೆ ನಾನು ವಿದ್ಯಾರ್ಥಿಯಾಗಿದ್ದಾಗ. ಆದರೆ ಯಾವುದೋ ಕಾರಣದಿಂದಾಗಿ ಈತ ಮತ್ತೆ ಹಳ್ಳಿ ಸೇರಿ ಸಹಕಾರ ಕೃಷಿಯಲ್ಲಿ ತೊಡಗಿಸಿಕೊಂಡ. ಈಗ ಗೋಧಿ ಮತ್ತು ಭತ್ತವನ್ನು ಬೆಳೆಯುತ್ತಾ ಜೀವನ ಸಾಗಿಸುತ್ತಿರುವ ಈತನಿಗೆ ಇಬ್ಬರು ಗಂಡು ಮಕ್ಕಳಿದ್ದು, ಇವರಲ್ಲಿ ಕಿರಿಯವ ಬಿ.ಎ ವ್ಯಾಸಂಗ ಮಾಡುತ್ತಾ ಕಂಪ್ಯೂಟರ್ ಕಲಿಯುತ್ತಿದ್ದಾನೆ. ಹಿರಿಯ ಮಗ ಎಂ.ಎ ಓದುತ್ತಿದ್ದಾನೆ. ಪ್ರತಿಭಾವಂತನಾದ ಈತ ಈಗಾಗಲೇ ನೆಟ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದು, ವಿಶ್ವವಿದ್ಯಾನಿಲಯದಲ್ಲಿ ಉದ್ಯೋಗ ದೊರಕಿದರೆ ಉನ್ನತ ಶಿಕ್ಷಣದಲ್ಲಿ ಉತ್ತಮ ಸಾಧನೆ ಮಾಡುವ ಕ್ಷಮತೆ ಹೊಂದಿದ್ದಾನೆ. ಆದರೆ ಹರಬನ್ಸ್‌ಗೆ ತಮ್ಮ ಮಕ್ಕಳ ಶಿಕ್ಷಣಕ್ಕೆ ಹಣ ಒದಗಿಸಲಾಗುತ್ತಿಲ್ಲ.

ಆಜಂಗಢ್ ಜಿಲ್ಲೆಯಲ್ಲಿರುವ ನನ್ನ ಪೂರ್ವಜರ ಮನೆಯಿಂದ ಸ್ವಲ್ಪ ದೂರದಲ್ಲಿ ಒಂದು ದಲಿತ ಕುಟುಂಬ ವಾಸಿಸುತ್ತಿದೆ. ಈ ಕುಟುಂಬದ ಮುಖ್ಯಸ್ಥ ಶ್ಯಾಂ ರಾಜ್ ನನಗಿಂತ ಹತ್ತು ವರ್ಷ ಹಿರಿಯವ. ಈ ಹಿಂದೆ ಈತ ನಮ್ಮ ಗ್ರಾಮದ ಕಬಡ್ಡಿ ತಂಡದ ಪ್ರಮುಖ ಸದಸ್ಯನಾಗಿದ್ದ. ಆಷ್ಟೇ ಅಲ್ಲದೆ, ಉತ್ತಮ ದೇಹದಾರ್ಢ್ಯ ಪಟುವೂ ಆಗಿದ್ದ. ಆದರೆ ಈಗ ಸಕ್ಕರೆ ಖಾಯಿಲೆಯಿಂದ ಬಳಲುತ್ತಿದ್ದಾನೆ. ಯಾವುದೇ ಭೂಮಿಯ ಒಡೆತನವಿಲ್ಲದ ಈತ ಸಹಕಾರ ಕೃಷಿ ಮತ್ತು ಕೂಲಿ ಮಾಡಿ ಬಂದ ಹಣದಿಂದ ಜೀವನ ನಡೆಸುತ್ತಿದ್ದಾನೆ. ಹೆಚ್ಚು ವರ್ಷ ಬದುಕುವ ಆಸೆಯಿರುವ ಈತನಿಗೆ ತನ್ನ ಖಾಯಿಲೆಯ ಚಿಕಿತ್ಸೆಗೆ ಹಣ ಹೊಂದಿಸಲಾಗುತ್ತಿಲ್ಲ. ವೈಯುಕ್ತಿಕವಾಗಿ ನಾನು ಈತನಿಗೆ ಸ್ವಲ್ಪಮಟ್ಟಿಗೆ ಸಹಾಯ ಮಾಡಿದ್ದೇನೆ. ಅದೇ ರೀತಿ ನಮ್ಮ ಮನೆಯ ಪಕ್ಕದಲ್ಲಿಯೇ ಮತ್ತೊಂದು ದಲಿತ ಕುಟುಂಬ ವಾಸ ಮಾಡುತ್ತಿದೆ. ಕುಟುಂಬದ ಮುಖ್ಯಸ್ಥ ಹರಬನ್ಸ್ ರಾಂ ನನ್ನ ಸಮಕಾಲೀನ. ಹಂದಿ ಸಾಕಣೆ ಫಾರಂ ನಡೆಸುತ್ತಿದ್ದ ಈತ, ತನ್ನ ತಂದೆಯ ಮರಣಾನಂತರ ಹಂದಿಗಳನ್ನು ಮಾರಿ ದೆಹಲಿ ನಗರವನ್ನು ಸೇರಿಕೊಂಡ. ಈ ಘಟನೆ ನಡೆದದ್ದು, ಸುಮಾರು 25 ವರ್ಷಗಳ ಹಿಂದೆ ನಾನು ವಿದ್ಯಾರ್ಥಿಯಾಗಿದ್ದಾಗ. ಆದರೆ ಯಾವುದೋ ಕಾರಣದಿಂದಾಗಿ ಈತ ಮತ್ತೆ ಹಳ್ಳಿ ಸೇರಿ ಸಹಕಾರ ಕೃಷಿಯಲ್ಲಿ ತೊಡಗಿಸಿಕೊಂಡ.

ಗ್ರಾಮೀಣ ಪ್ರದೇಶಗಳಲ್ಲಿರುವ ಇಂತಹ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳಲು ನಾನು ಹಳ್ಳಿಗಳಿಗೆ ಯಾವಾಗಲೂ ಭೇಟಿ ನೀಡುತ್ತಲೇ ಇರುತ್ತೇನೆ. ಹೀಗೆ ನಾನು ನನ್ನ ಹುಟ್ಟೂರಿಗೆ ಹೋದಾಗ ನನ್ನ ಸಂಬಂಧಿಕರು, ಬಾಲ್ಯಸ್ನೇಹಿತರು ಹಣಕಾಸಿನ ಸಹಾಯ ಕೇಳುತ್ತಲೇ ಇರುತ್ತಾರೆ. ಯಾವಾಗಲೂ ಶಿಕ್ಷಣ, ಆರೋಗ್ಯ ಅಥವಾ ವರದಕ್ಷಿಣೆ, ಈ ಮೂರು ಕಾರಣಗಳಿಗಾಗಿ ಮಾತ್ರ ಜನ ನನ್ನ ಬಳಿ ಸಹಾಯ ಕೇಳಿದ್ದಾರೆ. ಇದು ನನ್ನ ವೈಯುಕ್ತಿಕ ಅನುಭವವಷ್ಟೆ.

ನನ್ನನ್ನು ಭೇಟಿ ಮಾಡಲು ದೆಹಲಿಗೆ ಬರುವ ಎಲ್ಲ ಗ್ರಾಮಸ್ಥರು ಮತ್ತು ನಾನು ಹಳ್ಳಿಗಳಿಗೆ ಭೇಟಿ ನೀಡಿದಾಗ ಆತಿಥ್ಯ ಒದಗಿಸುವ ಗ್ರಾಮಸ್ಥರು ಇದೇ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆಯೇ ಎಂದು ವಿಚಾರಿಸುತ್ತಲೇ ಇರುತ್ತೇನೆ. ಆರೋಗ್ಯ ಸೌಕರ್ಯ ಮತ್ತು ಶಿಕ್ಷಣ ತಮ್ಮನ್ನು ಕಾಡುತ್ತಿರುವ ಎರಡು ಬಹುದೊಡ್ಡ ಸಮಸ್ಯೆಗಳು ಎಂಬುದು ಇವರಲ್ಲಿ ಬಹುತೇಕ ಮಂದಿಯ ಅನುಭವ.

ಗ್ರಾಮೀಣ ಪ್ರದೇಶಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ತೀರ ಕಳಪೆ ಮಟ್ಟದಲ್ಲಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಇನ್ನು ಜಿಲ್ಲಾ ಆಸ್ಪತ್ರೆಗಳು ಕೂಡ ಕಸಸಂಗ್ರಹ ಕೇಂದ್ರಗಳಂತೆ ಕಾರ್ಯನಿರ್ವಹಿಸುತ್ತಿರುವುದು ಕೂಡ ಒಂದು ದುರಂತ. ಗಂಭೀರವಾದ ಖಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ಬಡವರ ಬಳಿ ಹಣವಿಲ್ಲ. ಆದರೆ, ದೇಶದಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಮಾತ್ರ ಯಾವುದೇ ರೀತಿಯಲ್ಲಿ ಸಮರ್ಪಕವಾಗಿಲ್ಲ.

ಮಧ್ಯಾಹ್ನದ ಊಟದ ಯೋಜನೆಯ ಫಲವಾಗಿ ದೇಶದ ಬಹುತೇಕ ಸರ್ಕಾರಿ ಪ್ರಾಥಮಿಕ ಶಾಲೆಗಳು ಊಟದ ಛತ್ರಗಳಾಗಿ ಪರಿವರ್ತಿತವಾಗಿವೆ. ಇಲ್ಲಿ ಪಾಠ ಪ್ರವಚನಗಳು ನಡೆಯುವುದಕ್ಕಿಂತ, ಊಟದ ವ್ಯವಸ್ಥೆಗೆ ಹೆಚ್ಚಿನ ಪ್ರಾಶಸ್ತ್ಯ. ಅಧಿಕ ಶುಲ್ಕದ ಖಾಸಗಿ ಶಾಲೆಗಳಲ್ಲಿ ಶಿಕ್ಷಣ ಪಡೆಯಲು ಅಶಕ್ತರಾದ ಬಡಮಕ್ಕಳು ಈ ರೀತಿಯ ಸರ್ಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿ ಇಂಟರ್‌ಮೀಡಿಯಟ್ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾಗುವುದಷ್ಟೇ ಅಲ್ಲದೆ, ಇಂಜಿನಿಯರಿಂಗ್, ವೈದ್ಯಕೀಯ ಶಾಸ್ತ್ರಗಳಂತಹ ವೃತ್ತಿಪರ ಕೋರ್ಸ್‌ಗಳಿಗೆ ಸುಲಭವಾಗಿ ಪ್ರವೇಶ ಪಡೆಯುತ್ತಾರೆ. ಇನ್ನೂ ಕೆಲ ಮಕ್ಕಳು ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ಶಿಕ್ಷಣ ಮಾಡಲು ಅರ್ಹತೆ ಗಳಿಸುತ್ತಾರೆ.

ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು, ಬಡವರಿಗೇನು ಬೇಕು ಎಂದು ಅರ್ಥೈಸಿಕೊಳ್ಳಲು ಇದು ಸಕಾಲ. ಆದರೆ ದೇಶದಲ್ಲಿ ಬಡವರ ಹಿತಾಸಕ್ತಿಗಳ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳುತ್ತಿರುವವರು ಯಾರು? ಒಂದು ಕಡೆ ಯಾವತ್ತೂ ಬಡತನವನ್ನು ಅನುಭವಿಸದವರು, ಮತ್ತೊಂದು ಕಡೆ ಕಡುಬಡತನದಲ್ಲಿ ಬದುಕುತ್ತಿರುವವರು ದೇಶದ ಬಡವರ ಪ್ರಗತಿಯ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುವಂತಹ ಪರಿಸ್ಥಿತಿಯಿದೆ.

ಆಹಾರ, ಶಿಕ್ಷಣ ಮತ್ತು ಆರೋಗ್ಯ ಸೌಕರ್ಯಗಳ ಜೊತೆಗೆ ದೇಶದ ಬಡಜನರಿಗೆ ಸರ್ಕಾರದಿಂದ ಯಾವ ರೀತಿಯ ಸೌಲಭ್ಯಗಳು ಬೇಕು ಎಂಬುದರ ಬಗ್ಗೆ ಯಾಕೆ ಬೃಹತ್ ಪ್ರಮಾಣದಲ್ಲಿ ಜನಾಭಿಪ್ರಾಯ ಸಂಗ್ರಹಿಸಬಾರದು? □

ಬುದ್ಧಾಯಣ

೪೭

ರಾಜ : ನ್ಯಾಯವೆಂದರೆ ತುಲಾಭಾರದಂತಿರಬೇಕು!!

ಸಿ ಎಚ್. ರಾಜಶೇಖರ್

"ದೇವಾ, ನೆನ್ನೆ ರಾತ್ರಿ ಬೀದಿಯ ನಾಯಿಗಳು ಮೋರಿಯ ಒಳಗಿನಿಂದ ನುಸುಳಿ ಒಳ ಬಂದು ರಥದ ಚರ್ಮ ಮತ್ತು ಚರ್ಮದಿಂದ ಮಾಡಲ್ಪಟ್ಟಿದ್ದ ಹಗ್ಗಗಳನ್ನು ತಿಂದು ಹಾಕಿದ್ದಾವೆ ಪ್ರಭು!" ಎಂದು ದೂರು ನೀಡಿದ. ಇದರಿಂದ ಕುಪಿತನಾದ ಅವಿವೇಕಿ ರಾಜನು ಸಮಸ್ತ ನಾಯಿಗಳ ಸಂತಾನದ ಬಗ್ಗೆಯೇ ದ್ವೇಷ ತಾಳಿ: "ಹಾಗೇನು? ಹಾಗಾದರೆ ಸಿಕ್ಕಿದಲ್ಲೆಲ್ಲ ನಾಯಿಗಳನ್ನು ಕೊಂದು ಬಿಡಿ!" ಎಂದು ರಾಜಾಜ್ಞೆ ಮಾಡಿದ. ಆ ಕ್ಷಣದಿಂದ ನಾಯಿಗಳ ಸಂತಾನಕ್ಕೆ ದೊಡ್ಡ ಆಪತ್ತು ಉಂಟಾಯಿತು. ನಗರದ ಬೀದಿ ಬೀದಿಗಳಲ್ಲಿ ರಾಜನ ಸೇವಕರು ನಾಯಿಗಳನ್ನು ಬೇಟೆಯಾಡಿ ಕೊಲ್ಲ ತೊಡಗಿದರು.

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸಾವಸ್ಥಿಯ ಜೇತವನದಲ್ಲಿ ತಂಗಿದ್ದರು. ಆಗ ಕಾಶೀ ರಾಜ್ಯವನ್ನು ಬ್ರಹ್ಮದತ್ತ ರಾಜ ಆಳುತ್ತಿದ್ದನು. ಅಂತಹ ಸಂದರ್ಭದಲ್ಲಿ ಬೋಧಿಸತ್ವರು ತಾವು ಪೂರ್ವಜನ್ಮದಲ್ಲಿ ಮಾಡಿದ ಯಾವುದೋ ಪಾಪ ಕರ್ಮದ ಫಲವಾಗಿ ಈ ಜನ್ಮದಲ್ಲಿ ನಾಯಿಯಾಗಿ ಜನಿಸಿದ್ದರು. ಊರಿನ ಹೊರಗಿನ ಸ್ಮಶಾನದಲ್ಲಿ ನೂರಾರು ನಾಯಿಗಳಿಗೆ ನಾಯಕರಾಗಿ ಜೀವಿಸುತ್ತಿದ್ದರು.

ಅಂತಹ ಸಂದರ್ಭದಲ್ಲಿ ಬ್ರಹ್ಮದತ್ತ ರಾಜನು ಹೊಳೆಯುವ ಕುದುರೆಗಳಿಂದ ಕೂಡಿದ, ಎಲ್ಲ ರೀತಿಯ ಅಲಂಕಾರಗಳಿಂದ ಅಲಂಕೃತವಾಗಿದ್ದ ರಥವನ್ನು ಏರಿ ತನ್ನ ರಾಣಿಯರೊಂದಿಗೆ ಉದ್ಯಾನವನಕ್ಕೆ ಬಂದ. ಅಲ್ಲಿ ದಿನವೀಡಿ ಜಲಕ್ರೀಡೆ ಮತ್ತು ವನಕ್ರೀಡೆಯಲ್ಲಿ ತೊಡಗಿ ಸೂರ್ಯಸ್ತವಾದ ಮೇಲೆ ಅರಮನೆಗೆ ಹಿಂದಿರುಗಿದ. ರಥದ ಸಾರಥಿಯು ಅದು ಇದ್ದ ಸ್ಥಿತಿಯಲ್ಲಿಯೇ ರಾಜಾಂಗಣದಲ್ಲಿ ನಿಲ್ಲಿಸಿ ತನ್ನ ಬಿಡಾರಕ್ಕೆ ತೆರಳಿದ.

ಅಂದು ರಾತ್ರೆ ಇದ್ದಕ್ಕಿದಂತೆ ಅಕಾಲಿಕ ಮಳೆಯು ಸುರಿಯಿತು. ಅದರ ಪರಿಣಾಮವಾಗಿ ರಥದ ಚರ್ಮ ಮತ್ತು ಚರ್ಮದಿಂದ ಮಾಡಿದ ಹಗ್ಗಗಳು ಮಳೆಯಲ್ಲಿ ತ್ಯೊಯ್ದು ಒಂದು ಬಗೆಯ ಮಾಂಸದ ವಾಸನೆಯನ್ನ ಬೀರತೊಡಗಿದುವು. ಈ ವಾಸನೆಯು ರಾಜ ಸಾಕಿದ ಪ್ರೀತಿಯ ನಾಯಿಗಳ ಮೂಗಿಗೆ ಬಡಿಯಿತು, ಅಂತಃಪುರದ ಹೊರ ಬಾಗಿಲಲ್ಲಿ ಮಲಗಿದ್ದ ನಾಲ್ಕೈದು ನಾಯಿಗಳು ಈ ವಾಸನೆಯಿಂದ ಎಚ್ಚೆತ್ತು ಒಂದರ ಮುಖವನ್ನು ಮತ್ತೊಂದು ಪ್ರಶ್ನಾರ್ಥಕವಾಗಿ ನೋಡಿಕೊಂಡವು. ಮರುಕ್ಷಣವೆ ತಮ್ಮ ಸ್ವಾಭಾವಕ್ಕೆ ಅನುಗುಣವಾಗಿ ನಾಲಿಗೆಯನ್ನು ಉದ್ದ ಚಾಚಿ ಮೂಗಿನ ಹೊಳ್ಳೆಯನ್ನು ಅಲಿಸಿ ವಾಸನೆಯ ಜಾಡನ್ನು ಮೂಸುತ್ತಾ ರಥದ ಬಳಿ ಬಂದವು.

ರಥದ ಚರ್ಮ ಮತ್ತು ಚರ್ಮದಿಂದ ಕೂಡಿದ್ದ ತ್ಯೊಯ್ದ ಹಗ್ಗಗಳನ್ನು ಕಂಡು ಸಂತೋಷಗೊಂಡವು. ನಮ್ಮ ಪಾಲಿಗೆ ನಡುರಾತ್ರೆ ಮಾಂಸ ಭೋಜನ ಸಿಕ್ಕಿತೆಂದು ಸದ್ದಿಲ್ಲದೆ ರಥದ ಚರ್ಮ ಮತ್ತು ಚರ್ಮದ ಹಗ್ಗಗಳನ್ನು ತಿಂದು ಹಾಕಿದವು. ಮರುದಿನ ಮುಂಜಾನೆ ಬಂದ ರಥದ ಸಾರಥಿಗೆ ರಥದ ಸ್ಥಿತಿ ಕಂಡು ಬೆಚ್ಚಿ ಬಿದ್ದ. ಇದು ರಾಜನ ಮುದ್ದಿನ ನಾಯಿಗಳ ಕೆಲಸ ಎಂಬುದನ್ನು ಅರಿತನು. ಏಕೆಂದರೆ ರಾಜಾಂಗಣದ ಒಳಗೆ ಯಾವುದೇ ಬೀದಿಯ ನಾಯಿಗಳು ಬರದಂತೆ ಭದ್ರವಾದ ರಕ್ಷಣೆ ಇದ್ದ ಬಗ್ಗೆ ಚನ್ನಾಗಿ ತಿಳಿದಿತ್ತು. ಆದರೂ ಕೂಡ ನನ್ನ ಅಜಾಗರೂಕತೆಯಿಂದ ತಪ್ಪಿಸಿಕೊಳ್ಳಬೇಕಾದರೆ ಈ ಪ್ರಕರಣವನ್ನು ಬೀದಿಯ ನಾಯಿಗಳ ಮೇಲೆ ಹಾಕದೆ ವಿಧಿ ಇಲ್ಲ ಎಂಬುದನ್ನು ಅರಿತನು. ಒಂದು ಪಕ್ಷ ಸತ್ಯವನ್ನು ರಾಜನ ಬಳಿ ಹೇಳಿದರೂ ಕೂಡ ತನ್ನ ನಾಯಿಗಳನ್ನು ದಂಡಿಸುವುದನ್ನು ಬಿಟ್ಟು ತನ್ನನ್ನೇ ದಂಡಿಸುತ್ತಾನೆ. ಎಂಬುದನ್ನು ಬಲ್ಲ ಆತ ರಾಜನನ್ನು ಸಂಧಿಸಿ:

"ದೇವಾ, ನೆನ್ನೆ ರಾತ್ರಿ ಬೀದಿಯ ನಾಯಿಗಳು ಮೋರಿಯ ಒಳಗಿನಿಂದ ನುಸುಳಿ ಒಳ ಬಂದು ರಥದ ಚರ್ಮ ಮತ್ತು ಚರ್ಮದಿಂದ ಮಾಡಲ್ಪಟ್ಟಿದ್ದ ಹಗ್ಗಗಳನ್ನು ತಿಂದು ಹಾಕಿದ್ದಾವೆ ಪ್ರಭು!" ಎಂದು ದೂರು ನೀಡಿದ. ಇದರಿಂದ ಕುಪಿತನಾದ ಅವಿವೇಕಿ ರಾಜನು ಸಮಸ್ತ ನಾಯಿಗಳ ಸಂತಾನದ ಬಗ್ಗೆಯೇ ದ್ವೇಷ ತಾಳಿ:

"ಹಾಗೇನು? ಹಾಗಾದರೆ ಸಿಕ್ಕಿದಲ್ಲೆಲ್ಲ ನಾಯಿಗಳನ್ನು ಕೊಂದು ಬಿಡಿ!" ಎಂದು ರಾಜಾಜ್ಞೆ ಮಾಡಿದ. ಆ ಕ್ಷಣದಿಂದ ನಾಯಿಗಳ ಸಂತಾನಕ್ಕೆ ದೊಡ್ಡ ಆಪತ್ತು ಉಂಟಾಯಿತು. ನಗರದ ಬೀದಿ ಬೀದಿಗಳಲ್ಲಿ ರಾಜನ ಸೇವಕರು ನಾಯಿಗಳನ್ನು ಬೇಟೆಯಾಡಿ ಕೊಲ್ಲ ತೊಡಗಿದರು. ಇದರಿಂದ ಆಘಾತಕ್ಕೆ ಒಳಗಾದ ನಾಯಿಗಳು ಒಂದೆಡೆ ಕಲೆತು:



"ಈಗ ನಮ್ಮನ್ನು ರಕ್ಷಿಸುವವರು ಯಾರು?" ನಮಗೆ ನ್ಯಾಯವನ್ನು ದೊರಕಿಸಿ ಕೊಟ್ಟು ಜೀವದಾನ ಮಾಡುವವರು ಯಾರು?" ಎಂದು ದೀರ್ಘವಾಗಿ ಚರ್ಚಿಸಲು, ಅವುಗಳಿಗೆ ಊರ ಹೊರಗಿನ ಸ್ಮಶಾನದಲ್ಲಿ ಇರುವ ಬೋಧಿಸತ್ವ ನಾಯಿಯೆ ಸೂಕ್ತವಾದ ರಕ್ಷಕ ಎಂಬ ನಿರ್ಧಾರಕ್ಕೆ ಬಂದವು.

ಅಳಿದುಳಿದ ನಾಯಿಗಳೆಲ್ಲ ಗುಂಪುಕಟ್ಟಿಕೊಂಡ ಸ್ಮಶಾನವನ್ನು ತಲುಪಿ ಬೋಧಿಸತ್ವ ನಾಯಿಗೆ ವಂದಿಸಿ:

"ಶ್ವಾನ ರಾಜನೇ, ನಮ್ಮ ಕುಲಕ್ಕೆ ಇಂತಹ ದುರ್ಗತಿ ಹೊದಗಿ ಬಂದಿದೆ. ನಮ್ಮನ್ನು ಹೇಗಾದರೂ ಮಾಡಿ ರಕ್ಷಿಸು!" ಎಂದು ವಿಷಯವನ್ನು ಕುಲಂಕುಷವಾಗಿ ವಿವರಿಸಿದವು. ಬಳಿಕ ಬೋಧಿಸತ್ವ ಸ್ವರೂಪಿಯಾದ ಶ್ವಾನ ರಾಜನು:

"ಮಿತ್ರರೇ, ಹೆದರಬೇಡಿ. ನಾನು ಈಗಲೇ ರಾಜನ ಬಳಿ ತೆರಳಿ ನಿಮಗೆಲ್ಲ ಅಭಯ ದಾನವನ್ನು ಪಡೆದುಕೊಂಡು ಬರುತ್ತೇನೆ. ನಾನು ರಾಜನನ್ನು ಭೇಟಿಯಾಗಿ ಬರುವ ತನಕ ನೀವು ಇಲ್ಲಿಯೇ ಇರಿ!' ಎಂದು ಹೇಳಿ ಅದು ನಗರವನ್ನು ಪ್ರವೇಶಿಸಿತು.

ಅದು ರಾಜಬೀದಿಯಲ್ಲಿ ರಾಜನ ಠೀವಿಯನ್ನು ಮೀರಿಸುವಂತೆ ನೆಡೆದು ಬರುತ್ತಿತ್ತು. ಅದನ್ನು ಕಂಡ ರಾಜನ ಸೇವಕರು ಅದನ್ನು ಬಂಧಿಸುವ ಬದಲು ಅದಕ್ಕೆ ದಾರಿ ಬಿಟ್ಟುಕೊಟ್ಟು ಹಿಂದಕ್ಕೆ ಸರಿದು ನಿಂತರು. ಅದು ನೇರವಾಗಿ ಅರಮನೆಯನ್ನು ಪ್ರವೇಶಿಸಿತು. ರಾಜನು ನ್ಯಾಯಸ್ಥಾನದ ಮೇಲೆ ಕುಳಿತು ಕಂಗೊಳಿಸುತ್ತಿದ್ದನು. ರಾಜ ಸೇವಕರು ಆ ನಾಯಿಯನ್ನು ಹಿಡಿದು ಹೊರ ಹಾಕಲು ಪ್ರಯತ್ನಿಸಿದರು. ರಾಜನು ಅದನ್ನು ತಡೆದು ಒಳ ಬಿಡಲು ಆಜ್ಞೆ ಮಾಡಿದನು. ಬೋಧಿಸತ್ವ ಶ್ವಾನರಾಜನು ರಾಜನ ಎದುರು ನಿಂತು ಆತನಿಗೆ ವಂದಿಸುತ್ತಾ:

"ದೇವಾ, ಶ್ವಾನಗಳ ಸಂತತಿಯನ್ನು ನಾಶ ಮಾಡಲು ರಾಜಾಜ್ಞೆ ಹೊರಡಿಸಿರುವಿರಂತೆ, ಇದು ನಿಜವೆ?"

"ಹೌದು, ನಾನು ನಾಯಿಗಳನ್ನು ಕೊಲ್ಲಿಸುತ್ತಿದ್ದೇನೆ!"

"ಮಹಾರಾಜ, ಅವುಗಳಿಂದ ತಮಗಾದ ಅಪರಾಧವೇನು?"

"ಅವು ನನ್ನ ರಥದ ಚರ್ಮ ಮತ್ತು ಚರ್ಮದ ಹಗ್ಗವನ್ನು ತಿಂದು ಹಾಕಿವೆ!"

"ಮಹಾರಾಜ, ಯಾವ ನಾಯಿಗಳು ತಿಂದು ಹಾಕಿವೆ ಎಂಬುದು ತಮಗೆ ಗೊತ್ತೆ?"

"ಗೊತ್ತಿಲ್ಲ!"

"ಪ್ರಭು, ನಿರ್ದಿಷ್ಟವಾಗಿ ಯಾವ ನಾಯಿಗಳು ಚರ್ಮವನ್ನು ತಿಂದಿವೆ ಎಂಬುದು ಸರಿಯಾಗಿ ತಿಳಿಯದೆ ಕಂಡಲ್ಲೆಲ್ಲ ನಾಯಿಗಳನ್ನು ಕೊಲ್ಲಿರಿ ಎಂದು ಆಜ್ಞೆಯನ್ನು ಜಾರಿ ಗೊಳಿಸಿರುವುದು ನ್ಯಾಯ ಸಮ್ಮತವೆ?"

"ರಥದ ಚರ್ಮವನ್ನು ತಿಂದದ್ದು ನಾಯಿಗಳು. ಅದು ಅವುಗಳ ಅಪರಾಧ. ಆದುದರಿಂದ ಅವುಗಳನ್ನು ಕೊಲ್ಲಿರೆಂದು ಆಜ್ಞೆ ನೀಡಿದ್ದರಲ್ಲಿ ಯಾವ ತಪ್ಪಿದೆ?"

"ಪ್ರಭು, ಹಾಗಾದರೆ ತಮ್ಮ ಸೇವಕರು ನಗರದ ಎಲ್ಲ ನಾಯಿಗಳನ್ನು ಕೊಲ್ಲುತ್ತಾರೆಯೆ? ಅಥವಾ ಕೊಲ್ಲದೆ ಇರುವ ನಾಯಿಗಳು ಯಾವುದಾದರೂ ಇವೆಯೆ?"

"ಇವೆ, ಖಂಡಿತಾ ಇವೆ! ನಮ್ಮ ಅರಮನೆಯಲ್ಲಿ ನಾನು ಸಾಕಿರುವ ಮುದ್ದಿನ ನಾಯಿಗಳನ್ನು ಮಾತ್ರ ಕೊಲ್ಲಲಾಗುವುದಿಲ್ಲ!"

"ಪ್ರಭು, ಹಾಗಾದರೆ ಇದು ಪಕ್ಷಪಾತ ಆಗಲಿಲ್ಲವೆ? ಈಗ ತಾನೆ ಹೇಳಿದಿರಿ. ನಾಯಿಗಳು ನನ್ನ ರಥದ ಚರ್ಮ ಮತ್ತು ಚರ್ಮದ ಹಗ್ಗಗಳನ್ನು ತಿಂದ ಅಪರಾಧಕ್ಕಾಗಿ ನಾಯಿಗಳನ್ನು ಕಂಡಲ್ಲೆಲ್ಲ ಕೊಲ್ಲಿರೆಂದು ಆಜ್ಞೆ ಮಾಡಿದೆ ಎಂದಿರಿ. ಅದರಲ್ಲಿ ನಿಮ್ಮ ನಾಯಿಗಳು ಏಕೆ ಸೇರುವುದಿಲ್ಲ? ಹೇಗೆ ಸೇರುವುದಿಲ್ಲ? ಅವುಗಳೂ ಕೂಡ ನಾಯಿಗಳೇ ಅಲ್ಲವೆ? ಈ ಪಕ್ಷಪಾತದಿಂದ ತಾವು ದುರ್ಗತಿಯನ್ನು ಪಡೆದಂತೆ ಆಗುವುದಿಲ್ಲವೆ? ಇದು ರಾಜಧರ್ಮ ಹೇಗೆ ಆದೀತು? ರಾಜನು ಯಾವುದೇ ವಿಷಯದ ತಳವನ್ನು ಶೋಧಿಸಿ ಪರಿಶೀಲಿಸಬೇಕಲ್ಲವೇ? ನ್ಯಾಯವು ಆಗ ಮಾತ್ರ ತುಲಾಭಾರಕ್ಕೆ ಸಮನಾಗಿ ನಿಷ್ಪಕ್ಷಪಾತಿಯಾಗಿರುವುದಲ್ಲವೆ?" "ಎಲೈ ಶ್ವಾನರಾಜನೇ, ನಿನ್ನ ಮಾತಿನಲ್ಲಿ ವಿವೇಕ ಇದ್ದಂತಿದೆ. ಹಾಗಾದರೆ ರಥದ ಚರ್ಮವನ್ನು ಇಂಥಹ ನಾಯಿಗಳು ತಿಂದಿವೆ ಎಂಬ ಬಗ್ಗೆ ನಿನಗೆ ಖಚಿತವಾಗಿ ಗೊತ್ತಿದೆಯೆ?" "ಹೌದು ಪ್ರಭು, ನನಗೆ ಖಚಿತವಾಗಿ ಗೊತ್ತಿದೆ!" "ಹಾಗಾದರೆ, ಹೇಳು ಯಾವ ನಾಯಿಗಳು ತಿಂದಿವೆ?" "ಪ್ರಭು, ತಮ್ಮ ಅರಮನೆಯ ನಾಯಿಗಳೇ ರಥದ ಚರ್ಮ ಮತ್ತು ಹಗ್ಗಗಳನ್ನು ತಿಂದಿರುವ ಅಪರಾಧಿಗಳು!"

ಕೊಲೆ

'ಪುಸ್ತಕಗಳು
ಕೊಲ್ಲುತ್ತವೆ!'
ಎಂದೊಬ್ಬರ ಹೇಳಿಕೆ!
(ಅವು ಬದುಕಿಸಲೂ ಬಲ್ಲುವು)
ಆದರೆ ಪುಸ್ತಕಗಳನ್ನೆ ಕೊಲ್ಲುವ
ಪುಣ್ಯಾತ್ಮರುಂಟಲ್ಲ!

○ ಡಾ.ಸಿ.ಪಿ.ಕೃಷ್ಣಕುಮಾರ್

"ಪ್ರಭು, ಹಾಗಾದರೆ ಇದು ಪಕ್ಷಪಾತ ಆಗಲಿಲ್ಲವೆ? ಈಗ ತಾನೆ ಹೇಳಿದಿರಿ. ನಾಯಿಗಳು ನನ್ನ ರಥದ ಚರ್ಮ ಮತ್ತು ಚರ್ಮದ ಹಗ್ಗಗಳನ್ನು ತಿಂದ ಅಪರಾಧಕ್ಕಾಗಿ ನಾಯಿಗಳನ್ನು ಕಂಡಲ್ಲೆಲ್ಲ ಕೊಲ್ಲಿರೆಂದು ಆಜ್ಞೆ ಮಾಡಿದೆ ಎಂದಿರಿ. ಅದರಲ್ಲಿ ನಿಮ್ಮ ನಾಯಿಗಳು ಏಕೆ ಸೇರುವುದಿಲ್ಲ? ಹೇಗೆ ಸೇರುವುದಿಲ್ಲ? ಅವುಗಳೂ ಕೂಡ ನಾಯಿಗಳೇ ಅಲ್ಲವೆ? ಈ ಪಕ್ಷಪಾತದಿಂದ ತಾವು ದುರ್ಗತಿಯನ್ನು ಪಡೆದಂತೆ ಆಗುವುದಿಲ್ಲವೆ? ಇದು ರಾಜಧರ್ಮ ಹೇಗೆ ಆದೀತು? ರಾಜನು ಯಾವುದೇ ವಿಷಯದ ತಳವನ್ನು ಶೋಧಿಸಿ ಪರಿಶೀಲಿಸಬೇಕಲ್ಲವೇ? ನ್ಯಾಯವು ಆಗ ಮಾತ್ರ ತುಲಾಭಾರಕ್ಕೆ ಸಮನಾಗಿ ನಿಷ್ಪಕ್ಷಪಾತಿಯಾಗಿರುವುದಲ್ಲವೆ?"

"ಎಲೈ ಶ್ವಾನರಾಜನೇ, ನಿನ್ನ ಮಾತಿನಲ್ಲಿ ವಿವೇಕ ಇದ್ದಂತಿದೆ. ಹಾಗಾದರೆ ರಥದ ಚರ್ಮವನ್ನು ಇಂಥಹ ನಾಯಿಗಳು ತಿಂದಿವೆ ಎಂಬ ಬಗ್ಗೆ ನಿನಗೆ ಖಚಿತವಾಗಿ ಗೊತ್ತಿದೆಯೆ?"

"ಹೌದು ಪ್ರಭು, ನನಗೆ ಖಚಿತವಾಗಿ ಗೊತ್ತಿದೆ!"

"ಹಾಗಾದರೆ, ಹೇಳು ಯಾವ ನಾಯಿಗಳು ತಿಂದಿವೆ?"

"ಪ್ರಭು, ತಮ್ಮ ಅರಮನೆಯ ನಾಯಿಗಳೇ ರಥದ ಚರ್ಮ ಮತ್ತು ಹಗ್ಗಗಳನ್ನು ತಿಂದಿರುವ ಅಪರಾಧಿಗಳು!"

"ಅವೇ ತಿಂದಿವೆ ಎಂಬುದು ಹೇಗೆ ಗೊತ್ತು?"

"ಪ್ರಭು, ತಾವು ಅವಕಾಶ ಕೊಟ್ಟರೆ ನಾನು ಅದನ್ನು ಸಾಧಿಸಿ ತೋರಿಸುತ್ತೇನೆ!"

"ವಿವೇಕಿ ನಾಯಿಯೇ, ಹಾಗಾದರೆ ಸಾಧಿಸಿ ತೋರಿಸು!"

"ಪ್ರಭು, ಕೃಪೆ ತೋರಿ ತಮ್ಮ ನಾಯಿಗಳನ್ನು ಕರೆಸಿ, ಸ್ವಲ್ಪ ಮಜ್ಜಿಗೆ ಮತ್ತು ಗರಿಕೆ ಹುಲ್ಲನ್ನು ತರಿಸಿ!" ಎಂದ.

ರಾಜನು ಹಾಗೆಯೇ ಮಾಡಿದ. ಬಳಿಕ ಶ್ವಾನರಾಜನು ಸೇವಕರನ್ನು ಉದ್ದೇಶಿಸಿ:

"ಮಿತ್ರರೇ, ಈ ಮಜ್ಜಿಗೆಯಲ್ಲಿ ಈ ಹುಲ್ಲನ್ನು ಕಡೆದು ಈ ನಾಯಿಗಳಿಗೆ ಕುಡಿಸಿ!" ಎಂದ. ಅವರು ಹಾಗೆಯೇ ಮಾಡಿದರು. ಬಳಿಕ ಸ್ವಲ್ಪ ಸಮಯದ ನಂತರ ಆ ನಾಯಿಗಳಿಗೆ ಹೊಟ್ಟೆಯು ತೊಳಿಸಿ ಬಂತು. ಉಸಿರನ್ನು ಕಟ್ಟಿ ಮುಸ ಮುಸನೆ ಉಸಿರನ್ನು ತಿರುಗಿಸ ತೊಡಗಿದವು. ಎಷ್ಟೇ ಪ್ರಯತ್ನಿಸಿದರೂ ತಡೆದುಕೊಳ್ಳಲಾಗದ ನಾಯಿಗಳು ಒಂದೇ ಸಮನಾಗಿ ವಾಂತಿ ಮಾಡಿಕೊಳ್ಳ ತೊಡಗಿದವು. ಆ ವಾಂತಿಯ ಜೊತೆಗೆ ರಥದ ಚರ್ಮ ಮತ್ತು ಚರ್ಮದಿಂದ ಮಾಡಿದ ಹಗ್ಗದ ತುಂಡುಗಳು ಹೊರ ಬಿದ್ದವು!

ಸತ್ಯವು ಸ್ಪಷ್ಟವಾಗಿ ಗೋಚರವಾಗಲು ರಾಜಸಭೆಯಲ್ಲಿ ನೆರೆದ ಗಣ್ಯರೆಲ್ಲರು ಬಾಯಿಯ ಮೇಲೆ ಕೈ ಇಟ್ಟುಕೊಂಡರು. ರಾಜನು ಅವಮಾನದಿಂದ ಕುದಿಯುತ್ತಾ:

"ಎಲೈ ಮಂತ್ರಿಯೇ, ಈ ನನ್ನ ನಾಯಿಗಳನ್ನು ಮತ್ತು ನನಗೆ ತಪ್ಪು ಮಾಹಿತಿ ಕೊಟ್ಟ ರಥದ ಸಾರಥಿಯನ್ನು ತಕ್ಷಣವೇ ಕೊಂದು ಹಾಕಿ, ಊರ ಹೊರಗಿನ ಎಲ್ಲಾ ನಾಯಿಗಳಿಗೂ ಅಭಯದಾನ ಮಾಡಿ!" ಎಂದು ರಾಜಾಜ್ಞೆ ಮಾಡಲು ಶ್ವಾನರಾಜನು ರಾಜನನ್ನು ತಡೆದು:

"ದೇವಾ, ಕೊಲ್ಲ ಬೇಕಾಗಿರುವುದು ತಮ್ಮ ನಾಯಿಗಳನ್ನಾಗಲಿ ಅಥವಾ ಸಾರಥಿಯನ್ನಾಗಲಿ ಅಲ್ಲ ತಮ್ಮ ಅವಿವೇಕವನು!" ಎನ್ನಲು ರಾಜನಿಗೆ ತನ್ನ ತಪ್ಪಿನ ಅರಿವಾಗಲು:

"ಹೌದು, ನ್ಯಾಯ ಯಾವಾಗಲು ತುಲಾಭಾರದಂತೆ ನಿಷ್ಪಕ್ಷಪಾತವಾಗಿರಬೇಕು!!" ಎಂದ. □

'SAMVADA' Kannada Monthly, AUGUST 2009 RNI-KAR KAN/2002/9246 CPMG/KA/BGW-706/2009-11
Office of Posting: RAJAJINAGAR HO, Date of Posting: 27-28 of Every Month

ರೈತರ ಸಮಗ್ರ ಕಲ್ಯಾಣಕ್ಕಾಗಿ ದೃಢ ಸಂಕಲ್ಪ ತೊಟ್ಟ

ದಿಟ್ಟ ರೈತಪರ ಸರ್ಕಾರ



ಶ್ರೀ ಬಿ. ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ರೈತರ ಹಿತದೃಷ್ಟಿಯನ್ನು ಕಾಪಾಡುವ ಅವರ ಏಳಿಗೆಯನ್ನು ಬಯಸುವ ಪರಮ ಧ್ಯೇಯವುಳ್ಳ ಸರ್ಕಾರವು ಈ ಒಂದು ವರ್ಷದಲ್ಲಿ ಘೋಷಿಸಿ ಅನುಷ್ಠಾನಕ್ಕೆ ತಂದಿರುವ ಯೋಜನೆ, ಕಾರ್ಯಕ್ರಮ ಮತ್ತು ರಿಯಾಯಿತಿಗಳು ಹಲವಾರು. ಇವು ಕೃಷಿ ಕ್ಷೇತ್ರದಲ್ಲಿ ಭರವಸೆಗಳ ಬಿತ್ತನೆಗೆ ಸಂತೃಪ್ತಿಯ ಫಸಲಿಗೆ ಕಾರಣವಾಗಿದೆ.

ಶ್ರೀ ಎಸ್.ಎ. ರವೀಂದ್ರನಾಥ್
ಮಾನ್ಯ ಕೃಷಿ ಸಚಿವರು

ಕೃಷಿ ಕ್ಷೇತ್ರದಲ್ಲಿ ಸಾಧನೆಯ ಪರ್ವ

- ಖುಷ್ಕಿ ಬೇಸಾಯದಲ್ಲಿ ತಾಂತ್ರಿಕತೆ ಅಳವಡಿಕೆ ಹಾಗೂ ಉತ್ಪಾದನೆ ವರ್ಧಿಸುವ ಯೋಜನೆಯನ್ನು ICRISAT ಸಹಯೋಗದಲ್ಲಿ ಭೂಚೇತನ ಕಾರ್ಯಕ್ರಮ ಅನುಷ್ಠಾನ
- ರೈತರ ಸಮಸ್ಯೆಗಳ ಚಿಂತನೆ ಹಾಗೂ ಪರಿಹಾರ ಮಾರ್ಗೋಪಾಯ ರೂಪಿಸಲು ಕೃಷಿ ಮಿಷನ್ ಸ್ಥಾಪನೆ
- ಕೃಷಿಯಲ್ಲಿ ನವೀನ ತಾಂತ್ರಿಕತೆ ಬಗ್ಗೆ ಅರಿವು ಮೂಡಿಸಲು ರಾಜ್ಯದ ರೈತರಿಗೆ ವಿದೇಶಗಳಿಗೆ ಅಧ್ಯಯನ ಪ್ರವಾಸ
- ಶೇಕಡ 3 ಬಡ್ಡಿದರದಲ್ಲಿ ಸಾಲಕ್ಕೆ ಸಹಾಯಧನ
- ರಾಜ್ಯದಲ್ಲಿ ಸಾವಯವ ಕೃಷಿಗೆ ದೊಡ್ಡ ಪ್ರಮಾಣದಲ್ಲಿ ಒತ್ತು ನೀಡಲು ಸಾವಯವ ಕೃಷಿ ಮಿಷನ್ ಸ್ಥಾಪನೆ
- ಮಣ್ಣಿನ ಫಲವತ್ತತೆ ಕಾಪಾಡಲು ಶೇಕಡ 50ರ ರಿಯಾಯಿತಿ ದರದಲ್ಲಿ ಜೈವಿಕ ಗೊಬ್ಬರ, ಲಘು ಪೋಷಕಾಂಶಗಳ ವಿತರಣೆ
- ನೀರಿನ ಸದ್ಬಳಕೆಯನ್ನು ಉತ್ತೇಜಿಸಲು ಶೇಕಡ 75ರ ಸಹಾಯ ಧನದಲ್ಲಿ ಹನಿ/ತುಂತುರು ನೀರಾವರಿ ಉಪಕರಣಗಳ ವಿತರಣೆ
- ಕೃಷಿ ವಿಸ್ತರಣಾ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲು ರೈತ ಸಂಪರ್ಕ ಕೇಂದ್ರ / ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳ ಬಲವರ್ಧನೆ
- ಕೃಷಿ ಉತ್ಪಾದನೆ ಹೆಚ್ಚಿಸಲು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಶೇಕಡ 50ರ ರಿಯಾಯಿತಿ ದರದಲ್ಲಿ ಗುಣಮಟ್ಟದ ಬಿತ್ತನೆ ಬೀಜ ವಿತರಣೆ
- ಕೃಷಿ ಕಾರ್ಮಿಕರ ಕೊರತೆ ನೀಗಿಸಲು ಹಾಗೂ ಉತ್ಪಾದನಾವೆಚ್ಚ ಕಡಿತಗೊಳಿಸಲು ರಿಯಾಯಿತಿ ದರದಲ್ಲಿ ಟ್ರ್ಯಾಕ್ಟರ್, ಪವರ್ ಟಿಲ್ಲರ್ ಮತ್ತು ಆಧುನಿಕ ಕೃಷಿ ಉಪಕರಣಗಳ ವಿತರಣೆ

ನಳ ನಳಿಸುತ್ತಲಿದೆ ಕರ್ನಾಟಕದ ಕೃಷಿ ಭೂಮಿ

ಕರ್ನಾಟಕ ವಾರ್ತೆ